ಭಾನುವಾರ ಮೇ 10 2026 ₹ 7.00
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಗಿಲ್ ಮಿಂಚು



ಗುಜರಾತ್ ಟೈಟನ್ಸ್ ನಾಯಕ ಶುಭಮನ್ ಗಿಲ್ (84;44ಎ) ಅವರು ಶನಿವಾರ ರಾಜಸ್ಥಾನ ರಾಯಲ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಮಿಂಚಿನ ಆಟವಾಡಿದರು

ಪ್ರತಿಭಟನೆ



ಈಶಾನ್ಯ ರಾಜ್ಯಗಳಲ್ಲಿನ ಹಿಂಸಾಚಾರ ನಿಯಂತ್ರಿಸುವಂತೆ ಮತ್ತು ಸಂತ್ರಸ್ತರಿಗೆ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ನವದೆಹಲಿಯ ಜಂತರ್‌ಮಂತರ್‌ನಲ್ಲಿ ಶನಿವಾರ ನಾಗಾ ವಿದ್ಯಾರ್ಥಿ ಒಕ್ಕೂಟದ ಸದಸ್ಯರು ಮೌನ ಪ್ರತಿಭಟನೆ ನಡೆಸಿದರು



ಭಾನುವಾರ, ಮೇ 10, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 129 | ಪುಟ 24
www.prajavani.net   prajavani.net   prajavani



ಝುಝ್ಞಾನ ಫೈನಲ್‌ಗೆ
ಪೋಲೆಂಡ್‌ನ ಝುಝ್ಞಾನ ಪಾವ್ಲಿಕೊವಾಸ್ಕಾ ಅವರು ತುಮಕೂರಿನಲ್ಲಿ ನಡೆಯುತ್ತಿರುವ ಐಟಿಎಫ್ ಡಬ್ಲ್ಯು–35 ಮಹಿಳಾ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಫೈನಲ್ ಪ್ರವೇಶಿಸಿದರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..



ಹಂಟಾವೈರಸ್: ಮೇಲ್ವಿಚಾರಣೆ 6
ಭ್ರಷ್ಟಾಚಾರ ಪ್ರಕರಣ ರಾಜ್ಯಕ್ಕೆ ಮೂರನೇ ಸ್ಥಾನ 4

ಅಭಿಮಾನ ಹೊಳೆ: ಮತ ಕಹಳೆ

ಬಿಎಸ್‌ವೈ ರಾಜಕೀಯ ಪಯಣ @50
2028ರ ಚುನಾವಣೆ ತಾಲೀಮಿಗೆ ಉದ್ಘೋಷ

• ಚಂದ್ರಹಾಸ ಹಿರೇಮಳಲಿ

ಚಿತ್ರದುರ್ಗ: ನಾಡಿನ ಉತ್ತರ–ದಕ್ಷಿಣ ಬೆಸೆಯುವ ಮಧ್ಯ ಕರ್ನಾಟಕದ ಕೋಟೆ ನಾಡನ್ನು ಕಾವಿಯ ರಂಗು, ಕೇಸರಿಯ ಗುಂಗು ಆವರಿಸಿಕೊಂಡು, ಮಾಜಿ ಮುಖ್ಯಮಂತ್ರಿ, ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರನ್ನು ಅಭಿಮಾನದ ಮಳೆಯಲ್ಲಿ ತೋಯಿಸಿತು. ಬಿಸಿಲ ಝಳ ಲೆಕ್ಕಿಸದೇ ಸಾಗರೋಪಾದಿಯಲ್ಲಿ ಹರಿದು ಬಂದ ಜನಸ್ತೋಮ ಕರುನಾಡಿಗೆ ಮತ್ತೊಮ್ಮೆ 'ಕಮಲ' ಮುಡಿಗೇರಿಸುವ ಸಂಕಲ್ಪವನ್ನು ಮಾಡಿತು.

ಯಡಿಯೂರಪ್ಪನವರು ಚುನಾವಣಾ ರಾಜಕೀಯದಲ್ಲಿ 50 ವರ್ಷ ಪೂರ್ಣಗೊಳಿಸಿದ ಸಂದರ್ಭದಲ್ಲಿ ಅವರ ಕುಟುಂಬಸ್ಥರು, ಅಭಿಮಾನಿಗಳು ಚಿತ್ರದುರ್ಗದ ಮಾದಾರ ಚನ್ನಯ್ಯ ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಬಿಎಸ್‌ವೈ ಅಭಿಮಾನೋತ್ಸವ'ವು 2028ರ ವಿಧಾನಸಭೆ ಚುನಾವಣೆಗೆ ಕಹಳೆಯನ್ನೂ ಮೊಳಗಿಸಿತು.

ಜಾತಿಯ ಮಿತಿಯಲ್ಲದೇ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಗಳು ಕಾವಿಯ ಬಣ್ಣವನ್ನು ತುಂಬಿಸಿದರೆ, ಕೇಸರಿ ಪತಾಕೆಗಳು ನಗರದುದ್ದಕ್ಕೂ ರಾರಾಜಿಸುತ್ತಿದ್ದವು. 'ಬಿಎಸ್‌ವೈ ಬಿಎಸ್‌ವೈ' ಘೋಷಣೆಗಳು ಚಿತ್ರದುರ್ಗದ ಕೋಟೆಯಲ್ಲಿ ಅನುರಣಿಸುತ್ತಲೇ ಇದ್ದವು. ಯಡಿಯೂರಪ್ಪ ಅಭಿಮಾನಿಗಳು ನಾಡಿನ ನಾಲ್ಕೂ ದಿಕ್ಕಿನಿಂದ ಬೆಟ್ಟದಂತೆ ಬಂದಿಳಿದಿದ್ದರು.

ಸಭೆಯ ಪ್ರಮುಖ ಆಕರ್ಷಣೆ ಆಗಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, 2028ರ ಚುನಾವಣೆಯ ತಯಾರಿ ಈ ನೆಲದಿಂದಲೇ ಆರಂಭವಾಗಲಿ ಎಂದು ಕರೆ ಕೊಟ್ಟರು. 4

> **ಅಪೂರ್ವ ಮೈಲುಗಲ್ಲಿನ ಈ ಅಭಿಮಾನೋತ್ಸವದಲ್ಲಿ ಹಾಜರಾಗಲು ಸಾಧ್ಯವಾಗಿಲ್ಲ. ಜನಸೇವೆ ಮತ್ತು ರಾಷ್ಟ್ರ ನಿರ್ಮಾಣಕ್ಕೆ ಸಮರ್ಪಿಸಿಕೊಂಡ ನಾಯಕನನ್ನು ಗೌರವಿಸಲು ನೆರೆದಿರುವ ಜನಸ್ತೋಮದೊಂದಿಗೆ ನನ್ನ ಮನಸ್ಸು ಬೆರೆತುಕೊಂಡಿದೆ**
> ಪ್ರಧಾನಿ ನರೇಂದ್ರ ಮೋದಿ ಸಂದೇಶ



ಅಮಿತ್ ಶಾ ಅವರು ಬಿ.ಎಸ್ ಯಡಿಯೂರಪ್ಪ ಅವರನ್ನು ಸನ್ಮಾನಿಸಿದರು. ಪ್ರಲ್ಹಾದ ಜೋಶಿ, ಬಿ.ವೈ.ರಾಘವೇಂದ್ರ, ವೀರಸೋಮೇಶ್ವರ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಗೋವಿಂದ ಕಾರಜೋಳ, ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಶ್ರೀರಾಮುಲು, ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ನಿರಂಜನಾನಂದಪುರಿ ಸ್ವಾಮೀಜಿ, ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಬಿ.ವೈ ವಿಜಯೇಂದ್ರ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ/ಸತೀಶ್ ಬಡಿಗೇರ

ಮೋದಿ ಬರ್ತಾರೆ, ಅಧಿಕಾರಕ್ಕೆ ತರ್ತೇವೆ: ಅಮಿತ್ ಶಾ

'ಕರ್ನಾಟಕದಲ್ಲಿ 2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಸೋತಿರಬಹುದು. ಪ್ರಧಾನಿ ನರೇಂದ್ರ ಮೋದಿ ರಾಜ್ಯಕ್ಕೆ ಬರುತ್ತಾರೆ. ಯಡಿಯೂರಪ್ಪ ಅವರ ಮಾರ್ಗದರ್ಶನದಲ್ಲಿ 2028ಕ್ಕೆ ಮತ್ತೆ ಪಕ್ಷವನ್ನು ಅಧಿಕಾರಕ್ಕೆ ತಂದೇ ತರುತ್ತೇವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದರು. '2014ರಲ್ಲಿ ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಕರ್ನಾಟಕದಿಂದ ಬಿ.ಎಸ್.ಯಡಿಯೂರಪ್ಪ ಅವರಿಗೆ ಕೇಂದ್ರ ಸಚಿವ ಸ್ಥಾನ ನೀಡಲು ನಿರ್ಧರಿಸಿದ್ದೆವು. ಆದರೆ, ಅವರು ತಿರಸ್ಕರಿಸಿ, ರಾಜ್ಯ ರಾಜಕಾರಣದಲ್ಲೇ ಮುಂದುವರಿಯುವ ಇಚ್ಛೆ ವ್ಯಕ್ತಪಡಿಸಿದ್ದರು' ಎಂದರು. 'ಕೇಂದ್ರ ಸಚಿವ ಸಂಪುಟ ರಚನೆ ಮಾಡುವಾಗ ಗುಜರಾತ್ ಭವನಕ್ಕೆ ಯಡಿಯೂರಪ್ಪ ಅವರಿಂದ ಒಂದು ಪತ್ರ ಬಂತು. ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ತರುವುದಕ್ಕಾಗಿ ಪಕ್ಷ ಸಂಘಟನೆ ಮಾಡುತ್ತಿದ್ದು, ಕೇಂದ್ರ ಸಚಿವ ಸ್ಥಾನ ಬೇಡ ಎಂದು ಅವರು ಬರೆದಿದ್ದರು' ಎಂದರು. 4

ವಿಜಯ್ ಪ್ರಮಾಣ ಇಂದು

ವಿಸಿಕೆ, ಐಯುಎಂಎಲ್ ಬಲ: ಟಿವಿಕೆಗೆ ಸಿಕ್ಕ 'ಮ್ಯಾಜಿಕ್ ಸಂಖ್ಯೆ'

ಪ್ರಜಾವಾಣಿ ವಾರ್ತೆ/ ಪಿಟಿಐ


ಚೆನ್ನೈ: ತಮಿಳುನಾಡಿನಲ್ಲಿ ಹೊಸ ಸರ್ಕಾರ ರಚನೆ ಸಂಬಂಧ ಕಳೆದ ಕೆಲ ದಿನಗಳಿಂದ ಎದ್ದಿದ್ದ ಕುತೂಹಲ ಹಾಗೂ ಅನಿಶ್ಚಿತತೆಗೆ ಕೊನೆಗೂ ತೆರೆ ಬಿದ್ದಿದೆ. ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ಜೋಸೆಫ್ ವಿಜಯ್ ಅವರು ಮುಖ್ಯಮಂತ್ರಿಯಾಗಿ ಭಾನುವಾರ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಬಹುಮತಕ್ಕೆ ಅಗತ್ಯವಿರುವ ಸಂಖ್ಯಾ ಬಲವನ್ನು ಟಿವಿಕೆ ಹೊಂದಿಸಿದ ಬೆನ್ನಲ್ಲೇ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ಅವರು ಸರ್ಕಾರ ರಚಿಸುವಂತೆ ವಿಜಯ್ ಅವರಿಗೆ ಆಹ್ವಾನ ನೀಡಿದರು. ಪ್ರಮಾಣ ವಚನ ಸ್ವೀಕಾರ ಸಮಾರಂಭ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಬೆಳಿಗ್ಗೆ 10ಕ್ಕೆ ನಡೆಯಲಿದೆ. ಇದು ತಮಿಳುನಾಡಿನ ಚೊಚ್ಚಲ ಸಮ್ಮಿಶ್ರ ಸರ್ಕಾರ ಎನಿಸಿಕೊಳ್ಳಲಿದೆ.

ಎನ್. ಆನಂದ್, ಕೆ.ಜಿ ಅರುಣರಾಜ್, ಕೆ.ಎ.ಸೆಂಗೊಟ್ಟೈಯನ್, ಆಧವ್ ಅರ್ಜುನ ಮತ್ತು ಸಿ.ಟಿ.ಆರ್ ನಿರ್ಮಲ್ ಕುಮಾರ್ ಸೇರಿದಂತೆ ಎಂಟರಿಂದ ಒಂಬತ್ತು ಹಿರಿಯ ಶಾಸಕರು ವಿಜಯ್ ಅವರೊಂದಿಗೆ ಭಾನುವಾರ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. 6



ವಿಜಯ್ ಅವರು ಶನಿವಾರ ರಾಜ್ಯಪಾಲರನ್ನು ಭೇಟಿಯಾದರು —ಪಿಟಿಐ ಚಿತ್ರ



'ರಾಷ್ಟ್ರಪತಿ ಆಳ್ವಿಕೆ ತಡೆಯುವ ಉದ್ದೇಶ'

ತಮಿಳುನಾಡಿನಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವುದನ್ನು ತಡೆಯುವ ಉದ್ದೇಶದಿಂದ ತಮ್ಮ ಪಕ್ಷವು ಟಿವಿಕೆಗೆ ಬೆಂಬಲ ನೀಡಿದೆ ಎಂದು ವಿಸಿಕೆ ಮುಖ್ಯಸ್ಥ ತೊಲ್ ತಿರುಮಾವಳವನ್ ಹೇಳಿದರು.

'ರಾಜಕೀಯ ಪಕ್ಷವಾಗಿದ್ದುಕೊಂಡು ನಾವು ಸ್ವತಂತ್ರ ನಿರ್ಧಾರ ತೆಗೆದುಕೊಂಡಿದ್ದೇವೆ ಮತ್ತು ರಾಜ್ಯದ ಭವಿಷ್ಯವನ್ನು ಗಣನೆಗೆ ತೆಗೆದುಕೊಂಡು ಟಿವಿಕೆಗೆ ಬೇಷರತ್ ಬೆಂಬಲ ನೀಡಿದ್ದೇವೆ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಟಿವಿಕೆಗೆ ಬೆಂಬಲ ನೀಡಿದರೂ ಡಿಎಂಕೆ ನೇತೃತ್ವದ ಜಾತ್ಯತೀತ ಪ್ರಗತಿಪರ ಒಕ್ಕೂಟದಲ್ಲೇ (ಎಸ್‌ಪಿಎ) ಮುಂದುವರಿಯುತ್ತೇವೆ. ನಮ್ಮ ನಿಲುವು ಡಿಎಂಕೆ ಜೊತೆಗಿನ ಮೈತ್ರಿ ಮೇಲೆ ಯಾವುದೇ ಪರಿಣಾಮ ಬೀರದು' ಎಂದರು.

'ಪಕ್ಷದ ನಿಲುವನ್ನು ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರಿಗೆ ತಿಳಿಸಿದ್ದೇವೆ. ವಿಸಿಕೆ ಮತ್ತು ಎಡಪಕ್ಷಗಳು ಒಮ್ಮತದಿಂದ ತೆಗೆದುಕೊಂಡ ನಿರ್ಧಾರಕ್ಕೆ ಅವರು ಒಪ್ಪಿಗೆ ಸೂಚಿಸಿದ್ದಾರೆ' ಎಂದು ಹೇಳಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಬಿಟ್ ಕಾಯಿನ್ ಕಳವು: ಇ.ಡಿ ಕಸ್ಟಡಿಗೆ ಶ್ರೀಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್‌ಕಾಯಿನ್ ಕಳವು, ಅಕ್ರಮ ವಹಿವಾಟು ಪ್ರಕರಣದ ಪ್ರಮುಖ ಆರೋಪಿ ಶ್ರೀಕೃಷ್ಣ ರಮೇಶ್ ಅಲಿಯಾಸ್ ಶ್ರೀಕಿ ಸೇರಿ ಮೂವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು 10 ದಿನ ಕಸ್ಟಡಿಗೆ ಪಡೆದಿದ್ದಾರೆ.

ರಾಜ್ಯ ಸರ್ಕಾರ ರಚಿಸಿರುವ ವಿಶೇಷ ತನಿಖಾ ತಂಡ, ಸಿಐಡಿ ತನಿಖೆ ನಡೆಸುತ್ತಿರುವ ಈ ಪ್ರಕರಣದ ತನಿಖೆಗೆ ಈಗ ಇ.ಡಿಯೂ ಇಳಿದಿದೆ. ಈಚೆಗೆ ಶ್ರೀಕಿ, ಕಾಂಗ್ರೆಸ್‌ನ ಯುವ ಮುಖಂಡ ಮಹಮ್ಮದ್ ನಲಪಾಡ್ ಹ್ಯಾರಿಸ್ ಮತ್ತು ಅಕೀಬ್ ಖಾನ್ ಅವರ ಮನೆಯಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದರು. ಶ್ರೀಕಿ ಮನೆಯಲ್ಲಿ ಸತತ 36 ತಾಸು ಶೋಧದ ನಂತರ ಹಾರ್ಡ್‌ಡಿಸ್ಕ್ ವಶಕ್ಕೆ ಪಡೆದು ಮರಳಿದ್ದರು.



ಶ್ರೀಕಿ

ಈಗ ಶುಕ್ರವಾರ ಬೆಳಿಗ್ಗೆಯೇ ಶ್ರೀಕಿ, ಪ್ರಕರಣದ ಇನ್ನಿಬ್ಬರು ಆರೋಪಿಗಳಾದ ರಾಬಿನ್ ಖಂಡೇಲ್‌ವಾಲ್ ಮತ್ತು ಸುನೀಶ್ ಹೆಗ್ಡೆ ಅವರನ್ನು ಇ.ಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದರು. ಸತತ ವಿಚಾರಣೆಯ ನಂತರ ಶನಿವಾರ ಬೆಳಿಗ್ಗೆ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದ ನ್ಯಾಯಾಧೀಶರ ಎದುರು ಹಾಜರುಪಡಿಸಿದ್ದರು.

'ಆರೋಪಿಗಳು ಸರ್ಕಾರಿ ಪೋರ್ಟಲ್‌ಗೆ ಕನ್ನಹಾಕಿ ಹಣವನ್ನು ವರ್ಗಾಯಿಸಿಕೊಂಡಿದ್ದಾರೆ. ಆ ಹಣವನ್ನು ಬಿಟ್‌ಕಾಯಿನ್ ಖರೀದಿಗೆ ಬಳಸಿದ್ದಾರೆ. ಜತೆಗೆ ಬಿಟ್‌ಕಾಯಿನ್ ಕಳವಿಗೆ ಸಂಬಂಧಿಸಿದ ಹಲವು ಡಿಜಿಟಲ್ ದಾಖಲೆಗಳು ತನಿಖೆ ವೇಳೆ ಪತ್ತೆಯಾಗಿದೆ. ಶ್ರೀಕಿಯು ಬಿಟ್‌ಕಾಯಿನ್ ಕಳವು ಮಾಡಿದ್ದರೆ, ರಾಬಿನ್ ಬಿಟ್‌ಕಾಯಿನ್ ಸೇರಿ ಹಲವು ಕ್ರಿಪ್ಟೊ ಕರೆನ್ಸಿಗಳಲ್ಲಿ ವಹಿವಾಟು ನಡೆಸಿದ್ದಾರೆ. ಇಬ್ಬರ ಮಧ್ಯೆ ಹಣದ ಅಕ್ರಮ ವಹಿವಾಟು ನಡೆದಿದೆ ಎಂದು ಇ.ಡಿ. ಪರ ವಕೀಲರು ನ್ಯಾಯಾಧೀಶರಿಗೆ ತಿಳಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಶ್ರೀಕಿ ಮತ್ತು ಸುನೀಶ್ ಮಧ್ಯೆಯೂ ಇದೇ ರೀತಿಯ ವಹಿವಾಟು ನಡೆದಿದೆ. ಶ್ರೀಕಿ ವರ್ಗಾಯಿಸಿದ ಬಿಟ್‌ಕಾಯಿನ್‌ಗಳನ್ನು ಸುನೀಶ್ ಇತರೆ ಕ್ರಿಪ್ಟೊ ಕರೆನ್ಸಿಗಳಲ್ಲಿ ಹೂಡಿಕೆ ಮಾಡಿದ್ದಾರೆ. ಅದರಿಂದ ಬಂದ ಲಾಭವನ್ನು ಶ್ರೀಕಿಗೆ ನೀಡಿ, ಕಮಿಷನ್ ಪಡೆದಿದ್ದಾರೆ' ಎಂದು ಹೇಳಿವೆ. 5

ಕೇರಳಂ ಸಿ.ಎಂ: ಮೂಡದ ಒಮ್ಮತ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇರಳಂನಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯಲು ಯುಡಿಎಫ್ ಸಜ್ಜಾಗಿದ್ದರೂ, ಮುಖ್ಯಮಂತ್ರಿ ಆಯ್ಕೆ ಮಾತ್ರ ಇನ್ನೂ ಕಗ್ಗಂಟಾಗಿ ಉಳಿದಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕೇರಳಂ ಮುಖ್ಯಮಂತ್ರಿ ಸ್ಥಾನಕ್ಕಾಗಿ ಸ್ಪರ್ಧಾ ಕಣದಲ್ಲಿರುವ ಮೂವರೊಂದಿಗೆ ಶನಿವಾರ ಸತತ ಮೂರು ಗಂಟೆ ಚರ್ಚೆ ನಡೆಸಿದರೂ ಒಮ್ಮತ ಮೂಡಲಿಲ್ಲ.

'ಕೇರಳಂ ಮುಖ್ಯಮಂತ್ರಿ ಆಯ್ಕೆ ವಿಷಯದಲ್ಲಿ ಸರಿಯಾದ ಸಮಯದಲ್ಲಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ಪಕ್ಷ ಸ್ಪಷ್ಟಪಡಿಸಿದೆ. ಆದರೆ, ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರು ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಹಿರಿಯ ಮುಖಂಡ ಎ.ಕೆ. ಆ್ಯಂಟನಿ ಅವರ ಸಲಹೆ ಪಡೆಯಲು ನಿರ್ಧರಿಸಿದ್ದಾರೆ.

ಹೀಗಾಗಿ ಕೇರಳಂ ಮುಖ್ಯಮಂತ್ರಿ ಹೆಸರು ಘೋಷಣೆಗೆ ಇನ್ನೂ ಎರಡು ದಿನ ತೆಗೆದುಕೊಳ್ಳಬಹುದು ಎಂದು ಮೂಲಗಳು ಹೇಳಿವೆ.

'ಅತಿ ಶೀಘ್ರದಲ್ಲೇ ಮುಖ್ಯಮಂತ್ರಿ ಹೆಸರು ಘೋಷಣೆಯಾಗಲಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ಕೇರಳಂ ಉಸ್ತುವಾರಿ ದೀಪಾ ದಾಸ್ ಮುನ್ಶಿ ಶನಿವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಕೇರಳಂ ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ನಡೆದ ಕಾಂಗ್ರೆಸ್ ಮುಖಂಡರ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಆಯ್ಕೆಗೆ ಸಂಬಂಧಿಸಿದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನಿರ್ಧಾರವೇ ಅಂತಿಮ. ವಿಧಾನಸಭೆ ವಿಸರ್ಜನೆಗೆ ಮೇ 23 ಕೊನೆಯ ದಿನ. ಅದರೊಳಗೆ, ಸರಿಯಾದ ಸಮಯದಲ್ಲಿ, ನಮ್ಮ ಹೈಕಮಾಂಡ್ ಅಂತಿಮ ನಿರ್ಧಾರ ಪ್ರಕಟಿಸಲಿದೆ. ನಾವೂ ಅದಕ್ಕಾಗಿ ಕಾಯುತ್ತಿದ್ದೇವೆ' ಎಂದು ವಿವರಿಸಿದರು. 6

1,115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವ ಇದೇ 12ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವವು ಇದೇ 12ರಂದು ನಡೆಯಲಿದ್ದು, ಈ ವರ್ಷ ಒಟ್ಟು 1,115 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುತ್ತಿದೆ.

'55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕ ಹಾಗೂ ಚಿನ್ನದ ಪದಕ ಪ್ರಶಸ್ತಿ ಪ್ರಮಾಣಪತ್ರಗಳನ್ನು ವಿತರಿಸಲಾಗುವುದು' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ.ಸುರೇಶ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ಜಿಕೆವಿಕೆ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಬೆಳಿಗ್ಗೆ 11.30ಕ್ಕೆ ನಡೆಯುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ವಹಿಸಲಿದ್ದಾರೆ. ಸಹ ಕುಲಾಧಿಪತಿಯೂ ಆಗಿರುವ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಭಾಗವಹಿಸಲಿದ್ದು, ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾಜಿ ಅಧ್ಯಕ್ಷ ಎಂ. ಜಗದೀಶ್ ಕುಮಾರ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ' ಎಂದರು.


'55 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ 46 ಚಿನ್ನದ ಪದಕ ಹಾಗೂ ದಾನಿಗಳ 72 ಚಿನ್ನದ ಪದಕ, 22 ವಿದ್ಯಾರ್ಥಿಗಳಿಗೆ ದಾನಿಗಳ ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುವುದು. ಪಿಎಚ್.ಡಿಯಲ್ಲಿ 13, ಸ್ನಾತಕೋತ್ತರ ಪದವಿಯಲ್ಲಿ 68 ಹಾಗೂ ಸ್ನಾತಕ ಪದವಿಯಲ್ಲಿ 59 ಚಿನ್ನದ ಪದಕಗಳನ್ನು ವಿದ್ಯಾರ್ಥಿಗಳಿಗೆ ಪ್ರದಾನ ಮಾಡಲಾಗುತ್ತದೆ' ಎಂದು ವಿವರಿಸಿದರು.

ಕುಲಸಚಿವ ಕೆ. ಮಧುಸೂದನ್, ವೈ.ಎನ್. ಶಿವಲಿಂಗಯ್ಯ, ಕೆ.ಪಿ. ರಘುಪ್ರಸಾದ್ ಸುದ್ದಿಗೋಷ್ಠಿಯಲ್ಲಿದ್ದರು.

ಪದವಿ ಪ್ರದಾನದ ವಿವರ	
ಸ್ನಾತಕ ಪದವಿ	747
ಸ್ನಾತಕೋತ್ತರ ಪದವಿ	260
ಪಿಎಚ್.ಡಿ	108
ಒಟ್ಟು ವಿದ್ಯಾರ್ಥಿಗಳು	1,115
ಚಿನ್ನದ ಪದಕ	
ಪಿಎಚ್.ಡಿ	13
ಸ್ನಾತಕೋತ್ತರ ಪದವಿ	68
ಪದವಿ ವಿಭಾಗ	59
ಒಟ್ಟು	140

ಚಾಲಕನ ಮಗನಿಗೆ 15 ಚಿನ್ನದ ಪದಕ

'ಪ್ರೇಮ್‌ಕುಮಾರ್ ಕೆ.ಈ. ಅವರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಕುಡಿಯನೂರಿನವರು. ಇವರ ತಂದೆ ವಾಹನ ಚಾಲಕರಾಗಿದ್ದು, ತಾಯಿ ಗೃಹಿಣಿ. ಬಿ.ಎಸ್‌ಸಿ (ಆನರ್ಸ್) ಕೃಷಿ ವಿಭಾಗದಲ್ಲಿ ಪ್ರೇಮ್ ಕುಮಾರ್ ಶೇಕಡ 91.02ರಷ್ಟು ಅಂಕ ಪಡೆದಿದ್ದಾರೆ. ಇವರಿಗೆ ವಿಶ್ವವಿದ್ಯಾಲಯದ ಒಂದು ಚಿನ್ನದ ಪದಕ, ದಾನಿಗಳ 10 ಚಿನ್ನದ ಪದಕಗಳು ಹಾಗೂ ದಾನಿಗಳ ನಾಲ್ಕು ಚಿನ್ನದ ಪದಕ ಪ್ರಶಸ್ತಿ ಪ್ರಮಾಣ ಪತ್ರಗಳು ಸೇರಿದಂತೆ ಒಟ್ಟು 15 ಪದಕಗಳನ್ನು ನೀಡಲಾಗುತ್ತದೆ' ಎಂದು ಎಸ್.ವಿ. ಸುರೇಶ ಹೇಳಿದರು.


ಪ್ರೇಮ್ ಕುಮಾರ್

ಮೂವರು ರೈತರಿಗೆ ಗೌರವ ಡಾಕ್ಟರೇಟ್

'ಕೋಲಾರ ಜಿಲ್ಲೆಯ ತಾತೇಪಲ್ಲಿಯ ಪ್ರಗತಿಪರ ರೈತ ಹಾಗೂ ಉದ್ಯಮಿ ಜಿ.ವಿ.ಕೆ ನಾಯ್ಡು ಅವರ ಕೃಷಿ ಉದ್ಯಮ ಪ್ರೇರಣೆ ಮತ್ತು ಗ್ರಾಮೀಣ ಪರಿವರ್ತನೆಗೆ ಅವರ ಕೊಡುಗೆ ನೀಡಿದ್ದಾರೆ. ಬೆಂಗಳೂರು ದಕ್ಷಿಣ ಜಿಲ್ಲೆಯ ಕನಕಪುರದ ಶ್ರೀಕಂಠ ಎಚ್.ಕೆ. ಅವರ ಕೃಷಿ ನಾವೀನ್ಯ, ಗ್ರಾಮೀಣ ಅಭಿವೃದ್ಧಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಮಹತ್ವದ ಕಾಣಿಕೆ ನೀಡಿದ್ದಾರೆ.

ಬೆಂಗಳೂರು ಉತ್ತರ ಜಿಲ್ಲೆಯ ದೊಡ್ಡಬಳ್ಳಾಪುರದ ಅರವಿಂದ ಟಿ.ಎಂ. ಅವರು ಕೃಷಿ ನಾವೀನ್ಯ, ನಿಖರ ಕೃಷಿ, ತೋಟಗಾರಿಕೆ ಅಭಿವೃದ್ಧಿ, ಸುಸ್ಥಿರ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ, ಮಾರುಕಟ್ಟೆ ಆಧಾರಿತ ಕೃಷಿ ಮತ್ತು ರೈತ ನೇತೃತ್ವದ ವಿಸ್ತರಣೆಯನ್ನು ಗುರುತಿಸಿ ಈ ಮೂರು ಜನ ಪ್ರಗತಿಪರ ರೈತರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲಾಗುವುದು' ಎಂದು ಎಸ್.ವಿ. ಸುರೇಶ ಮಾಹಿತಿ ನೀಡಿದರು.

ಬಿಡಿಎ: ವಿವಿಧ ಬಡಾವಣೆಗಳ 75 ನಿವೇಶನಗಳ ಇ ಹರಾಜು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಪ್ರಮುಖ ಬಡಾವಣೆಗಳಲ್ಲಿರುವ 75 ವಸತಿ ಮತ್ತು ವಾಣಿಜ್ಯ ನಿವೇಶನಗಳನ್ನು ಇ-ಹರಾಜು ಮೂಲಕ ಮಾರಾಟಕ್ಕೆ ಇಟ್ಟಿದೆ.

ಮೇ 11ರಿಂದ ನಗರದ ಹರಾಜು ಪ್ರಕ್ರಿಯೆ ಆರಂಭಗೊಳ್ಳಲಿದೆ. ಕೆಲವು ನಿವೇಶನಗಳನ್ನು ಅತಿಕ್ರಮಣಕಾರರಿಂದ ವಶಪಡಿಸಿಕೊಂಡಿದ್ದರೆ, ಇತರ ಕೆಲವು ನಿವೇಶನಗಳನ್ನು ನ್ಯಾಯಾಲಯದ ಮೂಲಕ ಮರಳಿ ಪಡೆಯಲಾಗಿದೆ.

ಈ ನಿವೇಶನಗಳು ಅಂಜನಾಪುರ ಟೌನ್‌ಶಿಪ್, ಅರ್ಕಾವತಿ ಲೇಔಟ್, ಬನಶಂಕರಿ 6ನೇ ಹಂತ, ಕೆಂಪೇಗೌಡ ಲೇಔಟ್ ಮತ್ತು ಸರ್ ಎಂ ವಿಶ್ವೇಶ್ವರಯ್ಯ ಲೇಔಟ್ ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಇವೆ. ಆಸಕ್ತರು ಮೇ 22ರವರೆಗೂ ನೋಂದಣಿ ಮಾಡಿಕೊಳ್ಳಬಹುದು. ನೇರ ಹರಾಜು ಪ್ರಕ್ರಿಯೆ ಮೇ 25 ಮತ್ತು 26ರಂದು ಹಂತ ಹಂತವಾಗಿ ನಡೆಯಲಿದೆ.

ನಿವೇಶನಗಳ ಬೆಲೆಗಳಲ್ಲಿ ವ್ಯತ್ಯಾಸವಿದ್ದು, ಮೂಲ ದರ ಪ್ರತಿ ಚದರ ಮೀಟರ್‌ಗೆ ₹64,000 ರಿಂದ ₹1 ಲಕ್ಷಕ್ಕಿಂತ ಹೆಚ್ಚಿದೆ. ಕನಿಷ್ಠ ಬಿಡ್ ಹೆಚ್ಚಳವನ್ನು ಪ್ರತಿ ಚದರ ಮೀಟರ್ ₹500 ಎಂದು ನಿಗದಿಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಾಯಂದಿರ ದಿನ ಆಚರಿಸಲಾಗುತ್ತಿದೆ!

ಶಾಲೆಗಳ ವಿಲೀನ: ಖಂಡನೆ

ಬೆಂಗಳೂರು: ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಲ್ಲಿ ರಾಜ್ಯ ಸರ್ಕಾರ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುತ್ತಿದ್ದು, ಈಗ ಪಿ.ಎಂ.ಶ್ರೀ ಶಾಲೆಗಳಿಗೂ ಸುತ್ತಲಿನ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆ ಆರಂಭಿಸಲಾಗಿದೆ ಎಂದು ಎಐಡಿಎಸ್‌ಒ ಹೇಳಿದೆ.

'ಪಿ.ಎಂ. ಶ್ರೀ ಯೋಜನೆಯ ಹೆಸರಿನಲ್ಲಿ 317 ಶಾಲೆಗಳನ್ನು ವಿಲೀನ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪಿಯು ಕಾಲೇಜುಗಳನ್ನು ಕೂಡ ವಿಲೀನಗೊಳಿಸಲಾಗುತ್ತಿದೆ. ಸರ್ಕಾರಿ ಶಾಲೆಗಳನ್ನು ಮುಚ್ಚುವ ಅಂಶವನ್ನು ತಳ್ಳಿ ಹಾಕುತ್ತಾ ಗ್ಯಾರಂಟಿಗಳ ಮುಖವಾಡದಲ್ಲಿ ನಾಡಿನ ಜನತೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಮೋಸ ಮಾಡುತ್ತಿದೆ' ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆರೋಪಿಸಿದ್ದಾರೆ.

ಹೊಸಹಳ್ಳಿ–ಕಬ್ಬನ್ ಪಾರ್ಕ್ ಮೆಟ್ರೊ ಸ್ಥಗಿತ ಇಲ್ಲ



ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ನೇರಳೆ ಮಾರ್ಗದಲ್ಲಿ ಮೇ 10ರ ಭಾನುವಾರ ಬೆಳಿಗ್ಗೆ 7ರಿಂದ ಎರಡು ಗಂಟೆ ಭಾಗಶಃ ಸಂಚಾರ ಸ್ಥಗಿತಗೊಳಿಸುವುದಿಲ್ಲ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣ ಮತ್ತು ಸೆಂಟ್ರಲ್ ಕಾಲೇಜಿನ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೊ ನಿಲ್ದಾಣಗಳ ನಡುವೆ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಭಾನುವಾರ ಬೆಳಿಗ್ಗೆ 7ರಿಂದ 9ರವರೆಗೆ ಹೊಸಹಳ್ಳಿ ಬಾಲಗಂಗಾಧರನಾಥ ಸ್ವಾಮೀಜಿ ನಿಲ್ದಾಣ ಮತ್ತು ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳ ನಡುವೆ ಮೆಟ್ರೊ ಸಂಚಾರ ತಾತ್ಕಾಲಿಕವಾಗಿ ಸ್ಥಗಿತಗೊಳ್ಳಲಿದೆ ಎಂದು ಶುಕ್ರವಾರ ತಿಳಿಸಲಾಗಿತ್ತು. ಆದರೆ, ನಗರದಲ್ಲಿ ಭಾನುವಾರ ಅನೇಕ ಕಾರ್ಯಕ್ರಮಗಳು ಇರುವುದರಿಂದ ಸ್ಥಗಿತಗೊಳಿಸುವ ನಿರ್ಧಾರವನ್ನು ವಾಪಸ್ ಪಡೆಯಲಾಗಿದೆ ಎಂದು ತಿಳಿಸಲಾಗಿದೆ.

ಪ್ರತಿ ಭಾನುವಾರ ಬೆಳಿಗ್ಗೆ 7ಕ್ಕೆ ಮೆಟ್ರೊ ಸಂಚಾರ ಆರಂಭವಾಗುತ್ತಿತ್ತು. ವಿವಿಧ ಕಾರ್ಯಕ್ರಮಗಳಿಗೆ ಜನರು ಪ್ರಯಾಣಿಸುವ ನಿರೀಕ್ಷೆ ಇರುವುದರಿಂದ ಮೇ 10ರ ಭಾನುವಾರ ಬೆಳಿಗ್ಗೆ 5ಕ್ಕೆ ಸಂಚಾರ ಆರಂಭಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಜನರ ಸಮಸ್ಯೆಗಳಿಗೆ ಫೋರಂ ಧ್ವನಿಯಾಗಲಿ'


ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜನರ ಸಮಸ್ಯೆಗಳಿಗೆ ಧ್ವನಿಯಾಗುವ ಕೆಲಸವನ್ನು ಗ್ರೇಟರ್ ಬೆಂಗಳೂರು ವೆಲ್‌ಫೇರ್ ಅಸೋಸಿಯೇಷನ್, ಗ್ರೇಟರ್ ಬೆಂಗಳೂರು ಸಿಟಿಜನ್ ಫೋರಂ ಮಾಡಬೇಕು ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ವೀರಪ್ಪ ಹೇಳಿದರು.

ವೆಲ್‌ಫೇರ್ ಅಸೋಸಿಯೇಷನ್ ಮತ್ತು ಸಿಟಿಜನ್ ಫೋರಂ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಎರಡು ಸಂಘಟನೆಗಳು ನಗರದ ಪ್ರತಿ ವಾರ್ಡ್‌ನಲ್ಲಿ ಸಮಿತಿ ಮಾಡಬೇಕು. ಸ್ಥಳೀಯ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ, ಜನಪ್ರತಿನಿಧಿಗಳ ಗಮನಕ್ಕೆ ತಂದು ಸರಿಪಡಿಸಬೇಕು ಎಂದು ಸಲಹೆ ನೀಡಿದರು.

'ಸಮಾಜದಲ್ಲಿ ಆಗುವ ಅನ್ಯಾಯ, ವಂಚನೆ, ಭ್ರಷ್ಟಾಚಾರಗಳ ಬಗ್ಗೆ ಲೋಕಾಯುಕ್ತದ ಗಮನಕ್ಕೆ ತನ್ನಿ. ಆದರೆ, ಸುಮ್ಮನೆ ದೂರು ನೀಡಬಾರದು. ಲೋಕಾಯುಕ್ತಕ್ಕೆ ಬರುವ ದೂರುಗಳಲ್ಲಿ ವೈಯಕ್ತಿಕ ದ್ವೇಷದಿಂದ ನೀಡುವ ಸುಳ್ಳು ದೂರುಗಳೇ ಶೇ 50ರಷ್ಟು ಇರುತ್ತವೆ. ನ್ಯಾಯಯುತವಾದ ದೂರುಗಳ ಬಗ್ಗೆ ಕ್ರಮ ವಹಿಸಲಾಗುವುದು' ಎಂದು ಹೇಳಿದರು.


ನ್ಯಾಯಮೂರ್ತಿ ವೀರಪ್ಪ

ಫೋರಂ ಅಧ್ಯಕ್ಷ ಬಿ.ಆರ್. ರಾಮೇಗೌಡ ಮಾತನಾಡಿ, 'ಬೆಂಗಳೂರಿಗೆ ಏನು ಬೇಕು ಎಂಬುದನ್ನು ಸ್ಥಳೀಯರೇ ನಿರ್ಧರಿಸುವಂತಾಗಬೇಕು. ಇಲ್ಲಿ ಏನು ಕೆಲಸ ಆಗಬೇಕು ಎಂದು ಸರ್ಕಾರದ ಗಮನ ಸೆಳೆಯಲಾಗುವುದು. ಸ್ಪಂದಿಸದೇ ಇದ್ದಾಗ ಹೋರಾಟದ ಮೂಲಕ ಒತ್ತಡ ತರಲಾಗುವುದು' ಎಂದು ತಿಳಿಸಿದರು.

ಮಾಜಿ ಸಂಸದ ಬಿ.ಎನ್. ಬಚ್ಚೇಗೌಡ, ಫೋರಂ ಪ್ರಧಾನ ಕಾರ್ಯದರ್ಶಿ ವಿ.ಎನ್. ಕುಮಾರ್, ಉಪಾಧ್ಯಕ್ಷ ಪಿ. ಸೋಮಶೇಖರಯ್ಯ, ಸದಸ್ಯರಾದ ಕೆ.ವಿ. ಭಟ್, ಸುಂದರ್ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಬಿ.ಆರ್. ರಾಮೇಗೌಡರ 'ವೃದ್ಧಾಪ್ಯವನ್ನು ತಡೆದು ಸದಾ ಯೌವನಸ್ಥರಾಗಿರಲು ಯೋಗ' ಕೃತಿ ಜನಾರ್ಪಣೆ ಮಾಡಲಾಯಿತು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಆಗುವ ಸಾಧ್ಯತೆ ಇದೆ.

‘ಮಹಾಕಾವ್ಯಗಳಲ್ಲಿ ಜಾತ್ಯತೀತತೆ ಅಡಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ವಶ್ರೇಷ್ಠ ಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತದಲ್ಲಿ ಎಲ್ಲವೂ ಅಡಕವಾಗಿದ್ದು, ಅವು ಜಾತ್ಯತೀತ ಗ್ರಂಥಗಳು ಎಂದು ವಿದ್ವಾಂಸ ವ್ಯಾಸನಕೆರೆ ಪ್ರಭಂಜನಾಚಾರ್ಯ ಹೇಳಿದರು.

ಕೆಪಿಟಿಸಿಎಲ್ ಲೆಕ್ಕಾಧಿಕಾರಿಗಳ ಸಂಘ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ‘ಆಹಾರ–ವಿಹಾರ, ವಿಚಾರ’ ಕುರಿತು ಮಾತನಾಡಿದರು.

ಪ್ರಕೃತಿ–ವಿಕೃತಿ–ಸಂಸ್ಕೃತಿ ಎಂದರೇನು?, ಅಧ್ಯಾತ್ಮ ಜ್ಞಾನ ಮತ್ತು ಮಹಾಭಾರತದ ಯಕ್ಷಪ್ರಶ್ನೆ ಭಾಗದ ಮಹತ್ವವನ್ನು ಅವರು ತಿಳಿಸಿದರು.

ಇದಕ್ಕೂ ಮುನ್ನ ಚಿತ್ರನಟ ನೀರ್ನಳ್ಳಿ ರಾಮಕೃಷ್ಣ ಅವರ ಕುರಿತ ‘ಇಂತಿ ನಿನ್ನ ಪ್ರೀತಿಯ ರಾಮಕೃಷ್ಣ’ ಪುಸ್ತಕ ಜನಾರ್ಪಣೆ ಮಾಡಲಾಯಿತು.

ಸಾಹಿತಿ ಮಹಾಬಲಮೂರ್ತಿ ಕೊಡ್ಲೆಕೆರೆ ಮಾತನಾಡಿ, ‘ನೀರ್ನಳ್ಳಿ ರಾಮಕೃಷ್ಣ ಅವರು ಶಿರಸಿಯ ಪ್ರಕೃತಿ ಸೌಂದರ್ಯದ ಸೊಬಗಿನಡಿ ಬಾಲ್ಯವನ್ನು ಕಳೆದರು. ಸಾಂಸ್ಕೃತಿಕ ಚಟುವಟಿಕೆಗಳಿಂದ ಪ್ರೇರಣೆ ಪಡೆದು, ಪುಟ್ಟಣ್ಣ ಕಣಗಾಲ್ ಅವರಂತಹ ನಿರ್ದೇಶಕರ ಅಡಿ ತಮ್ಮ ಕಲಾ ಪ್ರದರ್ಶನ ನೀಡಿ ಸೈ ಎನಿಸಿಕೊಂಡವರು. ಅಪರೂಪದ ಕಲಾವಿದ’ ಎಂದು ಬಣ್ಣಿಸಿದರು.

ಅಂಕಣಕಾರ ವಾಸುದೇವ ಶಾನಭಾಗ, ಸಂಘಟಕ ಶಾ. ಮಂ. ಕೃಷ್ಣರಾಯ, ನೀರ್ನಳ್ಳಿ ರಾಮಕೃಷ್ಣ ಮಾತನಾಡಿದರು. ಸೌಮ್ಯ ಪ್ರದೀಪ ಹೆಗಡೆ ಹಾಗೂ ಮನಸ್ವಿ ಭಂಡಾರಿ ಅವರು ಪ್ರಸ್ತುತಪಡಿಸಿದ ಭರತನಾಟ್ಯ ಸಭಿಕರಿಗೆ ಮುದ ನೀಡಿತು.

ಕಾರ್ಯಕ್ರಮದಲ್ಲಿ ಸಂಘದ ಸದಸ್ಯರಾದ ಕೆಂಪೇಗೌಡ, ಎಚ್. ಕೆ. ಮಧುಸೂದನ, ಎಸ್. ಜೆ. ಕೃಷ್ಣಮೂರ್ತಿ, ನಿತ್ಯಾನಂದಪ್ಪ, ಗಿರೀಶ್, ಗೀತಾ ಹೆಗಡೆ, ಶ್ರೀವಾಣಿ, ರಾಜೇಶ್ವರಿ ಅಜ್ಜಿಬಾಳ್, ವತ್ಸಲಾ ಆರ್, ಎಲ್. ಎನ್. ಹೆಗಡೆ, ಕವಿಗಳಾದ ಸಿದ್ದಣ್ಣ ಸೊನ್ನದ , ಕೊಪ್ಪರಂ ಅನ್ನಪೂರ್ಣ ಅಣಕಟ್ಟು ಮಧುಸೂಧನ್ ರಾವ್ ಪಾಲ್ಗೊಂಡಿದ್ದರು.



ಕಾರ್ಯಕ್ರಮದಲ್ಲಿ ವಿದ್ವಾಂಸ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರನ್ನು ಗೌರವಿಸಲಾಯಿತು. ಎಚ್. ಕೆ. ಮಧುಸೂದನ, ಮಹಾಬಲಮೂರ್ತಿ ಕೊಡ್ಲೆಕೆರೆ, ಎಸ್. ಜೆ. ಕೃಷ್ಣಮೂರ್ತಿ, ನೀರ್ನಳ್ಳಿ ರಾಮಕೃಷ್ಣ, ಶಾ. ಮಂ. ಕೃಷ್ಣರಾಯ, ಎಲ್. ಎನ್. ಹೆಗಡೆ, ರಾಜೇಶ್ವರಿ ಅಜ್ಜಿಬಳ್ ಉಪಸ್ಥಿತರಿದ್ದರು

ನಗರದಲ್ಲಿ ಇಂದು

ಎರಡನೇ ವರ್ಷದ ವಾರ್ಷಿಕ ವರ್ದಂತಿ ಮಹೋತ್ಸವ: ಬೆಳಿಗ್ಗೆ 8ರಿಂದ ಪೂಜೆ, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ, ಅತಿಥಿಗಳು: ಶೋಭಾ ಕರಂದ್ಲಾಜೆ, ಎಸ್.ಟಿ. ಸೋಮಶೇಖರ್, ಅಶೋಕ ಛಲವಾದಿ, ಕ. ಸುಚೇಂದ್ರ ಪ್ರಸಾದ್, ವಿನುತಾ ಕೆ.ಎಂ., ಮಂಜುನಾಥ್, ಎನ್. ಕದರಪ್ಪ, ಆಯೋಜನೆ ಮತ್ತು ಸ್ಥಳ: ಶ್ರೀ ಸಿದ್ಧಿವಿನಾಯಕ ಸಾರ್ವಜನಿಕ ಸೇವಾ ಟ್ರಸ್ಟ್, ಜ್ಞಾನಭಾರತಿ ಎರಡನೇ ಹಂತ, ವಳಗೇರೆಹಳ್ಳಿ, ಕೆಂಗೇರಿ ಉಪನಗರ.


‘ನಮ್ಮ ಆರ್ಟ್ ಬೆಂಗಳೂರು’ ರಾಷ್ಟ್ರೀಯ ಕಲಾ ಉತ್ಸವ: ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

‘ಉಲ್ಲಾಸ್–2026’ ನೃತ್ಯ ಪ್ರದರ್ಶನ: ಅತಿಥಿಗಳು: ಚಂದ್ರ ಜೈನ್, ದೀಪಾ ಶಶಿಧರನ್, ಆಯೋಜನೆ: ಕಾರ್ನುಕೋಪಿಯ ಕ್ರಿಯೇಷನ್ಸ್ ಸಂಸ್ಥೆ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

‘16ನೇ ಹಣಕಾಸು ಆಯೋಗ ಮತ್ತು 5ನೇ ರಾಜ್ಯ ಹಣಕಾಸು ಆಯೋಗಗಳ ವರದಿಗಳ ಕುರಿತು ವಿಚಾರಸಂಕಿರಣ’: ಉದ್ಘಾಟನೆ: ಎಂ. ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಪ್ರಿಯಾಂಕ್ ಖರ್ಗೆ, ‘16ನೇ ಹಣಕಾಸು ಆಯೋಗದ ವರದಿ ಕುರಿತು’ ಗೋಷ್ಠಿ: ಎಸ್.ಎಂ. ವಿಜಯಾನಂದ್, ‘5ನೇ ಕರ್ನಾಟಕ ರಾಜ್ಯ ಹಣಕಾಸು ಆಯೋಗದ ವರದಿ ಕುರಿತು’ ಗೋಷ್ಠಿ: ಛಾಯ ದೇವಗಾಂವಕರ್, ಆಯೋಜನೆ: ಕರ್ನಾಟಕ ಪಂಚಾಯತ್ ರಾಜ್ ಪರಿಷತ್, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

‘ಶ್ರೀಮತಿ ಆರ್. ಕಲ್ಯಾಣಮ್ಮ ಹಾಗೂ ಶ್ರೀಮತಿ ಕೆ.ಟಿ. ಬನಶಂಕರಮ್ಮ’ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ: ಕೆ. ಮೋಹನ್‌ದೇವ್ ಆಳ್ವ, ಪ್ರಶಸ್ತಿ ಸ್ವೀಕರಿಸುವವರು: ಶಾಂತರಾಜು, ಹುಣಸವಾಡಿ ರಾಜನ್, ಆಯೋಜನೆ ಮತ್ತು ಸ್ಥಳ: ಅಖಿಲ ಕರ್ನಾಟಕ ಮಕ್ಕಳ ಕೂಟ, ಕೋಟೆ, ಬೆಳಿಗ್ಗೆ 10

ತಿಂಗಳ ಕವಿಗೋಷ್ಠಿ, ಗೀತ ಗಾಯನ, ಪ್ರಶಸ್ತಿ ಪ್ರದಾನ: ಬಿ. ಶೃಂಗೇಶ್ವರ್, ಅಧ್ಯಕ್ಷತೆ: ಕೆ.ವಿ. ಲಕ್ಷ್ಮಣಮೂರ್ತಿ, ಅತಿಥಿಗಳು: ವಿ. ರೇಣುಕಾಪ್ರಸನ್ನ, ವಿ. ಮಲ್ಲಿಕಾರ್ಜುನಯ್ಯ, ವೈ. ನಾಗರಾಜ್, ನಾಗೇಶ್ ಡಿ. ಪಾಟಕ್, ಕುವರ ಯಲ್ಲಪ್ಪ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಅಂಚೆ ಕಚೇರಿ ಪಕ್ಕ, ಶೇಷಾದ್ರಿಪುರ ರಸ್ತೆ, ಬೆಳಿಗ್ಗೆ 10.30



ಪ್ರಶಾಂತ್ ಭೂಷಣ್

‘ಕ್ಷೇತ್ರ ಮರುವಿಂಗಡನೆ, ಮಹಿಳಾ ಮೀಸಲಾತಿ ಮತ್ತು ಎಸ್‌ಐಆರ್’ ಕುರಿತು ಸಾರ್ವಜನಿಕ ವಿಚಾರಸಂಕಿರಣ: ಅತಿಥಿ: ಪ್ರಶಾಂತ್ ಭೂಷಣ್, ಆಯೋಜನೆ: ಅಸೋಸಿಯೇಷನ್ ಫಾರ್ ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್, ಸ್ಥಳ: ಆಶೀರ್ವಾದ್ ಸೆಂಟರ್, ಸೇಂಟ್ ಮಾರ್ಕ್ಸ್ ರಸ್ತೆ, ಸಂಜೆ 4.30ರಿಂದ

ಶಂಕರ ಜಯಂತಿ: ಅತಿಥಿ: ಸೂರ್ಯಪ್ರಕಾಶ್ ಪಂಡಿತ್, ಅಧ್ಯಕ್ಷತೆ: ಎಸ್. ನಂಜುಂಡಸ್ವಾಮಿ, ಆಯೋಜನೆ ಮತ್ತು ಸ್ಥಳ: ಹೊಯ್ಸಳ ಕರ್ನಾಟಕ ಸಂಘ, ಮೂರನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಳಿಗ್ಗೆ 10.30

‘ಪ್ರಕ್ಷುಬ್ಧ ರಾಧೇಯ’ ಏಕವ್ಯಕ್ತಿ ತಾಳಮದ್ದಲೆ ಪ್ರದರ್ಶನ: ಅರ್ಥದಾರಿ: ದಿವಾಕರ ಹೆಗಡೆ ಕೆರೆಹೊಂಡ, ಭಾಗವತರು: ಅನಂತ ಹೆಗಡೆ ದಂತಳಿಗೆ, ಮದ್ದಲೆ: ಅನಂತ ಪದ್ಮನಾಭ ಪಾಟಕ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಜಯಲಕ್ಷ್ಮಿ ಬಿ. ಅವರು ಕನ್ನಡಕ್ಕೆ ಅನುವಾದಿಸಿರುವ ಕಂಚ ಐಲಯ್ಯ ಅವರ ‘ಶೂದ್ರ ಬಂಡಾಯ’ ಪುಸ್ತಕ ಬಿಡುಗಡೆ: ಮಧು ಬಂಗಾರಪ್ಪ, ಬಂಡಾಯ ನುಡಿ: ಕಂಚ ಐಲಯ್ಯ ಶೆಫರ್ಡ್, ಪುಸ್ತಕದ ಕುರಿತು: ಎ. ನಾರಾಯಣ, ಉಪಸ್ಥಿತಿ: ಭಾರತಿ ದೇವಿ, ಆಯೋಜನೆ: ಜೀರುಂಡೆ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30ರಿಂದ

‘ಭಾರತೀಯ ಜ್ಞಾನ ವ್ಯವಸ್ಥೆಯ ವಿಕಸನ–ಪುರಾತತ್ತ್ವಶಾಸ್ತ್ರದ ದೃಷ್ಟಿಕೋನ’ ಉಪನ್ಯಾಸ: ವಸಂತ್ ಶಿಂದೆ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಶಿವಶರಣೆ ಮಹಾಸಾಧ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಸಾನ್ನಿಧ್ಯ: ವೇಮನಾನಂದ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ರಾಮಲಿಂಗಾರೆಡ್ಡಿ, ಎಚ್. ಕೆ. ಪಾಟೀಲ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30ರಿಂದ

ಶೀ ಪವರ್ ಅವಾರ್ಡ್ಸ್ ಆ್ಯಂಡ್ ಬ್ಯುಸಿನೆಸ್ ಕಾನ್‌ಕ್ಲೇವ್–2026: ‘ಉದ್ಯಮಿಯಾಗುವ ನಿರ್ಧಾರ–ಅವಕಾಶ ಮತ್ತು ಸವಾಲು’ ಉಪನ್ಯಾಸ: ಕವಿತಾ ಮಿಶ್ರಾ, ‘ಮಹಿಳಾ ಉದ್ಯಮಿ–ಯಶಸ್ಸಿಗೆ ಸಪ್ತ ಸೂತ್ರಗಳು’ ಉಪನ್ಯಾಸ: ರಂಗಸ್ವಾಮಿ ಮೂಕನಹಳ್ಳಿ, ‘ಶೀ ಪವರ್’ ಪ್ರಶಸ್ತಿ ಪ್ರದಾನ: ಅತಿಥಿಗಳು: ಎನ್. ಚಲುವರಾಯಸ್ವಾಮಿ, ರೂಪಾ ಡಿ. ಮೌದ್ಗಿಲ್, ಸುಧಾರಾಣಿ, ಭಾವನಾ ರಾಮಣ್ಣ, ಶ್ವೇತಾ ರಾಜಶೇಖರ್, ಉಪಸ್ಥಿತಿ: ಗೌರೀಶ್ ಅಕ್ಕಿ, ಕಿರಣ್ ಕುಮಾರ್, ಆಯೋಜನೆ: ಗೌರೀಶ್ ಅಕ್ಕಿ ಸ್ಟುಡಿಯೊ, ಫೀನಿಕ್ಸ್ ಮಾರ್ಕೆಟಿಂಗ್ ಸರ್ವೀಸಿಸ್, ಸ್ಥಳ: ವಿವೇಕ ಸಭಾಂಗಣ, ಯುವಪಥ, ಮಧ್ಯಾಹ್ನ 2.30ರಿಂದ

‘ನಮ್ಮ ಕುಲಶಿಲ್ಪಿಗಳು’ ಉಪನ್ಯಾಸ: ಹಂ.ಗು. ರಾಜೇಶ್, ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ಟಿ. ತಿಮ್ಮೇಗೌಡ, ವೆಂಕಟರ ರಾಮೇಗೌಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಗೌಡತಿಯರ ಸೇನೆ, ಸ್ಥಳ: ಮುನೇಶ್ವರ ಸ್ವಾಮಿ ದೇವಸ್ಥಾನದ ಆವರಣ, ಕಾಳಿದಾಸ ಬಡಾವಣೆ, ಶ್ರೀನಗರ, ಮಧ್ಯಾಹ್ನ 3

ಕೆಎಲ್‌ಇ ಸಂಸ್ಥೆಯ ಸಿಬಿಎಸ್‌ಇ ಇಂಗ್ಲಿಷ್ ಮಾಧ್ಯಮ ಶಾಲೆಯ ನಾಮಕರಣ ಸಮಾರಂಭ: ಅತಿಥಿಗಳು: ಪ್ರಲ್ಹಾದ್ ಜೋಶಿ, ರುದ್ರಪ್ಪ ಎಂ. ಲಮಾಣಿ, ಪ್ರಭಾಕರ್ ಬಿ. ಕೋರೆ, ಅರುಣಾರಾಜೇ ಪಾಟೀಲ್, ಅಧ್ಯಕ್ಷತೆ: ಮಹಾಂತೇಶ್ ಎಸ್. ಕೌಜಲಗಿ, ಆಯೋಜನೆ: ಕೆಎಲ್‌ಇ ಸೊಸೈಟಿ, ಸ್ಥಳ: ಕೆಎಲ್‌ಇ ಸೊಸೈಟಿ ಶಾಲೆ, ರಾಜಾಜಿನಗರ, ಸಂಜೆ 4

ವಾದ್ಯ ಗಾನ ಸಂಭ್ರಮ: ಪರಿಕಲ್ಪನೆ–ನಿರ್ದೇಶನ: ಸತೀಶ್ ಹಂಪಿಹೊಳಿ, ಆಯೋಜನೆ: ಸಂಭ್ರಮ ಹವ್ಯಾಸಿ ಕಲಾ ಬಳಗ, ಸ್ಥಳ: ಮಾನಂದಿ ಸಭಾಂಗಣ, ವಾಸವಿ ಹಾಸ್ಟೆಲ್ ಬಿಲ್ಡಿಂಗ್, ವಾಸವಿ ಟೆಂಪಲ್ ರಸ್ತೆ, ವಿ.ವಿ. ಪುರ, ಸಜ್ಜನರಾವ್ ವೃತ್ತದ ಹತ್ತಿರ, ಸಂಜೆ 5.30

ವಾದ್ಯ ವೈಭವ ಸಂಗೀತ ಕಛೇರಿ, ‘ವಾದ್ಯ ಕಲಾ ರತ್ನ’ ಬಿರುದು ಪ್ರದಾನ: ಡಾ.ಸಿ.ಎನ್. ಮಂಜುನಾಥ್, ಬಿರುದು ಸ್ವೀಕರಿಸುವವರು: ಮುಷ್ಣಂ ವಿ. ರಾಜರಾವ್, ಅತಿಥಿಗಳು: ವಿ.ಆರ್. ಕಟ್ಟಿ, ಪಿಟೀಲು: ಎಂ.ಎ. ಸುಂದರೇಶ್ವರನ್, ಎಂ.ಎ. ಕೃಷ್ಣಸ್ವಾಮಿ, ಮೃದಂಗ: ಮುಷ್ಣಂ ವಿ. ರಾಜರಾವ್, ಘಟಂ: ಸುರೇಶ್ ವೈದ್ಯನಾಥನ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30



ಸಿ.ಎನ್ ಮಂಜುನಾಥ್

‘ರಾವಣನ ತಂಗಿ’ ಏಕವ್ಯಕ್ತಿ ತಾಳಮದ್ದಲೆ ಪ್ರದರ್ಶನ: ಪ್ರಸ್ತುತಿ: ದಿವಾಕರ ಹೆಗಡೆ ಕೆರೆಹೊಂಡ, ಭಾಗವತರು: ಅನಂತ ಹೆಗಡೆ ದಂತಳಿಗೆ, ಮದ್ದಲೆ: ಅನಂತ ಪದ್ಮನಾಭ ಫಾಟಕ್, ಆಯೋಜನೆ: ಮಿಷನ್ ದಿಶಾ, ಸ್ಥಳ: ಅನ್ನಪೂರ್ಣ, ನಂ. 194–ಸಿ, ಏಳನೇ ‘ಸಿ’ ಅಡ್ಡರಸ್ತೆ, ಬಾಲಾಜಿ ಬಡಾವಣೆ, ಸಂಜೆ 5.30

‘ಕಲಾತಪಸ್ವಿ ಡಾ. ರಾಜೇಶ್ ಅವರ ಸ್ಮರಣೆ, ಗೀತ ಗಾಯನ, ನುಡಿ ನಮನ: ಗಾಯನ: ಮಂಜುನಾಥ್, ಸ್ವಪ್ನ ಮಂಜುನಾಥ್, ಶ್ರೀನಿವಾಸ ಮೂರ್ತಿ, ಗೊರವನಹಳ್ಳಿ ಶ್ರೀಲಕ್ಷ್ಮಿ, ಆಯೋಜನೆ: ಕರುನಾಡ ಮುಕುಟ ಕಲಾತಪಸ್ವಿ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ಶ್ರೀ ಶಿರಡಿ ಸಾಯಿಬಾಬಾ ಮಂದಿರ, ವಿದ್ಯಾರಣ್ಯಪುರ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಪೊಲೀಸರ ಮೇಲೆ ಯುವಕರ ಹಲ್ಲೆ; ದೂರು

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಬೀಡಗಾನಹಳ್ಳಿ ಬಳಿಯ ನಾಗಾರ್ಜುನ ಎಂಜಿನಿಯರಿಂಗ್ ಕಾಲೇಜು ಮುಂಭಾಗ ಯುವಕರ ಗುಂಪೊಂದು ನಂದಿಗಿರಿಧಾಮ ಠಾಣೆ ಪೊಲೀಸರ ಮೇಲೆ ಹಲ್ಲೆ ನಡೆಸಿದೆ.

ಈ ಬಗ್ಗೆ ನಂದಿಗಿರಿಧಾಮ ಠಾಣೆ ಎಎಸ್‌ಐ ಗಂಗರಾಜು ರಾಜೇಶ್, ಯಶ್ವಂತ್ ಇತರರ ವಿರುದ್ಧ ದೂರು ನೀಡಿದ್ದಾರೆ. ಪೊಲೀಸರು ಮತ್ತು ವಿದ್ಯಾರ್ಥಿಗಳ ನಡುವಿನ ಜಟಾಪಟಿಯ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿವೆ.

ಕಾಲೇಜಿನಲ್ಲಿ ನಡೆಯುತ್ತಿರುವ ‘ಐಕ್ಯ’ ಕಾರ್ಯಕ್ರಮದ ಬಂದೋಬಸ್ತ್ ಕೆಲಸಕ್ಕೆ ನಿಯೋಜಿತರಾಗಿದ್ದೆವು. ಕಾಲೇಜು ಮುಂಭಾಗದ ಮುಖ್ಯದ್ವಾರದ ಬಳಿ ಐದರಿಂದ 10 ಹುಡುಗರ ಗುಂಪು ದ್ವಿಚಕ್ರವಾಹನಗಳಿಗೆ ಅಲ್ಟರ್ ಸೈಲೆನ್ಸರ್ ಅಳವಡಿಸಿ ಕರ್ಕಶ ಶಬ್ದ ಮಾಡುತ್ತಿದ್ದರು. ಗೇಟ್‌ನಲ್ಲಿದ್ದ ಭದ್ರತಾ ಸಿಬ್ಬಂದಿ ಅವರನ್ನು ಒಳಗೆ ಹೋಗಲು ಅನುಮತಿ ನಿರಾಕರಿಸಿದರು. ಆ ಹುಡುಗರು ಭದ್ರತಾ ಸಿಬ್ಬಂದಿ ಜೊತೆ ವಾಗ್ವಾದ ನಡೆಸಿದರು.

‘ನಾವು ಅವರಿಗೆ ಈ ಬಗ್ಗೆ ತಿಳಿಹೇಳಿ ಸ್ಥಳದಿಂದ ಕಳುಹಿಸಿದೆವು. ಅಲ್ಲಿಂದ ಸ್ವಲ್ಪ ಮುಂದೆ ಹೋಗಿ ಕರ್ಕಶ ಶಬ್ದ ಮಾಡುತ್ತ ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದರು. ಮತ್ತೆ ನಾವು ಆ ಸ್ಥಳಕ್ಕೆ ತೆರಳುವಷ್ಟರಲ್ಲಿ ಎಲ್ಲ ಬೈಕ್‌ನವರು ತೆರಳಿದ್ದರು. ಒಂದು ಬೈಕ್‌ನವರು ಅಲ್ಲಿಯೇ ಇದ್ದರು. ಕರ್ಕಶ ಶಬ್ದ ಮಾಡುವುದು ಕಾನೂನು ರೀತಿ ಅಪರಾಧ ಎಂದು ತಿಳಿ ಹೇಳಿದೆವು. ಆಗ ಆಗ ಒಬ್ಬ ಹುಡುಗ ಕೆಟ್ಟ ಮಾತುಗಳಿಂದ ಬೈಯ್ಯುತ್ತ ನನ್ನ ಕೈಯಲ್ಲಿದ್ದ ಲಾಟಿ ಕಿತ್ತುಕೊಂಡ. ನನ್ನ ತಳ್ಳಾಡಿ ನೆಲದ ಮೇಲೆ ಬೀಳಿಸಿದರು. ನಂತರ ವಾಹನ ಸಮೇತ ಪರಾರಿಯಾದರು. ಕರ್ತವ್ಯಕ್ಕೆ ಅಡ್ಡಿಪಡಿಸಿದ್ದು ಕಾನೂನು ರೀತಿ ಕ್ರಮಕೈಗೊಳ್ಳಬೇಕು’ ಎಂದು ದೂರಿನಲ್ಲಿ ವಿವರಿಸಿದ್ದಾರೆ.

ಆರೋಪಿ ಸೆರೆ

ಪಾವಗಡ: ಚಿಕ್ಕಬಳ್ಳಾಪುರ ನಂದಿಗಿರಿಧಾಮ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದ ಆರೋಪದಲ್ಲಿ ಪಟ್ಟಣದ ಆದರ್ಶ ನಗರದ ಯಶ್ವಂತ್ (21)ನನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿ ಪಟ್ಟಣದಲ್ಲಿ ಇರುವ ಬಗ್ಗೆ ಮಾಹಿತಿ ತಿಳಿದ ಪೊಲೀಸರು ಕಾರ್ಯಾಚರಣೆ ನಡೆಸಿ ಬಂಧಿಸಿ, ಚಿಕ್ಕಬಳ್ಳಾಪುರ ಪೊಲೀಸರ ವಶಕ್ಕೆ ನೀಡಿದ್ದಾರೆ.

ಬೀಡಿ ಜಗಳ: ಕುಡುಗೋಲಿನಿಂದ ಹಲ್ಲೆ

ಕನಕಪುರ: ಹಾರೋಹಳ್ಳಿ ತಾಲ್ಲೂಕಿನ ಮರಳವಾಡಿ ದುನ್ನಸಂದ್ರ ಗ್ರಾಮದಲ್ಲಿ ಗುರುವಾರ ಸೇದಲು ಬೀಡಿ ಕೊಡದ ವ್ಯಕ್ತಿ ಮೇಲೆ ಮತ್ತೊಬ್ಬ ಕುಡುಗೋಲಿನಿಂದ ಹಲ್ಲೆ ಮಾಡಿದ್ದಾನೆ.

ಗ್ರಾಮದ ದೇಗುಲದ ಬಳಿ ಕುಳಿತಿದ್ದ ಚಂದ್ರಾಚಾರ್ ಅವರನ್ನು ಗವೀಶ ಬೀಡಿ ಕೇಳಿದ್ದಾನೆ. ಬೀಡಿ ಇಲ್ಲ ಎಂದು ಹೇಳಿದ ಚಂದ್ರಚಾರ್ ಅವರನ್ನು ಮದ್ಯ ಕುಡಿಯಲು ಮನೆ ಹಿಂಭಾಗಕ್ಕೆ ಕರೆದೊಯ್ದು ಗವೀಶ, ಕುಡುಗೋಲಿನಿಂದ ಹಲ್ಲೆ ನಡೆಸಿದ್ದಾನೆ. ಚಂದ್ರಚಾರ್ ರಕ್ಷಣೆಗಾಗಿ ಕೂಗಿಕೊಂಡಾಗ ಗವೀಶ ಓಡಿ ಹೋಗಿದ್ದಾನೆ.

‘ಅಪ್ಪನಂತೆ ನನಗೂ ಪ್ರೀತಿ ಕೊಡಿ’

ಅಭಿಮಾನೋತ್ಸವದಲ್ಲಿ ವಿಜಯೇಂದ್ರ ಮನವಿ

• ಯೋಗೇಶ್ ಎಂ.ಎನ್.

ಚಿತ್ರದುರ್ಗ: ‘ರಾಜಕೀಯವಾಗಿ ಅಂಬೆಗಾಲಿಡುತ್ತಿದ್ದೇನೆ. ತಂದೆಯಂತೆಯೇ ಎದುರಾಗುವ ಎಲ್ಲಾ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಕೊಡಿ. ಅವರಂತೆಯೇ ಪ್ರೀತಿ ತೋರಿ, ವಿಶ್ವಾಸ ಇಡಿ. ನಿಮ್ಮೆಲ್ಲರ ವಿಶ್ವಾಸಗಳನ್ನು ಉಳಿಸಿಕೊಳ್ಳುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಮಾತನಾಡಿದ ಅವರು, ‘ರಾಜಕೀಯ ಕಾರಣಕ್ಕೆ, ವೈಯಕ್ತಿಕ ವರ್ಚಸ್ಸಿಗಾಗಿ ಬಿಎಸ್‌ವೈ ಅಭಿಮಾನೋತ್ಸವ ಆಚರಣೆ ಮಾಡುತ್ತಿಲ್ಲ. 50 ವರ್ಷಗಳ ಸಾರ್ವಜನಿಕ ಬದುಕಿನಲ್ಲಿ ಪರಿಶ್ರಮ, ಹೋರಾಟಕ್ಕೆ ಹಾಗೂ ತ್ಯಾಗಕ್ಕೆ ಇನ್ನೊಂದು ಹೆಸರೇ ಯಡಿಯೂರಪ್ಪ. ಬಡವರ ಬಂಧುವಾಗಿರುವ ಅವರನ್ನು ಅಭಿನಂದಿಸಲು ಈ ಉತ್ಸವ ಆಚರಿಸಲಾಗುತ್ತಿದೆ’ ಎಂದರು.

‘ಅಧಿಕಾರ ಇರಲಿ, ಇಲ್ಲದಿರಲಿ ಯಡಿಯೂರಪ್ಪ ಅವರು ಸಾಕಷ್ಟು ಸವಾಲುಗಳನ್ನು ಎದುರಿಸಿದ್ದಾರೆ. ರಾಜಕೀಯ ಷಡ್ಯಂತ್ರಗಳಿಗೆ ಮಣಿಯಲಿಲ್ಲ. ಸವಾಲುಗಳಿಗೆ ಬೆನ್ನು ತೋರಿ ಎಂದೂ ಓಡಿ ಹೋಗಲಿಲ್ಲ. ಗಟ್ಟಿಯಾಗಿ ನಿಂತು ಎಲ್ಲವನ್ನೂ ಎದುರಿಸಿದರು. ಪ್ರತ್ಯೇಕ ರೈತ ಬಜೆಟ್ ಮಂಡಿಸುವ ಮೂಲಕ ದೇಶದಲ್ಲಿ ಹೊಸ ದಾಖಲೆಯನ್ನೇ ಬರೆದರು. ಪ್ರಾಮಾಣಿಕವಾಗಿ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದರು ಎಂದರು.

‘ರಾಜ್ಯದ ಇತಿಹಾಸದಲ್ಲಿ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಒಬ್ಬರೇ ಮುಖ್ಯಮಂತ್ರಿ ಯಡಿಯೂರಪ್ಪ. ಭಾಗ್ಯಲಕ್ಷ್ಮಿ ಬಾಂಡ್ ಯೋಜನೆ ಆರಂಭಿಸಿ, ಜನರಲ್ಲಿ ಹೆಣ್ಣು ಶಾಪ ಅಲ್ಲ ಎಂಬ ಭಾವನೆಯನ್ನು ಮೂಡಿಸಿದರು. ರಾಜ್ಯದ ಎಲ್ಲಾ ಮಠಗಳಿಗೆ ಅನುದಾನ ನೀಡಿ ಆರ್ಥಿಕ ಶಕ್ತಿ ತುಂಬಿದರು. ಜನರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಾ ಸಾಮಾನ್ಯರಾಗಿ ಬದುಕಿದರು’ ಎಂದರು.

ಅಭಿಮಾನ ತೋರದ ಭಿನ್ನರು

ಒಂದು ಕಾಲದಲ್ಲಿ ಯಡಿಯೂರಪ್ಪ ಅವರಿಗೆ ಪಕ್ಷ ಸಂಘಟನೆಯಲ್ಲಿ ಸಾಥ್ ನೀಡಿದ್ದ ಕೆ.ಎಸ್.ಈಶ್ವರಪ್ಪ ಸೇರಿದಂತೆ ಹಲವರಿಗೆ ಅಭಿನಂದನಾ ಸಮಿತಿ ಖುದ್ದು ಆಹ್ವಾನ ನೀಡಿದ್ದರೂ ಅವರೂ ಸೇರಿದಂತೆ ಭಿನ್ನರ ಗುಂಪು ಕಾರ್ಯಕ್ರಮದತ್ತ ಸುಳಿಯಲಿಲ್ಲ. ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಎಲ್ಲ ಜಾತಿ, ಸಮುದಾಯಗಳ ಸಾವಿರಕ್ಕೂ ಮಠಾಧೀಶರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪ್ರಮುಖ ಮಠಾಧೀಶರಿಗೆ ಪ್ರಮುಖ ವೇದಿಕೆಯಲ್ಲಿ ಸ್ಥಾನ ಕಲ್ಪಿಸಿದ್ದರೆ, ಉಳಿದವರಿಗೆ ವೇದಿಕೆಯ ಬಲಭಾಗದಲ್ಲಿ ಪರ್ಯಾಯ ವೇದಿಕೆ ನೀಡಲಾಗಿತ್ತು. ಎಡದಲ್ಲಿದ್ದ ಮತ್ತೊಂದು ಪರ್ಯಾಯ ವೇದಿಕೆಯಲ್ಲಿ ಶಾಸಕರೂ ಸೇರಿದಂತೆ ರಾಜಕೀಯ ನಾಯಕರಿಗೆ ಅವಕಾಶ ನೀಡಲಾಗಿತ್ತು.



ಚಿತ್ರದುರ್ಗದಲ್ಲಿ ಆಯೋಜಿಸಿದ್ದ ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ಸೇರಿದ್ದ ಜನಸ್ತೋಮ – ಪ್ರಜಾವಾಣಿ ಚಿತ್ರಗಳು/ಸತೀಶ್ ಬಡಿಗೇರ

ಸ್ವಾಮೀಜಿಗಳ ಅಭಿಪ್ರಾಯ

ಯಡಿಯೂರಪ್ಪ ಅವರು ತಮ್ಮ 50 ವರ್ಷಗಳ ಹೋರಾಟದ ಹಾದಿಯಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡಿದ್ದಾರೆ. ಅಧಿಕಾರ ಇದ್ದಾಗ ರಾಜ್ಯಕ್ಕೆ ಉತ್ತಮ ಆಡಳಿತ ನೀಡಿದ್ದಾರೆ. ಅಧಿಕಾರ ಇಲ್ಲದಿದ್ದಾಗ ಸಾಮಾನ್ಯರ ಜೊತೆ ನಿಂತು ಹೋರಾಟ ಮಾಡಿದ್ದಾರೆ. ಹೋರಾಟದ ಮೂಲಕವೇ ಅವರ ಹಾದಿ ಸಾಗಿ ಬಂದಿದೆ. ಹೋರಾಟದ ಮೂಲಕ ಮುಖ್ಯಮಂತ್ರಿ ಗಾದಿವರೆಗೂ ಸಾಗಿದ ಅಪರೂಪದ ರಾಜಕಾರಣಿಯಾಗಿದ್ದಾರೆ

ಶಿವರಾತ್ರೀಶ್ವರ ದೇಶೀಕೇಂದ್ರ ಸ್ವಾಮೀಜಿ, ಸುತ್ತೂರು ಮಠ

ಬಿ.ಎಸ್.ಯಡಿಯೂರಪ್ಪ ಅವರ ಮೌಲ್ಯಯುತವಾಗಿ ರಾಜಕಾರಣ ಮಾಡಿದ್ದಾರೆ. ಇದು ಕೇವಲ ಬಿಎಸ್‌ವೈ ಅಭಿಮಾನೋತ್ಸವ ಅಷ್ಟೇ ಅಲ್ಲ. ಮೌಲ್ಯಯುತ ರಾಜಕಾರಣದ ಸಂಭ್ರಮೋತ್ಸವವೂ ಆಗಿದೆ. ಹೋರಾಟದ ಹಾದಿಯಲ್ಲಿ ಬಂದ ಅವರು ಬಡವರಿಗೆ ನ್ಯಾಯ ನೀಡುವ ಕೆಲಸ ಮಾಡಿದ್ದಾರೆ. ಅಭಿಮಾನೋತ್ಸಕ್ಕೆ ಹರಿದು ಬಂದಿರುವ ಜನಸಾಗರವನ್ನು ನೋಡಿದರೆ ಯಡಿಯೂರಪ್ಪ ಅವರ ಮೇಲೆ ಜನರಿಗೆ ಇರುವ ಪ್ರೀತಿ ತಿಳಿಯುತ್ತದೆ

ನಿರ್ಮಲಾನಂದನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠ

ಬಿಎಸ್‌ವೈ ಅಭಿಮಾನೋತ್ಸವಕ್ಕೆ ಹರಿದು ಬಂದಿರುವ ಜನಸಾಗರವನ್ನು ಕಂಡು ಮನಸ್ಸು ತುಂಬಿ ಬಂದಿದೆ. ಈ ಸಮಾರಂಭಕ್ಕೆ ಬಂದದ್ದು ಸಾರ್ಥಕ ಎನಿಸಿದೆ. ಯಡಿಯೂರಪ್ಪ ಒಮ್ಮೆಲೆ ಅಧಿಕಾರ ಅನುಭವಿಸಿದವರಲ್ಲ. ಸಾಮಾನ್ಯರ ಜತೆ ಸಾಮಾನ್ಯರಾಗಿ ಬೆರೆತು ಹೋರಾಟ ಮಾಡಿ ಅಧಿಕಾರದ ಗದ್ದುಗೆ ಏರಿದ್ದಾರೆ. ಮಠ, ಮಂದಿರಗಳಿಗೆ ಅಪಾರ ಅನುದಾನ ನೀಡಿರುವ ಅವರ ಎಲ್ಲಾ ಸಮಾಜಗಳ ಪ್ರೀತಿ ಸಂಪಾದನೆ ಮಾಡಿದ್ದಾರೆ

ರೇಣುಕಾ ವೀರಸೋಮೇಶ್ವರ ಸ್ವಾಮೀಜಿ, ರಂಭಾಪುರಿ ಮಠ

ಬಿ.ಎಸ್.ಯಡಿಯೂರಪ್ಪ ಅವರು ನೀರಾವರಿ ಕ್ಷೇತ್ರಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಮಂಡ್ಯ ಜಿಲ್ಲೆಯ ಸಣ್ಣ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಅವರು ಧಾರ್ಮಿಕ ವಾತಾವರಣದಲ್ಲಿ ಉತ್ತಮ ಸಂಸ್ಕಾರ ಪಡೆದು ಬಂದಿದ್ದಾರೆ. ಬಡ ಜನರಿಗಾಗಿ ತುಡಿಯುವ ಹೃದಯ ಅವರದು

ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ತರಳಬಾಳು ಮಠ, ಸಿರಿಗೆರೆ

ಹಲವರು ರಾಜಕೀಯವಾಗಿ ತುಳಿಯಲು ಪ್ರಯತ್ನಿಸಿದರೂ ಅದಕ್ಕೆ ತಲೆ ಕೆಡಿಸಿಕೊಳ್ಳಲಿಲ್ಲ. ಇಂಗ್ಲಿಷ್ ಅಕ್ಷಗಳಲ್ಲಿ ‘ಐ’ ಹೊರತುಪಡಿಸಿ ಮಿಕ್ಕೆಲ್ಲಾ ಪದಗಳು ಬೆಂಡಾಗುತ್ತವೆ. ಅದೇ ರೀತಿಯಾಗಿ ಯಡಿಯೂರಪ್ಪ ಅವರು ತಮ್ಮ ಇಡೀ ಜೀವನಲ್ಲಿ ‘ಐ’ ಮಾದರಿಯಲ್ಲಿ ಯಾರಿಗೂ ಬೆಂಡಾಗಲಿಲ್ಲ. ಆನೆ, ಸಿಂಹಕ್ಕೆ ಸಿಂಹಾಸನ ಬೇಕಿಲ್ಲ. ಕುಂತ ಜಾಗವೇ ಸಿಂಹಾಸನವಾಗುತ್ತದೆ. ಯಡಿಯೂರಪ್ಪ ಅಂಥದ್ದೇ ವ್ಯಕ್ತಿತ್ವ ಹೊಂದಿದ್ದಾರೆ

ದಿಂಗಾಲೇಶ್ವರ ಸ್ವಾಮೀಜಿ, ಶಿರಹಟ್ಟಿ ಫಕೀರ ಮಠ

‘ಬಿಜೆಪಿ ಇಡೀ ಭಾರತಕ್ಕೆ ಸೇರಿದ ಪಕ್ಷ: ತೋರಿಸಿದ್ದು ಬಿಎಸ್‌ವೈ’

ಚಿತ್ರದುರ್ಗ: ‘ಬಿಜೆಪಿ ಕೆಲವೇ ಪ್ರದೇಶಗಳಿಗೆ ಸೀಮಿತ ಎಂಬ ಆರೋಪಗಳಿದ್ದ ಸಂದರ್ಭದಲ್ಲಿ ಯಡಿಯೂರಪ್ಪ ಅವರು ತನ್ನ ಅಮೋಘ ನಾಯಕತ್ವದ ಮೂಲಕ ಬಿಜೆಪಿ ಇಡೀ ಭಾರತಕ್ಕೆ ಸೇರಿದ ಪಕ್ಷ ಎಂದು ಸಾಬೀತು ಮಾಡಿ ತೋರಿಸಿದರು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಣ್ಣಿಸಿದ್ದಾರೆ.

ಮೋದಿಯವರು ಕಳುಹಿಸಿದ ಸಂದೇಶದ ಸಾರವನ್ನು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಓದಿದರು.

ಮೋದಿ ಸಂದೇಶ: ‘ಯಡಿಯೂರಪ್ಪ ಅವರು ಸದಾ ವಿನಮ್ರತೆ, ಸಹಾನುಭೂತಿ ಮತ್ತು ಕಠಿಣ ಪರಿಶ್ರಮದ ವ್ಯಕ್ತಿ. ಅವರ ಸಾಮಾಜಿಕ ಸೇವೆಯ 50 ವರ್ಷಗಳ ಪಯಣವು ಬದ್ಧತೆ, ಸಂಘರ್ಷ, ತ್ಯಾಗ ಮತ್ತು ಜನರಿಗಾಗಿ ಸಮರ್ಪಣೆಯ ಕಥೆ.

‘ಯಡಿಯೂರಪ್ಪ ಅವರನ್ನು ಸಂಘರ್ಷ ಮತ್ತು ಯಶಸ್ಸಿನ ಎರಡೂ ಸಂದರ್ಭದಲ್ಲಿ ನೋಡಿದ್ದೇನೆ. ಪ್ರತಿ ಸಂದರ್ಭದಲ್ಲಿಯೂ ಅವರು ಕರ್ನಾಟಕದ ಜನರಿಗೆ ಮತ್ತು ಪಕ್ಷದ ಸಿದ್ಧಾಂತಕ್ಕೆ ಅಚಲ ಬದ್ಧತೆಯನ್ನು ಹೊಂದಿದ್ದರು. ರೈತರಿಗಾಗಿ ಪ್ರತ್ಯೇಕ ಬಜೆಟ್ ಮಂಡಿಸಿದ ಪ್ರವರ್ತಕರು.

ಕಾರ್ಯಕರ್ತರು ಕೊಟ್ಟ ಶಕ್ತಿ: ಬಿಎಸ್‌ವೈ

‘50 ವರ್ಷಗಳಿಂದ ನಾಡಿನ ಜನರ ಸೇವೆಗೆ ಜೀವನ ಸಮರ್ಪಣೆ ಮಾಡಿಕೊಂಡು ಬಂದಿದ್ದೇನೆ. ಹುಟ್ಟುವಾಗಲೇ ಚಿನ್ನದ ಚಮಚವನ್ನು ಬಾಯಿಯಲ್ಲಿ ಇಟ್ಟುಕೊಂಡು ಬಂದವನಲ್ಲ. ಅನಿರೀಕ್ಷಿತವಾಗಿ ತಿರುವುಗಳ ನಡುವೆ ಬೆಳೆದೆ. ಅಭಿಮಾನೋತ್ಸವದ ಸಾಗರದಲ್ಲಿ ಜನರು ನನ್ನನ್ನು ತೇಲಿಸಿದ್ದಾರೆ’ ಎಂದು ಹೇಳುತ್ತಾ ಯಡಿಯೂರಪ್ಪ ಗದ್ಗದಿತರಾದರು.

ಗೌರವ ಸ್ವೀಕರಿಸಿ ಮಾತನಾಡಿ, ‘ಹೋರಾಟ, ಸಂಘಟನೆಯನ್ನು ತಪಸ್ಸು ಎಂದು ಸ್ವೀಕರಿಸಿದ್ದೆ. ಆರ್‌ಎಸ್‌ಎಸ್ ಸಂಸ್ಕಾರ ನೀಡಿತು. ಅಧಿಕಾರಕ್ಕಾಗಿ ಎಂದೂ ಹೋರಾಟ ಮಾಡಲಿಲ್ಲ. ಮುಖ್ಯಮಂತ್ರಿ ಹುದ್ದೆಯನ್ನು ಕನಸಿನಲ್ಲೂ ಕಂಡಿರಲಿಲ್ಲ. ಸಂಘಟನೆ, ಕಾರ್ಯಕರ್ತರ ಶ್ರಮ, ಬೆಂಬಲದಿಂದಾಗಿ ಶಿಕಾರಿಪುರದಿಂದ ವಿಧಾನಸೌಧದ ಮೂರನೇ ಮಹಡಿ ಏರಿದೆ’ ಎಂದು ಸ್ಮರಿಸಿದರು. ‘ಜನರಿಗಾಗಿ ಹೋರಾಡಿದ್ದೇನೆ. ಕೊನೆ ಉಸಿರು ಇರುವವರೆಗೆ ವಿರಮಿಸುವುದಿಲ್ಲ. ದೇವರು ಶಕ್ತಿ ಕೊಟ್ಟಿರುವವರೆಗೆ ಜನರಿಗಾಗಿ ಕೆಲಸ ಮಾಡುತ್ತೇನೆ’ ಎಂದರು.



ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮದಲ್ಲಿ ತಿಂಡಿ ಪೊಟ್ಟಣ ಪಡೆಯಲು ಮುಗಿಬಿದ್ದ ಜನ

ಮಾತು ತಪ್ಪದ ಯಡಿಯೂರಪ್ಪ: ನಿರಂಜನಾನಂದಪುರಿ ಶ್ರೀ

‘ಯಡಿಯೂರಪ್ಪ ಅವರೂ ಎಂದೂ ಕೊಟ್ಟ ಮಾತು ತಪ್ಪಲಿಲ್ಲ. ಕುರುಬ ಸಮಾಜದ ಹಲವು ಮುಖಂಡರಿಗೆ ಅವರು ರಾಜಕೀಯವಾಗಿ ಶಕ್ತಿ ತುಂಬಿದ್ದಾರೆ’ ಎಂದು ಕಾಗಿನೆಲೆ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಹೇಳಿದರು.

‘ಸಮುದಾಯದ ಸಿ.ಎಚ್.ವಿಜಯಶಂಕರ್ ಅವರಿಗೆ ರಾಜಕೀಯವಾಗಿ ಯಾವುದೇ ಸ್ಥಾನವಿಲ್ಲದಿದ್ದಾಗ ನನ್ನ ಮಾತಿಗೆ ಮನ್ನಣೆ ನೀಡಿದರು. ವಿಧಾನ ಪರಿಷತ್ ಸ್ಥಾನ ನೀಡಿ, ಸಚಿವ ಸ್ಥಾನ ಕೊಟ್ಟರು. ಕೊಟ್ಟ ಮಾತನ್ನು ತಪ್ಪದೇ ನಡೆಸಿಕೊಟ್ಟರು. ಕನಕದಾಸ ಜಯಂತಿಗೆ ರಜೆ ಘೋಷಿಸಿದರು. ಕಾಗಿನೆಲೆ ಅಭಿವೃದ್ಧಿಗೆ ಸಾಕಷ್ಟು ಅನುದಾನ ಕೊಟ್ಟಿದ್ದಾರೆ’ ಎಂದರು.

ಅಭಿಮಾನ ಹೊಳೆ; ಮತ ಕಹಳೆ

ಒಂದನೇ ಪುಟದಿಂದ...

ಅಶ್ವಮೇಧದ ಕುದುರೆ ಕಟ್ಟಿದ್ದೇವೆ; ಯಾರು ತಡೆಯುತ್ತಾರೋ ನೋಡಿಯೇ ಬಿಡೋಣ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಸವಾಲು ಒಡ್ಡಿದರು.

‘ಅಭಿಮಾನೋತ್ಸವದಲ್ಲಿ ಆಡಳಿತ ಪಕ್ಷದ ಸೂರ್ಯ ಮುಳುಗುತ್ತಿದೆ. ನಮ್ಮ ಪಕ್ಷದ ಸೂರ್ಯ ಉದಯಿಸುತ್ತಿದೆ. ಬರುವ ದಿನಗಳಲ್ಲಿ ಒಗ್ಗಟ್ಟಾಗಿ, ನಾವು ಇಲ್ಲಿಂದ ಸಂಕಲ್ಪ ಮಾಡಿದರೆ ನಮ್ಮ ಪಕ್ಷದ ಸರ್ಕಾರ ವಿಧಾನಸೌಧದ ಮೂರನೆ ಮಹಡಿಯಲ್ಲಿ ಆಗಿಯೇ ತೀರುತ್ತದೆ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು..

ಸಭೆಯಲ್ಲಿ ಮಾತನಾಡಿದ ಬಹುತೇಕ ಸ್ವಾಮೀಜಿಗಳು ಯಡಿಯೂರಪ್ಪ ಅವರು ಅಧಿಕಾರದಲ್ಲಿದ್ದಾಗ ಮಠ–ಮಾನ್ಯಗಳಿಗೆ ನೀಡಿದ ನೆರವನ್ನು ನೆನೆದು, ಕೊಂಡಾಡಿದರು.

ಮೇಲ್ನೋಟಕ್ಕೆ ಯಡಿಯೂರಪ್ಪ ಅವರ ಅಭಿಮಾನೋತ್ಸವವಾದರೂ, ಅವರ ಪುತ್ರ, ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಮುಂದಿನ ರಾಜಕೀಯ ಪಯಣದ ದಿಕ್ಸೂಚಿಯ ಪ್ರತಿಬಿಂಬವಾಗಿತ್ತು. ‘ವಿಜಯೇಂದ್ರ ಅವರು ಅಧ್ಯಕ್ಷರಾದ ನಂತರ ಪ್ರತ್ಯೇಕ ಬಣ ಮಾಡಿಕೊಂಡಿದ್ದಾರೆ. ಹಿರಿಯರನ್ನು ಕಡೆಗಣಿಸುತ್ತಾರೆ’ ಎಂಬ ಆರೋಪಗಳು ಇದ್ದವು. ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಪಕ್ಷದ ರಾಜ್ಯ ಉಸ್ತುವಾರಿ ರಾಧಮೋಹನ್ ಅಗರವಾಲ್, ವಿರೋಧ ಪಕ್ಷದ ನಾಯಕ ಆರ್. ಅಶೋಕ, ಸಂಸದ ಜಗದೀಶ ಶೆಟ್ಟರ್ ಸೇರಿದಂತೆ ಹಲವು ನಾಯಕರು ವೇದಿಕೆ ಹಂಚಿಕೊಂಡು ಒಗ್ಗಟ್ಟು ಪ್ರದರ್ಶಿಸಿದರು.

ಮೋದಿ ಬರ್ತಾರೆ, ಅಧಿಕಾರಕ್ಕೆ ತರ್ತೇವೆ: ಅಮಿತ್ ಶಾ

ಒಂದನೇ ಪುಟದಿಂದ...

‘ಕರ್ನಾಟಕದಲ್ಲಿ ಬಿಜೆಪಿಗೆ ನೆಲೆಯೇ ಇಲ್ಲದ ಕಾಲದಲ್ಲಿ ಊರೂರು ತಿರುಗಿ ಯಡಿಯೂರಪ್ಪ ಪಕ್ಷ ಕಟ್ಟಿದ್ದರು. ರಾಜಕೀಯ ಹಿನ್ನೆಲೆ ಇಲ್ಲದಿದ್ದರೂ ಸೈಕಲ್ ತುಳಿದು ಬೀದಿ ಬೀದಿ ಅಲೆದಾಡಿದ್ದರು. ಪಕ್ಷಕ್ಕಾಗಿ ಅವರ ಶ್ರಮ, ತ್ಯಾಗ ದೇಶಕ್ಕೆ ಮಾದರಿ. ದಕ್ಷಿಣ ಭಾರತದ ಇತಿಹಾಸದಲ್ಲಿ ಸುವರ್ಣ ಅಕ್ಷರಗಳಲ್ಲಿ ಬರೆದಿಡುವ ಸಾಧನೆ’ ಎಂದು ಬಣ್ಣಿಸಿದರು.

‘ಸಣ್ಣ ನೌಕರಿ ಮಾಡಿಕೊಂಡಿದ್ದ ಯಡಿಯೂರಪ್ಪ ಅವರು ನಡೆದು ಬಂದ ಹಾದಿಯೇ ಒಂದು ಸೋಜಿಗ. ಪುರಸಭಾ ಸ್ಥಾನದಿಂದ ರಾಜಕೀಯ ಆರಂಭಿಸಿ, ನಾಲ್ಕು ಬಾರಿ ಮುಖ್ಯಮಂತ್ರಿ ಹುದ್ದೆಗೇರಿದ್ದಾರೆ. ಕೆಲವರು ಸಿದ್ಧ ಹಾದಿಯಲ್ಲಿ ಮುನ್ನಡೆಯುತ್ತಾರೆ. ಇನ್ನೂ ಕೆಲವರು ತಮ್ಮ ಹಾದಿಯನ್ನು ತಾವೇ ಹುಡುಕಿಕೊಳ್ಳುತ್ತಾರೆ. ಬಿ.ಎಸ್.ಯಡಿಯೂರಪ್ಪ ಅವರದು ಎರಡನೇ ಮಾದರಿ. ಇದಕ್ಕೆ ಆರ್‌ಎಸ್‌ಎಸ್ ಸಂಸ್ಕಾರ ಕಾರಣ’ ಎಂದು ಅಮಿತ್ ಶಾ ಬಣ್ಣಿಸಿದರು.

‘ಅಕ್ಸಾ’ ಅಧ್ಯಕ್ಷ ವಶ, ಬಿಡುಗಡೆ

ಪ್ರಜಾವಾಣಿ ವಾರ್ತೆ

ಧಾರವಾಡ: ‘56,432 ಹುದ್ದೆಗಳ ನೇಮಕಾತಿಗೆ ಕೂಡಲೇ ಅಧಿಸೂಚನೆ ಪ್ರಕಟಿಸಬೇಕು. ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ನಡೆದಿರುವ ಅಕ್ರಮಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಆಗ್ರಹಿಸಿ ಶನಿವಾರ ಏಕಾಏಕಿ ಪ್ರತಿಭಟನೆಯಲ್ಲಿ ತೊಡಗಿದ್ದ ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ಅಧ್ಯಕ್ಷ ಕಾಂತಕುಮಾರ್ ಅವರನ್ನು ಪೊಲೀಸರು ವಶಕ್ಕೆ ಪಡೆದು, ಬಿಡುಗಡೆಗೊಳಿಸಿದರು.

ಜಿಲ್ಲಾಧಿಕಾರಿ ಕಚೇರಿ ಬಳಿಯ ಉದ್ಯಾನದಲ್ಲಿನ ಗಾಂಧೀಜಿ ಪ್ರತಿಮೆ ಎದುರು ಏಕಾಂಗಿಯಾಗಿ ಧರಣಿ ಕುಳಿತಿದ್ದ ಕಾಂತರಾಜ್ ಮತ್ತು ಪೊಲೀಸರ ನಡುವೆ ಕೆಲ ಸಮಯ ವಾಗ್ವಾದ ನಡೆಯಿತು.

‘ಧಾರವಾಡದಲ್ಲಿ ನೀವು ಪ್ರತಿಭಟಿಸಲು ಕೋರ್ಟ್ ಸಮ್ಮತಿಸಿಲ್ಲ, ಪ್ರತಿಭಟನೆ ನಡೆಸಿದರೆ ನ್ಯಾಯಾಂಗ ನಿಂದನೆಯಾಗಲಿದೆ’ ಎಂದು ಇನ್‌ಸ್ಪೆಕ್ಟರ್ ದಯಾನಂದ ಶೇಗುಣಿಸಿ ಕಾಂತಕುಮಾರ್ ಅವರಿಗೆ ಎಚ್ಚರಿಕೆ ನೀಡಿದರು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆ ಘೋಷಣೆಗೆ ಈಗ ತಯಾರಿ ನಡೆದಿದೆ. ನೀತಿ ಸಂಹಿತೆ ಹೆಸರಿನಲ್ಲಿ ರಾಜ್ಯ ಸರ್ಕಾರ ನೇಮಕಾತಿ ಪ್ರಕ್ರಿಯೆ ಮುಂದೂಡಲಿದೆ. ಒಳಮೀಸಲಾತಿ ಸಹಿತ ಎಲ್ಲ ತೊಡಕ ಪರಿಹಾರವಾಗಿದ್ದರೂ ನೇಮಕಾತಿಗೆ ಸರ್ಕಾರ ಅಧಿಸೂಚನೆ ಪ್ರಕಟಿಸಿಲ್ಲ’ ಎಂದು ಕಾಂತಕುಮಾರ್ ಹೇಳಿದರು.

ಪೊಲೀಸರು ಕಾಂತಕುಮಾರ್ ಅವರನ್ನು ಎಳೆದೊಯ್ದು ವಾಹನಕ್ಕೆ ಹತ್ತಿಸಿ ಕರೆದೊಯ್ದರು. ಆಗಲು ವಾಕ್ಸಮರ ನಡೆಯಿತು. ‘ಕಾಂತಕುಮಾರ್ ಅವರನ್ನು ಮುಂಜಾಗ್ರತೆಯಾಗಿ ವಶಕ್ಕೆ ಪಡೆದು ಸಂಜೆ ಬಿಡುಗಡೆ ಮಾಡಲಾಯಿತು’ ಎಂದು ಪೊಲೀಸರು ತಿಳಿಸಿದರು.

ಆಳ್ವಾಸ್ ವಿದ್ಯಾರ್ಥಿಗಳ ಸಾಧನೆ



ವಿವೇಕ್ | ಅದ್ವೈತ್ | ಅಮೋಘ್ | ಮೊಹಮ್ಮದ್ | ಸಾಯೀಶ್ | ಪ್ರಹ್ಲಾದ್

ಎನ್‌ಡಿಎ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ: ಯುಪಿಎಸ್‌ಸಿ ನಡೆಸುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಹಾಗೂ ನೇವಲ್ ಅಕಾಡೆಮಿ (ಎನ್‌ಡಿಎ) ಪರೀಕ್ಷೆಯಲ್ಲಿ ಆಳ್ವಾಸ್ ಪಿಯು ಕಾಲೇಜಿನ 24 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

‘ಭಾರತೀಯ ಸೇನೆ, ನೌಕಾಪಡೆ, ವಾಯುಪಡೆಯಲ್ಲಿ ಅಧಿಕಾರಿಯಾಗಲು ಎನ್‌ಡಿಎ ಪ್ರಮುಖ ಘಟ್ಟವಾಗಿದೆ. ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವಲ್ಲಿ ಆಳ್ವಾಸ್ ಪದವಿಪೂರ್ವ ಕಾಲೇಜು ಶ್ರಮಿಸುತ್ತಿದೆ’ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ ಸುದ್ದಿಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

ವಿದ್ಯಾರ್ಥಿಗಳಾದ ವಿವೇಕ್ ಎ., ಅದ್ವೈತ್ ವಿಕ್ರಾಂತ್ ಶಂಡೆ, ಅಮೋಘ ನಾಗರಾಜ್ ಬಿಲ್ಲೂರ್, ಮೊಹಮ್ಮದ್ ಯೂಸುಫ್ ನಿಸಾರ್ ಶೇಖ್, ಸಾಯೀಶ್ ಪ್ರಶಾಂತ್ ತಾಳೇಕರ್, ಪ್ರಹ್ಲಾದ್ ದತ್ತ ದೇಸಾಯಿ, ಸಂಹಿತ್ ವಿ.ರಾವ್, ಹರ್ಷ ಎಂ., ಕೃತಿಕ್ ಬಿ., ಪ್ರಣವ್ ಎನ್. ಪಂಡಿತ್, ವಿಜಯಕುಮಾರ್ ಸಂಗಯ್ಯ ಚಿಕ್ಕಮಠ, ಪಿಯೂಷ್ ಎಚ್., ಶ್ರೇಯಸ್ ಸಿ.ಕಬ್ಬಿನಕಂತಿಮಠ, ಭರತೇಶ್ ನಾಗೇಶ್ ಮೊಗೇರ್, ಚಿನ್ಮಯ್ ಎಸ್., ಸಂಕೇತ್ ಭಟ್, ಸುಮಿತ್ ವಿ.ಕೆ., ಹರ್ಷ ರೆಡ್ಡಿ, ಮೋಹಿತ್ ಕುಮಾರ್ ಜೆ., ಅಕ್ಷಯ್ ಭಾರದ್ವಾಜ್, ಅನುಷ್ ಅರುಣ್ ಕೆ., ಪಿಯೂಷ್ ಎಚ್., ವಿಸ್ಮಯ್ ನಾರಾಯಣ ನಾಡಿಗ್, ಮೆಲ್ರಾಯ್ ಕ್ಯಾಸ್ಟೆಲಿನೊ, ಇಶಾನ ಉತ್ತೀರ್ಣರಾಗಿದ್ದಾರೆ ಎಂದರು.

ಪ್ರಾಂಶುಪಾಲ ಪ್ರೊ.ಮೊಹಮ್ಮದ್ ಸದಾಕತ್, ಸಂಯೋಜಕ ವರುಣ್ ಪ್ರಭು ಸುದ್ದಿಗೋಷ್ಠಿಯಲ್ಲಿ ಇದ್ದರು.

ಮೊದಲೆರಡು ಸ್ಥಾನದಲ್ಲಿ ಮಹಾರಾಷ್ಟ್ರ, ತಮಿಳುನಾಡು

ಭ್ರಷ್ಟಾಚಾರ ಪ್ರಕರಣ ರಾಜ್ಯಕ್ಕೆ ಮೂರನೇ ಸ್ಥಾನ

ಪ್ರಜಾವಾಣಿ ವಾರ್ತೆ


ಬೆಂಗಳೂರು: ದೇಶದಲ್ಲೇ ಅತಿಹೆಚ್ಚು ಭ್ರಷ್ಟಾಚಾರ ಪ್ರಕರಣಗಳು ದಾಖಲಾದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಮೂರನೇ ಸ್ಥಾನದಲ್ಲಿದೆ.

2024ರಲ್ಲಿ ಮಹಾರಾಷ್ಟ್ರದಲ್ಲಿ 721, ತಮಿಳುನಾಡಿನಲ್ಲಿ 364 ಭ್ರಷ್ಟಾಚಾರದ ಪ್ರಕರಣಗಳು ದಾಖಲಾಗಿದ್ದರೆ, ಕರ್ನಾಟಕದಲ್ಲಿ 334 ಪ್ರಕರಣಗಳು ದಾಖಲಾಗಿವೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ‘ಭಾರತದಲ್ಲಿ ಅಪರಾಧ–2024’ ವರದಿಯನ್ನು ಈಚೆಗೆ ಬಿಡುಗಡೆ ಮಾಡಿದೆ. ದೇಶದಾದ್ಯಂತ ಒಟ್ಟು 4,053 ಭ್ರಷ್ಟಾಚಾರ ಸಂಬಂಧಿ ಪ್ರಕರಣಗಳು ದಾಖಲಾಗಿವೆ ಎಂದು ದತ್ತಾಂಶ ನೀಡಿದೆ. ಈ ಪೈಕಿ ರಾಜ್ಯದ ಪ್ರಕರಣಗಳ ಪಾಲು ಶೇ 8.3ರಷ್ಟಾಗುತ್ತದೆ.


ರಾಜ್ಯದ 334ರ ಪೈಕಿ, ಲಂಚ ಪ್ರಕರಣಗಳಲ್ಲಿ ಲೋಕಾಯುಕ್ತ ಪೊಲೀಸರು ಸರ್ಕಾರಿ ಅಧಿಕಾರಿ–ಸಿಬ್ಬಂದಿಯನ್ನು ಬಂಧಿಸಿದ ಪ್ರಕರಣಗಳ ಸಂಖ್ಯೆ 237ರಷ್ಟಿದೆ. ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ 75, ಅಪರಾಧಿಕ ಕರ್ತವ್ಯಲೋಪದ 17 ಮತ್ತು ಇತರೆ 5 ಪ್ರಕರಣಗಳು ದಾಖಲಾಗಿವೆ.

‘ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಲೋಕಾಯುಕ್ತ ಪೊಲೀಸ್ ಠಾಣೆಗಳನ್ನು ಆರಂಭಿಸಲಾಗಿದೆ. ಜನರು ಮುಂದೆ ಬಂದು ದೂರು ನೀಡುತ್ತಿದ್ದಾರೆ. ಹೀಗಾಗಿ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಹೆಚ್ಚು ಪ್ರಕರಣಗಳು ದಾಖಲಾಗುತ್ತಿವೆ. ಆದರೆ 2024ಕ್ಕೂ ಹಿಂದಿನ ವರ್ಷಗಳಿಗೆ ಹೋಲಿಸಿದರೆ, ದಾಖಲಾದ ಪ್ರಕರಣಗಳ ಸಂಖ್ಯೆ ಕಡಿಮೆಯಾಗಿದೆ’ ಎಂದು ಲೋಕಾಯುಕ್ತದ ಅಧಿಕಾರಿಯೊಬ್ಬರು ಹೇಳಿದರು.



1,437 ಪ್ರಕರಣಗಳ ತನಿಖೆ ಬಾಕಿ

ರಾಜ್ಯದಲ್ಲಿ 2024ಕ್ಕೂ ಹಿಂದಿನ ವರ್ಷಗಳ 1,448 ಭ್ರಷ್ಟಾಚಾರ ಪ್ರಕರಣಗಳ ತನಿಖೆ ಬಾಕಿ ಇತ್ತು. 2024ರಲ್ಲಿ ಹೊಸದಾಗಿ ದಾಖಲಾದ 334 ಸೇರಿ ಒಟ್ಟು 1,782 ಪ್ರಕರಣಗಳು ತನಿಖಾಧಿಕಾರಿಗಳ ಮುಂದೆ ಇದ್ದವು. ವರ್ಷದ ಅವಧಿಯಲ್ಲಿ 291ರಲ್ಲಿ ಮಾತ್ರ ಆರೋಪ ಪಟ್ಟಿ ಸಲ್ಲಿಸಲಾಗಿತ್ತು. ಅಂತಿಮ ವರದಿ ಸಲ್ಲಿಸಲು ಸಾಧ್ಯವಾಗಿದ್ದು 54ರಲ್ಲಿ. ಹೀಗಾಗಿ 2024ರ ಅಂತ್ಯಕ್ಕೆ 1,437 ಪ್ರಕರಣಗಳ ತನಿಖೆ ಬಾಕಿಯಾಗಿಯೇ ಇತ್ತು.



ನ್ಯಾಯಾಲಯಗಳಲ್ಲಿ ವಿಲೇವಾರಿಯಾದ ಪ್ರಕರಣಗಳ ಸಂಖ್ಯೆಯೂ ಕಡಿಮೆ ಇದೆ. 2024ರ ಆರಂಭದಲ್ಲಿ, ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ 1,529 ಭ್ರಷ್ಟಾಚಾರ ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದವು. 2024ರ ವರ್ಷಪೂರ್ತಿ ನ್ಯಾಯಾಲಯಕ್ಕೆ ಹೊಸದಾಗಿ 291 ಪ್ರಕರಣಗಳು ವಿಚಾರಣೆಗೆ ಬಂದಿದ್ದವು.ನ್ಯಾಯಾಲಯದ ಎದುರು ವಿಚಾರಣೆಗೆ ಇದ್ದ ಒಟ್ಟು 1,820 ಪ್ರಕರಣಗಳಲ್ಲಿ 205 ಮಾತ್ರವೇ ವಿಲೇವಾರಿಯಾಗಿವೆ. ಈ ಪೈಕಿ ಶಿಕ್ಷೆಯಾಗಿದ್ದು 49ರಲ್ಲಿ ಮಾತ್ರ.

ಶೃಂಗೇರಿ ಕ್ಷೇತ್ರ:ಕಾಂಗ್ರೆಸ್‌ನಿಂದ ತಪ್ಪಾಗಿಲ್ಲ ಎಂದು ಪ್ರಮಾಣ: ತಪ್ಪುಮಾಡಿದವರಿಗೆ ಶಿಕ್ಷೆ ಆಗಲಿ ಎಂದು ಕೋರಿಕೆ

ಧಾರ್ಮಿಕ ಕ್ಷೇತ್ರಗಳಲ್ಲಿ ರಾಜೇಗೌಡರ ಪ್ರಾರ್ಥನೆ

ಪ್ರಜಾವಾಣಿ ವಾರ್ತೆ

ಶೃಂಗೇರಿ: ಶೃಂಗೇರಿ ಕ್ಷೇತ್ರದ ಅಂಚೆ ಮತಗಳ ಮರುಎಣಿಕೆ ನಂತರ ಶಾಸಕ ಸ್ಥಾನ ಕಳೆದುಕೊಂಡಿರುವ ಟಿ.ಡಿ.ರಾಜೇಗೌಡ ಅವರು ದೇವರ ಮೊರೆ ಹೋಗಿದ್ದಾರೆ. ದೇಗುಲ, ಮಸೀದಿ, ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿ ‘ಕಾಂಗ್ರೆಸ್‌ನಿಂದ ತಪ್ಪಾಗಿಲ್ಲ, ತಪ್ಪು ಮಾಡಿದವರಿಗೆ ಶಿಕ್ಷೆ ಆಗಲಿ’ ಎಂದು ಬೇಡಿಕೊಂಡರು.

ಅಂಚೆ ಮತಗಳ ಮರುಎಣಿಕೆಯ ಏಜೆಂಟ್ ಸುಧೀರ್‌ಕುಮಾರ್ ಮುರೊಳ್ಳಿ ಹಾಗೂ ಕಾರ್ಯಕರ್ತರೊಂದಿಗೆ ದಿನವಿಡೀ ಪೂಜೆ, ಪ್ರಾರ್ಥನೆಯಲ್ಲಿ ತೊಡಗಿದರು. ಕೊಪ್ಪದ ವೀರಭದ್ರಸ್ವಾಮಿ ದೇಗುಲದಲ್ಲಿ ಮೊದಲಿಗೆ ಪೂಜೆ ಸಲ್ಲಿಸಿದರು. ನಂತರ ಜಾಮಿಯಾ ಮಸೀದಿ ಮತ್ತು ನಿತ್ಯಧಾರ ಮಾತೆ ಚರ್ಚ್‌ಗೆ ತೆರಳಿ ಪ್ರಾರ್ಥನೆ ಸಲ್ಲಿಸಿದರು.

ದೇವರ ಮೂರ್ತಿಯ ಎದುರು ನಿಂತು ಅವರು, ‘ನಾನು ಯಾರಿಗೂ ಕೇಡು ಬಯಸಿದವನಲ್ಲ. ಮರು ಮತ ಎಣಿಕೆಯಲ್ಲಿ ನನಗೆ ಮೋಸವಾಗಿದೆ. ಮತಪತ್ರ ತಿದ್ದುವ ಮೋಸದ ಕೆಲಸ ನಡೆದಿದೆ’ ಎಂದು ಹೇಳಿದರು.

ಸುಧೀರ್‌ಕುಮಾರ್ ಅವರು, ‘ನಮ್ಮಿಂದ ಅಕ್ರಮ ಆಗಿಲ್ಲ. ಹಿಂದೆ ಅಸಿಂಧುವಾಗಿದ್ದ ಮತಗಳನ್ನು ರಾಜೇಗೌಡರ ಬುಟ್ಟಿಗೆ ಹಾಕಲಾಗಿದೆ ಎಂಬ ಆರೋಪ ಸುಳ್ಳು’ ಎಂದು ಪ್ರಮಾಣ ಮಾಡಿದರು.

‘ಈಗ ಯಾರಿಗೆ ಲಾಭ ಆಗಿದೆಯೋ ಅವರು, ಅವರ ಸಹಚರರು ಮತಪತ್ರಗಳ ತಿದ್ದಿದ್ದಾರೆ. ಅನ್ಯಾಯ ಮಾಡಿದವರಿಗೆ ಶಿಕ್ಷೆ ಕೊಡಬೇಕು’ ಎಂದು ಪ್ರಾರ್ಥಿಸಿದರು.



ಕೊಪ್ಪದ ವೀರಭದ್ರಸ್ವಾಮಿ ದೇಗುಲದಲ್ಲಿ ಟಿ.ಡಿ.ರಾಜೇಗೌಡ ಮತ್ತು ಸುಧೀರ್‌ಕುಮಾರ್ ಮುರೊಳ್ಳಿ ಪ್ರಾರ್ಥನೆ ಸಲ್ಲಿಸಿದರು

ಸೋಲು ಅರಗಿಸಿಕೊಳ್ಳುವ ಶಕ್ತಿ ಇಲ್ಲ: ಜೀವರಾಜ್

‘ಟಿ.ಡಿ.ರಾಜೇಗೌಡರಿಗೆ ಸೋಲು ಅರಗಿಸಿಕೊಳ್ಳುವ ಶಕ್ತಿ ಇಲ್ಲವಾಗಿದೆ. ಅಧಿಕಾರ ಕಳೆದು ಕೊಂಡು ದೇಗುಲ ಸುತ್ತುತ್ತಿದ್ದಾರೆ’ ಎಂದು ಶಾಸಕ ಡಿ.ಎನ್.ಜೀವರಾಜ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಬಿಜೆಪಿ ಏಜೆಂಟರಾಗಿದ್ದ ಸತೀಶ್ ಅದ್ದಡ, ರಾಮಸ್ವಾಮಿ ಶೆಟ್ಟಿಗದ್ದೆ ಏನು ಮಾತನಾಡಿದ್ದಾರೆ ಎಂದು ಗೊತ್ತಿಲ್ಲ. ಅವರ ವಿರುದ್ಧ ನಾವು ಅಪಪ್ರಚಾರ ಮಾಡಿಲ್ಲ, ಯಾರಾದರೂ ಮಾಡಿದ್ದರೆ ತಪ್ಪು’ ಎಂದರು.

‘ಅವರು ಈಗ ಏಕೆ ದೇವಾಲಯಗಳಿಗೆ ಹೋಗಿ ಮಾತನಾಡುತ್ತಿದ್ದಾರೆ ಎಂಬುದು ಗೊತ್ತಿಲ್ಲ. ಅವರೊಂದಿಗೆ ಮಾತನಾಡಿ ಪ್ರತಿಕ್ರಿಯೆ ನೀಡುತ್ತೇನೆ’ ಎಂದು ಸ್ಪಷ್ಟಪಡಿಸಿದರು.

ಧರ್ಮಸ್ಥಳದಲ್ಲೂ ಪ್ರಾರ್ಥನೆ

ಶುಕ್ರವಾರ ಕೊಪ್ಪ ದೇವಸ್ಥಾನದಲ್ಲಿ ಆಣೆ ಮಾಡಿದ್ದ ಬಿಜೆಪಿ ಏಜೆಂಟರಾದ ಸತೀಶ್ ಅದ್ದಡ ಹಾಗೂ ರಾಮಸ್ವಾಮಿ ಶೆಟ್ಟಿಗದ್ದೆ ಶನಿವಾರ ಧರ್ಮಸ್ಥಳದಲ್ಲಿ ಪ್ರಾರ್ಥನೆ ಸಲ್ಲಿಸಿದರು. ‘2023ರಲ್ಲಿ ಸತೀಶ್ ಅದ್ದಡ ಅವರು ಅಂಚೆ ಮತಗಳ ಟೇಬಲ್ ಮತ್ತು ನಾನು ಇವಿಎಂ ನೋಡಿಕೊಳ್ಳುತ್ತಿದ್ದೆ. ನಮ್ಮಿಬ್ಬರ ಮೇಲೆ ಕೆಲ ಬಿಜೆಪಿ ಕಾರ್ಯಕರ್ತರೇ ಆರೋಪಿಸಿದ್ದಾರೆ. ನ್ಯಾಯಕ್ಕಾಗಿ ಹರಕೆ ಹೇಳಿಕೊಂಡಿದ್ದೇವೆ’ ಎಂದು ರಾಮಸ್ವಾಮಿ ಹೇಳಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕಾಯಂಗೊಂಡ ವಿಶೇಷ ರೈಲುಗಳು

ಪ್ರಯಾಣಿಕರಿಗೆ ಶೇ 30ರಷ್ಟು ಟಿಕೆಟ್ ದರ ಉಳಿತಾಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನೈರುತ್ಯ ರೈಲ್ವೆಯು ಒಂಬತ್ತು ಮಾರ್ಗಗಳ 18 ವಿಶೇಷ ರೈಲುಗಳನ್ನು ಕಾಯಂಗೊಳಿಸಿ ಸಾಮಾನ್ಯ ರೈಲುಗಳಾಗಿ ಪರಿವರ್ತನೆ ಮಾಡಿದೆ.

ನಿತ್ಯ ಬೇಡಿಕೆ ಇರುವ ಪ್ರದೇಶಗಳಲ್ಲಿ ಬೇಡಿಕೆಯ ಪ್ರಮಾಣ ತಿಳಿಯಲು ಮೂರು ಅಥವಾ ಆರು ತಿಂಗಳು ವಿಶೇಷ ರೈಲುಗಳನ್ನು ಓಡಿಸಲಾಗುತ್ತದೆ. ನಿರೀಕ್ಷೆಯಷ್ಟು ಪ್ರಯಾಣಿಕರಿದ್ದರೆ ಆ ರೈಲುಗಳನ್ನು ಕಾಯಂಗೊಳಿಸಲಾಗುತ್ತದೆ. ಕಡಿಮೆ ಇದ್ದರೆ ವಿಶೇಷ ರೈಲು ರದ್ದಾಗುತ್ತದೆ. ಆದರೆ, ಆರು ವರ್ಷಗಳಿಂದ ವಿಶೇಷ ರೈಲುಗಳು ಸಂಚರಿಸುತ್ತಿದ್ದರೂ ಸಾಮಾನ್ಯ ರೈಲುಗಳಾಗಿ ಪರಿವರ್ತಿಸಿರಲಿಲ್ಲ.

ಈ ಬಗ್ಗೆ 'ಪ್ರಜಾವಾಣಿ' ಬೆಳಕು ಚೆಲ್ಲಿದ ಬಳಿಕ ವಿಶೇಷ ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಪರಿವರ್ತಿಸಲು ಆದೇಶ ಹೊರಡಿಸಲಾಗಿತ್ತು. ಅದರಂತೆ ಮಾರ್ಚ್ 31ಕ್ಕೆ ವಿಶೇಷ ರೈಲುಗಳು ರದ್ದಾಗಿದ್ದವು. ಆದರೆ, ಈ ಆದೇಶ ಅನುಷ್ಠಾನಕ್ಕೆ ಬಾರದೇ, ಇತ್ತ ವಿಶೇಷ ರೈಲೂ ಇಲ್ಲದೇ, ಅತ್ತ ಸಾಮಾನ್ಯ ರೈಲುಗಳೂ ಸಂಚರಿಸದೇ ಪ್ರಯಾಣಿಕರು ಸಂಕಷ್ಟಕ್ಕೆ ಈಡಾಗಿದ್ದರು. ಈ ಬಗ್ಗೆ 'ರೈಲು: ವಿಶೇಷವೂ ಇಲ್ಲ, ಸಾಮಾನ್ಯವೂ ಇಲ್ಲ' ಎಂಬ ವರದಿ ಪ್ರಕಟವಾದ ಬಳಿಕ ಎಚ್ಚೆತ್ತುಕೊಂಡ ಅಧಿಕಾರಿಗಳು ಇದೀಗ 9 ಮಾರ್ಗಗಳ ವಿಶೇಷ ರೈಲುಗಳನ್ನು ಸಾಮಾನ್ಯ ರೈಲುಗಳನ್ನಾಗಿ ಪರಿವರ್ತನೆ ಮಾಡಿದ್ದಾರೆ.

'ಸಾಮಾನ್ಯ ರೈಲುಗಳಿಗಿಂತ ವಿಶೇಷ ರೈಲುಗಳ ಟಿಕೆಟ್ ದರ ಶೇ 30ರಷ್ಟು ಹೆಚ್ಚಿರುತ್ತದೆ. ನೈರುತ್ಯ ರೈಲ್ವೆಯು ಉತ್ತಮ ನಿರ್ಧಾರ ಕೈಗೊಂಡು ವಿಶೇಷ ರೈಲುಗಳನ್ನು ಪರಿವರ್ತನೆ ಮಾಡಿರುವುದರಿಂದ ಪ್ರಯಾಣಿಕರಿಗೆ ಪ್ರಯಾಣ ವೆಚ್ಚ ಕಡಿಮೆಯಾಗಲಿದೆ' ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ತಿಳಿಸಿದ್ದಾರೆ.

ಪರಿವರ್ತನೆಯಾದ ರೈಲುಗಳು

ಎಸ್‌ಎಸ್‌ಎಸ್ ಹುಬ್ಬಳ್ಳಿ–ವಿಜಯಪುರ, ವಿಜಯಪುರ–ಎಸ್‌ಎಸ್‌ಎಸ್ ಹುಬ್ಬಳ್ಳಿ ದೈನಂದಿನ ರೈಲು ಮೇ 12ರಿಂದ ಸಾಮಾನ್ಯ ರೈಲಾಗಿ ಸಂಚರಿಸಲಿದೆ. ಇದೇ ಮಾರ್ಗದ ಇನ್ನೊಂದು ರೈಲು ಎಸ್‌ಎಸ್‌ಎಸ್ ಹುಬ್ಬಳ್ಳಿಯಿಂದ ಮೇ 11ರಿಂದ, ವಿಜಯಪುರದಿಂದ ಮೇ 12ರಿಂದ ಕಾಯಂಗೊಳ್ಳಲಿವೆ.

ಕೆಎಸ್‌ಆರ್ ಬೆಂಗಳೂರು–ಚನ್ನಪಟ್ಟಣ–ಕೆಎಸ್‌ಆರ್ ಬೆಂಗಳೂರು, ಕೆಎಸ್‌ಆರ್ ಬೆಂಗಳೂರು–ಅಶೋಕಪುರ–ಕೆಎಸ್‌ಆರ್ ಬೆಂಗಳೂರು, ಎಸ್‌ಎಂವಿಟಿ ಬೆಂಗಳೂರು–ಬಂಗಾರಪೇಟೆ–ಎಸ್‌ಎಂವಿಟಿ ಬೆಂಗಳೂರು, ಯಶವಂತಪುರ–ಹಿಂದೂಪುರ–ಯಶವಂತಪುರ ದೈನಂದಿನ ರೈಲುಗಳು ಮೇ 11ರಿಂದ ಕಾಯಂ ಆಗಿ ಸಂಚರಿಸಲಿವೆ.

ಭಾನುವಾರ ಹೊರತುಪಡಿಸಿ ವಾರಕ್ಕೆ ಆರು ದಿನ ಸಂಚರಿಸುವ ಕೆಎಸ್‌ಆರ್ ಬೆಂಗಳೂರು–ಹಾಸನ–ಕೆಎಸ್‌ಆರ್ ಬೆಂಗಳೂರು ರೈಲುಗಳು ಮೇ 11ರಿಂದ, ವಾರಕ್ಕೆ ಮೂರು ದಿನ ಸಂಚರಿಸುವ ಕೆಎಸ್‌ಆರ್ ಬೆಂಗಳೂರು–ಅಶೋಕಪುರ ರೈಲುಗಳು ಮೇ15ರಿಂದ ಕಾಯಂ ಆಗಿ ಸಂಚರಿಸಲಿವೆ.

ವಾರಕ್ಕೊಂದು ದಿನ ಸಂಚರಿಸುವ ಯಶವಂತಪುರ–ತಾಳಗುಪ್ಪ ರೈಲು ಮೇ 15ರಿಂದ, ತಾಳಗುಪ್ಪ–ಯಶವಂತಪುರ ರೈಲು ಮೇ 16ರಿಂದ ಸಾಮಾನ್ಯ ರೈಲುಗಳಾಗಿ ಸಂಚರಿಸಲಿವೆ. ಹಿಂದಿನ ವಿಶೇಷ ರೈಲಿನ ವೇಳಾಪಟ್ಟಿಯಂತೆ ಈ ಎಲ್ಲ ರೈಲುಗಳು ಸಂಚಾರ ಇರಲಿವೆ ಎಂದು ನೈರುತ್ಯ ರೈಲ್ವೆಯ ಮಂಜುನಾಥ ಕನಮರಡಿ ತಿಳಿಸಿದ್ದಾರೆ.

ಹುಲಿ ಗಣತಿಗೆ ಕಟ್ಟಿದ್ದ ಕ್ಯಾಮೆರಾ ಕಳ್ಳತನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕೆಸವಿನಮನೆ ಪರಿಭಾವಿತ ಅರಣ್ಯದಲ್ಲಿ ಹುಲಿ ಗಣತಿಗೆಂದು ಅಳವಡಿಸಿದ್ದ ಎರಡು ಟ್ರ್ಯಾಪ್ ಕ್ಯಾಮೆರಾಗಳು ಕಳ್ಳತನವಾಗಿವೆ.

ಮತ್ತೋಡಿ ವಲಯದ ಕಟ್ಟೆಹೊಳೆ ಶಾಖೆಯ ಉಪ ವಲಯ ಅರಣ್ಯಾಧಿಕಾರಿ ಯಾಸೀನ್ ಬಾಷಾ ಮಲ್ಲಂದೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

'4 ಕ್ಯಾಮೆರಾಗಳನ್ನು ಇಲಾಖೆಯಿಂದ ನೀಡಿದ್ದು, ಅವುಗಳಲ್ಲಿ ಎರಡನ್ನು ಕೆಸವಿನಮನೆ ಗ್ರಾಮದ ಸರ್ವೆ ನಂಬರ್ 68ರ ಪರಿಭಾವಿತ ಅರಣ್ಯದಲ್ಲಿ ಅಳವಡಿಸಲಾಗಿತ್ತು. ಮರುದಿನ ಹೋಗಿ ನೋಡಿದಾಗ ಆ ಸ್ಥಳದಲ್ಲಿ ಕ್ಯಾಮೆರಾ ಇರಲಿಲ್ಲ. ಟ್ರ್ಯಾಪ್ ಕ್ಯಾಮೆರಾ ಬೆಲೆ ತಲಾ ₹20 ಸಾವಿರವಾಗಿದ್ದು, ಪತ್ತೆ ಮಾಡಿಕೊಡಬೇಕು ಎಂದು ದೂರಿನಲ್ಲಿ ಅವರು ಮನವಿ ಮಾಡಿದ್ದಾರೆ. ಮಲ್ಲಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

₹2.90 ಕೋಟಿ ವಂಚನೆ – ದೂರು

ಪ್ರಜಾವಾಣಿ ವಾರ್ತೆ

ಕಲಬುರಗಿ: ಹಣ ದ್ವಿಗುಣ ಗೊಳಿಸುವುದಾಗಿ ನಂಬಿಸಿ ಮಹಿಳೆಯೊಬ್ಬರು 32 ಜನರಿಗೆ ₹2.90 ಕೋಟಿ ವಂಚಿಸಿರುವ ಕುರಿತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಲ್ಲಿನ ಸಭಾಫಂಕ್ಷನ್ ಹಾಲ್ ಹತ್ತಿರದ ನಿವಾಸಿ ಮಿರಾಜ ಬೇಗಂ ಸೈಯದ್ ಸಮೀರ ಖಾನ್ ಅವರ ವಿರುದ್ಧ ಸಮಾಜ ಸೇವಕಿ ಫಾತಿಮಾ ಖಾನ್ ಫಿರೋಜ ಖಾನ್ ದೂರು ನೀಡಿದ್ದಾರೆ.

'ಖಾಸಗಿ ಕಂಪನಿಯ ಏಜೆನ್ಸಿ ಇದ್ದು, ಹಣ ಕೊಟ್ಟರೆ ಹೆಚ್ಚಿನ ಹಣ ಮರಳಿಸುವ ಆಮಿಷ ಒಡ್ಡಿದ್ದರು. ಫೆ.6ರಂದು ₹10 ಲಕ್ಷ ಕೊಟ್ಟಿದ್ದೇನೆ. ಇನ್ನೂ 31 ಜನ ಹಣ ನೀಡಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ತಮಿಳು ನಾಡಲ್ಲಿ ವಿಜಯ್ ಸರಕಾರಕ್ಕೆ ಮುಂದಿನ ದಿನಗಳಲ್ಲಿ ಮಿತ್ರಪಕ್ಷಗಳು ತಲೆ ನೋವಾಗಲಿವೆಯೇ?

● ಹೌದು ● ಇಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

'300 ಟಿಕೆಟ್ ಕೇಳಿದ್ದು ದೊಡ್ಡದಾಯಿತೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಐಪಿಎಲ್ ಕ್ರಿಕೆಟ್ ಪಂದ್ಯಗಳ 300 ಟಿಕೆಟ್ ಕೇಳಿದ್ದು ಅವರಿಗೆ (ಬಿಸಿಸಿಐ) ದೊಡ್ಡದಾಯಿತೇ? ಬೇರೆ ರಾಜ್ಯಗಳಲ್ಲಿ ಶೇ 60ರಷ್ಟು ಟಿಕೆಟ್ ಅನ್ನು ಅಲ್ಲಿನ ಸರ್ಕಾರಕ್ಕೆ ಕೊಡುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಗುಜರಾತಿನವರಿಗೆ ಹೆಚ್ಚು ಟಿಕೆಟ್‌ಗಳು ಬೇಕಾಗಿದ್ದವು. ವ್ಯಾಪಾರವೂ ಹೆಚ್ಚು ಆಗಬೇಕಿತ್ತು. ಐಪಿಎಲ್ ಕ್ರಿಕೆಟ್ ಪಂದ್ಯಾವಳಿಯ ಅಂತಿಮ ಪಂದ್ಯವನ್ನು ಅಹಮದಾಬಾದಿಗೆ ಸ್ಥಳಾಂತರಿಸಲು ಈ ರೀತಿ ರಾಜಕೀಯ ಮಾಡುತ್ತಿದ್ದಾರೆ' ಎಂದು ಟೀಕಿಸಿದರು.



ಶಿವಕುಮಾರ್

'ಅಷ್ಟಕ್ಕೂ ನನಗಾಗಿ ಟಿಕೆಟ್ ಕೇಳಿದ್ದೇನೆಯೇ? ಜನಪ್ರತಿನಿಧಿಗಳು ಮನವಿ ಮಾಡಿದ್ದಕ್ಕೆ ಕೇಳಿದೆ. ಈ ಹಿಂದೆ ಶಾಸಕರಿಗೆ ಎರಡು ಟಿಕೆಟ್ ನೀಡುತ್ತಿದ್ದರು. ಈಗ ಮೂರು ಟಿಕೆಟ್ ಕೊಡುವಂತೆ ಹೇಳಿದ್ದೇನೆ' ಎಂದು ಸ್ಪಷ್ಟಪಡಿಸಿದರು.

'ಐಪಿಎಲ್ ಕ್ರಿಕೆಟ್ ಪಂದ್ಯಗಳ ಟಿಕೆಟ್ ಶಾಸಕ ವಿಜಯಾನಂದ ಕಾಶಪ್ಪನವರು, ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಕೆಲವು ಕೇಳಿದ್ದರು. ಈಗ ಅದನ್ನು ನನ್ನ ಮೇಲೆಯೇ ಹಾಕಿಕೊಂಡಿದ್ದೇನೆ. ಕರ್ನಾಟಕದ ಪ್ರತಿನಿಧಿಯಾಗಿ ಶಾಸಕರು ಏನು ಹೇಳುತ್ತಾರೊ ಅದನ್ನು ಮಾಡಿದ್ದೇನೆ. ಎಲ್ಲ ಪಕ್ಷದವರು ಸೇರಿ ಟಿಕೆಟ್‌ಗಾಗಿ ಬೇಡಿಕೆ ಇಟ್ಟಿದ್ದರಲ್ಲವೇ? ಜೆಡಿಎಸ್‌ನವರಿಗೆ ಬೇಡವಾದರೆ, ತಮ್ಮ ಪಕ್ಷದ ಶಾಸಕರಿಗೆ ಟಿಕೆಟ್ ಬೇಡ ಎಂದು ವಾಪಸ್ ಕೊಡಲಿ' ಎಂದರು.

ಮುಂದಿನ ತಿಂಗಳಿನಿಂದ 'ಇಂದಿರಾ ಕಿಟ್'

ಬೆಂಗಳೂರು: 'ಪಡಿತರ ಚೀಟಿದಾರರಿಗೆ ಮುಂದಿನ ತಿಂಗಳಿನಿಂದ 'ಇಂದಿರಾ ಕಿಟ್' ವಿತರಿಸಲು ಸಿದ್ಧತೆ ನಡೆದಿದೆ' ಎಂದು ಕೆ.ಎಚ್. ಮುನಿಯಪ್ಪ ಹೇಳಿದರು.

ಕಾಳಸಂತೆಯಲ್ಲಿ ಅಕ್ಕಿ ಮಾರಾಟ, 10 ಕೆ.ಜಿ ಅಕ್ಕಿಯ ದುರ್ಬಳಕೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಇಂದಿರಾ ಕಿಟ್ ನೀಡುವ ಮೂಲಕ ಅನ್ನಭಾಗ್ಯದ ಅಕ್ಕಿಯ ಬದಲು ಪ್ರೊಟೀನ್ ಪದಾರ್ಥಗಳನ್ನು ಹಂಚಿಕೆ ಮಾಡುತ್ತೇವೆ' ಎಂದರು.

ಎಲ್‌ಪಿಜಿ ಸಿಲಿಂಡರ್ ಅಭಾವದ ಕುರಿತು ಕೇಳಿದಾಗ, 'ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಪೂರೈಕೆಯಲ್ಲಿ ಸ್ವಲ್ಪ ಸಮಸ್ಯೆ ಆಗುತ್ತಿದೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಸಮಸ್ಯೆ ಇಲ್ಲ. ಕಾಳಸಂತೆ, ದುರ್ಬಳಕೆ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಮುಖ್ಯಮಂತ್ರಿ ನೇತೃತ್ವದಲ್ಲಿ ಶುಕ್ರವಾರ ನಡೆದ ಸಭೆಯ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುನಿಯಪ್ಪ, 'ಎಸ್‌ಐಆರ್ ಪ್ರಕ್ರಿಯೆಯ ಬಗ್ಗೆ ಇಡೀ ದೇಶದಲ್ಲಿ ಗೊಂದಲ ಇದೆ. ವಿವಿಧ ಸಂಘಟನೆಗಳ ಜೊತೆ ಮುಖ್ಯಮಂತ್ರಿ ಚರ್ಚೆ ನಡೆಸಿದ್ದಾರೆ. ಎಸ್‌ಐಆರ್ ದುರುಪಯೋಗ, ತಡೆಗಟ್ಟುವಿಕೆ ಬಗ್ಗೆ ಮಾತುಕತೆ ನಡೆಯಿತು' ಎಂದರು.

'ಮತದಾರರ ಪಟ್ಟಿ ಪರಿಷ್ಕರಣೆ ಆಗಲಿ, ಬೇಡ ಎನ್ನುವುದಿಲ್ಲ. ಆದರೆ, ತಮಗೆ ಬೇಕಾದವರನ್ನು ಪಟ್ಟಿಯಲ್ಲಿ ಉಳಿಸುವುದು, ಬೇಡವಾದವರನ್ನು ತೆಗೆಯುವ ಕೆಲಸ ಆಗುತ್ತಿದೆ. ಕೆಲವು ಸಮುದಾಯಗಳ ಮತಗಳನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕುವ ಆರೋಪಗಳ ಬಗ್ಗೆ ಕಾಂಗ್ರೆಸ್ ಎಚ್ಚರಿಕೆಯಿಂದ ಕೆಲಸ ಮಾಡಲಿದೆ. ಬೂತ್ ಮಟ್ಟದಲ್ಲಿ ಬಿಎಲ್‌ಒ 1 ಹಾಗೂ ಬಿಎಲ್‌ಒ 2 ವ್ಯವಸ್ಥೆಯನ್ನು ಜವಾಬ್ದಾರಿಯಿಂದ ನಿರ್ವಹಿಸುವಂತೆ ಸೂಚನೆ ನೀಡಲಾಗಿದೆ' ಎಂದರು.

'ಹೈಕಮಾಂಡ್ ನಿರ್ದೇಶನ ಪಾಲಿಸುವೆ'

ಬೆಂಗಳೂರು: 'ಪಕ್ಷದ ಹೈಕಮಾಂಡ್ ನಾಯಕರು ಏನಾದರೂ ನಿರ್ದೇಶನ ನೀಡಿದರೆ ನಾನು ಅದನ್ನು ಪಾಲಿಸುವೆ. ತಮಿಳುನಾಡು ರಾಜಕೀಯ ವಿಚಾರ ನನಗೆ ಗೊತ್ತಿಲ್ಲ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಮಿಳು ನಾಡಿನ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ ಬಂದಿದ್ದಾರೆ ಎಂಬುದು ಸುಳ್ಳು. ಪಕ್ಷದ ನಾಯಕರ ನಿರ್ದೇಶನದಂತೆ ನಾನು ತಮಿಳುನಾಡಿನಲ್ಲಿ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮತ್ತು ಪ್ರಚಾರಕ್ಕೆ ಹೋಗಿದ್ದೆ. ಅದಾದ ನಂತರ ನನಗೆ ಯಾವುದೇ ಮಾಹಿತಿ ಇಲ್ಲ' ಎಂದರು.

ನಾಯಕತ್ವ ಗೊಂದಲ ತಿಂಗಳಲ್ಲಿ ಪರಿಹಾರ: 'ಸಂಪುಟ ಪುನರ್‌ರಚನೆ, ನಾಯಕತ್ವ ಬದಲಾವಣೆ ವಿಚಾರ ತಿಂಗಳಲ್ಲಿ ಬಗೆಹರಿಯಲಿದೆ' ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಎಲ್ಲವನ್ನೂ ಹೈಕಮಾಂಡ್ ತೀರ್ಮಾನ ಮಾಡಲಿದೆ. ಮುಖ್ಯಮಂತ್ರಿ ಮುಂದುವರಿಯುತ್ತಾರಾ, ಬದಲಾಗುತ್ತಾರಾ ಎನ್ನುವುದನ್ನು ಅವರೇ ತಿಳಿಸುತ್ತಾರೆ' ಎಂದರು.

ಆಯುಷ್ಮಾನ್ ಜನ ಆರೋಗ್ಯ ಯೋಜನೆ: ಅನುಷ್ಠಾನ ಹಂತದ ಲೋಪಗಳಿಗೆ 'ಖೆಡ್ಡಾ'

'ಎಐ ಬಳಕೆ: ₹630 ಕೋಟಿ ದುರುಪಯೋಗಕ್ಕೆ ತಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ (ಎಬಿ ಪಿಎಂ–ಜೆಎವೈ) ಅನುಷ್ಠಾನದಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ಬಳಕೆ ಮಾಡಿಕೊಂಡು, ಎರಡು ವರ್ಷದಲ್ಲಿ ₹630 ಕೋಟಿಗೂ ಅಧಿಕ ಹಣ ದುರುಪಯೋಗ ಆಗುವುದನ್ನು ತಡೆಯಲಾಗಿದೆ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಸುನಿಲ್ ಕುಮಾರ್ ಬರ್ನ್ವಾಲ್ ಹೇಳಿದರು.

ವಿಮೆ ಹಣ ಕ್ಲೇಮು ಮಾಡುವ ಪ್ರಕ್ರಿಯೆಯಲ್ಲಿ ಅನೇಕ ಆಸ್ಪತ್ರೆಗಳು ಡೀಪ್ ಫೇಕ್ ಬಳಸಿ ನಕಲಿ ವೈದ್ಯಕೀಯ ದಾಖಲೆಗಳು ಸಲ್ಲಿಸಿರುವುದನ್ನು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನದ ಮೂಲಕ ಪತ್ತೆ ಹಚ್ಚಲಾಗಿದೆ. ಅಂತಹ ಕ್ಲೇಮು ಮಂಜೂರಾತಿಯನ್ನು ತಡೆಹಿಡಿಯಲಾಗುತ್ತಿದೆ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ನಕಲಿ ದಾಖಲೆ ಸಲ್ಲಿಸುವ ಆಸ್ಪತ್ರೆಗಳ ಕುರಿತು ಆಯಾ ರಾಜ್ಯಗಳಿಗೆ ಮಾಹಿತಿ ನೀಡಲಾಗುತ್ತಿದ್ದು, ಆಸ್ಪತ್ರೆಗಳಿಗೆ ದಂಡ ವಿಧಿಸುವುದು, ಕಪ್ಪು ಪಟ್ಟಿಗೆ ಸೇರಿಸುವ ಮೂಲಕ ಶಿಸ್ತುಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.



ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಆಯೋಜಿಸಿದ್ದ ಹ್ಯಾಕಥಾನ್ ಸ್ಪರ್ಧೆಯ ವಿಜೇತ ತಂಡದ ವಿನಯ್ ಅವರಿಗೆ ₹5 ಲಕ್ಷ ಮೊತ್ತದ ಪ್ರಥಮ ಬಹುಮಾನದ ಚೆಕ್ ಅನ್ನು ಸುನಿಲ್ ಕುಮಾರ್ ಬರ್ನ್ವಾಲ್ ನೀಡಿದರು. ಪ್ರಜಾವಾಣಿ ಚಿತ್ರ

ಎಬಿ ಪಿಎಂ–ಜೆಎವೈ ಅಡಿ ಏಳು ವರ್ಷದಲ್ಲಿ 12 ಕೋಟಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, ₹1.8 ಲಕ್ಷ ಕೋಟಿ ವೆಚ್ಚ ಮಾಡಲಾಗಿದೆ. ದೇಶದ 60 ಕೋಟಿ ಜನರು ಯೋಜನೆ ವ್ಯಾಪ್ತಿಗೆ ಒಳಪಟ್ಟಿದ್ದು, 35 ಸಾವಿರಕ್ಕೂ ಹೆಚ್ಚು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಪ್ರತಿ ಕುಟುಂಬಕ್ಕೆ ವರ್ಷಕ್ಕೆ ₹5 ಲಕ್ಷವರೆಗೆ ನಗದು ರಹಿತ ದ್ವಿತೀಯ ಮತ್ತು ತೃತೀಯ ಹಂತದ ಚಿಕಿತ್ಸೆಯ ರೂಪದಲ್ಲಿ ಆರೋಗ್ಯ ವಿಮಾ ರಕ್ಷಣೆ ಒದಗಿಸಲಾಗುತ್ತಿದೆ. ಅಲ್ಲದೇ 43 ಕೋಟಿಗೂ ಹೆಚ್ಚು ಜನರಿಗೆ ಎಬಿ ಪಿಎಂ–ಜೆಎವೈ ಗುರುತಿನ ಚೀಟಿ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ನಿತ್ಯ 40,000 ಕ್ಲೇಮ್‌ಗಳನ್ನು ವಿಲೇವಾರಿ ಮಾಡುವುದು ಸವಾಲಾಗಿದೆ. ಈ ಪೈಕಿ ಶೇಕಡ 30ರಷ್ಟು ಡಯಾಲಿಸಿಸ್ ಮತ್ತು ಕ್ಯಾಟರಾಕ್ಟ್‌ಗೆ (ಕಣ್ಣಿನ ಪೊರೆ ಚಿಕಿತ್ಸೆ) ಸಂಬಂಧಿಸಿದ್ದಾಗಿವೆ. ವೈದ್ಯರು ಮತ್ತು ಅಧಿಕಾರಿಗಳು ಪ್ರತಿ ದಾಖಲೆ ಪರಿಶೀಲಿಸಬೇಕಾಗುತ್ತದೆ. ಇದರಿಂದ 15 ರಿಂದ 20 ದಿನ ಸಮಯ ಬೇಕಾಗುತ್ತದೆ. ಆದರೆ, ಎ.ಐ ತಂತ್ರಜ್ಞಾನದಲ್ಲಿ ಶೇಕಡ 90ರಷ್ಟು ಪ್ರಕರಣಗಳನ್ನು ನಾಲ್ಕು ಗಂಟೆಯಲ್ಲಿ ಇತ್ಯರ್ಥ ಪಡಿಸಲಾಗುತ್ತಿದೆ. ಶೇಕಡ 10ರಷ್ಟು ಕ್ಲೇಮುಗಳಲ್ಲಿ ಮಾತ್ರ ಮಾನವ ಹಸ್ತಕ್ಷೇಪದ ಅಗತ್ಯತೆ ಕಂಡು ಬಂದಿದೆ ಎಂದು ವಿವರಿಸಿದರು.


ಸುದ್ದಿ ಗೋಷ್ಠಿಯಲ್ಲಿ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರದ ಜಂಟಿ ಕಾರ್ಯದರ್ಶಿ ಜ್ಯೋತಿ ಯಾದವ್ ಮತ್ತಿತರರು ಇದ್ದರು.

'ಗುಮ್ಮಟನಗರಿ'ಗೆ ಜಗತ್ತಿನ ಕುಬ್ಜ ಮಹಿಳೆ ಭೇಟಿ

ವಿಜಯಪುರ: ಕೇವಲ 62.8 ಸೆಂಟಿ ಮೀಟರ್ ಎತ್ತರವಿರುವ 'ಜಗತ್ತಿನ ಅತ್ಯಂತ ಕುಬ್ಜ ಮಹಿಳೆ' ಎಂದು ಹೆಸರಾಗಿರುವ ಜ್ಯೋತಿ ಆಮಗೆ ಅವರು ಶನಿವಾರ 'ಗುಮ್ಮಟನಗರಿ' ವಿಜಯಪುರಕ್ಕೆ ಭೇಟಿ ನೀಡಿದ್ದಾರೆ.

2011ರಲ್ಲಿ ಗಿನ್ನಿಸ್ ಸಂಸ್ಥೆ ಈ ವಿಶ್ವ ದಾಖಲೆಯನ್ನು ದಾಖಲಿಸಿ ಪ್ರಕಟಿಸಿತ್ತು. ಮಹಾರಾಷ್ಟ್ರದ ನಾಗ್ಪುರದಲ್ಲಿ ಜನಿಸಿದ ಇವರು ನಟಿಯಾಗಿ ಗುರುತಿಸಿಕೊಂಡಿದ್ದಾರೆ.

ಕೋವಿಡ್ ವಿರುದ್ಧದ ಹೋರಾಟದಲ್ಲಿ ಪೊಲೀಸರಿಗೆ ಸಾಥ್ ನೀಡಿ ಮತ್ತು ಜನರಿಗೆ ಜಾಗೃತಿ ಮೂಡಿಸುವ ಕಾರ್ಯದಲ್ಲಿ ತೊಡಗಿಸಿ ಕೊಂಡಿದ್ದರು. ವಿಜಯಪುರಕ್ಕೆ ಪ್ರಥಮವಾಗಿ ಭೇಟಿ ನೀಡಿದ್ದಾರೆ. ಭಾನುವಾರ ವಿಜಯಪುರದಲ್ಲಿ ನಡೆಯುವ ಖಾಸಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲಿದ್ದಾರೆ.



ಗೋಳಗುಮ್ಮಟಕ್ಕೆ ಶನಿವಾರ ಜ್ಯೋತಿ ಆಮಗೆ ಭೇಟಿ ನೀಡಿದ್ದರು

ಬಿಟ್ ಕಾಯಿನ್: ಇ.ಡಿ ಕಸ್ಟಡಿಗೆ ಶ್ರೀಕಿ

ಒಂದನೇ ಪುಟದಿಂದ...

ಜತೆಗೆ, 'ಶ್ರೀಕಿಗಾಗಿ ಡಾರ್ಕ್‌ವೆಬ್‌ನಲ್ಲಿ ಮಾದಕವಸ್ತುಗಳನ್ನು ಖರೀದಿಸಿದ್ದಾರೆ. ಈ ಎಲ್ಲ ವಹಿವಾಟುಗಳಿಗೂ ಬಿಟ್‌ಕಾಯಿನ್ ಅಕ್ರಮ ವಹಿವಾಟಿನ ಹಣವನ್ನು ಬಳಸಿಕೊಂಡಿದ್ದಾರೆ ನ್ಯಾಯಾಧೀಶರಿಗೆ ಮಾಹಿತಿ ನೀಡಿದ್ದಾರೆ' ಎಂದೂ ವಿವರಿಸಿವೆ.

'ಸುನೀಶ್ ಬಿಟ್‌ಕಾಯಿನ್ ರೂಪದ ಹಣವನ್ನು ನಗದಿಗೆ ಪರಿವರ್ತನೆ ಮಾಡಿಕೊಟ್ಟು, ಶ್ರೀಕಿಯಿಂದ ಕಮಿಷನ್ ಪಡೆದಿದ್ದಾರೆ. ಬಿಟ್‌ಕಾಯಿನ್‌ನಲ್ಲಿ ಹೂಡಿಕೆ ಮಾಡಲು ಶ್ರೀಕಿಗೆ ಹಣ ಒದಗಿಸಿದವರು ಯಾರು ಎಂಬುದು ಪತ್ತೆಯಾಗಬೇಕಿದೆ. ಜತೆಗೆ, ಯಾರೆಲ್ಲಾ ಬಿಟ್‌ಕಾಯಿನ್‌ನಲ್ಲಿ ಹಣ ಹೂಡಿಕೆ ಮಾಡಿದ್ದಾರೆ ಎಂಬುದನ್ನು ಪತ್ತೆ ಮಾಡಬೇಕಿದೆ. ಇದಕ್ಕಾಗಿ ಆರೋಪಿಗಳನ್ನು 14 ದಿನಗಳ ಕಸ್ಟಡಿಗೆ ನೀಡಬೇಕು ಎಂದು ಕೋರಿದ್ದಾರೆ' ಎಂದು ಮಾಹಿತಿ ನೀಡಿವೆ. ನ್ಯಾಯಾಧೀಶರು ಮೂವರು ಆರೋಪಿಗಳನ್ನೂ ಇದೇ ಮೇ 19ರವರೆಗೆ 10 ದಿನಗಳ ಅವಧಿಗೆ ಇ.ಡಿ ಕಸ್ಟಡಿಗೆ ನೀಡಿದ್ದಾರೆ ಎಂದು ತಿಳಿಸಿವೆ.

ಮೊಹಮ್ಮದ್ ನಲಪಾಡ್ ಮತ್ತು ಶ್ರೀಕಿ ಮಧ್ಯೆ ₹4.65 ಕೋಟಿ ಹಣ ವರ್ಗಾವಣೆ ಆಗಿರುವದಕ್ಕೆ ದಾಖಲೆಗಳು ಲಭ್ಯವಾಗಿವೆ. ಈ ಬಗ್ಗೆ ತನಿಖೆ ನಡೆಯುತ್ತಿದ್ದು, ಇನ್ನಷ್ಟೇ ಹೆಚ್ಚಿನ ಮಾಹಿತಿ ದೊರೆಯಬೇಕಿದೆ ಎಂದು ಇ.ಡಿ ಮೂಲಗಳು ಮಾಹಿತಿ ನೀಡಿವೆ.

CONNECT ಕ್ಲಾಸಿಫೈಡ್ಸ್







RAMAN GROUP OF INSTITUTIONS

134, Magadi Main Road, Kamakshipalya, (Near Sumanahalli Bus Stop) Bengaluru-560079
Website: www.ramaneducation.org

RAMAN P.U. COLLEGE
36, Magadi Main Road, Next to Samrudhi Hotel, Opp. Pooja Convension Hall, Bengaluru-560079
In association with Deeksha Vedantu
Science ♦ Integrated ♦ Commerce
Contact: 9686162639 / 9686162637

RAMAN DEGREE COLLEGE
BBA BCom BCA
Contact: 9686162639 / 9686162637

RAMAN POLYTECHNIC & ITI
♦ Civil ♦ Mechanical ♦ Electrical ♦ Electronics ♦ Computer Science ♦ Automobile ♦ Fitter ♦ Electronic Mechanic ♦ Electrician
Contact: 6360903500 / 8050066771

CALIFORNIA PUBLIC SCHOOL
ICSE & State Syllabus. Nursery to X Standard
Contact: 9481305504 / 8197104255

RMN-26701

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BDA SITE For Sale Banashankari 6th Stage 7th Block 40x60 E/F Anjanapura 7th Block 30x40 S/F: 9964627255

BANASHANKARI 6TH Stage, 9th Block, 50x80, East Rs. 8500/-sft. Owner:- 9886052148.

Electronic City

"ELECTRONIC CITY 30x40 DC.conversion E-Katha, Gated`Community 38`Sites`Sale total`1.5`acres with`Basic Amenities, Bank`Loan Available, Ready`for Registration near`VIBGYOR School, 1.75kms`from Hosa Road, Metro Station. 9620424103/ 9448670671"

Mallathalli

MALLATHALLI 40X60 BBMPE-Katha N/F 40feet Road Site for sale in MPM layout Genuine Buyers only Call:9886349709

Kempegowda Layout

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

BDA SITE for Sale at Kempegowda Layout, 3rd Block, F Sector, 30x40 North Facing Mob: 9901549488

Magadi Road

RESERVE BANK EMPLOYEES HOUSING WELFARE SOCIETY,30x50 SITE, EAST FACING,BMRDA, APPROVED LAYOUT,near MAGADI ROAD, CONTACT: 8105889812

Nagarabhavi

"AVAILABLE RHSCS_LAYOUT NEAR NAGARBHAVI BDA COMPLEX 30X50 NORTH FACING SITE 40`FEET ROAD 7259675150/ 9448733456

BDA 30X50 RHCS Layout 'A' Block, Nagarbhavi 2nd Stage, South Facing, Clear titles. Contact. 9019962007.

R T Nagar

R.T.NAGAR HMT Layout 30X50, Building For Sale East South Corner Excellent Location Contact 9738227522 9886904569

Vijayanagar

PRIME LOCATION SITE SALE 60x90 WEST FACING WOC ROAD RPC LAYOUT VIJAYANAGAR CONTACT: 9845038343/ 6363250343

Vishweshwariah Layout

"VISVESHWARAIAH LAYOUT 6th_Block 40x60 South facing Site sale Good_Location Genuine Buyers Contact: 9845500019/ 7019314962"

BDA SITES Sale Sir.M Vishweshwaraiah Layout 30×40, 20×30 Narth & East Face Good Location: 8217392686

DIRECT OWNER 20x30, 30x40 Sites Near BDA Complex, North East Corner Kempegowda Layout: 9620696913/ 9880781399

"SALE VISHVESHWARAIAH -1ST_BLOCK near_Shirke Circle 50x80 North facing Site, Good location. Contact: 9113294429

"VISVESHWARAIAH 8TH_BLOCK 40x60_East facing, 60`feet_parallel_Road, 100% Vastu, Genuine Buyers CONTACT: 9845408408"

VISHWESHWARAIAH LAYOUT 6th Block 30x40 SF 40ft Road, Near Raghvendra Temple, Direct Owner Meeting: 9980860138

Vidyaranyapura

NEAR SAMBRAM College Best County 2, DC Conversion A/E Katha 40x60 WF, 30x40, 37.5x40 WF BBMP B/E Katha, Amba Bhavani Temple Back Side: 8296895858

Rajanukunte

RAJANUKUNTE, YELAHANKA, Near Presidency University, 20x30 site, DC Converted fully developed, ready for construction. 9844392575

Nelamangala

BYRASHETTYHALLI AISHWARYA County BMRDA 40X60,East And Banashankari BDA 30X40,Sites For Sale : 9620117773/9845857006

J P Nagar

- ಸಾಕುಪ್ರಾಣಿ ಸ್ನೇಹಿ ಉದ್ಯಾನ, ಮಿಯಾವಾಕಿ ಅರಣ್ಯ, ಅಂಗವಿಕಲ ಸ್ನೇಹಿ ಪಾರ್ಕ್ ಸ್ಥಾಪನೆ ಬಗ್ಗೆ ಗಮನಹರಿಸಿ.
- ನಿರ್ವಹಣೆ, ತಂತ್ರಜ್ಞಾನ ಸಂಬಂಧಿಸಿದಂತೆ ಏಜೆನ್ಸಿಗಳು ನಮ್ಮ ಬಳಿ ಇವೆ. ನಗರದ ಸಮಸ್ಯೆಗಳನ್ನು ಗುರುತಿಸಿ ಅವರಿಗೆ ತಿಳಿಸಿದರೆ ಪರಿಹಾರ ದೊರಕುತ್ತದೆ. ಈ ನಿಟ್ಟಿನಲ್ಲಿ ಗಮನ ಹರಿಸಿ.


ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ 'ಬಜೆಟ್‌ನಿಂದ ಕ್ರಿಯಾಯೋಜನೆ' ಕಾರ್ಯಾಗಾರದಲ್ಲಿ ಪಾಲಿಕೆ ಅಧಿಕಾರಿಗಳು, ಎನ್‌ಜಿಒ ಪ್ರತಿನಿಧಿಗಳು ಭಾಗವಹಿಸಿದ್ದರು

ತಡರಾತ್ರಿಯವರೆಗೂ ಗಣತಿ

ಗಣತಿದಾರರು ಬಂದಾಗ ಮನೆ ಬೀಗ ಹಾಕಿದ ಪ್ರಕರಣ ಎಂದು ಗುರುತಿಸಲಾದ ಮನೆಗಳಿಗೆ ಸಂಜೆಯಿಂದ ತಡರಾತ್ರಿಯವರೆಗೂ ಭೇಟಿ ನೀಡಿ, ಮನೆಗಣತಿ ಕಾರ್ಯ ನಡೆಸಲಿದ್ದಾರೆ ಎಂದು ಕೇಂದ್ರ ನಗರ ಪಾಲಿಕೆಯ ಅಭಿವೃದ್ಧಿ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್ ತಿಳಿಸಿದರು.

ಗಣತಿದಾರರು ಮನೆಗಳು ಬೀಗ ಹಾಕಿದೆ ಎಂದು ಗುರುತಿಸಲಾದ ಮನೆಗಳು ಎಂಬ ಪ್ರಕರಣದಲ್ಲಿ ಚಾರ್ಜ್ ಆಫೀಸರ್ಸ್ ಹಾಗೂ ಕಂದಾಯ ವಿಭಾಗದ ಅಧಿಕಾರಿಗಳು ಗಣತಿದಾರರೊಂದಿಗೆ ಬೀಗ ಹಾಕಿದ ಬಗ್ಗೆ ಪರಿಶೀಲನೆ ನಡೆಸಿ ಗಣತಿ ಕಾರ್ಯ ನಡೆಸಲು ಸೂಚನೆ ನೀಡಲಾಗಿದೆ ಎಂದರು.

ಭಾರತದ ಜನಗಣತಿ-2027 ರ ಅಂಗವಾಗಿ ಮೊದಲ ಹಂತದಲ್ಲಿ ಮನೆ ಪಟ್ಟಿ ಹಾಗೂ ಮನೆಗೆ ಗಣತಿ ಕಾರ್ಯವು ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ನಡೆಯುತ್ತಿದೆ. ಮನೆಗಳು ಗಣತಿ ಕಾರ್ಯಕ್ಕೆ ಒಳಪಟ್ಟು ಕೇಂದ್ರ ಸರ್ಕಾರದ ಮಹತ್ವದ ಗಣತಿ ಕಾರ್ಯದ ಯಶಸ್ವಿಯಾಗಿಸಲು ಅನುಕೂಲವಾಗುವಂತೆ ಬೀಗ ಹಾಕಿದ (ಡೋರ್ ಲಾಕ್ಡ್ ಹೌಸಸ್) ಮನೆಗಳನ್ನು ಸಂಜೆ ಮೇಲೆ ತಡ ರಾತ್ರಿಯವರೆಗೆ ಗಣತಿ ಕಾರ್ಯ ನಿರ್ವಹಿಸಲು ಗಣತಿ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ. ಈ ಪ್ರಕ್ರಿಯೆ ಮೇ 15ರವರೆಗೆ ನಡೆಯಲಿದೆ ಎಂದು ಹೇಳಿದರು.

ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಪಾದಚಾರಿ ಒತ್ತುವರಿ ತೆರವು

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ಹೆಗ್ಗನಹಳ್ಳಿ ವಿಭಾಗದ (ದಾಸರಹಳ್ಳಿ ವಿಧಾನಸಭಾ ಕ್ಷೇತ್ರ) ಪೀಣ್ಯ ಕೈಗಾರಿಕಾ ಪ್ರದೇಶದ ಎರಡನೇ ಹಂತದಲ್ಲಿ ಪಾದಚಾರಿ ಒತ್ತುವರಿ ತೆರವು ಕಾರ್ಯಾಚರಣೆ ಶನಿವಾರ ನಡೆಯಿತು.

ಬಿಎಂಟಿಸಿ ಬಸ್ ನಿಲ್ದಾಣದಿಂದ ಸುಮಾರು 300 ಮೀಟರ್ ಉದ್ದಕ್ಕೆ ರಸ್ತೆ ಇಕ್ಕೆಲಗಳಲ್ಲಿ ಪಾದಚಾರಿ ಮಾರ್ಗಗಳ ಮೇಲಿದ್ದ ಅಂಗಡಿ, ಕಟ್ಟಡ ಭಗ್ನಾವಶೇಷ, ಕಟ್ಟಡ ನಿರ್ಮಾಣ ಸಾಮಗ್ರಿ, ಕಟ್ಟಡ ಕಾರ್ಮಿಕರ ತಾತ್ಕಾಲಿಕ ಶೌಚಾಲಯಗಳು, ಶಿಥಿಲ ವಿದ್ಯುತ್ ಕಂಬಗಳು ಇತ್ಯಾದಿ ಎಲ್ಲ ವಿಧದ ಒತ್ತುವರಿ ತೆರವುಗೊಳಿಸಿ, ಅಸಮರ್ಪಕ ಸ್ಥಿತಿಯಲ್ಲಿದ್ದ ಸ್ಲ್ಯಾಬ್, ಚಪ್ಪಡಿ ಸರಿಪಡಿಸಿ, ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು.

ಸುಮಾರು ಆರು ಪೆಟ್ಟಿಗೆ ಅಂಗಡಿಗಳು, ಶಿಥಿಲಗೊಂಡ ಸುಮಾರು 10 ವಿದ್ಯುತ್ ಕಂಬಗಳು, ಸುಮಾರು 10 ಟ್ರ್ಯಾಕ್ಟರ್‌ನಷ್ಟು ಕಟ್ಟಡ ನಿರ್ಮಾಣ ಸಾಮಗ್ರಿ (ಎಂ ಸ್ಯಾಂಡ್ ಇತ್ಯಾದಿ), ಒಂದು ಅಂಗಡಿ, ಎರಡು ಅನಾಥ ವಾಹನಗಳು ಅಲ್ಲದೆ, ತಾತ್ಕಾಲಿಕ ಆಸನ ವ್ಯವಸ್ಥೆ ಇತ್ಯಾದಿಗಳನ್ನು ಕ್ರೇನ್, ಜೆಸಿಬಿ ಬಳಸಿ ತೆರವುಗೊಳಿಸಲಾಯಿತು.

ಪಾದಚಾರಿ ಮಾರ್ಗದಲ್ಲಿದ್ದ ಮೇಲಿದ್ದ 20 ಕಿ.ವ್ಯಾ. ಸಾಮರ್ಥ್ಯ ಮೇಲ್ಪಟ್ಟ ಕೇಬಲ್ ತೆರವುಗೊಳಿಸಲು (ಗುಂಡಿ ಅಗೆದು ಸೂಕ್ತ ವ್ಯವಸ್ಥೆ ಮಾಡಲು) ಬೆಸ್ಕಾಂ ಸಿಬ್ಬಂದಿಗೆ ಸೂಚಿಸಲಾಯಿತು ಎಂದು ಆಯುಕ್ತರು ತಿಳಿಸಿದರು.

ಸಾರಕ್ಕಿ ಕೆರೆ: ಸಮಸ್ಯೆ ನಿವಾರಣೆಗೆ ಸೂಚನೆ

ಸಾರಕ್ಕಿ ಕೆರೆಯ ಸುತ್ತಮುತ್ತಲಿನ ನಾಗರಿಕರ ಸಮಸ್ಯೆಗಳನ್ನು ನಿವಾರಿಸಬೇಕು ಎಂದು ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಕೆರೆ ವ್ಯಾಪ್ತಿಯಲ್ಲಿ ಪಾದಯಾತ್ರೆ ಮತ್ತು ಸ್ಥಳ ಪರಿಶೀಲನೆ ನಡೆಸಿದ ಅವರು, ಕೆರೆ ಅಭಿವೃದ್ಧಿ ಹಾಗೂ ನಾಗರಿಕ ಸೌಲಭ್ಯಗಳ ಸುಧಾರಣೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಿದರು.

ಕೆರೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒಳಚರಂಡಿ ನೀರು ಹಿಮ್ಮುಖವಾಗಿ ಹರಿಯುತ್ತಿರುವುದು ಮತ್ತು ಪೈಪ್‌ಲೈನ್‌ಗಳ ಬ್ಲಾಕೇಜ್ ಬಗ್ಗೆ ಸಾರ್ವಜನಿಕರು ಆಯುಕ್ತರ ಗಮನಕ್ಕೆ ತಂದರು. ಈ ಕೂಡಲೇ ಇಡೀ ಯುಜಿಡಿ ಜಾಲದ ಸಾಮರ್ಥ್ಯ, ಹೂಳು ತೆಗೆಯುವಿಕೆ ಮತ್ತು ಎಸ್‌ಟಿಪಿ ಘಟಕಗಳ ಕಾರ್ಯಕ್ಷಮತೆಯ ಬಗ್ಗೆ ವೈಜ್ಞಾನಿಕ ಸಮೀಕ್ಷೆ ನಡೆಸಿ ವರದಿ ನೀಡುವಂತೆ ಜಲಮಂಡಳಿ ಅಧಿಕಾರಿಗಳಿಗೆ ಆಯುಕ್ತರು ಸೂಚಿಸಿದರು.

ಎರಡು ವರ್ಷಗಳಿಂದ ಕೆರೆಯ ಆವರಣದಲ್ಲಿ 2ನೇ ಶೌಚಾಲಯದ ಕಾಮಗಾರಿ ನಡೆಸುತ್ತಿರುವ ಗುತ್ತಿಗೆದಾರರನ್ನು ತರಾಟೆಗೆ ತೆಗೆದುಕೊಂಡರು. ನೀರಿನ ಸಂಪರ್ಕದ ನೆಪವೊಡ್ಡಿ ವಿಳಂಬ ಮಾಡುವುದನ್ನು ಸಹಿಸುವುದಿಲ್ಲ ಎಂದರು.

ಸಾರಕ್ಕಿ ವಾಕರ್ಸ್ ಗ್ರೂಪ್‌ನ ಉಮೇಶ್ ಗೌಡ ಮತ್ತು ಸ್ಥಳೀಯ ನಿವಾಸಿಗಳು ಪಾಲ್ಗೊಂಡು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು.

ಶಿಕ್ಷಣ ವ್ಯವಸ್ಥೆ ಬದಲಾಗಲಿ: ನಾಗಮೋಹನ ದಾಸ್

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದೇಶದಲ್ಲಿ ಪ್ರತಿವರ್ಷ ಸುಮಾರು 50 ಲಕ್ಷ ಪದವೀಧರರು ಹೊರಬರುತ್ತಿದ್ದು, ಅದರಲ್ಲಿ ಕೇವಲ ಶೇ 30ರಷ್ಟು ಮಂದಿ ಮಾತ್ರ ಉದ್ಯೋಗಕ್ಕೆ ಅರ್ಹರಾಗುತ್ತಿದ್ದಾರೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಕಳವಳ ವ್ಯಕ್ತಪಡಿಸಿದರು.

ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯಲ್ಲಿ (ಸ್ವಾಯತ್ತ ಸಂಸ್ಥೆ) ಸ್ನಾತಕೋತ್ತರ ಪದವಿಯನ್ನು ಪೂರೈಸಿದ ಎಂಬಿಎ, ಎಂಸಿಎ ಮತ್ತು ಎಂ.ಟೆಕ್‌ನ 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

'ಇಂದಿನ ಔದ್ಯೋಗಿಕ ಪ್ರಪಂಚಕ್ಕೆ ಬೇಕಾದ ತಾಂತ್ರಿಕ ಕೌಶಲಗಳು ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಇಲ್ಲವಾಗಿದೆ. ಇಂದಿನ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಅಸಂಖ್ಯಾತ ಉದ್ಯೋಗಗಳು ಲಭ್ಯವಿವೆ. ಆದರೆ, ಅದಕ್ಕೆ ಬೇಕಾದ ಕೌಶಲಗಳು ಇಂದಿನ ಪದವೀಧರರಲ್ಲಿ ಇಲ್ಲವಾಗಿದೆ. ಆದ್ದರಿಂದ ನಮ್ಮ ಶಿಕ್ಷಣ ವ್ಯವಸ್ಥೆಯು ಬದಲಾಗಬೇಕಾಗಿದೆ' ಎಂದು ಕರೆ ನೀಡಿದರು.

ಕೇಂಬ್ರಿಡ್ಜ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಿ.ಕೆ. ಮೋಹನ್, ಪ್ರಾಂಶುಪಾಲ ಬಿ.ವಿ. ರವಿಶಂಕರ್, ಕೆ.ಎನ್. ಬಾಲಸುಬ್ರಹ್ಮಣ್ಯ ಮೂರ್ತಿ, ಇಂದುಮತಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಿತಿನ್ ಮೋಹನ್, ಉಪ ಪ್ರಾಂಶುಪಾಲ ನಾಗೇಶ್, ಡೀನ್ ಸುಬ್ರಮಣ್ಯ ಕಟ್ಟೆ, ಶಿವಪಂಚಾಕ್ಷರಿ ಪಾಲ್ಗೊಂಡಿದ್ದರು.


ಕಾರ್ಯಕ್ರಮದಲ್ಲಿ ಎಚ್.ಎನ್.ನಾಗಮೋಹನ ದಾಸ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಡಿ.ಕೆ.ಮೋಹನ್ ಉಪಸ್ಥಿತರಿದ್ದರು

ಸೌಲಭ್ಯ ವಿತರಣೆ

ಪ್ರಜಾವಾಣಿ ಚಿತ್ರ



ಪ್ರಗತಿ ಆಟೋಮೇಷನ್ ಪ್ರೈವೇಟ್ ಲಿಮಿಟೆಡ್ ಹಾಗೂ ಕೇರ್ ಟ್ರಸ್ಟ್ ವತಿಯಿಂದ ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಕರ್ನಾಟಕದ ಅಂತರರಾಷ್ಟ್ರೀಯ ಸೈಕ್ಲಿಸ್ಟ್‌ಗಳಿಗೆ ಒಟ್ಟು ₹10.20 ಲಕ್ಷ ಮೌಲ್ಯದ ಸ್ಕಾಟ್ ಏರೋ ಬೈಕ್ ಹಾಗೂ ಸಲಕರಣೆ ವಿತರಿಸಲಾಯಿತು. ಸಂಸ್ಥೆಯ ಟ್ರಸ್ಟಿಗಳಾದ ಪ್ರಸನ್ನ ಕುಮಾರ್, ಶಾಂತ ಕುಮಾರ್, ಸೈಕ್ಲಿಸ್ಟ್‌ಗಳಾದ ಶ್ರೀನಿವಾಸ ರಜಪೂತ್, ದೀಪಿಕಾ ಫಡತಾರೆ, ಪವಿತ್ರಾ ಕುರ್ತಕೋಟಿ, ಅನುಪಮಾ ಗುಳೇದ್, ಗಂಗಾ ದಂಡಿನ್, ಪ್ರಗತಿ ಆಟೋಮೇಷನ್ ವ್ಯವಸ್ಥಾಪಕ ನಿರ್ದೇಶಕರಾದ ಅತುಲ್ ಬಿರಂಗಿ, ಅಪರ್ಣಾ ಬಿರಂಗಿ, ಟ್ರಸ್ಟಿಗಳಾದ ಆನಂದ ಹರಿಹರ್, ಗುರುರಾಜ ಮುಗಳಖೋಡ್, ಮನೋಜ್ ಕುಮಾರ್, ಸತೀಶ್ ಡಿ.ಬಿ. ಹಾಜರಿದ್ದರು

ಬ್ಯಾಸ್ಕೆಟ್‌ಬಾಲ್ ಟೂರ್ನಿ 20ರಂದು

ಬೆಂಗಳೂರು: ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯು ಎಂ.ಸಿ.ಶ್ರೀನಿವಾಸ ಸ್ಮರಣಾರ್ಥ ಟ್ರೋಫಿಗಾಗಿ ಇದೇ 20ರಿಂದ ರಾಜ್ಯ ಬಿ ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ಅನ್ನು ಆಯೋಜಿಸಿದೆ.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಲೀಗ್ ಕಮ್ ಸೂಪರ್ ಲೀಗ್ ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ.

ಇಂದಿರಾನಗರ ಬ್ಯಾಸ್ಕೆಟ್ ಬಾಲ್ ಕ್ಲಬ್, ವಿಮಾನಪುರ ಬಿ.ಸಿ, ಬೆಂಗಳೂರು ವ್ಯಾನ್ಗಾರ್ಡ್ಸ್, ಕೋರಮಂಗಲ ಬಿ.ಸಿ, ದಕ್ಷಿಣ ಕನ್ನಡ ಜಿಲ್ಲಾ ತಂಡ, ಮಂಡ್ಯ ಜಿಲ್ಲಾ ತಂಡ, ಎಚ್‌ಬಿಆರ್ ಬಿ.ಸಿ, ಬೆಂಗಳೂರು ಸ್ಪೋರ್ಟಿಂಗ್ಸ್, ರಾಜ್‌ಮಹಲ್ ಬಿ.ಸಿ ಹಾಗೂ ದೇವಾಂಗ ಯೂನಿಯನ್ ಬಿ.ಸಿ ತಂಡಗಳು ಪ್ರಶಸ್ತಿಗೆ ಸೆಣಸಲಿವೆ.

ನಗರಕ್ಕೆ ಪ್ರಧಾನಿ ನರೇಂದ್ರ ಮೋದಿ ಇಂದು ಭೇಟಿ; ಸಂಚಾರ ಮಾರ್ಗ ಬದಲು

ನೈಸ್ ರಸ್ತೆಯಲ್ಲಿ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ನಡೆಯುವ ಎರಡು ಕಾರ್ಯಕ್ರಮಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಭಾಗಿ ಆಗಲಿದ್ದು, ಪೊಲೀಸರು ಅಗತ್ಯ ಬಂದೋಬಸ್ತ್ ಮಾಡಿಕೊಂಡಿದ್ದಾರೆ. ಅಲ್ಲದೇ, ಸಂಚಾರ ಮಾರ್ಗದಲ್ಲೂ ಬದಲಾವಣೆ ಮಾಡಿದ್ದಾರೆ.

ಎಚ್.ಎ.ಎಲ್ ಬಳಿ ಬಿಜೆಪಿ ರಾಜ್ಯ ಘಟಕ ಆಯೋಜಿಸಿರುವ ಅಭಿನಂದನಾ ಕಾರ್ಯಕ್ರಮದಲ್ಲಿ ಪ್ರಧಾನಿ ಪಾಲ್ಗೊಳ್ಳುವರು. 'ದಿ ಆರ್ಟ್ ಆಫ್ ಲಿವಿಂಗ್'ನ 45ನೇ ವಾರ್ಷಿಕೋತ್ಸವ ಮತ್ತು ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರ 70ನೇ ಜನ್ಮದಿನ ಕಾರ್ಯಕ್ರಮದಲ್ಲೂ ಭಾಗಿ ಆಗಲಿದ್ದಾರೆ. ಪ್ರಧಾನಿ ಸಂಚರಿಸುವ ಮಾರ್ಗದಲ್ಲಿ ಬಂದೋಬಸ್ತ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕಾರ್ಯಕ್ರಮಕ್ಕೆ ಬರುವ ವಾಹನಗಳಿಗೆ ನಿಲುಗಡೆ ವ್ಯವಸ್ಥೆ

- ಎಚ್‌ಎಎಲ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಪಾರ್ಕಿಂಗ್, ಎಸ್.ಡಿ ರಸ್ತೆಯ ಜಂಕ್ಷನ್, ಹಳೇ ವಿಮಾನ ನಿಲ್ದಾಣ
- ಸರ್ ಎಂ ವಿಶ್ವೇಶ್ವರಯ್ಯ ಕಾಲೇಜು ಮೈದಾನ, ಹಳೆ ವಿಮಾನ ನಿಲ್ದಾಣ ರಸ್ತೆ, ಮುರುಗೇಶ್ ಪಾಳ್ಯ
- ಎಚ್‌ಎಎಲ್ ಬಸ್ ಯಾರ್ಡ್, ಪಿಎನ್‌ಬಿ ಬ್ಯಾಂಕ್ ಹತ್ತಿರ, ಸುರಂಜನ್ ದಾಸ್ ರಸ್ತೆ

ನೈಸ್ ರಸ್ತೆಯಲ್ಲಿ ಸಂಚಾರ ನಿರ್ಬಂಧ

- ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರ ವರೆಗೆ ನೈಸ್ ರಸ್ತೆಯಲ್ಲಿ ಸಂಚರಿಸುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ. ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

ಪರ್ಯಾಯ ಮಾರ್ಗ

- ತುಮಕೂರು ರಸ್ತೆಯಿಂದ ನೈಸ್ ರಸ್ತೆ ಮೂಲಕ ಕನಕಪುರ ರಸ್ತೆ ಕಡೆಗೆ ತೆರಳುವ ವಾಹನ ಸವಾರರು/ ಚಾಲಕರು ಸಿಎಂಟಿಐ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದು ರಾಜ್‌ಕುಮಾರ್ ಪುಣ್ಯಭೂಮಿ ರಸ್ತೆ ಮೂಲಕ ತೆರಳಬಹುದು
- ತುಮಕೂರು ರಸ್ತೆಯಲ್ಲಿ ನಗರದ ಒಳಭಾಗದಿಂದ ನೈಸ್ ರಸ್ತೆಯ ಮೂಲಕ ಕನಕಪುರ ರಸ್ತೆಯ ಕಡೆಗೆ ತೆರಳುವ ವಾಹನ ಸವಾರರು/ ಚಾಲಕರು ಸಿಎಂಟಿಐ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ರಾಜ್‌ಕುಮಾರ್ ಪುಣ್ಯಭೂಮಿ ರಸ್ತೆಯ ಮೂಲಕ ತೆರಳಬಹುದು
- ಮಾಗಡಿ ರಸ್ತೆಯ ಮೂಲಕ ಬಂದು, ನೈಸ್ ರಸ್ತೆಯ ಮೂಲಕ ಕನಕಪುರ ರಸ್ತೆ ಕಡೆಗೆ ಸಾಗುವ ವಾಹನ ಸವಾರರು/ ಚಾಲಕರು ಸುಮ್ಮನಹಳ್ಳಿ ಜಂಕ್ಷನ್‌ನಲ್ಲಿ ಬಳಿ ಬಲಕ್ಕೆ ತಿರುವು ಪಡೆದು ಮುಂದಕ್ಕೆ ಸಾಗಬೇಕು
- ಮೈಸೂರು ರಸ್ತೆಯಲ್ಲಿ ಬಂದು, ನೈಸ್ ರಸ್ತೆಯ ಮೂಲಕ ಕನಕಪುರ ರಸ್ತೆ ಕಡೆಗೆ ಸಾಗುವ ವಾಹನ ಸವಾರರು/ ಚಾಲಕರು ನಾಯಂಡಹಳ್ಳಿ ಜಂಕ್ಷನ್ ಬಳಿ, ಬಲ ಹಾಗೂ ಎಡಕ್ಕೆ ತಿರುವು ಪಡೆದು ಮುಂದಕ್ಕೆ ಸಾಗಬಹುದು
- ಮೈಸೂರು ರಸ್ತೆ ಕಡೆಯಿಂದ ಬರುವ ವಾಹನ ಸವಾರರು ಮೈಸೂರು ರಸ್ತೆಯ ಕೆಂಗೇರಿ ವಿಷ್ಣುವರ್ಧನ್ ರಸ್ತೆಯ ಮೂಲಕ ಉತ್ತರಹಳ್ಳಿ ವಸಂತಪುರ ಕ್ರಾಸ್ ಕನಕಪುರ ರಸ್ತೆಗೆ ಸೇರಿ, ಕೋಣನಕುಂಟೆ ಕ್ರಾಸ್‌ನಲ್ಲಿ ಎಡಕ್ಕೆ ತಿರುವು ಪಡೆದು ಹರಿನಗರ ಕ್ರಾಸ್ ಜಂಬು ಸವಾರಿ ದಿಣ್ಣೆ ಮೂಲಕ ಬನ್ನೇರುಘಟ್ಟ ರಸ್ತೆಯತ್ತ ಸಾಗಬಹುದು
- ಬೆಂಗಳೂರಿನಿಂದ ಕನಕಪುರಕ್ಕೆ ಚಲಿಸುವ ವಾಹನ ಸವಾರರು ಕೋಣನಕುಂಟೆ ಕ್ರಾಸ್‌ನಲ್ಲಿ ಬಲಕ್ಕೆ ತಿರುವು ಪಡೆದು ಕೋಣನಕುಂಟೆ ವಸಂತಪುರ ಉತ್ತರಹಳ್ಳಿ ಮೂಲಕ ರಸ್ತೆಯಲ್ಲಿ ಅಗರ ಕಡೆಗೆ ಹೋಗುವ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ಅಗರ, ಬಂಜಾರಪಾಳ್ಯ, ಉತ್ತರಿ ಗ್ರಾಮದ ರಸ್ತೆಯ ಮೂಲಕ ಕಗ್ಗಲೀಪುರದಲ್ಲಿ ಬಲಕ್ಕೆ ತಿರುವು ಪಡೆದು ಕನಕಪುರಕ್ಕೆ ಸಂಚರಿಸಬಹುದು
- ಬೆಂಗಳೂರಿನಿಂದ ಕನಕಪುರಕ್ಕೆ ಚಲಿಸುವ ವಾಹನ ಸವಾರರು ಕನಕಪುರ ಮುಖ್ಯರಸ್ತೆಯ ಎ2ಬಿ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು ನಾರಾಯಣ ನಗರ ಜೋಡಿ ರಸ್ತೆ, ಅಂಜನಾಪುರ 80 ಅಡಿ ರಸ್ತೆ ನಂತರ ಬಲಕ್ಕೆ ತಿರುವು ಪಡೆದು ಬನ್ನೇರುಘಟ್ಟ ಮುಖ್ಯರಸ್ತೆಯ ಮೂಲಕ ಕಗ್ಗಲೀಪುರಕ್ಕೆ ಚಲಿಸಬಹುದು

ವಾಹನ ಸಂಚಾರ ನಿರ್ಬಂಧ

ಕಾರ್ಯಕ್ರಮ ನಡೆಯುವ ಎಚ್‌ಎಎಲ್ ಗೇಟ್ ನಂ. 30ರ ಸುತ್ತಮುತ್ತ ಭಾನುವಾರ ಬೆಳಿಗ್ಗೆ 5ರಿಂದ ಮಧ್ಯಾಹ್ನ 3ರ ವರೆಗೆ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ವಾಹನ ನಿಲುಗಡೆ ನಿರ್ಬಂಧಿಸಿರುವ ರಸ್ತೆಗಳು

- ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿ ಎಸ್.ಡಿ ರಸ್ತೆ ಜಂಕ್ಷನ್‌ನಿಂದ ಟ್ರಿನಿಟಿ ಜಂಕ್ಷನ್ ವರೆಗೆ
- ಎಚ್‌ಎಎಲ್ ವಿಮಾನ ನಿಲ್ದಾಣದ ಅಂಬ್ರೆಲಾ ಜಂಕ್ಷನ್‌ನಿಂದ ಗೇಟ್ 30ರವರೆಗೆ

ಬ್ಯಾಡ್ಮಿಂಟನ್: ಪ್ರಶಸ್ತಿ ಸುತ್ತಿಗೆ ಅಭಿನವ್, ಶೈನಾ

ಬೆಂಗಳೂರು: ಕರ್ನಾಟಕದ ಅಭಿನವ್ ಗರ್ಗ್ ಹಾಗೂ ಶೈನಾ ಮಣಿಮುತ್ತು ಇಲ್ಲಿ ನಡೆಯುತ್ತಿರುವ ಅಖಿಲ ಭಾರತ 19 ವರ್ಷದೊಳಗಿನವರ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶನಿವಾರ ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಅಭಿನವ್ ಅವರು ಬಾಲಕರ ಸೆಮಿಫೈನಲ್‌ನಲ್ಲಿ 21-9, 19-21, 21-19ರಿಂದ ಏಳನೇ ಶ್ರೇಯಾಂಕದ ಆಟಗಾರ, ತೆಲಂಗಾಣದ ಅಖಿಲ್ ರೆಡ್ಡಿ ಬಿ. ವಿರುದ್ಧ ರೋಚಕ ಜಯ ಸಾಧಿಸಿದರು. ಆದರೆ, ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ರಾಜ್ಯದ ಹಾರ್ದಿಕ್ ದಿವ್ಯಾಂಶ್ ಅವರು 19-21, 13-21ರಿಂದ ನೇರ ಆಟಗಳಲ್ಲಿ ತೆಲಂಗಾಣದ ಜ್ಞಾನದತ್ತು ಟಿ.ಟಿ. ವಿರುದ್ಧ ಪರಾಭವಗೊಂಡರು.

ಅಗ್ರ ಶ್ರೇಯಾಂಕದ ಆಟಗಾರ್ತಿ ಶೈನಾ ಅವರು ಬಾಲಕಿಯರ ವಿಭಾಗದ ನಾಲ್ಕರ ಘಟ್ಟದಲ್ಲಿ 21-16, 21-15ರಿಂದ ನೇರ ಆಟಗಳಲ್ಲಿ ತಮಿಳುನಾಡಿನ ಆದರ್ಶಿನಿ ಶ್ರೀ ಎದುರು ಗೆದ್ದರು. ಇನ್ನೊಂದು ಸೆಮಿಫೈನಲ್‌ನಲ್ಲಿ ಒಡಿಶಾದ ತನ್ವಿ ಪತ್ರಿ ಅವರು 21-8, 21-9ರಿಂದ ಹರಿಯಾಣದ ಅಕ್ಷಿತಾ ಗುಲಿಯಾ ಅವರನ್ನು ಸುಲಭವಾಗಿ ಮಣಿಸಿದರು.

ಜೂನಿಯರ್ ಪುರುಷರ ಡಬಲ್ಸ್‌ನಲ್ಲಿ ರಾಜ್ಯದ ಪವನ್ ಎಸ್. ಹಾಗೂ ಪುನೀತ್ ಎಸ್. ಜೋಡಿ ಫೈನಲ್‌ಗೆ ಮುನ್ನಡೆಯಿತು. ಶ್ರೇಯಾಂಕ ರಹಿತ ಈ ಜೋಡಿ ನಾಲ್ಕರ ಘಟ್ಟದಲ್ಲಿ 21-13, 15-21, 21-15ರಿಂದ ಎಂಟನೇ ಶ್ರೇಯಾಂಕದ ದಿವ್ಯಾಂಶ್ ಅಗರವಾಲ್ ಹಾಗೂ ಅಮರಜೀತ್ ಸಿಂಗ್ ಅವರನ್ನು ಸೋಲಿಸಿತು.

ಬಾಲಕಿಯರ ಡಬಲ್ಸ್‌ನಲ್ಲಿ ರಾಜ್ಯದ ದಿಯಾ ಭೀಮಯ್ಯ ಬಿ.- ಬರೂನಿ ಪಾರ್ಶವಾಲ್ (ಹರಿಯಾಣ) ಜೋಡಿ 21-10, 21-18ರಿಂದ ದುರ್ಗಾ ಈಶ ಕಂಡ್ರಪು (ಆಂಧ್ರ) ಹಾಗೂ ಕೀರ್ತಿ ಮಂಚಾಲ (ತೆಲಂಗಾಣ) ಅವರನ್ನು ಸೋಲಿಸಿ, ಪ್ರಶಸ್ತಿ ಸುತ್ತಿಗೆ ಮುನ್ನಡೆಯಿತು.



ಕರ್ನಾಟಕದ ಶೈನಾ ಮಣಿಮುತ್ತು

ಕೆಎಸ್‌ಟಿಡಿಸಿಯಿಂದ ಸಿದ್ಧವಾಗುತ್ತಿದೆ ವೆಬ್‌ಸೈಟ್ ; ಟಿಕೆಟ್‌ಗಾಗಿ ಜನದಟ್ಟಣೆ ತಪ್ಪಿಸಲು ಹೆಜ್ಜೆ

ಶೀಘ್ರದಲ್ಲೆ ನಂದಿ ಬೆಟ್ಟ ಪ್ರವೇಶಕ್ಕೆ ಆನ್‌ಲೈನ್ ಟಿಕೆಟ್

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಜಿಲ್ಲೆಯ ಪ್ರಸಿದ್ಧ ಪ್ರವಾಸಿತಾಣ ನಂದಿಗಿರಿಧಾಮ ಪ್ರವೇಶಕ್ಕೆ ಮುಂದಿನ ದಿನಗಳಲ್ಲಿ ಆನ್‌ಲೈನ್‌ನಲ್ಲಿಯೂ ಟಿಕೆಟ್ ಲಭ್ಯವಾಗಲಿದೆ. ಇದರಿಂದ ಗಿರಿಧಾಮದ ಪ್ರವೇಶದ್ವಾರದಲ್ಲಿ ಟಿಕೆಟ್‌ಗಾಗಿ ಕಾಯುವುದು ತಪ್ಪಲಿದೆ.

ನಂದಿಗಿರಿಧಾಮಕ್ಕೆ ಬರುವ ಪ್ರವಾಸಿಗರು ಪ್ರವೇಶ ದ್ವಾರದಲ್ಲಿ ಟಿಕೆಟ್ ಮತ್ತು ವಾಹನಗಳಿಗೆ ಶುಲ್ಕವನ್ನು ಅಲ್ಲಿರುವ ಕೌಂಟರ್‌ನಲ್ಲಿ ಪಾವತಿಸಬೇಕು. ಕೌಂಟರ್‌ನಲ್ಲಿ ಟಿಕೆಟ್ ಪಡೆದ ನಂತರ ಮುಖ್ಯಪ್ರವೇಶ ದ್ವಾರದ ಮೂಲಕ ಗಿರಿಧಾಮ ಪ್ರವೇಶಿಸಬೇಕು.

ವಾರಾಂತ್ಯದ ದಿನಗಳಲ್ಲಿ, ಸರ್ಕಾರಿ ರಜೆ ದಿನಗಳು ಸೇರಿದಂತೆ ರಜೆ ದಿನಗಳಲ್ಲಿ ಪ್ರವಾಸಿಗರು ಹೆಚ್ಚು ಭೇಟಿ ನೀಡುವರು. ಬೇಸಿಗೆ ಮತ್ತು ಮಳೆಗಾಲದ ಅವಧಿಯಲ್ಲಿ ಗಿರಿಧಾಮದ ಸೌಂದರ್ಯ ಮತ್ತು ಆಹ್ಲಾದಕ್ಕೆ ಮನಸೋತು ಸಹ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ದಾಂಗುಡಿ ಇಡುವರು.

ಆಗ ಟಿಕೆಟ್‌ಗಾಗಿಯೇ ಸರದಿ ಸಾಲು ದೊಡ್ಡದಿರುತ್ತದೆ. ಒಮ್ಮೊಮ್ಮೆ ಟಿಕೆಟ್ ಪಡೆಯಲು ಹರಸಾಹಸ ಪಡಬೇಕಾದ ಸನ್ನಿವೇಶಗಳೂ ಇವೆ. 'ನಾ ಮೊದಲು ತಾ ಮೊದಲು' ಎಂದು ಪ್ರವಾಸಿಗರು ಟಿಕೆಟ್‌ಗಾಗಿ ಜಟಾಪಟಿ ನಡೆಸಿದ ನಿದರ್ಶನಗಳು ಇವೆ. ಹೀಗೆ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಗಿರಿಧಾಮಕ್ಕೆ ಭೇಟಿ ನೀಡಿದಾಗ ಕೌಂಟರ್‌ನಲ್ಲಿನ ಸಿಬ್ಬಂದಿ ಸಹ ಟಿಕೆಟ್ ನೀಡಲು ಪರದಾಡ ಬೇಕಾಗುತ್ತದೆ.

ಜಗಳ, ಜಟಾಪಟಿ, ನೂಕುನುಗ್ಗಲು, ಚಿಲ್ಲರೆ ಸಮಸ್ಯೆ...ಹೀಗೆ ಹಲವು ಸಮಸ್ಯೆಗಳು ಸಹ ಎದುರಾಗಿವೆ. ಇವುಗಳಿಗೆ ಮುಕ್ತಿ ನೀಡಲು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ (ಕೆಎಸ್‌ಟಿಡಿಸಿ) ಆನ್‌ಲೈನ್‌ನಲ್ಲಿಯೇ ಟಿಕೆಟ್ ಪಡೆಯುವ ವ್ಯವಸ್ಥೆ ರೂಪಿಸಲು ಮುಂದಾಗಿದೆ. ಪ್ರವಾಸಿಗರು ಆನ್‌ಲೈನ್‌ನಲ್ಲಿಯೇ ನಂದಿಗಿರಿಧಾಮ ಪ್ರವೇಶದ ಟಿಕೆಟ್ ಮತ್ತು ವಾಹನ ಶುಲ್ಕವನ್ನೂ ಪಾವತಿಸಲು ಅವಕಾಶ ಮಾಡಿಕೊಡುವ ದಿಸೆಯಲ್ಲಿ ಪ್ರಯತ್ನಗಳು ನಡೆಯುತ್ತಿವೆ.



'ಸರದಿ ಸಾಲಿನಲ್ಲಿ ನಿಂತು ಟಿಕೆಟ್ ಪಡೆಯುವುದರಿಂದ ಹೆಚ್ಚಿನ ಸಮಯ ವ್ಯಯವಾಗುತ್ತದೆ. ವಾಹನ ದಟ್ಟಣೆ ಸಹ ಹೆಚ್ಚುತ್ತದೆ. ಕೆಲವು ವೇಳೆ ನೆಟ್‌ವರ್ಕ್ ಸಮಸ್ಯೆಯಿಂದ ಪ್ರವಾಸಿಗರಿಗೆ ತೊಂದರೆ ಆಗುತ್ತದೆ. ಇದನ್ನು ತಪ್ಪಿಸಲು ಈಗಾಗಲೇ ಕೆಎಸ್‌ಟಿಡಿಸಿಯಿಂದ ವೆಬ್‌ಸೈಟ್ ಸಿದ್ಧಪಡಿಸಲಾಗುತ್ತಿದೆ. ದರ ನಿಗದಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ' ಎಂದು ಪ್ರವಾಸೋದ್ಯಮ ಇಲಾಖೆ ಮತ್ತು ಕೆಎಸ್‌ಟಿಡಿಸಿ ಮೂಲಗಳು ತಿಳಿಸುತ್ತವೆ.

ಜಿಲ್ಲೆಯಲ್ಲಿ ಸದ್ಯ ನಂದಿಗಿರಿಧಾಮ ಮತ್ತು ಗೌರಿಬಿದನೂರು ತಾಲ್ಲೂಕು ಹೊಸೂರಿನ ಎಚ್.ಎನ್.ವಿಜ್ಞಾನ ಕೇಂದ್ರಗಳಿಗೆ ಮಾತ್ರ ಪ್ರವೇಶ ಶುಲ್ಕವನ್ನು ವಿಧಿಸಲಾಗುತ್ತಿದೆ. ಸ್ಕಂದಗಿರಿಗೆ ಚಾರಣಿಗರು ವೆಬ್‌ಸೈಟ್ ಮೂಲಕವೇ ಟಿಕೆಟ್ ಪಡೆದು ಬರಬೇಕು. ಅದೇ ಮಾದರಿಯಲ್ಲಿಯೇ ನಂದಿಗಿರಿಧಾಮ ಪ್ರವೇಶದ ಟಿಕೆಟ್ ಪಡೆಯಲು ಸಹ ವೆಬ್‌ಸೈಟ್ ರೂಪಿಸಲಾಗುತ್ತಿದೆ.

ಕೆಎಸ್‌ಟಿಡಿಸಿ ಕೇಂದ್ರ ಕಚೇರಿ ಮಟ್ಟದಲ್ಲಿ ಈ ಕಾರ್ಯ ಪ್ರಗತಿಯಲ್ಲಿ ಇದೆ. ಮುಂದಿನ ದಿನಗಳಲ್ಲಿ ಆನ್‌ಲೈನ್‌ನಲ್ಲಿ ಟಿಕೆಟ್ ಪಡೆಯಲು ಪ್ರವಾಸಿಗರಿಗೆ ಅವಕಾಶ ನೀಡಲಾಗುತ್ತದೆ. ಆನ್‌ಲೈನ್‌ನಲ್ಲಿ ಟಿಕೆಟ್ ಪಡೆಯದೆ ಬಂದವರು ಗಿರಿಧಾಮದಲ್ಲಿರುವ ಕೌಂಟರ್‌ನಲ್ಲಿ ಟಿಕೆಟ್ ಪಡೆಯಬಹುದು. ಹೀಗೆ ಆನ್‌ಲೈನ್‌ನಲ್ಲಿ ಅವಕಾಶ ನೀಡಿದರೂ ಆಫ್‌ಲೈನ್‌ನಲ್ಲಿ ಟಿಕೆಟ್ ಖರೀದಿಸುವ ಅವಕಾಶ ಪ್ರವಾಸಿಗರಿಗೆ ಇರುತ್ತದೆ ಎಂದು ಕೆಎಸ್‌ಟಿಡಿಸಿ ಮೂಲಗಳು 'ಪ್ರಜಾವಾಣಿ'ಗೆ ತಿಳಿಸುತ್ತವೆ.

ದುರಸ್ತಿಯಲ್ಲಿವೆ ಸಿಸಿ ಟಿವಿ ಕ್ಯಾಮೆರಾ

ನಂದಿಗಿರಿಧಾಮದಲ್ಲಿ ಕೆಲವು ಕಡೆ ಅಳವಡಿಸಿರುವ ಸಿಸಿ ಟಿವಿ ಕ್ಯಾಮೆರಾಗಳು ದುರಸ್ತಿಗೆ ಬಂದಿವೆ. ಹೀಗೆ ದುರಸ್ತಿಗೆ ಬಂದು ವರ್ಷಗಳಾದರೂ ರಿಪೇರಿ ಭಾಗ್ಯ ಕಂಡಿಲ್ಲ.

ಗಾಂಧಿ ನಿಲಯದಲ್ಲಿ 8, ನೆಹರೂ ನಿಲಯದಲ್ಲಿ 4, ಮಯೂರ ಹೋಟೆಲ್‌ನಲ್ಲಿ 12, ಹೋಟೆಲ್ ಮುಂಭಾಗದ ವೃತ್ತದಲ್ಲಿ 4, ವಾಹನ ನಿಲುಗಡೆ ಪ್ರದೇಶದಲ್ಲಿ ಎಂಟು ಸಿಸಿ ಟಿವಿ ಕ್ಯಾಮೆರಾಗಳಿವೆ. ಇವು ಸುಸ್ಥಿತಿಯಲ್ಲಿದ್ದು ಕಾರ್ಯಾಚರಣೆ ನಡೆಸುತ್ತಿವೆ.

ಅಮೃತಸರೋವರ, ರಸ್ತೆಗಳು, ಟಿಪ್ಪು ಡ್ರಾಪ್, ವ್ಯೂ ಪಾಯಿಂಟ್ ಸೇರಿದಂತೆ ಕೆಲವು ಕಡೆಗಳಲ್ಲಿ ಅಳವಡಿಸಿರುವ 10ರಿಂದ 12 ಸಿಸಿ ಟಿವಿ ಕ್ಯಾಮೆರಾಗಳು ಹಾಳಾಗಿವೆ.

ಕಿಯೋನಿಕ್ಸ್ ಸಂಸ್ಥೆಯ ಮೂಲಕ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಕ್ಯಾಮೆರಾ ದುರಸ್ತಿಯ ಬಗ್ಗೆ ಹಲವು ಬಾರಿ ಚರ್ಚಿಸಿದ್ದರೂ ಸಹ ದುರಸ್ತಿ ಮಾಡಿಲ್ಲ. ಆದ್ದರಿಂದ ಸಿಸಿ ಟಿವಿ ಕ್ಯಾಮೆರಾಗಳ ನಿರ್ವಹಣೆಯನ್ನು ಮತ್ತೊಂದು ಸಂಸ್ಥೆಯಿಂದ ದುರಸ್ತಿಗೊಳಿಸಲು ಕೆಎಸ್‌ಟಿಡಿಸಿ ಮುಂದಾಗಿದೆ.

ಬೆಂಗಳೂರು ರೇಸ್

ಸನ್‌ಶೈನ್ ಗೆಲ್ಲುವ ನಿರೀಕ್ಷೆ

ಮದರ್ಸ್ ಡೇ ಟ್ರೋಫಿ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸನ್‌ಶೈನ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3:00ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಗಾಪೆ 1, ಮಕಾಟೊ 6, ಪಾಲ್ಮ 2
2ನೇ ರೇಸ್: ರಿಫೈನ್ಡ್ ಅಗ್ರೆಶನ್ 1, ಅಗ್ರೇಡರ್ 2, ಡಾಕ್ಟರ್ ಆ್ಯಶ್ 3
3ನೇ ರೇಸ್: ಬೆಸಿಲಿಕಾ 12, ಸಿಲಿಕಾನ್ ಸ್ಟಾರ್ 3, ಸೆನೋರ್ ಚೆರಿ 4
4ನೇ ರೇಸ್: ಸನ್‌ಶೈನ್ 3, ಮಾನಾ 2, ಅಕ್ವಾಸ್ಟಿಕ್ 4
5ನೇ ರೇಸ್: ಪ್ರಾಮಿಸ್ ಆಫ್ ದಿ ಫ್ಯೂಚರ್ 2, ಎಫಿಕೆಸಿ 4, ಲಕ್ಸ್ ಎಟರ್ನಾ 7
6ನೇ ರೇಸ್: ವ್ಯಾಲಿಯಂಟ್ ಸ್ಟ್ರೀಮ್ 5, ಎಲ್ ರೇ 2, ಪ್ರಿನ್ಸ್ ಆಫ್ ವೇಲ್ಸ್ 9

ಉತ್ತಮ ಬೆಟ್: ಅಗಾಪೆ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಪಂಜಾಬ್ ಸಚಿವ ಅರೋರಾ ಬಂಧನ

ಹಣ ಅಕ್ರಮ ವರ್ಗಾವಣೆ ಪ್ರಕರಣ ವಿವಿಧೆಡೆ ಜಾರಿ ನಿರ್ದೇಶನಾಲಯ ದಾಳಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ (ಪಿಎಂಎಲ್‌ಎ) ಜಾರಿ ನಿರ್ದೇಶನಾಲಯ (ಇ.ಡಿ) ಪಂಜಾಬ್‌ನ ಕೈಗಾರಿಕಾ ಸಚಿವ ಸಂಜೀವ್ ಅರೋರಾ ಅವರನ್ನು ಶನಿವಾರ ಬಂಧಿಸಿದೆ.


ಸಂಜೀವ್ ಅರೋರಾ

ಸಂಜೀವ್ ಅರೋರಾ ಮತ್ತು ಅವರಿಗೆ ಸಂಬಂಧಿಸಿದ ಕಂಪನಿಗಳ ವಿರುದ್ಧ ಇ.ಡಿ ಅಧಿಕಾರಿಗಳು ಹೊಸದಾಗಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ಶನಿವಾರ ದೆಹಲಿ ಸೇರಿ ಉತ್ತರ ಭಾರತದ ಐದು ಪ್ರದೇಶಗಳಲ್ಲಿ ದಾಳಿ ನಡೆಸಿದ್ದರು.

'ಚಂಡೀಗಢದಲ್ಲಿರುವ ಅರೋರಾ ಅವರ ಅಧಿಕೃತ ನಿವಾಸದಲ್ಲಿ ಶನಿವಾರ ಬೆಳಗ್ಗೆ ಶೋಧ ನಡೆಸಿದ್ದ ಇ.ಡಿ. ಅಧಿಕಾರಿಗಳು, ತನಿಖೆಗೆ ಸಹಕಾರ ನೀಡಿಲ್ಲ ಎಂಬ ಕಾರಣದಿಂದ ವಶಕ್ಕೆ ಪಡೆದಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಂಜೀವ್ ಅರೋರಾ ನಿರ್ದೇಶಕರಾಗಿರುವ ಗುರುಗ್ರಾಮದ ಉದ್ಯೋಗ್ ವಿಹಾರದಲ್ಲಿರುವ ಹ್ಯಾಂಪ್ಟನ್ ಸ್ಕೈ ರಿಯಾಲ್ಟಿ ಲಿಮಿಟೆಡ್ ಕಂಪನಿಯ ಕಚೇರಿಗಳಲ್ಲಿ ಶೋಧ ನಡೆದಿದೆ.

ಏಪ್ರಿಲ್ 17ರಂದು ಇ.ಡಿ. ಅಧಿಕಾರಿಗಳು ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಉಲ್ಲಂಘನೆ ಆರೋಪದಡಿ ಅರೋರಾ ಅವರಿಗೆ ಸಂಬಂಧಿಸಿದ ಕಂಪನಿಗಳ ಮೇಲೆ ದಾಳಿ ನಡೆಸಿದ್ದರು. ಈ ಕಂಪನಿಗಳು ₹157.12 ಕೋಟಿ ಮೌಲ್ಯದ ಮಾರಾಟ ಮತ್ತು ರಫ್ತಿಗೆ ಸಂಬಂಧಿಸಿ ನಿಯಮ ಉಲ್ಲಂಘಿಸಿವೆ ಎಂದು ಇ.ಡಿ ಆರೋಪಿಸಿದೆ.

₹100 ಕೋಟಿಗೂ ಹೆಚ್ಚು ಮೊತ್ತದ ಮೊಬೈಲ್‌ಗಳ ಖರೀದಿಯಲ್ಲಿ ನಕಲಿ ಜಿಎಸ್‌ಟಿ ಬಿಲ್ ಸೃಷ್ಟಿಸಿ ದುಬೈನಿಂದ ಭಾರತಕ್ಕೆ ಅಕ್ರಮವಾಗಿ ಹಣ ವರ್ಗಾಯಿಸಲಾಗಿದೆ ಎಂದು ಆರೋಪಿಸಿ ಇತ್ತೀಚೆಗೆ ಇ.ಡಿ ತನಿಖೆ ಆರಂಭಿಸಿತ್ತು.

2024ರಲ್ಲಿ ರಾಜ್ಯಸಭೆ ಸದಸ್ಯರಾಗಿದ್ದ ಅರೋರಾ ಅವರು ಕೈಗಾರಿಕೆಗೆ ಮೀಸಲಿಟ್ಟ ಭೂಮಿಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದೂ ಆರೋಪಿಸಿ ಇ.ಡಿ. ದಾಳಿ ನಡೆಸಿತ್ತು.

ಮುಖ್ಯಮಂತ್ರಿ ಖಂಡನೆ: ಅರೋರಾ ಮೇಲಿನ ಇ.ಡಿ.ದಾಳಿ ಖಂಡಿಸಿರುವ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್, 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ರಾಜಕೀಯವಾಗಿ ಕೆಲವರನ್ನು ಮುಗಿಸಲು ಇ.ಡಿ ಮತ್ತು ಸಿಬಿಐ ತನಿಖಾ ಸಂಸ್ಥೆಗಳನ್ನು ಅಸ್ತ್ರವಾಗಿ ಬಳಸುತ್ತಿದೆ' ಎಂದು ಆರೋಪಿಸಿದ್ದಾರೆ.

'2027ರಲ್ಲಿ ಪಂಜಾಬ್ ವಿಧಾನಸಭೆ ಚುನಾವಣೆ ನಡೆಯಲಿದೆ. ಹೀಗಾಗಿಯೇ ರಾಜಕೀಯ ಮುಖಂಡರ ವಿರುದ್ಧ ದಾಳಿ ಕ್ರಮ ಜರುಗಿಸಲಾಗುತ್ತಿದೆ' ಎಂದು ಎಎಪಿ ಆರೋಪಿಸಿದೆ.

ಎಎಪಿ ರಾಜ್ಯಸಭೆ ಸದಸ್ಯ ಹಾಗೂ ಲವ್ಲಿ ಸಮೂಹದ ಅಶೋಕ್ ಕುಮಾರ್ ಮಿತ್ತಲ್ ಅವರ ವಿರುದ್ಧವೂ ಇ.ಡಿ.ದಾಳಿ ನಡೆಸಿತ್ತು. ಬಿಜೆಪಿ ಸೇರಿದ ಎಎಪಿಯ ಆರು ಮಂದಿ ರಾಜ್ಯಸಭೆ ಸದಸ್ಯರಲ್ಲಿ ಮಿತ್ತಲ್ ಕೂಡಾ ಒಬ್ಬರು. 'ಇಡಿ ಆರೋಪಗಳು ಕೇವಲ ಕಟ್ಟುಕತೆ' ಎಂದು ಪಂಜಾಬ್ ಆಮ್ ಆದ್ಮಿ ಪಕ್ಷದ ಅಧ್ಯಕ್ಷ ಹಾಗೂ ಸಚಿವ ಅಮನ್ ಅರೋರಾ ಆರೋಪಿಸಿದ್ದಾರೆ.

ಮೋದಿಯನ್ನು ಔರಂಗಜೇಬ್‌ಗೆ ಹೋಲಿಸಿದ ಕೇಜ್ರಿವಾಲ್

ಸಚಿವ ಸಂಜೀವ್ ಅರೋರಾ ಅವರ ವಿರುದ್ಧದ ಇ.ಡಿ. ದಾಳಿಯನ್ನು ಖಂಡಿಸಿ ಶನಿವಾರ 'ಎಕ್ಸ್' ಪೋಸ್ಟ್ ಮಾಡಿರುವ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್, ಪ್ರಧಾನಿ ನರೇಂದ್ರ ಮೋದಿ ಅವರನ್ನು ಮೊಘಲ್ ದೊರೆ ಔರಂಗಜೇಬ್‌ಗೆ ಹೋಲಿಸಿದ್ದಾರೆ.


ಕೇಜ್ರಿವಾಲ್

'ಮೋದಿ ಅವರು ಔರಂಗಜೇಬ್ ಇದ್ದಂತೆ. ತಮ್ಮ ಕುಟಿಲ ನೀತಿಯಿಂದ ದೇಶದ ವಿವಿಧ ಭಾಗಗಳನ್ನು ಆಕ್ರಮಿಸಿಕೊಂಡರು. ಇದೀಗ ಅವರು ತನಿಖಾ ಸಂಸ್ಥೆಗಳನ್ನು ಬಳಸಿ ಪಂಜಾಬ್‌ಗೆ ಪ್ರವೇಶ ಮಾಡಿದ್ದಾರೆ' ಎಂದು ಟೀಕಿಸಿದರು.

'ಎಎಪಿ ರಾಜ್ಯಸಭೆ ಸದಸ್ಯ ಅಶೋಕ್ ಮಿತ್ತಲ್ ಇ.ಡಿ. ದಾಳಿ ನಂತರ ಬಿಜೆಪಿ ಸೇರಿದರು. ಅರೋರಾ ಮೇಲೂ ದಾಳಿ ನಡೆಯಿತು. ಆದರೆ ಅವರು ಬಿಜೆಪಿ ಒತ್ತಡಕ್ಕೆ ಮಣಿದಿಲ್ಲ' ಎಂದು ಕೇಜ್ರಿವಾಲ್ ಆರೋಪಿಸಿದರು.

ಈ ಆರೋಪಕ್ಕೆ ಬಿಜೆಪಿ ವಕ್ತಾರ ಆರ್.ಪಿ.ಸಿಂಗ್ ತಿರುಗೇಟು ನೀಡಿದರು. 'ಇ.ಡಿ. ದಾಳಿ ಎಎಪಿ ವಿರುದ್ಧವಲ್ಲ, ಭ್ರಷ್ಟರ ವಿರುದ್ಧ. ಔರಂಗಜೇಬ್ ಮಾದರಿ ನಿರ್ಧಾರ ಮಾಡುತ್ತಿರುವುದು ಮೋದಿ ಅವರಲ್ಲ, ಕೇಜ್ರಿವಾಲ್' ಎಂದು ಹೇಳಿದ್ದಾರೆ.

'ಮಾದಕ ವಸ್ತು ಪ್ರಕರಣದಲ್ಲಿ ಪಂಜಾಬ್ ಪೊಲೀಸರು ಕ್ರಮ ಜರುಗಿಸುತ್ತಿಲ್ಲ. ಆದರೆ ಎಎಪಿ ತೊರೆದ ರಾಜ್ಯಸಭೆ ಸದಸ್ಯರೊಬ್ಬರ ಮೇಲೆ ನಕಲಿ ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆ. ಮತ್ತೊಬ್ಬ ರಾಜ್ಯಸಭೆ ಸದಸ್ಯರ ಕಾರ್ಖಾನೆಗೆ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ನೀಡಿದೆ. ಇದು ಎಎಪಿ ಸರ್ಕಾರದ ದ್ವೇಷದ ಕ್ರಮ' ಎಂದು ಅವರು ದೂರಿದರು.


ಒಡಿಶಾದ ಡಾ.ಎಪಿಜೆ ಅಬ್ದುಲ್ ಕಲಾಂ ದ್ವೀಪದಲ್ಲಿ ಅತ್ಯಾಧುನಿಕ 'ಅಗ್ನಿ' ಕ್ಷಿಪಣಿಯ ಉಡ್ಡಯನ ಪರೀಕ್ಷೆ ಶುಕ್ರವಾರ ಯಶಸ್ವಿಯಾಗಿ ನಡೆಯಿತು — ಪಿಟಿಐ ಚಿತ್ರ

'ಅಗ್ನಿ' ಉಡ್ಡಯನ ಪರೀಕ್ಷೆ ಯಶಸ್ವಿ

ನವದೆಹಲಿ (ಪಿಟಿಐ): ಅತ್ಯಾಧುನಿಕ ಅಗ್ನಿ ಕ್ಷಿಪಣಿಯ ಉಡ್ಡಯನ ಪರೀಕ್ಷೆಯಲ್ಲಿ ಭಾರತ ಯಶಸ್ವಿಯಾಗಿದೆ. ಒಡಿಶಾದ ಕರಾವಳಿಯಲ್ಲಿ ಶುಕ್ರವಾರ ಈ ಪರೀಕ್ಷೆ ನಡೆಸಲಾಗಿತ್ತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಒಂದೇ ಕ್ಷಿಪಣಿ ಮೂಲಕ ವಿವಿಧ ಗುರಿಗಳ ಮೇಲೆ ದಾಳಿ ನಡೆಸುವ ಹಲವು ಸಿಡಿತಲೆಗಳನ್ನು ಹೊತ್ತೊಯ್ಯಬಲ್ಲ ಅತ್ಯಾಧುನಿಕ ಕ್ಷಿಪಣಿ ವಾಹಕ ತಂತ್ರಜ್ಞಾನವನ್ನು (ಬಹು ಗುರಿನಿರ್ದೇಶಿತ ಕಿರು ಕ್ಷಿಪಣಿ ವ್ಯವಸ್ಥೆ–ಎಂಐಆರ್‌ವಿ) ಈ ಅಗ್ನಿ ಕ್ಷಿಪಣಿಯು ಒಳಗೊಂಡಿದೆ.

ಹಿಂದೂ ಮಹಾಸಾಗರ ಪ್ರದೇಶದಲ್ಲಿ ವಿವಿಧ ಗುರಿಗಳನ್ನು ನಿಗದಿಪಡಿಸಿ, ಹಲವು ಪೇಲೋಡ್‌ಗಳನ್ನು ಬಳಸಿ ಈ ಪರೀಕ್ಷೆ ನಡೆಸಲಾಗಿದೆ.

ಅನಿಲ್ ಅಂಬಾನಿ ಕಂಪನಿಗಳ ಮೇಲೆ ಸಿಬಿಐ ದಾಳಿ

ಪ್ರಜಾವಾಣಿ ವಾರ್ತೆ

ಮುಂಬೈ: ಅನಿಲ್ ಅಂಬಾನಿ ಅವರ ಮಾಲೀಕತ್ವದ ರಿಲಯನ್ಸ್‌ನ ಮೂರು ಕಂಪನಿಗಳಾದ ರಿಲಯನ್ಸ್ ಟೆಲಿಕಾಂ ಲಿಮಿಟೆಡ್, ರಿಲಯನ್ಸ್ ಕಮರ್ಷಿಯಲ್ ಫೈನಾನ್ಸ್ ಲಿಮಿಟೆಡ್ ಮತ್ತು ರಿಲಯನ್ಸ್ ಹೋಮ್ ಫೈನಾನ್ಸ್ ಲಿಮಿಟೆಡ್ ಮತ್ತು ಇವುಗಳ ನಿರ್ದೇಶಕರ ವಿರುದ್ಧ ದಾಖಲಾಗಿರುವ ಮೂರು ಪ್ರಕರಣಗಳಿಗೆ ಸಂಬಂಧಿಸಿ ಮುಂಬೈನ 17 ಕಡೆಗಳಲ್ಲಿ ಸಿಬಿಐ ಶನಿವಾರ ದಾಳಿ ನಡೆಸಿದೆ.


ಅನಿಲ್ ಅಂಬಾನಿ

ರಿಯಲನ್ಸ್ ಗ್ರೂಪ್‌ನ ಕಂಪನಿಗಳ ವಿರುದ್ಧ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಹಾಗೂ ಎಲ್‌ಐಸಿ, ಕೋಟಿ ಕೋಟಿ ಮೊತ್ತದ ವಂಚನೆ ದೂರು ದಾಖಲಿಸಿದ್ದವು. ಈ ದೂರುಗಳ ಕುರಿತು ಕಳೆದ ಕೆಲವು ತಿಂಗಳಲ್ಲಿ ಸಿಬಿಐ ಹಲವು ಪ್ರಕರಣಗಳು ದಾಖಲಿಸಿಕೊಂಡಿದೆ.

ಮೂರು ಕಂಪನಿಗಳ ನಿರ್ದೇಶಕರ ನಿವಾಸಗಳ ಮೇಲೆ ಸಿಬಿಐ ದಾಳಿ ನಡೆಸಿದೆ. ಹಣದ ಅಕ್ರಮದ ವಹಿವಾಟು ನಡೆಸಲು ನಕಲಿ ಕಂಪನಿಗಳನ್ನು ಸೃಷ್ಟಿಸಲಾಗಿತ್ತು. 'ಎಲ್ಲ ಪ್ರಕರಣಗಳು ಸೇರಿ ಒಟ್ಟು ₹27,337 ಕೋಟಿ ನಷ್ಟವಾಗಿದೆ' ಎಂದು ಸಿಬಿಐ ಹೇಳಿದೆ.

ಬೇನಾಮಿ ಆಸ್ತಿ ವಶಕ್ಕೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದ ಸುಪ್ರೀಂ ಕೋರ್ಟ್

'ಬೇನಾಮಿ ವ್ಯಕ್ತಿಗೆ ಆಸ್ತಿ ಮಾಲೀಕತ್ವ ದೊರಕದು'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇವಲ ಮಾಲೀಕರು ಬರೆದಿರುವ ವಿಲ್ ಆಧಾರದ ಮೇಲೆ ಯಾವುದೇ ವ್ಯಕ್ತಿ ಬೇನಾಮಿ ವಹಿವಾಟಿನಲ್ಲಿ ಖರೀದಿಸಿದ ಆಸ್ತಿಯ ಮಾಲೀಕರು ಎಂದು ಪರಿಗಣಿಸಲು ಸಾಧ್ಯವಿಲ್ಲ. 1988ರ ಬೇನಾಮಿ ಆಸ್ತಿ ವಹಿವಾಟುಗಳ ನಿಷೇಧ ಕಾಯ್ದೆಯ ಅನುಸಾರ ಇದಕ್ಕೆ ಅವಕಾಶವಿಲ್ಲ ಎಂದು 'ಸುಪ್ರೀಂ' ಹೇಳಿದೆ.

ವಾಣಿಜ್ಯ ಒಪ್ಪಂದದಡಿಯಲ್ಲಿ ಬೇರೊಬ್ಬ ವ್ಯಕ್ತಿ ಒದಗಿಸಿದ ನಿಧಿಯಿಂದ ಖರೀದಿಸಿದ ಆಸ್ತಿಗಳು ಬೇನಾಮಿ ಆಸ್ತಿ ವಹಿವಾಟು ನಿಷೇಧ ಕಾಯ್ದೆ–1988 ಅಡಿಯಲ್ಲಿ ವಿನಾಯಿತಿ ಪಡೆಯಲು ಅರ್ಹವಾಗುವುದಿಲ್ಲ ಎಂದಿರುವ ನ್ಯಾಯಪೀಠ, ಕೇಂದ್ರ ಸರ್ಕಾರ ಇವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು ಎಂದಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದಿವಾಲಾ ಮತ್ತು ಆರ್. ಮಹಾದೇವನ್ ಅವರ ಪೀಠವು, ಬೆಂಗಳೂರಿನ ಉದ್ಯಮಿ ಕೆ. ರಘುನಾಥ್ ಎಂಬುವರ ಹೆಸರಿನಲ್ಲಿ ಖರೀದಿಸಿದ ಆಸ್ತಿಯ ಮಾಲೀಕತ್ವ ವಿವಾದಕ್ಕೆ ಸಂಬಂಧಪಟ್ಟ ಅರ್ಜಿಯ ವಿಚಾರಣೆ ನಡೆಸಿತು. ಇದರಲ್ಲಿ ಕೆ. ರಘುನಾಥ್ ಅವರು ತಮ್ಮ ವಿಲ್‌ನಲ್ಲಿ ವಿವಾದಿತ ಆಸ್ತಿಯನ್ನು ಬೇನಾಮಿ ವ್ಯಕ್ತಿಯ ಹೆಸರಿಗೆ ಬರೆದಿದ್ದರು. ಅವರ ಮರಣದ ನಂತರ ಇದನ್ನು ಅವರ ಪತ್ನಿ ಮತ್ತು ಮಕ್ಕಳು ಪ್ರಶ್ನಿಸಿದ್ದರು.

ಆದರೆ, ಈ ಭೂಮಿಯನ್ನು ತಮ್ಮ ಹಣದಿಂದ ಖರೀದಿಸಲಾಗಿದೆ. ಕರ್ನಾಟಕ ಭೂ ಸುಧಾರಣೆ ಕಾಯ್ದೆಯಡಿಯಲ್ಲಿ ತಮಗೆ ಭೂಮಿ ಖರೀದಿಗೆ ಅವಕಾಶ ಇಲ್ಲದ ಕಾರಣ, ಬೇನಾಮಿ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಮಾಡಿದ್ದೇನೆ. ಅದನ್ನು ರಘುನಾಥ್ 2018ರ ಏಪ್ರಿಲ್ 20ರಂದು ನೋಂದಣಿ ಮಾಡಿಸಿರುವ ತಮ್ಮ ವಿಲ್‌ನಲ್ಲಿ ಉಲ್ಲೇಖಿಸಿದ್ದಾರೆ ಎಂದು ದೂರುದಾರರು ವಾದಿಸಿದ್ದಾರೆ.

ತಮಗೆ ಮತ್ತು ಮೃತ ವ್ಯಕ್ತಿಯ ನಡುವೆ ಉದ್ಯೋಗಿ–ಉದ್ಯೋಗದಾತರ ಸಂಬಂಧವಿತ್ತು. ಆದ್ದರಿಂದ ಇದು ಬೇನಾಮಿ ಆಸ್ತಿ ವಹಿವಾಟು ನಿಷೇಧ ಕಾಯ್ದೆಯಿಂದ ವಿನಾಯಿತಿ ಪಡೆಯುತ್ತದೆ. ಈ ವ್ಯಾಜ್ಯವು ವಿಲ್‌ಗೆ ಸಂಬಂಧಪಟ್ಟದ್ದಾಗಿದೆ. ಬೇನಾಮಿ ವಹಿವಾಟಿನ ಕುರಿತಲ್ಲ ಎಂದು ಅವರು ವಾದಿಸಿದ್ದರು.

ಅಧೀನ ನ್ಯಾಯಾಲವು ಸಿಪಿಸಿ ಅರ್ಜಿಯ 11ನೇ ನಿಯಮದ 7ನೇ ಆದೇಶದ ಅನುಸಾರ ಈ ಭೂಮಿಯ ಮಾಲೀಕತ್ವ ಹಸ್ತಾಂತರವನ್ನು ರದ್ದುಗೊಳಿಸಿತ್ತು. ಇದನ್ನು ಪ್ರಶ್ನಿಸಿ ದೂರುದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು. ಹೈಕೋರ್ಟ್‌ನಲ್ಲಿ ಕೂಡ ತಮ್ಮ ಪರ ತೀರ್ಪು ಬಾರದ ಹಿನ್ನೆಲೆಯಲ್ಲಿ ಅವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಪ್ರಕರಣದ ಹಿನ್ನೆಲೆ: ಕೆ.ರಘುನಾಥ್ ಅವರ ಅನುಮಾನಾಸ್ಪದ ಸಾವು ಹಾಗೂ ನಕಲಿ ದಾಖಲೆ ಸೃಷ್ಟಿಸಲಾಗಿತ್ತು ಎಂದು ಆರೋಪಿಸಲಾದ ಪ್ರಕರಣದಲ್ಲಿ ಉದ್ಯಮಿ ಡಿ.ಕೆ. ಆದಿಕೇಶವುಲು ಪುತ್ರ ಡಿ.ಎ ಶ್ರೀನಿವಾಸ್, ಪುತ್ರಿ ಡಿ.ಎ.ಕಲ್ಪಜಾ, ಡಿವೈಎಸ್‌ಪಿ ಎಸ್.ವೈ.ಮೋಹನ್ ಅವರನ್ನು ಸಿಬಿಐ ಪೊಲೀಸರು 2025ರ ಡಿಸೆಂಬರ್‌ನಲ್ಲಿ ಬಂಧಿಸಿದ್ದರು.

ವಂಚನೆ, ನಕಲಿ ದಾಖಲೆ ಸೃಷ್ಟಿ, ಛಾಪಾಕಾಗದ ಹಾಗೂ ಮೊಹರುಗಳ ನಕಲು, ಸಾಕ್ಷ್ಯನಾಶ ಹಾಗೂ ನಕಲಿ ಸಾಕ್ಷ್ಯ ಸೃಷ್ಟಿ ಕುರಿತ ಪ್ರಕರಣಗಳಿಗೆ ಸಂಬಂಧಿಸಿ ಸಿಬಿಐ ತನಿಖೆ ನಡೆಸಿದೆ.

ನಕಲಿ ದಾಖಲೆ ಹಾಗೂ ಕೆ.ರಘುನಾಥ ಸಾವಿನ ಪ್ರಕರಣಕ್ಕೆ ಸಂಬಂಧಿಸಿ ಹೈಕೋರ್ಟ್ ಆದೇಶದ ಅನ್ವಯ ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು. ಈ ಹಿಂದೆ ಇದೇ ಪ್ರಕರಣವನ್ನು ಕರ್ನಾಟಕದ ಪೊಲೀಸರು ತನಿಖೆ ನಡೆಸಿದ್ದರು. ಹೈಕೋರ್ಟ್‌ನ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು.

ರಘುನಾಥ್, ಆದಿಕೇಶವುಲು ಅವರ ಆಪ್ತರಾಗಿದ್ದರು. 2019ರ ಮೇ 4ರಂದು ರಘುನಾಥ್ ನೇಣುಬಿಗಿದ ಸ್ಥಿತಿಯಲ್ಲಿ ಆದಿಕೇಶವುಲು ಅವರಿಗೆ ಸೇರಿದ ಅತಿಥಿ ಗೃಹದಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದರು. ವೈದೇಹಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಇದು ಆತ್ಮಹತ್ಯೆ ಎಂದು ಪ್ರಕರಣ ಮುಕ್ತಾಯಗೊಳಿಸಲಾಗಿತ್ತು. ಆದರೆ, 2020ರ ಫೆ.15ರಂದು ರಘುನಾಥ್ ಪತ್ನಿ ಇದು ಕೊಲೆ ಎಂದು ಶಂಕಿಸಿ ದೂರು ನೀಡಲು ಮುಂದಾಗಿದ್ದರು. ದೂರು ಸ್ವೀಕರಿಸದಿದ್ದಾಗ ಖಾಸಗಿ ದೂರು ಸಲ್ಲಿಸಿದ್ದರು. ರಘುನಾಥ್ 2016ರಲ್ಲಿ ಪತ್ನಿ ಮಂಜುಳಾ ಹೆಸರಿಗೆ ವಿಲ್ ಬರೆದಿದ್ದರು.

'ರಘುನಾಥ್ ಅವರು ಮೃತಪಟ್ಟ ನಂತರ ಡಿ.ಎ ಶ್ರೀನಿವಾಸ್ ಅವರು, ನಕಲಿ ಛಾಪಾ ಕಾಗದ ಬಳಸಿದ್ದರು. ಬಳಿಕ ರಘುನಾಥ್ ಹೆಸರಿನಲ್ಲಿ ನಕಲಿ ವಿಲ್ ತಯಾರಿಸಿ ಅವರ ಬಳಿ ಇರುವ ಆಸ್ತಿ ತಮಗೆ ಸೇರಬೇಕು ಎಂದು ಪ್ರತಿಪಾದಿಸಿದ್ದರು. ವಿಲ್ ನೋಂದಣಿ ಮಾಡಿ ಆಸ್ತಿ ವಶಕ್ಕೆ ಮುಂದಾಗಿದ್ದರು' ಎಂದು ಆರೋಪಿಸಲಾಗಿತ್ತು.

ಸುದ್ದಿ 2 ನಿಮಿಷ

ಹಂಟಾವೈರಸ್: ಮೇಲ್ವಿಚಾರಣೆ

ಟೆನೆರೈಫ್ (ಸ್ಪೇನ್) (ಎಪಿ): ಹಂಟಾವೈರಸ್ ಪೀಡಿತ ಐಷಾರಾಮಿ ಹಡಗಿನಿಂದ 140ಕ್ಕೂ ಹೆಚ್ಚು ಪ್ರಯಾಣಿಕರು ಹಾಗೂ ಸಿಬ್ಬಂದಿಯನ್ನು ಸ್ಥಳಾಂತರಿಸುವ ಕಾರ್ಯಾಚರಣೆಯ ಮೇಲ್ವಿಚಾರಣೆಗಾಗಿ ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮುಖ್ಯಸ್ಥರು ಸ್ಪೇನ್‌ಗೆ ಶನಿವಾರ ಆಗಮಿಸಿದ್ದಾರೆ.

ಅರ್ಜೆಂಟೀನಾದಿಂದ ಏ.1ರಂದು ಪ್ರವಾಸ ಆರಂಭಿಸಿರುವ 'ಎಂವಿ ಹೊಂಡಿಯಸ್' ಐಷಾರಾಮಿ ವಿಹಾರ ನೌಕೆಯು ಅಂಟಾರ್ಕ್ಟಿಕಾ ಮತ್ತು ದಕ್ಷಿಣ ಅಂಟ್ಲಾಂಟಿಕ್‌ನ ದ್ವೀಪಗಳಲ್ಲಿ ವಾರಗಳ ಕಾಲ ವಿಹರಿಸಿದ್ದು, ಮೇ 10ರ ಭಾನುವಾರ ಮುಂಜಾನೆ ಸ್ಪೇನ್‌ನ ದ್ವೀಪಕ್ಕೆ ತಲುಪುವ ನಿರೀಕ್ಷೆಯಿದೆ.

ಪಶ್ಚಿಮ ಆಫ್ರಿಕಾದ ಕರಾವಳಿಯಲ್ಲಿರುವ ಸ್ಪೇನ್‌ನ ದ್ವೀಪವಾದ ಟೆನೆರೈಫ್‌ಗೆ ಡಬ್ಲ್ಯುಎಚ್‌ಒ ಮಹಾನಿರ್ದೇಶಕ ಟೆಡ್ರೊಸ್ ಅಧಾನೊಮ್ ಗೆಬ್ರೆಯೆಸಸ್ ಭೇಟಿ ನೀಡಲಿದ್ದಾರೆ. ಹಂಟಾವೈರಸ್ ಪೀಡಿತ ಐಷಾರಾಮಿ ನೌಕೆಯಿಂದ ಪ್ರಯಾಣಿಕರು ಹಾಗೂ ಸಿಬ್ಬಂದಿಯ ಸುರಕ್ಷಿತ ಸ್ಥಳಾಂತರದ ಮೇಲ್ವಿಚಾರಣೆ ನಡೆಸಲಿದ್ದಾರೆ ಎಂದು ಸ್ಪೇನ್ ಸರ್ಕಾರದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಸ್ತುತ ಹಡಗಿನಲ್ಲಿರುವವರಲ್ಲಿ ವೈರಸ್‌ನ ಲಕ್ಷಣ ಕಂಡುಬಂದಿಲ್ಲ. ಡಬ್ಲ್ಯುಎಚ್‌ಒ ಪರಿಸ್ಥಿತಿಯನ್ನು ಸಕ್ರಿಯವಾಗಿ ಮೇಲ್ವಿಚಾರಣೆ ಮಾಡುವುದನ್ನು ಮುಂದುವರಿಸಿದೆ ಎಂದು ಅಧಾನೊಮ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.



'ಅಮೆರಿಕ, ಬ್ರಿಟನ್ ತಮ್ಮ ನಾಗರಿಕರನ್ನು ಸ್ಥಳಾಂತರಿಸಲು ವಿಮಾನ ಕಳುಹಿಸಿಕೊಡಲು ಒಪ್ಪಿಕೊಂಡಿವೆ. ಪ್ರಯಾಣಿಕರು ಹಾಗೂ ಸಿಬ್ಬಂದಿಯು ಹಡಗಿನಿಂದ ಇಳಿದ ತಕ್ಷಣವೇ, ಎಲ್ಲರನ್ನೂ ಪ್ರತ್ಯೇಕವಾಗಿಡಲಾಗುವುದು' ಎಂದು ಸ್ಪೇನ್‌ನ ತುರ್ತು ಸೇವೆಗಳ ಮುಖ್ಯಸ್ಥ ವರ್ಜೀನಿಯಾ ಬಾರ್ಕೋನ್ಸ್ ತಿಳಿಸಿದ್ದಾರೆ.

ಎಸ್‌ಐಆರ್: ನೋಟಿಸ್ ಜಾರಿ

ಅಹಮದಾಬಾದ್: ಮತದಾರರ ಪಟ್ಟಿಯಿಂದ ನೈಜ ಮತದಾರರ ಹೆಸರನ್ನು ಅಳಿಸಲು ನಡೆಸಿದ ಪಿತೂರಿಯ ಕುರಿತು ತನಿಖೆ ನಡೆಸುವಂತೆ ಕೋರಿ ಎರಡು ಪ್ರತ್ಯೇಕ ಅರ್ಜಿಗಳ ಕುರಿತಂತೆ ಗುಜರಾತ್ ಹೈಕೋರ್ಟ್, ರಾಜ್ಯ ಸರ್ಕಾರ, ಹಾಗೂ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಿದೆ.

'ರಾಜ್ಯದಲ್ಲಿ ನಡೆಯುತ್ತಿರುವ ಮತದಾರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯು (ಎಸ್‌ಐಆರ್) ಸಮಯದಲ್ಲಿ ಮತದಾರರ ಹೆಸರನ್ನು ಅಳಿಸಲು ಕೋರಿ ಸಾವಿರಾರು ಫಾರ್ಮ್–7 ಆಕ್ಷೇಪಣಾ ಅರ್ಜಿಗಳನ್ನು ದಾಖಲಿಸಲಾಗಿದೆ. ಈ ಕುರಿತು ವಿಶೇಷ ತನಿಖಾ ತಂಡದಿಂದ ತನಿಖೆ ನಡೆಸಬೇಕು' ಎಂದು ಕೋರಿ ಅರ್ಜಿದಾರರು ಮನವಿ ಮಾಡಿದ್ದಾರೆ.

ಈ ಕುರಿತು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ್ ಪ್ರಚ್ಛಕ್, ಮುಂದಿನ ವಿಚಾರಣೆಯನ್ನು ಜುಲೈ 7ಕ್ಕೆ ನಿಗದಿಪಡಿಸಿದ್ದಾರೆ.

ಮತದಾರರ ಪಟ್ಟಿಯಲ್ಲಿ ವ್ಯಕ್ತಿ ಹೆಸರು ಸೇರ್ಪಡೆಗೊಳಿಸುವುದನ್ನು ಆಕ್ಷೇಪಿಸಲು ಫಾರ್ಮ್–7 ಬಳಸಲಾಗುತ್ತದೆ. ನಿಯಮದ ಪ್ರಕಾರ, ಆಕ್ಷೇಪ ಸಲ್ಲಿಸುವ ವ್ಯಕ್ತಿಯು ಅದೇ ಕ್ಷೇತ್ರದ ಮತದಾರನಾಗಿರಬೇಕು. ಆಕ್ಷೇಪಣೆ ಸಲ್ಲಿಸಿದವರೇ ಈ ಕುರಿತು ಪುರಾವೆಗಳನ್ನು ಸಲ್ಲಿಸಬೇಕು. ಇಲ್ಲಿ ಮಾತ್ರ ಯಾವುದೇ ಮಾನದಂಡಗಳನ್ನು ಅನುಸರಿಸಲಾಗಿಲ್ಲ.

'ದೊಡ್ಡ ಸಂಖ್ಯೆಯಲ್ಲಿ ಫಾರ್ಮ್–7 ಅನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ನೈಜ ಮತದಾರರು, ಅದರಲ್ಲಿಯೂ ಮುಸಲ್ಮಾನ ಮತದಾರರ ಹೆಸರನ್ನು ತೆಗೆದು ಹಾಕುವಂತೆ ಅರ್ಜಿ ಸಲ್ಲಿಸಲಾಗಿದೆ' ಎಂದು ಅರ್ಜಿ ಸಲ್ಲಿಸಿರುವ ಪೈಕಿ ಒಬ್ಬರಾದ ಗಿರ್ ಸೋಮನಾಥ್ ಜಿಲ್ಲೆಯ ಕೊಡಿನರ್ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮೆಹ್ದಿ ಹಸನ್ ಸೈಯದ್ ಮೆಹಮೂದ್ ನಕ್ವಿ ಆರೋಪಿಸಿದ್ದಾರೆ.

ಇರಾನ್ ಟ್ಯಾಂಕರ್‌ಗಳ ಮೇಲೆ ಅಮೆರಿಕ ದಾಳಿ

ಟೆಹರಾನ್ (ಎಎಫ್‌ಪಿ): ಇರಾನ್ ಧ್ವಜ ಹೊಂದಿದ್ದ ಎರಡು ಟ್ಯಾಂಕರ್‌ಗಳ ಮೇಲೆ ಅಮೆರಿಕ ಗುಂಡಿನ ದಾಳಿ ನಡೆಸಿದೆ.

ಕದನ ವಿರಾಮ ಉಲ್ಲಂಘಿಸಿ ಅಮೆರಿಕ ದಾಳಿ ನಡೆಸಿದ್ದು, ಪ್ರತ್ಯುತ್ತರ ನೀಡಿದ್ದೇವೆ ಎಂದು ಇರಾನ್ ಸೇನಾ ಅಧಿಕಾರಿಯೊಬ್ಬರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಹೊರ್ಮುಜ್ ಜಲಸಂಧಿಯಲ್ಲಿ ಶುಕ್ರವಾರ ಘರ್ಷಣೆ ನಡೆದಿದೆ. ನಂತರ ಉದ್ವಿಗ್ನ ಸ್ಥಿತಿ ಕಂಡುಬಂದಿಲ್ಲ ಎಂದು ಅವರು ಹೇಳಿದ್ದಾರೆ.

ಇರಾನ್ ತೈಲ ಮಾರ್ಗವನ್ನು ನಿಯಂತ್ರಿಸುವುದು ಸ್ವೀಕಾರಾರ್ಹ-ವಲ್ಲ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೊ ಪುನರುಚ್ಚರಿಸಿದ್ದಾರೆ.

ಕತಾರ್ ಪ್ರಧಾನಿ ಭೇಟಿ: ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್‌ರೆಹಮಾನ್ ಅಲ್ ಥಾನಿ ಅವರು ವಾಷಿಂಗ್ಟನ್‌ನಲ್ಲಿ ಅಮೆರಿಕ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಅವರನ್ನು ಭೇಟಿಯಾಗಿ, ಪಶ್ಚಿಮ ಏಷ್ಯಾದಲ್ಲಿ ಶಾಶ್ವತ ಶಾಂತಿ ಸ್ಥಾಪನೆಗಾಗಿ ಪಾಕಿಸ್ತಾನ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಶುಕ್ರವಾರ ಚರ್ಚಿಸಿದರು.

ಕೇರಳಂ ಸಿ.ಎಂ: ಮೂಡದ ಒಮ್ಮತ

ಒಂದನೇ ಪುಟದಿಂದ...

ಸುದೀರ್ಘ ಚರ್ಚೆ: ಕೇರಳಂ ಮುಖ್ಯಮಂತ್ರಿ ಸ್ಥಾನಕ್ಕಾಗಿ ಸ್ಪರ್ಧಾ ಕಣದಲ್ಲಿರುವ ಕೆ.ಸಿ. ವೇಣುಗೋಪಾಲ್, ವಿ.ಡಿ ಸತೀಶನ್, ರಮೇಶ್ ಚೆನ್ನಿತ್ತಲ ಅವರೊಂದಿಗೆ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್‌ಗಾಂಧಿ ಶನಿವಾರ ಸುದೀರ್ಘ ಚರ್ಚೆ ನಡೆಸಿದರು. 'ನಿಶ್ಚಿಂತರಾಗಿರಿ, ನಾವು ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದು ರಾಹುಲ್ ಹೇಳಿದರು ಎಂದು ಮೂಲಗಳು ತಿಳಿಸಿವೆ. ಕೇರಳ ಕಾಂಗ್ರೆಸ್ ಘಟಕದ ಅಧ್ಯಕ್ಷ ಸಣ್ಣಿ ಜೋಸೆಫ್ ಕೂಡ ಸಭೆಯಲ್ಲಿ ಭಾಗವಹಿಸಿದ್ದರು.

ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ಈಗಾಗಲೇ ಶಾಸಕರ ಸಭೆ ನಡೆಸಿ, ನಿರ್ಣಯ ಅಂಗೀಕರಿಸಿ, ವರದಿಯನ್ನು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಲ್ಲಿಸಿದ್ದಾರೆ. ಖರ್ಗೆ ಮತ್ತು ರಾಹುಲ್ ಗಾಂಧಿ ಇದಕ್ಕೆ ಅಂತಿಮ ಅಂಕಿತ ಹಾಕುವುದು ಮಾತ್ರ ಬಾಕಿ ಉಳಿದಿದೆ.

ಈ ವರದಿಯಲ್ಲಿ, ಹೆಚ್ಚಿನ ಶಾಸಕರು ಕೆ.ಸಿ ವೇಣುಗೋಪಾಲ್ ಅವರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ, ಆದರೆ, ಸಾರ್ವಜನಿಕರ ಒಲವು ವಿ.ಡಿ.ಸತೀಶನ್ ಪರವಾಗಿದೆ ಎಂದು ವೀಕ್ಷಕರು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇರಳಂನ 140 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ 63 ಸ್ಥಾನ ಹೊಂದಿದೆ. ಐಯುಎಂಎಲ್ 22 ಹಾಗೂ ಕೇರಳ ಕಾಂಗ್ರೆಸ್ (ಕೆಇಸಿ) 8 ಸ್ಥಾನ, ಆರ್‌ಎಸ್‌ಪಿ 3 ಸ್ಥಾನಗಳಲ್ಲಿ ಗೆಲುವು ದಾಖಲಿಸಿದೆ. ಒಟ್ಟಾರೆ ಯುಡಿಎಫ್ 102 ಸ್ಥಾನಗಳನ್ನು ಗೆದ್ದಿದೆ.


ವಿ.ಡಿ ಸತೀಶನ್ ಅವರನ್ನು ಕೇರಳದ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡುವಂತೆ ಒತ್ತಾಯಿಸಿ ಅವರ ಬೆಂಬಲಿಗರು ತಿರುವನಂತಪುರದಲ್ಲಿ ಶನಿವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು — ಪಿಟಿಐ ಚಿತ್ರ

ದೆಹಲಿಯಲ್ಲೂ ಫ್ಲೆಕ್ಸ್, ಪೋಸ್ಟರ್

ಕೇರಳ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಉತ್ಸುಕರಾಗಿದ್ದರೂ ಯಾವುದೇ ಹಾಲಿ ಸಂಸದರನ್ನು ಕಣಕ್ಕಿಳಿಸದಿರಲು ಕಾಂಗ್ರೆಸ್ ಈ ಹಿಂದೆ ನಿಲುವು ತೆಗೆದುಕೊಂಡಿತ್ತು. ಆದರೆ, ವೇಣುಗೋಪಾಲ್ ಸಿ.ಎಂ ಸ್ಥಾನಕ್ಕಾಗಿ ಹಕ್ಕು ಮಂಡಿಸುವುದರೊಂದಿಗೆ ಸಿ.ಎಂ ಸ್ಥಾನದ ಸ್ಪರ್ಧೆ ಬಿಸಿ ಆಗಿದ್ದು, ರಾಷ್ಟ್ರ ರಾಜಧಾನಿಯಲ್ಲೂ ತೀವ್ರ ಚರ್ಚೆಗೆ ಕಾರಣವಾಗಿದೆ.

> **ಕೇರಳಂ ಜನರು ನಮಗೆ ಪ್ರಚಂಡ ಬಹುಮತ ನೀಡಿದ್ದಾರೆ. ಬ್ಯಾನರ್, ಫ್ಲೆಕ್ಸ್ ಅಳವಡಿಸುವಂತಹ ಅಶಿಸ್ತಿನ ಘಟನೆಗಳು ಕಾಂಗ್ರೆಸ್ ಸಂಸ್ಕೃತಿಯಲ್ಲ**
> **–ದೀಪಾ ದಾಸ್ ಮುನ್ಶಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ**

ವೇಣುಗೋಪಾಲ್ ಮತ್ತು ಸತೀಶನ್ ಅವರ ಪರವಾಗಿ ಅವರ ಬೆಂಬಲಿಗರು ಕೇರಳಂ ಮತ್ತು ದೆಹಲಿಯಲ್ಲೂ ಪೋಸ್ಟರ್, ಫ್ಲೆಕ್ಸ್‌ಗಳನ್ನು ಅಳವಡಿಸಿದ್ದಾರೆ. ದೆಹಲಿ ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳು ಸತೀಶನ್ ಅವರನ್ನು ಸ್ವಾಗತಿಸಿ ಭಾರಿ ಬೆಂಬಲ ವ್ಯಕ್ತಪಡಿಸಿದ್ದಾರೆ. ವೇಣುಗೋಪಾಲ್ ಅವರೇ ಕೇರಳಂನ ಮುಂದಿನ ಮುಖ್ಯಮಂತ್ರಿ ಎಂಬ ಪೋಸ್ಟರ್‌ಗಳನ್ನು ನವದೆಹಲಿಯ ಖರ್ಗೆ ನಿವಾಸದ ಹೊರಗಡೆ ಅಳವಡಿಸಲಾಗಿದೆ.

ವಿಜಯ್ ಪ್ರಮಾಣ ಇಂದು

ಒಂದನೇ ಪುಟದಿಂದ...

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಸಮಾರಂಭದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ವಿಡುದಲೈ ಚಿರುತೈಗಳ್ ಕಚ್ಚಿ (ವಿಸಿಕೆ) ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಪಕ್ಷಗಳು ಶನಿವಾರ ಬೆಂಬಲ ನೀಡುವುದರೊಂದಿಗೆ ವಿಜಯ್ ಅವರ ಟಿವಿಕೆಯ ಬಲ ಮ್ಯಾಜಿಕ್ ಸಂಖ್ಯೆ '118'ರ ಗಡಿ ದಾಟಿತು.

'ರಾಜ್ಯಪಾಲ ಅರ್ಲೇಕರ್ ಅವರು ವಿಜಯ್ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸಿದ್ದು, ಸರ್ಕಾರ ರಚನೆಗೆ ಆಹ್ವಾನ ನೀಡಿದ್ದಾರೆ. ಮೇ 13 ಅಥವಾ ಅದಕ್ಕೂ ಮುನ್ನ ಬಹುಮತ ಸಾಬೀತುಪಡಿಸುವಂತೆ ಸೂಚಿಸಿದ್ದಾರೆ' ಎಂದು ಲೋಕ ಭವನ ಶನಿವಾರ ಹೊರಡಿಸಿದ ಪ್ರಕಟಣೆಯಲ್ಲಿ ತಿಳಿಸಿದೆ.

ವಿಧಾನಸಭಾ ಚುನಾವಣೆಯಲ್ಲಿ 108 ಸ್ಥಾನಗಳನ್ನು ಗೆದ್ದು ಅತಿದೊಡ್ಡ ಪಕ್ಷ ಎನಿಸಿಕೊಂಡಿರುವ ಟಿವಿಕೆ, ಸರಳ ಬಹುಮತಕ್ಕೆ 10 ಸ್ಥಾನಗಳ ಕೊರತೆ ಎದುರಿಸಿತ್ತು. ಎರಡು ಕ್ಷೇತ್ರಗಳಲ್ಲಿ ಗೆದ್ದಿರುವ ವಿಜಯ್ ಅವರು ಒಂದು ಸ್ಥಾನ ಬಿಟ್ಟುಕೊಡಬೇಕಿರುವುದರಿಂದ ಟಿವಿಕೆಯ ಬಲ 107 ಆಗಿದೆ.

ಐವರು ಶಾಸಕರನ್ನು ಹೊಂದಿರುವ ಕಾಂಗ್ರೆಸ್ ಮತ್ತು ತಲಾ ಎರಡು ಶಾಸಕರನ್ನು ಹೊಂದಿರುವ ಸಿಪಿಐ, ಸಿಪಿಎಂ, ವಿಸಿಕೆ ಹಾಗೂ ಐಯುಎಂಎಲ್‌ನ ಬೆಂಬಲದೊಂದಿಗೆ ಟಿವಿಕೆಯ ಬಲ 120ಕ್ಕೆ ಏರಿಕೆಯಾಗಿದೆ.

ಕೊನೆಗೂ ವಿಸಿಕೆ ಬೆಂಬಲ: ಶುಕ್ರವಾರದ ವೇಳೆಗೆ 116 ಶಾಸಕರ ಬೆಂಬಲ ಗಿಟ್ಟಿಸಿದ್ದ ಟಿವಿಕೆ, ಬಹುಮತದ ಸನಿಹ ಬಂದಿತ್ತು. ಆದರೂ, ರಾಜ್ಯಪಾಲರು 118 ಶಾಸಕರ ಬೆಂಬಲ ಇರುವುದಕ್ಕೆ ದಾಖಲೆ ಕೊಟ್ಟ ಬಳಿಕವೇ ಸರ್ಕಾರ ರಚಿಸಲು ಆಹ್ವಾನಿಸುವುದಾಗಿ ಪಟ್ಟು ಹಿಡಿದಿದ್ದರು.

ಕಳೆದ 3 ದಿನಗಳಿಂದ ತೀರ್ಮಾನ ತೆಗೆದುಕೊಳ್ಳದಿದ್ದ ವಿಸಿಕೆ ಪಕ್ಷ ಶನಿವಾರ ತನ್ನ ನಿರ್ಧಾರವನ್ನು ಅಧಿಕೃತವಾಗಿ ಪ್ರಕಟಿಸಿ, ವಿಜಯ್ ಅವರಿಗೆ ಬೆಂಬಲ ಘೋಷಿಸಿತು.

ವಿಜಯ್ ಅವರಿಗೆ ಬೆಂಬಲ ಸೂಚಿಸಿ ರಾಜ್ಯಪಾಲರಿಗೆ ಬರೆದ ಪತ್ರವನ್ನು ಪಕ್ಷದ ಮುಖ್ಯಸ್ಥ ತೊಲ್ ತಿರುಮಾವಳವನ್ ಅವರು ಟಿವಿಕೆ ನಾಯಕ ಆಧವ್ ಅರ್ಜುನ್ ಅವರಿಗೆ ನೀಡಿದರು. ಟಿವಿಕೆ ಸರ್ಕಾರ ರಚಿಸುವುದು ಖಚಿತವಾಗುತ್ತಿದ್ದಂತೆಯೇ ವಿಜಯ್ ಅವರ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ವಿಸಿಕೆ ಪಕ್ಷದ ನಿರ್ಧಾರ ಹೊರಬಿದ್ದ ಬೆನ್ನಲ್ಲೇ ಐಯುಎಂಎಲ್ ಕೂಡಾ ಟಿವಿಕೆಗೆ ಬೆಂಬಲ ನೀಡುವುದಾಗಿ ಘೋಷಿಸಿತು. 'ಟಿವಿಕೆಗೆ ಬೆಂಬಲ ನೀಡುವುದಿಲ್ಲ' ಎಂದು ಶುಕ್ರವಾರ ರಾತ್ರಿಯವರೆಗೂ ಹೇಳುತ್ತಿದ್ದ ಐಯುಎಂಎಲ್ ನಾಯಕರು ಶನಿವಾರ ನಿರ್ಧಾರ ಬದಲಿಸಿದರು. ಇದರೊಂದಿಗೆ, ಡಿಎಂಕೆ ಮೈತ್ರಿಕೂಟದಲ್ಲಿದ್ದ ಎಲ್ಲ 'ಜಾತ್ಯತೀತ' ಪಕ್ಷಗಳು ಟಿವಿಕೆಗೆ ಬೆಂಬಲ ಘೋಷಿಸಿದಂತಾಗಿದೆ.

ಎಐಎಡಿಎಂಕೆ ಶಾಸಕರ ರಹಸ್ಯ ಸಭೆ

ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡುವ ವಿಚಾರದಲ್ಲಿ ಎಐಎಡಿಎಂಕೆಯಲ್ಲಿ ಭಿನ್ನಮತ ಮೂಡಿದ್ದು, ಪಕ್ಷದ 28 ಶಾಸಕರು ರಹಸ್ಯ ಸಭೆ ನಡೆಸಿದ್ದಾರೆ.

ಕಳೆದ ಮೂರು ದಿನಗಳಿಂದ ಪುದುಚೆರಿಯ ರೆಸಾರ್ಟ್‌ನಲ್ಲಿದ್ದ ಶಾಸಕರು ಶನಿವಾರ ಚೆನ್ನೈಗೆ ವಾಪಸಾಗಿ ಪಕ್ಷದ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಸಭೆಯಲ್ಲಿ ಪಾಲ್ಗೊಂಡರು. 47 ಶಾಸಕರಲ್ಲಿ ಐವರು ಗೈರಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಆದರೆ ಈ ಸಭೆಯ ಕೆಲ ಗಂಟೆಗಳ ಬಳಿಕ ಪಕ್ಷದ 28 ಶಾಸಕರು ಹಿರಿಯ ನಾಯಕರಾದ ಸಿ.ವಿ ಷಣ್ಮುಗಂ ಮತ್ತು ಎಸ್.ಪಿ ವೇಲುಮಣಿ ಅವರ ನೇತೃತ್ವದಲ್ಲಿ ರಹಸ್ಯ ಸಭೆ ನಡೆಸಿದ್ದಾರೆ. ಎಐಎಡಿಎಂಕೆಯು ಟಿವಿಕೆಗೆ ಬೆಂಬಲ ನೀಡಬೇಕೆಂದು ಶಾಸಕರ ಈ ಬಣ ಬಯಸುತ್ತಿರುವುದರಿಂದ ಸಭೆಯು ಮಹತ್ವ ಪಡೆದುಕೊಂಡಿದೆ.

ಬೆಂಕಿ: ನಾವಿಕ ಸಾವು

ನವದೆಹಲಿ (ಪಿಟಿಐ): ಹಾರ್ಮೋಜ್ ಜಲಸಂಧಿಯ ಬಳಿ ಹಡಗಿಗೆ ಬೆಂಕಿ ತಗುಲಿದ್ದರಿಂದ ಭಾರತೀಯ ನಾವಿಕರೊಬ್ಬರು ಮೃತಪಟ್ಟಿದ್ದು, ನಾಲ್ವರು ಗಾಯಗೊಂಡಿದ್ದಾರೆ.

ಹಡಗಿನಲ್ಲಿದ್ದ 17 ಭಾರತೀಯ ಸಿಬ್ಬಂದಿಯನ್ನು ರಕ್ಷಿಸಲಾಗಿದೆ. ಬೆಂಕಿ ಹೊತ್ತಿಕೊಂಡಿದ್ದಕ್ಕೆ ನಿಖರ ಕಾರಣ ಗೊತ್ತಾಗಿಲ್ಲ ಎಂದು ಸರ್ಕಾರಿ ಮೂಲಗಳು ಶನಿವಾರ ತಿಳಿಸಿವೆ.

ಸರಕು ಸಾಗಿಸುತ್ತಿದ್ದ ಮರದ ಹಡಗಿನಲ್ಲಿ 18 ಸಿಬ್ಬಂದಿಯಿದ್ದರು. ಗಾಯಾಳುಗಳು ದುಬೈನಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಸುರಕ್ಷಿತವಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಜನಸಂಖ್ಯೆ ಎಷ್ಟೇ ಆದರೂ ಎಲ್ಲರೂ ಭಾರತೀಯರೇ'

ಮುಂಬೈ (ಪಿಟಿಐ): 'ಜನಗಣತಿ ನಂತರ ಭಾರತದ ಮುಸ್ಲಿಮರ ಸಂಖ್ಯೆಯು ಇಂಡೋನೇಷ್ಯಾ ಮುಸ್ಲಿಂ ಜನಸಂಖ್ಯೆಗೆ ಸಮನಾಗಬಹುದು' ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಶನಿವಾರ ಅಭಿಪ್ರಾಯಪಟ್ಟಿದ್ದಾರೆ.


ಕಿರಣ್ ರಿಜಿಜು

ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಜನಗಣತಿಯ ದತ್ತಾಂಶವು ಹೊರ ಬಂದಾಗ, ದೇಶದ ಮುಸ್ಲಿಮರ ಸಂಖ್ಯೆ ಗೊತ್ತಾಗಲಿದೆ. 2011ರಲ್ಲಿ ಕೊನೆಯಬಾರಿ ಜನಗಣತಿ ನಡೆದಿತ್ತು. ಈ ಬಾರಿಯ ಗಣತಿ ನಂತರ ಯಾವ ಸಮುದಾಯದ ಸಂಖ್ಯೆ ಎಷ್ಟೇ ಆದರೂ ಎಲ್ಲರೂ ಭಾರತೀಯರೇ' ಎಂದು ಹೇಳಿದರು.

ಇಂಡೋನೇಷ್ಯಾ ಜಗತ್ತಿನಲ್ಲಿ ಅತಿಹೆಚ್ಚು ಮುಸ್ಲಿಂ ಜನಸಂಖ್ಯೆ ಹೊಂದಿರುವ ದೇಶವಾಗಿದೆ. ದೇಶದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಬೆದರಿಕೆ ಇದೆ ಎನ್ನುವ ಆರೋಪ ಅಲ್ಲಗಳೆದ ಅವರು, 'ಕೆಲವು ರಾಜಕೀಯ ಶಕ್ತಿಗಳು ಮುಸ್ಲಿಮರು ಮತ್ತು ಕ್ರೈಸ್ತರಲ್ಲಿ ಭಯ ಸೃಷ್ಟಿಸುತ್ತಿವೆ. ಸಂವಿಧಾನದ ಮುಂದೆ ಎಲ್ಲರೂ ಸಮಾನರು. ಧರ್ಮ, ಜಾತಿ ಆಧಾರದ ಮೇಲೆ ಯಾರನ್ನೂ ಪ್ರತ್ಯೇಕವಾಗಿ ನೋಡಲು ಆಗದು' ಎಂದರು.

ಕಾರ್ಮಿಕ ಸಂಹಿತೆ: ಇದೇ 12ಕ್ಕೆ ಪ್ರತಿಭಟನೆ

ಬೆಂಗಳೂರು: ಕಾರ್ಮಿಕರ ವಿರೋಧಿಯಾದ ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಅಧಿಸೂಚನೆ ಹೊರಡಿಸಿರುವುದನ್ನು ಖಂಡಿಸಿ, ಮೇ 12ರಂದು ಪ್ರತಿಭಟನೆ ನಡೆಸಲು ಸಿಐಟಿಯು ಕರೆ ನೀಡಿದೆ.

ಕಾರ್ಮಿಕ ಸಂಘಟನೆಗಳ ಎಲ್ಲ ವಿರೋಧ, ಪ್ರತಿಭಟನೆ, ಮುಷ್ಕರದ ನಡುವೆಯೇ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಿ ಕಳೆದ ವರ್ಷ ನವೆಂಬರ್ 21ಕ್ಕೆ ಕಾರ್ಮಿಕ ಸಂಹಿತೆಗಳ ಅನುಷ್ಠಾನಕ್ಕೆ ಅಂತಿಮ ಪ್ರಕಟಣೆಯನ್ನು ಕೇಂದ್ರ ಸರ್ಕಾರ ಹೊರಡಿಸಿತ್ತು. ಸಿಐಟಿಯು ಸೇರಿದಂತೆ ಕಾರ್ಮಿಕ ಸಂಘಟನೆಗಳು ಆಕ್ಷೇಪಣೆಗಳನ್ನು ಸಲ್ಲಿಸಿದ್ದವು. ಅವುಗಳನ್ನು ಪರಿಗಣಿಸದೇ ಅಂತಿಮ ನಿಯಮಗಳನ್ನು ಪ್ರಕಟಿಸಿದೆ ಎಂದು ಸಿಐಟಿಯು ಅಧ್ಯಕ್ಷ ಮೀನಾಕ್ಷಿ ಸುಂದರಂ, ಪ್ರಧಾನ ಕಾರ್ಯದರ್ಶಿ ಎಸ್. ವರಲಕ್ಷ್ಮೀ ತಿಳಿಸಿದ್ದಾರೆ.


ಎರಡನೇ ಮಹಾಯುದ್ಧದಲ್ಲಿ ಜರ್ಮನಿ ವಿರುದ್ಧ ರಷ್ಯಾ ಜಯ ಸಾಧಿಸಿದ 81ನೇ ವಾರ್ಷಿಕೋತ್ಸವದ ಅಂಗವಾಗಿ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆದ ಪರೇಡ್‌ನಲ್ಲಿ ಭಾಗಿಯಾಗಿದ್ದ ಯೋಧರು — ಎಎಫ್‌ಪಿ ಚಿತ್ರ

ಗೆಲುವು ನಮ್ಮದು: ಪುಟಿನ್

ಮಾಸ್ಕೊ (ಎಪಿ): ಎರಡನೇ ಮಹಾಯುದ್ಧದಲ್ಲಿ ಜರ್ಮನಿ ವಿರುದ್ಧ ಜಯ ಸಾಧಿಸಿದ 81ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಪರೇಡ್‌ನಲ್ಲಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಭಾಗಿಯಾಗಿದ್ದರು.

'ನ್ಯಾಟೊದ ಸಂಪೂರ್ಣ ಬೆಂಬಲವನ್ನು ಪಡೆದಿರುವ ನಮ್ಮ ಪಡೆಗಳು ಆಕ್ರಮಣಕಾರಿ ಶಕ್ತಿಯೊಂದಿಗೆ ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಹೋರಾಡುತ್ತಿವೆ. ಗೆಲುವು ಎಂದಿಗೂ ನಮ್ಮದಾಗಿರುತ್ತದೆ' ಎಂದು ಪುಟಿನ್ ಅವರು ಪರೇಡ್ ಭಾಷಣದಲ್ಲಿ ಹೇಳಿದರು.



ರಾಯಪುರ: ಗೆಲುವಿನತ್ತ ರಾಯಲ್ ಚಿತ್ತ

ಆರ್‌ಸಿಬಿ–ಮುಂಬೈ ಇಂಡಿಯನ್ಸ್ ಮುಖಾಮುಖಿ • ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಆಕರ್ಷಣೆ

• ಗಿರೀಶದೊಡ್ಡಮನಿ

ರಾಯಪುರ: ಛತ್ತೀಸಗಢ ರಾಜ್ಯದ ಸ್ವಾತಂತ್ರ್ಯ ಹೋರಾಟಗಾರ ಶಹೀದ್ ವೀರ ನಾರಾಯಣ ಸಿಂಗ್ ಅವರ ಹೆಸರಿನಲ್ಲಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಇದೇ ಮೊದಲ ಬಾರಿಗೆ ಐಪಿಎಲ್ ಪಂದ್ಯದ ಆತಿಥ್ಯಕ್ಕೆ ಸಜ್ಜಾಗಿದೆ. ಇದರೊಂದಿಗೆ 'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ 'ಎರಡನೇ ತವರು' ಕ್ರೀಡಾಂಗಣ ಇದಾಗಲಿದೆ.

ಸ್ಥಳೀಯ ಅಭಿಮಾನಿಗಳಷ್ಟೇ ಅಲ್ಲ, ಬೆಂಗಳೂರಿನಿಂದಲೂ 'ರೆಡ್ ಆರ್ಮಿ' ಸದಸ್ಯರೂ ಇಲ್ಲಿಗೆ ಲಗ್ಗೆ ಹಾಕಿದ್ದಾರೆ. ಇಲ್ಲಿಯ ಬಿಸಿಲಿನ ತಾಪಕ್ಕೆ ಕ್ರಿಕೆಟ್ ಕಾವು ಕೂಡ ಸೇರಿಕೊಂಡಿದೆ. ಭಾನುವಾರ ಇಲ್ಲಿ ನಡೆಯುವ ಐಪಿಎಲ್ ಪಂದ್ಯದಲ್ಲಿ ಆರ್‌ಸಿಬಿ 'ಐದು ಬಾರಿಯ ಚಾಂಪಿಯನ್' ಮುಂಬೈ ತಂಡವನ್ನು ಎದುರಿಸಲಿದೆ.

ಈ ಕಾಲಘಟ್ಟದ ಇಬ್ಬರೂ 'ದಿಗ್ಗಜ'ರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಮುಖಾಮುಖಿಯಾಗುವುದನ್ನು ನೋಡುವ ಅವಕಾಶ ಅಭಿಮಾನಿಗಳಿಗೆ ಸಿಗಲಿದೆ. ಪ್ಲೇ ಆಫ್ ಸ್ಥಾನಕ್ಕಾಗಿ ತುರುಸಿನ ಜಿದ್ದಾಜಿದ್ದಿ ಏರ್ಪಟ್ಟಿರುವ ಈ ಹಂತದಲ್ಲಿ ಬೆಂಗಳೂರು–ಮುಂಬೈ ಹಣಾಹಣಿಯು ರೋಚಕವಾಗುವ ಎಲ್ಲ ಸಾಧ್ಯತೆಗಳೂ ಇವೆ.

ಅಂಕಪಟ್ಟಿಯ ಮೇಲೆ ಒಮ್ಮೆ ಕಣ್ಣಾಡಿಸಿದರೆ ಕುತೂಹಲ ಮೂಡುವುದು ಸಹಜ. ಮೊದಲ ಆರು ಸ್ಥಾನಗಳಲ್ಲಿರುವ ತಂಡಗಳು ಪ್ಲೇಆಫ್ ಪ್ರವೇಶದ ಸ್ಪರ್ಧೆಯಲ್ಲಿ ಇನ್ನೂ ಇವೆ. ನಿಕಟ ಪೈಪೋಟಿ ನಡೆಸುತ್ತಿವೆ. ಇನ್ನುಳಿದ ನಾಲ್ಕು ತಂಡಗಳಿಗೆ ಅವಕಾಶದ ಬಾಗಿಲು ಮುಚ್ಚಿದೆ. ಆದರೆ ಅವು ಈ ಹಂತದಲ್ಲಿ ಉಳಿದ ತಂಡಗಳ ಗೆಲುವಿಗೆ ಅಡ್ಡಿಯಾಗುವ ಸವಾಲೊಡ್ಡುತ್ತಿವೆ. ಅಂತಹ ತಂಡಗಳಲ್ಲಿ ಮುಂಬೈ ಕೂಡ ಇದೆ. 9ನೇ ಸ್ಥಾನದಲ್ಲಿರುವ ಈ ತಂಡವನ್ನು ಮೊದಲ ಸುತ್ತಿನ ಪಂದ್ಯದಲ್ಲಿ ಆರ್‌ಸಿಬಿಯು ವಾಂಖೆಡೆ ಕ್ರೀಡಾಂಗಣದಲ್ಲಿಯೇ ಸೋಲಿಸಿತ್ತು. ಈಗ ಮತ್ತೊಮ್ಮೆ ಗೆಲ್ಲುವತ್ತ ರಜತ್ ಪಾಟೀದಾರ್ ಬಳಗ ಚಿತ್ತ ನೆಟ್ಟಿದೆ.

ಆದರೆ; ತಂಡದ ಬ್ಯಾಟಿಂಗ್ ಪಡೆ ಅಸ್ಥಿರ ಆಟವಾಡುತ್ತಿರುವುದು ಚಿಂತೆಯ ವಿಷಯವಾಗಿದೆ. ಕಳೆದ ಐದು ಪಂದ್ಯಗಳಲ್ಲಿ ಮೂರರಲ್ಲಿ ಸೋಲಿನ ಕಹಿ ಅನುಭವಿಸಿದೆ. ಅಹಮದಾಬಾದಿನಲ್ಲಿ ಗುಜರಾತ್ ಟೈಟನ್ಸ್ ತಂಡದ ಎದುರು ಕೇವಲ 155 ರನ್ನಿಗೆ ಕುಸಿದಿತ್ತು. ಲಖನೌ ಸೂಪರ್ ಜೈಂಟ್ಸ್ ಎದುರು ಏಕನಾ ಕ್ರೀಡಾಂಗಣದಲ್ಲಿ ನಾಯಕ ರಜತ್ ಅವರೇ ಹೇಳಿದಂತೆ 'ಬ್ಯಾಟಿಂಗ್ ಸ್ನೇಹಿ' ಪಿಚ್‌ನಲ್ಲಿ 213 ರನ್ ಗುರಿಯನ್ನು ಸಾಧಿಸುವಲ್ಲಿ ಎಡವಿತ್ತು.

ಅನುಭವಿ ವಿರಾಟ್, ಕನ್ನಡಿಗ ದೇವದತ್ತ ಪಡಿಕ್ಕಲ್ ಮತ್ತು ರಜತ್ ಅವರು ತಮ್ಮ ಹೊಣೆಯನ್ನು ನಿಭಾಯಿಸುತ್ತಿದ್ದಾರೆ. ಆದರೆ ಫಿಲ್ ಸಾಲ್ಟ್ ಗೈರುಹಾಜರಿಯಲ್ಲಿ ಇನಿಂಗ್ಸ್ ಆರಂಭಿಸುತ್ತಿರುವ ಜೇಕಬ್ ಬೆಥೆಲ್ ಅವರ ವೈಫಲ್ಯ ತಂಡಕ್ಕೆ ಕಳವಳ ಮೂಡಿಸಿದೆ. ಅವರು ನಾಲ್ಕು ಇನಿಂಗ್ಸ್‌ಗಳಲ್ಲಿ ಒಟ್ಟು 43 ರನ್ ಮಾತ್ರ ಗಳಿಸಿದ್ದಾರೆ. ಹೀಗಾಗಿ ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಕೊಹ್ಲಿ ಅವರ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ. ಬೆಂಚ್ ಕಾಯಿಸುತ್ತಿರುವ ವೆಂಕಟೇಶ್ ಅಯ್ಯರ್ ಅವರನ್ನು ಜೇಕಬ್ ಬದಲಿಗೆ ಇನಿಂಗ್ಸ್ ಆರಂಭಿಸಲು ಕಳಿಸುವ ಬಗ್ಗೆ ತಂಡದ ಚಿಂತಕರ ಚಾವಡಿ ಯೋಚಿಸಬಹುದು. ಮಧ್ಯಮ ಕ್ರಮಾಂಕದಲ್ಲಿ ಜಿತೇಶ್ ಶರ್ಮಾ ಕೂಡ ಲಯದಲ್ಲಿಲ್ಲ. ಈ ಟೂರ್ನಿಯಲ್ಲಿ ಅವರು 64 ರನ್ ಮಾತ್ರ ಗಳಿಸಿದ್ದಾರೆ. ಟಿಮ್ ಡೇವಿಡ್ ಮತ್ತು ರೊಮೇರಿಯೊ ಶೆಫರ್ಡ್ ಅವರು ಕೊನೆಯ ಹಂತದ ಓವರ್‌ಗಳಲ್ಲಿ ಬೀಸಾಟಕ್ಕಿಳಿಯಲು ಮೇಲಿನ ಕ್ರಮಾಂಕದ ಬ್ಯಾಟರ್‌ಗಳು ಉತ್ತಮ ಅಡಿಪಾಯ ಹಾಕುವ ಅಗತ್ಯವಿದೆ.

ಬೌಲಿಂಗ್ ವಿಭಾಗದಲ್ಲಿ ಭುವನೇಶ್ವರ್ ಕುಮಾರ್ ಮತ್ತು ಜೋಶ್ ಹೇಜಲ್‌ವುಡ್ ಅವರೇ ತಂಡದ ಶಕ್ತಿಯಾಗಿದ್ದಾರೆ. ಕೃಣಾಲ್ ಪಾಂಡ್ಯ ಹಾಗೂ ಸುಯಶ್ ಶರ್ಮಾ ಅವರ ಸ್ಪಿನ್ ಬೌಲಿಂಗ್ ಕೂಡ ನಿರ್ಣಾಯಕವಾಗಲಿದೆ.

ಹಾರ್ದಿಕ್ ಪಾಂಡ್ಯ ಅವರು ತಂಡದೊಂದಿಗೆ ಇಲ್ಲಿಗೆ ಬಂದಿದ್ದಾರೆ. ಆದರೆ ಕಣಕ್ಕಿಳಿಯುವುದು ಖಚಿತವಿಲ್ಲ. ಮುಂಬೈ ತಂಡದ ಸ್ಫೋಟಕ ಶೈಲಿಯ ಬ್ಯಾಟರ್ ರೋಹಿತ್ ಶರ್ಮಾ, ರಿಯಾನ್ ರಿಕೆಲ್ಟನ್, ಸೂರ್ಯಕುಮಾರ್ ಯಾದವ್, ತಿಲಕ್ ವರ್ಮಾ, ನಮನ್ ಧೀರ್ ಮತ್ತು ರುದರ್‌ಫೋರ್ಡ್ ಅವರ ಮುಂದೆ ಆರ್‌ಸಿಬಿ ದಾಳಿಯನ್ನು ಎದುರಿಸಿ ನಿಲ್ಲುವ ಸವಾಲು ಇದೆ. ಮುಂಬೈ ವೇಗಿ ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್ ಅವರಿಗೂ ತಮ್ಮ ನೈಜ ಸಾಮರ್ಥ್ಯ ಮೆರೆದು ಆರ್‌ಸಿಬಿ ಬ್ಯಾಟಿಂಗ್ ಬಲಕ್ಕೆ ಸವಾಲೊಡ್ಡಬೇಕಿದೆ.



ರೋಹಿತ್ ಶರ್ಮಾ



ವಿರಾಟ್ ಕೊಹ್ಲಿ

ಬಲಾಬಲ

ಒಟ್ಟು ಪಂದ್ಯ 35

ಆರ್‌ಸಿಬಿ ಜಯ 16 | ಮುಂಬೈ ಗೆಲುವು 19

ಇಂದಿನ ಪಂದ್ಯ


ಚೆನ್ನೈ ಸೂಪರ್ ಕಿಂಗ್ಸ್ V/s ಲಖನೌ ಸೂಪರ್ ಜೈಂಟ್ಸ್

ತಾಣ: ಚೆನ್ನೈ, ಆರಂಭ: ಮಧ್ಯಾಹ್ನ 3.30

ರಾಯಲ್ ಚಾಲೆಂಜರ್ಸ್ ಬೆಂಗಳೂರು V/s ಮುಂಬೈ ಇಂಡಿಯನ್ಸ್

ತಾಣ: ರಾಯಪುರ, ಆರಂಭ: ರಾತ್ರಿ 7.30

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್



ಆರ್‌ಸಿಬಿ ನಾಯಕ ರಜತ್ ಪಾಟೀದಾರ್



ಎಂಐ ನಾಯಕ ಹಾರ್ದಿಕ್ ಪಾಂಡ್ಯ

ರಾಯಪುರ 'ಎರಡನೇ ತವರು'

ಹೋದ ವರ್ಷ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತ ಸಂಭವಿಸಿತ್ತು. ಅದರಲ್ಲಿ 11 ಅಭಿಮಾನಿಗಳು ಅಸುನೀಗಿದ್ದರು. ಅದರಿಂದಾಗಿ ಈ ವರ್ಷ ಬೆಂಗಳೂರಿನಲ್ಲಿ ಆರ್‌ಸಿಬಿ ಪಂದ್ಯಗಳಿಗೆ ಅನುಮತಿ ಸಿಗುವುದು ಅನುಮಾನವಾಗಿತ್ತು.

ಸರ್ಕಾರದ ನಿಯೋಗದ ಶಿಫಾರಸುಗಳಂತೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನವೀಕರಣ ಕಾಮಗಾರಿಗಳನ್ನು ಮಾಡಲಾಯಿತು. ಅದರ ನಂತರವಷ್ಟೇ ಪಂದ್ಯಗಳ ಆಯೋಜನೆಗೆ ಅನುಮತಿ ನೀಡಲಾಗಿತ್ತು. ಆದರೆ ಐಪಿಎಲ್ ಟೂರ್ನಿ ಆರಂಭಕ್ಕೆ ಇನ್ನೂ ಎರಡು ತಿಂಗಳು ಇರುವಾಗಲೇ ಆರ್‌ಸಿಬಿ ಫ್ರ್ಯಾಂಚೈಸಿಯು ರಾಯಪುರ, ಪುಣೆ ಮತ್ತು ನವಿ ಮುಂಬೈ ಕ್ರೀಡಾಂಗಣಗಳಲ್ಲಿ ತನ್ನ ತವರು ಪಂದ್ಯಗಳನ್ನು ಆಡುವ ಲೆಕ್ಕಾಚಾರ ಹಾಕಿತ್ತು. ಅದಕ್ಕಾಗಿ ಛತ್ತೀಸಗಢ ಸರ್ಕಾರದೊಂದಿಗೆ ಎರಡು ಪಂದ್ಯಗಳ ಆಯೋಜನೆಗಾಗಿ ಅನುಮತಿ ಪಡೆದಿತ್ತು.

ಅದರಿಂದಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐದು ಪಂದ್ಯಗಳನ್ನು ಮಾತ್ರ ಆಡಿಸಲಾಯಿತು. ರಾಯಪುರದಲ್ಲಿ ಮುಂಬೈ (ಮೇ 10) ಮತ್ತು ಕೆಕೆಆರ್ (ಮೇ 13) ಎದುರಿನ ಪಂದ್ಯಗಳನ್ನು ಆರ್‌ಸಿಬಿ ಆಡಲಿದೆ. ಈ ಕ್ರೀಡಾಂಗಣದಲ್ಲಿ 60 ಸಾವಿರ ಪ್ರೇಕ್ಷಕರಿಗೆ ಆಸನಗಳ ವ್ಯವಸ್ಥೆ ಇದೆ.

ತಳದಲ್ಲಿರುವ ಲಖನೌ ಸೂಪರ್ ಜೈಂಟ್ಸ್ ಜೊತೆ ಸೆಣಸಾಟ

ಪ್ಲೇ ಆಫ್: ಚೆನ್ನೈಗೆ ನಿರ್ಣಾಯಕ ಪಂದ್ಯ

ಚೆನ್ನೈ (ಪಿಟಿಐ): ಪಾಯಿಂಟ್ ಪಟ್ಟಿಯಲ್ಲಿ ಸದ್ಯ ಆರನೇ ಸ್ಥಾನದಲ್ಲಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು, ಪಟ್ಟಿಯ ತಳದಲ್ಲಿರುವ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ. ಈ ಪಂದ್ಯ ಗೆದ್ದರಷ್ಟೇ ಸೂಪರ್ ಕಿಂಗ್ಸ್ ತಂಡದ ಪ್ಲೇ ಆಫ್ ಕನಸು ಗರಿಗೆದರಲಿದೆ.

ಲೀಗ್ ಈಗ ನಿರ್ಣಾಯಕ ಹಂತಕ್ಕೆ ತಲುಪಿದೆ. ಋತುರಾಜ್ ಗಾಯಕವಾಡ್ ಸಾರಥ್ಯದ ತಂಡವು ಬ್ಯಾಟಿಂಗ್ ಕುಸಿತದ ಜೊತೆಗೆ ತವರಿನಲ್ಲಿ ಮತ್ತು ಹೊರಗಡೆ ಸ್ಥಿರವಾದ ಪ್ರದರ್ಶನ ನೀಡಲು ವಿಫಲವಾಗಿದ್ದರೂ ಪ್ಲೇ ಆಫ್ ಕನಸನ್ನು ಜೀವಂತವಾಗಿ ಉಳಿಸಿಕೊಂಡಿದೆ. ಲಖನೌ ವಿರುದ್ಧ ಪಂದ್ಯ ಚೆಪಾಕ್‌ನಲ್ಲಿ ನಡೆಯುತ್ತಿರುವುದು ಐದು ಬಾರಿಯ ಚಾಂಪಿಯನ್ ತಂಡಕ್ಕೆ ಆಟದ ಮಟ್ಟ ವೃದ್ಧಿಸಿಕೊಳ್ಳಲು ಒಳ್ಳೆಯ ಅವಕಾಶ ನೀಡಿದೆ.

ಸಿಎಸ್‌ಕೆ ತಂಡದ ಅಭಿಯಾನವು ಅನುಭವಿ ಸಂಜು ಸ್ಯಾಮ್ಸನ್ ಅವರ ಆಟದ ಮೇಲೆ ನಿಂತಿದೆ. ಋತುರಾಜ್ ಅವರು ಟೂರ್ನಿಯ ಮೊದಲಾರ್ಧದಲ್ಲಿ ಸ್ಥಿರವಾದ ಬ್ಯಾಟಿಂಗ್ ಪ್ರದರ್ಶನ ನೀಡಿರಲಿಲ್ಲ. ಈ ತಿಂಗಳು ಎರಡು ಅರ್ಧ ಶತಕಗಳನ್ನು ಬಾರಿಸಿ ಲಯಕ್ಕೆ ಮರಳಿದ ಋತುರಾಜ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕಳೆದ ಪಂದ್ಯದಲ್ಲಿ ವಿಫಲರಾಗಿದ್ದರು. ಆದರೆ ಸಂಜು 52 ಎಸೆತಗಳಲ್ಲಿ 87 ರನ್‌ಗಳ ಆಟವಾಡಿದ್ದು ನೆರವಾಯಿತು.

ಮಧ್ಯಮ ಕ್ರಮಾಂಕದಲ್ಲಿ ಡೆವಾಲ್ಡ್ ಬ್ರೆವಿಸ್, ಕಾರ್ತಿಕ್ ಶರ್ಮಾ ಮತ್ತು ಶಿವಂ ದುಬೆ ಅವರಿಂದ ತಂಡ ಹೆಚ್ಚಿನ ಕಾಣಿಕೆ ನಿರೀಕ್ಷಿಸುತ್ತಿದೆ.

ಲಖನೌ ತಂಡಕ್ಕೆ ಈ ಬಾರಿಯ ಐಪಿಎಲ್ ನಿರಾಶೆ ಮೂಡಿಸಿದೆ. ಕೇವಲ ಮೂರು ಪಂದ್ಯಗಳಲ್ಲಿ ತಂಡ ಗೆದ್ದಿದೆ. ದಾಖಲೆಯ ₹27 ಕೋಟಿ ಮೌಲ್ಯ ಪಡೆದಿದ್ದ ನಾಯಕ ರಿಷಭ್ ಪಂತ್ ವಿಫಲರಾಗಿರುವುದು ತಂಡಕ್ಕೆ ತಲೆನೋವಾಗಿದೆ. ಅವರು ಅಲ್ಲೊಮ್ಮೆ ಇಲ್ಲೊಮ್ಮೆ ಎಂಬಂತೆ ತಮ್ಮ ಆಟದ ಝಲಕ್ ತೋರಿಸಿದ್ದಾರೆ.

ಆದರೆ ಆ ಪಂದ್ಯದಲ್ಲಿ ಆಸ್ಟ್ರೇಲಿಯಾದ ಅನುಭವಿ ಮಿಚೆಲ್ ಮಾರ್ಷ್ ಆಕ್ರಮಣಕಾರಿ ಆಟವಾಡಿ 111 ರನ್ ಬಾರಿಸಿದ್ದು ಲಖನೌ ತಂಡಕ್ಕೆ ವರದಾನವಾಯಿತು. ಆ ಗೆಲುವು ತಂಡದ ಆರು ಪಂದ್ಯಗಳ ಸೋಲಿನ ಸರಣಿ ತುಂಡರಿಸಿತ್ತು. ಆದರೆ ಬೌಲಿಂಗ್ ಪಡೆ ಗಮನಾರ್ಹ ಪ್ರದರ್ಶನ ನೀಡಿದೆ. ಅನುಭವಿ ಮೊಹಮ್ಮದ್ ಶಮಿ ಜೊತೆಗೆ ಪ್ರಿನ್ಸ್ ಯಾದವ್, ಸ್ಪಿನ್ನರ್‌ಗಳಾದ ಶಾಬಾಜ್ ಅಹಮದ್ ಮತ್ತು ದಿಗ್ವೇಶ್ ಯಶಸ್ಸು ಪಡೆದಿದ್ದಾರೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಎಸ್‌ಆರ್‌ಎಚ್	11	7	4	0	14	0.737
ಜಿ ಟಿ	11	7	4	0	14	0.228
ಪಿಬಿಕೆಎಸ್	10	6	3	1	13	0.571
ಆರ್‌ಸಿಬಿ	10	6	4	0	12	1.234
ಆರ್ ಆರ್	11	6	5	0	12	0.082
ಸಿಎಸ್‌ಕೆ	10	5	5	0	10	0.151
ಕೆಕೆಆರ್	10	4	5	1	9	- 0.169
ಡಿ ಸಿ	11	4	7	0	8	- 1.154
ಎಂ ಐ	10	3	7	0	6	- 0.649
ಎಲ್‌ಎಸ್‌ಜಿ	10	3	7	0	6	- 0.934

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (494 ರನ್)

ಪರ್ಪಲ್ ಕ್ಯಾಪ್: ಕಗಿಸೊ ರಬಾಡ, ಜಿ ಟಿ (18 ವಿಕೆಟ್)

ಗಿಲ್–ಸಾಯಿ ಶತಕದ ಜೊತೆಯಾಟ: ರಶೀದ್ ಕೈಚಳಕ

ಟೈಟನ್ಸ್‌ಗೆ ಸತತ ನಾಲ್ಕನೇ ಗೆಲುವು

ಜೈಪುರ (ಪಿಟಿಐ): ಆರಂಭಿಕ ಆಟಗಾರರಾದ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಅವರ ಶತಕದ ಜೊತೆಯಾಟದ ಬಳಿಕ ಅನುಭವಿ ಸ್ಪಿನ್ನರ್ ರಶೀದ್ ಖಾನ್ ಕೈಚಳಕ ತೋರಿದರು. ಇದರಿಂದಾಗಿ ಗುಜರಾತ್ ಟೈಟನ್ಸ್ ತಂಡವು ಐಪಿಎಲ್‌ನಲ್ಲಿ ಸತತ ನಾಲ್ಕನೇ ಗೆಲುವು ದಾಖಲಿಸಿ, ಅಂಕಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೆ ಲಗ್ಗೆಯಿಟ್ಟಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಗುಜರಾತ್ ತಂಡವು 77 ರನ್‌ಗಳಿಂದ ರಾಜಸ್ಥಾನ ರಾಯಲ್ಸ್ ತಂಡವನ್ನು ನಿರಾಯಾಸವಾಗಿ ಮಣಿಸಿತು. ಐಪಿಎಲ್‌ನಲ್ಲಿ ಟೈಟನ್ಸ್‌ಗೆ ಇದು ರನ್ ಆಧಾರದಲ್ಲಿ ಅತಿದೊಡ್ಡ ಗೆಲುವಾಗಿದೆ. ಸತತ ಎರಡನೇ ಪಂದ್ಯ ಸೋತ ರಾಜಸ್ಥಾನ ತಂಡದ ಪ್ಲೇ ಆಫ್ ಹಾದಿ ಈಗ ಸಲೀಸಾಗಿಲ್ಲ.

ಟಾಸ್ ಗೆದ್ದ ಆತಿಥೇಯ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಗಿಲ್ (84;44ಎ) ಮತ್ತು ಸುದರ್ಶನ್ (55;36ಎ) ಅವರ ಅರ್ಧಶತಕಗಳ ನೆರವಿನಿಂದ ಗುಜರಾತ್ ತಂಡವು 4 ವಿಕೆಟ್‌ಗೆ 229 ರನ್‌ಗಳ ಭಾರೀ ಮೊತ್ತ ಗಳಿಸಿತು. ಗುರಿ ಬೆನ್ನಟ್ಟಿದ ರಾಜಸ್ಥಾನ ತಂಡವು ರಶೀದ್ (33ಕ್ಕೆ4), ಜೇಸನ್ ಹೋಲ್ಡರ್ (13ಕ್ಕೆ3) ಮತ್ತು ಕಗಿಸೊ ರಬಾಡ (33ಕ್ಕೆ2) ದಾಳಿಗೆ ತತ್ತರಿಸಿತು. ಹೀಗಾಗಿ, 16.3 ಓವರ್‌ಗಳಲ್ಲಿ 152 ರನ್ ಗಳಿಸಿ ಹೋರಾಟ ಮುಗಿಸಿತು.

ವೈಭವ್ ಸೂರ್ಯವಂಶಿ (36; 16ಎ) ಯಥಾಪ್ರಕಾರ ಈ ಪಂದ್ಯದಲ್ಲಿ ಅಬ್ಬರಿಸಿ, ರಾಜಸ್ಥಾನ ತಂಡಕ್ಕೆ ಉತ್ತಮ ಆರಂಭ ನೀಡಿದರು. ಅವರು ಯಶಸ್ವಿ ಜೈಸ್ವಾಲ್ (3) ಅವರೊಂದಿಗೆ ಮೊದಲ ವಿಕೆಟ್‌ಗೆ 17 ಎಸೆತಗಳಲ್ಲಿ 38 ರನ್ ಸೇರಿಸಿದರು. ರಬಾಡ ಓವರ್‌ನಲ್ಲಿ ಸತತ ಎರಡು ಸಿಕ್ಸರ್ ಬಾರಿಸಿ ಆಟಕ್ಕೆ ಕುದುರಿಕೊಂಡ ವೈಭವ್ ಅವರ ವಿಕೆಟನ್ನು ಮೊಹಮ್ಮದ್ ಸಿರಾಜ್ ಗಳಿಸಿ, ಸ್ವಲ್ಪ ಅತಿಯಾಗಿಯೇ ಸಂಭ್ರಮಿಸಿದರು.

ನಂತರದಲ್ಲಿ ಗುಜರಾತ್ ಬೌಲರ್‌ಗಳದ್ದೇ ಕಾರುಬಾರು. ಈ ಮಧ್ಯೆ ವಿಕೆಟ್ ಕೀಪರ್ ಧ್ರುವ್ ಜುರೇಲ್ (24) ಮತ್ತು ರವೀಂದ್ರ ಜಡೇಜ (38; 25ಎ) ಕೊಂಚ ಹೋರಾಟ ತೋರಿದರು.

ಗಿಲ್ ಅಬ್ಬರ: ಎಡಗಾಲಿನ ನೋವಿಗೆ ಒಳಗಾದರೂ ಅಮೋಘ ಆಟವಾಡಿದ ಗಿಲ್ ಅವರು ಸುದರ್ಶನ್ ಅವರೊಂದಿಗೆ ಮೊದಲ ವಿಕೆಟ್‌ಗೆ 65 ಎಸೆತಗಳಲ್ಲಿ 118 ರನ್ ಸೇರಿಸಿದರು. ಗಿಲ್ 9 ಬೌಂಡರಿಗಳ ಜೊತೆ ಮೂರು ಸಿಕ್ಸರ್‌ಗಳನ್ನು ಸಿಡಿಸಿದರು. ಅವರಿಗೆ ಇದು ಹಾಲಿ ಆವೃತ್ತಿಯಲ್ಲಿ ನಾಲ್ಕನೇ ಅರ್ಧ ಶತಕ.

ಜೋಫ್ರಾ ಆರ್ಚರ್ ಮೊದಲ ಓವರಿನಲ್ಲೇ ಅನಪೇಕ್ಷಿತ ದಾಖಲೆಗೆ ಪಾತ್ರರಾಗಬೇಕಾಯಿತು. ಅವರು 4 ವೈಡ್, 1 ನೋಬಾಲ್ ಸೇರಿ 11 ಎಸೆತಗಳನ್ನು ಮಾಡಿದರು. ಐಪಿಎಲ್ ಪಂದ್ಯದ ಮೊದಲ ಓವರಿನಲ್ಲೇ ಬೌಲರ್ ಒಬ್ಬರು ಇಷ್ಟೊಂದು ಎಸೆತಗಳನ್ನು ಮಾಡಿದ್ದು ದಾಖಲೆ. ಇದರಲ್ಲಿ 18 ರನ್ ಸೇರಿ ಅವರ ಮೂರು ಓವರುಗಳಲ್ಲಿ 46 ರನ್‌ಗಳು ಸೂರೆಯಾದವು.

ಕನ್ನಡಿಗ ಲೆಗ್‌ಸ್ಪಿನ್ನರ್ ಯಶರಾಜ್ ಪೂಂಜಾ 11ನೇ ಓವರಿನಲ್ಲಿ ಜೊತೆಯಾಟ ಮುರಿದರು. ಟೈಟನ್ಸ್‌ನ ಮಧ್ಯಮ ಕ್ರಮಾಂಕದ ಆಟಗಾರರಾದ ಜೋಸ್ ಬಟ್ಲರ್ ಮತ್ತು ಜೇಸನ್ ಹೋಲ್ಡರ್ ವಿಫಲರಾದರು. ಆದರೆ ಕೊನೆಯಲ್ಲಿ ವಾಷಿಂಗ್ಟನ್ ಸುಂದರ್ (ಔಟಾಗದೇ 37; 20 ಎ) ಮತ್ತು ರಾಹುಲ್ ತೆವಾಟಿಯಾ (ಔಟಾಗದೇ 14; 4ಎ) ಅವರು ಮೊತ್ತವನ್ನು 225 ದಾಟಿಸಿದರು. ಇದು ಈ ಋತುವಿನಲ್ಲಿ ಟೈಟನ್ಸ್ ದಾಖಲಿಸಿದ ಅತ್ಯಧಿಕ ಮೊತ್ತ.

ಸ್ನಾಯುಸೆಳೆತದಿಂದಾಗಿ ರಿಯಾನ್ ಪರಾಗ್ ಈ ಪಂದ್ಯಕ್ಕೆ ಅಲಭ್ಯರಾಗಿದ್ದರು. ಹೀಗಾಗಿ, ಯಶಸ್ವಿ ಜೈಸ್ವಾಲ್ ರಾಜಸ್ಥಾನ ತಂಡವನ್ನು ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 229 (ಸಾಯಿ ಸುದರ್ಶನ್ 55, ಶುಭಮನ್ ಗಿಲ್ 84, ವಾಷಿಂಗ್ಟನ್ ಸುಂದರ್ ಔಟಾಗದೇ 37; ಬ್ರಿಜೇಶ್ ಶರ್ಮಾ 47ಕ್ಕೆ2). ರಾಜಸ್ಥಾನ ರಾಯಲ್ಸ್: 16.3 ಓವರ್‌ಗಳಲ್ಲಿ 152 (ವೈಭವ್ ಸೂರ್ಯವಂಶಿ 36, ಧ್ರುವ್ ಜುರೇಲ್ 24, ರವೀಂದ್ರ ಜಡೇಜ 38; ರಶೀದ್ ಖಾನ್ 33ಕ್ಕೆ4, ಜೇಸನ್ ಹೋಲ್ಡರ್ 12ಕ್ಕೆ3, ಕಗಿಸೊ ರಬಾಡ 33ಕ್ಕೆ2).

ಪಂದ್ಯದ ಆಟಗಾರ: ರಶೀದ್ ಖಾನ್



ನಾಲ್ಕು ವಿಕೆಟ್ ಗಳಿಸಿದ ಟೈಟನ್ಸ್ ತಂಡದ ರಶೀದ್ ಖಾನ್ ಪಿಟಿಐ ಚಿತ್ರ

ಬಹುಮಾನ ಹಣ: ಎಐಸಿಎಫ್‌ನಿಂದ ಪಾವತಿ ಭರವಸೆ

ನವದೆಹಲಿ (ಪಿಟಿಐ): ಒಡಿಶಾ ಓಪನ್ ಚೆಸ್ ಟೂರ್ನಿ ಗೆದ್ದುಕೊಂಡಿರುವುದಕ್ಕೆ ಗ್ರ್ಯಾಂಡ್‌ಮಾಸ್ಟರ್ ಅಭಿಜಿತ್ ಗುಪ್ತಾ ಅವರಿಗೆ ಸಲ್ಲಬೇಕಾಗಿರುವ ಬಹುಮಾನ ಹಣವನ್ನು ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಅಖಿಲ ಭಾರತ ಚೆಸ್ ಫೆಡರೇಷನ್ ಶನಿವಾರ ಭರವಸೆ ನೀಡಿದೆ.



ಅಭಿಜಿತ್ ಗುಪ್ತಾ

ಜನವರಿಯಲ್ಲಿ ನಡೆದಿದ್ದ ಈ ಟೂರ್ನಿಯಲ್ಲಿ ಪ್ರಶಸ್ತಿ ಬಹುಮಾನವಾದ ₹5.5 ಲಕ್ಷ ಬಹುಮಾನ ಮೊತ್ತವನ್ನು ಆಯೋಜಕ ಒಡಿಶಾ ಚೆಸ್ ಸಂಸ್ಥೆ ಬಾಕಿ ಉಳಿಸಿಕೊಂಡಿದೆ. ಅದನ್ನು ಕೊಡಿಸಲು ನೆರವಾಗುವಂತೆ ಗುಪ್ತಾ ಅವರು ಕೇಂದ್ರ ಕ್ರೀಡಾ ಸಚಿವಾಲಯದ ನೆರವು ಕೋರಿದ್ದರು.

'ಅಖಿಲ ಭಾರತ ಚೆಸ್ ಫೆಡರೇಷನ್‌ಗೆ ನಾಲ್ಕು ತಿಂಗಳಿಂದ ಪದೇ ಪದೇ ಪತ್ರ ಬರೆದಿದ್ದೇನೆ. ಇದುವರೆಗೂ ಬಹುಮಾನ ಮೊತ್ತ ಬಂದಿಲ್ಲ. ಈ ಬಗ್ಗೆ ಗಮನಹರಿಸಿ ಆಟಗಾರರಿಗೆ ಬರಬೇಕಾದ ಹಣ ಕೊಡಿಸುವುವಂತೆ' 36 ವರ್ಷ ವಯಸ್ಸಿನ ಆಟಗಾರ 'ಎಕ್ಸ್' ಮೂಲಕ ಸಚಿವಾಲಯಕ್ಕೆ ಮನವಿ ಮಾಡಿದ್ದರು.

'ಸಮಸ್ಯೆ ಬಗೆಹರಿಸಲಾಗುವುದು ಎಂದು ಎಐಸಿಎಫ್ ಅಧ್ಯಕ್ಷ ನಿತಿನ್ ನಾರಂಗ್ ಅವರು ತಮಗೆ ಭರವಸೆ ನೀಡಿದ್ದಾರೆ' ಎಂದು ಅಭಿಜಿತ್ ನಂತರ ಇನ್ನೊಂದು ಪೋಸ್ಟ್ ಹಾಕಿದ್ದಾರೆ.

ಯೂಸ್ಟಿನಾ, ಝುಝಾನ ಫೈನಲ್‌ಗೆ

ತುಮಕೂರು ಓಪನ್ ಟೆನಿಸ್: ಭಾರತದ ವೈದೇಹಿ, ಝೀಲ್‌ಗೆ ನಿರಾಸೆ

ಪ್ರಜಾವಾಣಿ ವಾರ್ತೆ

ತುಮಕೂರು: ಅಗ್ರ ಶ್ರೇಯಾಂಕದ ಆಟಗಾರ್ತಿ ಯೂಸ್ಟಿನಾ ಮಿಕೂಲ್‌ಸ್ಕಿಟೆ ಅವರು ಭಾರತದ ವೈದೇಹಿ ಚೌಧರಿ ಅವರನ್ನು ಮಣಿಸಿ 'ತುಮಕೂರು ಓಪನ್' ಐಟಿಎಫ್ ಡಬ್ಲ್ಯು 35 ಮಹಿಳಾ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಶನಿವಾರ ಫೈನಲ್ ಪ್ರವೇಶಿಸಿದರು.

ತುಮಕೂರು ವಿಶ್ವವಿದ್ಯಾಲಯ ಆವರಣದ ಟೆನಿಸ್ ಕೋರ್ಟ್‌ನಲ್ಲಿ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಲಿಥುವೇನಿಯಾದ ಯೂಸ್ಟಿನಾ ಅವರು 6–3, 2–6, 6–2ರಿಂದ ಮೂರನೇ ಶ್ರೇಯಾಂಕದ ವೈದೇಹಿ ವಿರುದ್ಧ ಗೆಲುವು ಸಾಧಿಸಿದರು. ಮೊದಲ ಸೆಟ್‌ನಲ್ಲಿ ಯೂಸ್ಟಿನಾ ಮೇಲುಗೈ ಸಾಧಿಸಿದರೆ, ಎರಡನೇ ಸೆಟ್‌ನಲ್ಲಿ ವೈದೇಹಿ ತಿರುಗೇಟು ನೀಡಿದರು. ಆದರೆ, ನಿರ್ಣಾಯಕ ಸೆಟ್‌ನಲ್ಲಿ ಗುಜರಾತ್ ಆಟಗಾರ್ತಿ ಲಯ ತಪ್ಪಿದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಝೀಲ್ ದೇಸಾಯಿ ಅವರು 7–6 (9), 2–1ರಿಂದ ಮುನ್ನಡೆಯಲ್ಲಿದ್ದಾಗ ಸ್ನಾಯು ಸೆಳೆತದಿಂದಾಗಿ ಪಂದ್ಯದಿಂದ ಹಿಂದೆ ಸರಿಯಬೇಕಾಯಿತು. ಹೀಗಾಗಿ, ಎರಡನೇ ಶ್ರೇಯಾಂಕದ ಆಟಗಾರ್ತಿ, ಪೋಲೆಂಡ್‌ನ ಝುಝಾನ ಪಾವ್ಲಿಕೊವಾಸ್ಕಾ ಅವರು ಪ್ರಶಸ್ತಿ ಸುತ್ತಿಗೆ ಮುನ್ನಡೆದರು. ಝುಝಾನ ಭುಜದ ನೋವಿನಿಂದಾಗಿ ಬಳಲಿದರೂ, ಅದೃಷ್ಟ ಅವರ ಕೈಹಿಡಿಯಿತು.

ಪ್ರಶಸ್ತಿ ಸುತ್ತಿನಲ್ಲಿ ಯೂಸ್ಟಿನಾ ಮತ್ತು ಝುಝಾನ ಮುಖಾಮುಖಿಯಾಗಲಿದ್ದಾರೆ. ಫೈನಲ್ ಪಂದ್ಯವು ಭಾನುವಾರ ಬೆಳಿಗ್ಗೆ 9.30ಕ್ಕೆ ಆರಂಭವಾಗಲಿದ್ದು, 'ಡಿ.ಡಿ ಸ್ಪೋರ್ಟ್ಸ್'ನಲ್ಲಿ ನೇರಪ್ರಸಾರ ಇರಲಿದೆ.



'ತುಮಕೂರು ಓಪನ್' ಐಟಿಎಫ್ ಡಬ್ಲ್ಯು 35 ಮಹಿಳಾ ಟೆನಿಸ್ ಟೂರ್ನಿಯ ಡಬಲ್ಸ್‌ನಲ್ಲಿ ಪ್ರಶಸ್ತಿ ಜಯಿಸಿದ ರಷ್ಯಾದ ಸೇನಿಯಾ ಲೆಸ್ಕುಟೋವಾ– ಎಲಿನಾ ನೆಪ್ಲಿ ಹಾಗೂ ರನ್ನರ್ಸ್‌ಅಪ್ ವೈದೇಹಿ ಚೌಧರಿ– ಝುಝಾನ ಪಾವ್ಲಿಕೊವಾಸ್ಕಾ ಅವರಿಗೆ ಗೃಹ ಸಚಿವ ಜಿ.ಪರಮೇಶ್ವರ ಮತ್ತು ಕನ್ನಿಕಾ ಪರಮೇಶ್ವರಿ ಟ್ರೋಫಿ ನೀಡಿದರು

ಸೇನಿಯಾ– ಎಲಿನಾ ಜೋಡಿ ಚಾಂಪಿಯನ್: ರಷ್ಯಾದ ಜೋಡಿ ಸೇನಿಯಾ ಲೆಸ್ಕುಟೋವಾ– ಎಲಿನಾ ನೆಪ್ಲಿ ಅವರು ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಈ ಜೋಡಿ, ಫೈನಲ್ ಹಣಾಹಣಿಯಲ್ಲಿ ಅಗ್ರ ಶ್ರೇಯಾಂಕದ ವೈದೇಹಿ– ಝುಝಾನಾ ಅವರಿಂದ ವಾಕ್ ಓವರ್ ಪಡೆಯಿತು. ಝುಝಾನ್ನ ಅವರು ಭುಜದ ನೋವಿಗೆ ತುತ್ತಾಗಿದ್ದರಿಂದ ಈ ಜೋಡಿ ಫೈನಲ್ ಪಂದ್ಯದಲ್ಲಿ ಕಣಕ್ಕಿಳಿಯದಿರಲು ನಿರ್ಧರಿಸಿತು.

ರಯಾನ್ ಕಾಲ್ಚಳಕ: ನಾಲ್ಕನೇ ಸ್ಥಾನಕ್ಕೆ ಚೆಟ್ರಿ ಪಡೆ

ಬಿಎಫ್‌ಸಿಗೆ ಮಣಿದ ಜಮ್ಶೆಡ್‌ಪುರ

ಜಮ್ಶೆಡ್‌ಪುರ (ಪಿಟಿಐ): ರಯಾನ್ ವಿಲಿಯಮ್ಸ್ ಅವರ ಅಮೋಘ ಕಾಲ್ಚಳಕದ ನೆರವಿನಿಂದ ಬೆಂಗಳೂರು ಎಫ್‌ಸಿ ತಂಡವು ಕೊನೆಗೂ ಗೆಲುವಿನ ಹಳಿಗೆ ಮರಳಿತು. ಶನಿವಾರ ನಡೆದ ಐಎಸ್‌ಎಲ್ ಪಂದ್ಯದಲ್ಲಿ ಬಿಎಫ್‌ಸಿ 1–0ಯಿಂದ ಜಮ್ಶೆಡ್‌ಪುರ ಎಫ್‌ಸಿ ತಂಡವನ್ನು ಮಣಿಸಿ ತವರಿನಾಚೆ ಅಜೇಯ ಓಟ ಮುಂದುವರಿಸಿತು.

ಜಮ್ಶೆಡ್‌ಪುರದ ಜೆಆರ್‌ಡಿ ಟಾಟಾ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ 38ನೇ ನಿಮಿಷದಲ್ಲಿ ರಯಾನ್ ದಾಖಲಿಸಿದ ಗೋಲು ಗೆಲುವಿಗೆ ನಿರ್ಣಾಯಕವಾಯಿತು. ಇದರೊಂದಿಗೆ ಸುನಿಲ್ ಚೆಟ್ರಿ ಬಳಗವು ನಾಲ್ಕು ಪಂದ್ಯಗಳ ಬಳಿಕ ಮೊದಲ ಗೆಲುವು ದಾಖಲಿಸಿತು.

41 ವರ್ಷದ ಚೆಟ್ರಿ, ಇಂಡಿಯನ್ ಸೂಪರ್ ಲೀಗ್ ಇತಿಹಾಸದಲ್ಲಿ ಅತಿ ಹೆಚ್ಚು ಪಂದ್ಯಗಳನ್ನು ಆಡಿದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಅವರಿಗೆ ಇದು ಐಎಸ್‌ಎಲ್‌ನಲ್ಲಿ 195ನೇ ಪಂದ್ಯವಾಗಿತ್ತು.

12 ಪಂದ್ಯಗಳಲ್ಲಿ 20 ಅಂಕ (5 ಗೆಲುವು, 5 ಡ್ರಾ, 2 ಸೋಲು) ಗಳಿಸಿದ ಬೆಂಗಳೂರಿನ ತಂಡವು ಅಂಕಪಟ್ಟಿಯಲ್ಲಿ ಏಳನೇ ಸ್ಥಾನದಿಂದ ನಾಲ್ಕನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ತಂಡಕ್ಕೆ ಲೀಗ್‌ನಲ್ಲಿ ಇನ್ನು ಒಂದು ಪಂದ್ಯ ಮಾತ್ರ ಬಾಕಿ ಉಳಿದಿದೆ. ಪೆಪ್ ಮುನೋಝ್ ಮುಖ್ಯ ಕೋಚ್ ಹುದ್ದೆಗೇರಿದ ಬಳಿಕ ತಂಡಕ್ಕೆ ದಕ್ಕಿದ ಮೊದಲ ಜಯ ಇದಾಗಿದೆ.



ಗೋಲು ದಾಖಲಿಸಿದ ಸಂಭ್ರಮದಲ್ಲಿ ರಯಾನ್ ವಿಲಿಯಮ್ಸ್

ಈ ಪಂದ್ಯವನ್ನು ಗೆದ್ದು ಅಂಕ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿ, ತನ್ನ ಚೊಚ್ಚಲ ಪ್ರಶಸ್ತಿಗೆ ಹತ್ತಿರವಾಗುವ ಕನಸು ಕಂಡಿದ್ದ ಜಮ್ಶೆಡ್‌ಪುರ ತಂಡಕ್ಕೆ ನಿರಾಸೆಯಾಯಿತು. 12 ಪಂದ್ಯಗಳಿಂದ 21 ಅಂಕ (6 ಗೆಲುವು, 3 ಡ್ರಾ, 3 ಸೋಲು) ಗಳಿಸಿರುವ ಜೆಎಫ್‌ಸಿ ತಂಡವು ಮೂರನೇ ಸ್ಥಾನದಲ್ಲಿದೆ. ಈ ತಂಡಕ್ಕೂ ಲೀಗ್‌ನಲ್ಲಿ ಒಂದು ಪಂದ್ಯ ಮಾತ್ರ ಬಾಕಿ ಉಳಿದಿದೆ. ಈಸ್ಟ್ ಬೆಂಗಾಲ್ (21) ಮತ್ತು ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡಗಳು ಕ್ರಮವಾಗಿ ಮೊದಲೆರಡು ಸ್ಥಾನದಲ್ಲಿವೆ. ಲೀಗ್‌ನಲ್ಲಿ ಅಗ್ರಸ್ಥಾನ ಗಳಿಸುವ ತಂಡ ಚಾಂಪಿಯನ್ ಆಗಲಿದೆ.

ಜೂನ್ 26ರವರೆಗೆ ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಲು ಅನರ್ಹ

ವಿನೇಶ್‌ಗೆ ಡಬ್ಲ್ಯುಎಫ್‌ಐ ನೋಟಿಸ್

ನವದೆಹಲಿ (ಪಿಟಿಐ): ಕುಸ್ತಿ ಪಟು ವಿನೇಶ್ ಫೋಗಟ್ ಅವರು ಅಶಿಸ್ತಿನಿಂದ ವರ್ತಿಸಿದ್ದಾರೆ ಮತ್ತು ಉದ್ದೀಪನ ಮದ್ದು ಸೇವನೆ ನಿಯಮಗಳನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅವರಿಗೆ ನೋಟಿಸ್ ನೀಡಿದೆ. ಜೂನ್ 26ರವರೆಗೆ ಯಾವುದೇ ದೇಶಿಯ ಟೂರ್ನಿಗಳಲ್ಲಿ ಭಾಗವಹಿಸದಂತೆ ನಿರ್ಬಂಧ ಹೇರಿದೆ.

ವಿಶ್ವ ಕುಸ್ತಿ ಸಂಸ್ಥೆಯ (ಯುಡಬ್ಲ್ಯುಡಬ್ಲ್ಯು) ಡೋಪಿಂಗ್ ನಿಗ್ರಹ ನಿಯಮಾವಳಿ ಪ್ರಕಾರ ಯಾವುದೇ ಕ್ರೀಡಾಪಟು ನಿವೃತ್ತಿ ತೊರೆದ ನಂತರ ಆರು ತಿಂಗಳ ಒಳಗೆ ಕಡ್ಡಾಯವಾಗಿ ಉದ್ದೀಪನ ಮದ್ದುಸೇವನೆ ಪರೀಕ್ಷೆಗೆ ಲಭ್ಯರಿರುವುದಾಗಿ ಅಂತರರಾಷ್ಟ್ರೀಯ ಟೆಸ್ಟಿಂಗ್ ಏಜನ್ಸಿಗೆ (ಐಟಿಎ) ಮಾಹಿತಿ ನೀಡಬೇಕಾಗುತ್ತದೆ.

2025ರ ಡಿಸೆಂಬರ್ 12ರಂದು ನಿವೃತ್ತಿಯಿಂದ ಹೊರಬರುವುದಾಗಿ ವಿನೇಶ್ ಘೋಷಿಸಿದ್ದರು.

ಹೀಗಾಗಿ ವಿನೇಶ್ ತಮ್ಮ ಪುನರಾಗಮನ ಟೂರ್ನಿಗಾಗಿ ಇನ್ನಷ್ಟು ಸಮಯ ಕಾಯಬೇಕಾಗಿದೆ. ಹರಿಯಾಣದ ಶಾಸಕಿಯೂ ಆಗಿರುವ ಅವರು ಇದೇ 10ರಿಂದ 12ರವರೆಗೆ ಗೊಂಡಾದಲ್ಲಿ (ಉತ್ತರ ಪ್ರದೇಶ) ನಡೆಯಲಿರುವ ರಾಷ್ಟ್ರೀಯ



ಓಪನ್ ರ್‍ಯಾಂಕಿಂಗ್ ಕುಸ್ತಿ ಟೂರ್ನಿಯಲ್ಲಿ ಭಾಗವಹಿಸಲು ಸಿದ್ಧತೆ ನಡೆಸಿದ್ದರು. 2024ರ ಪ್ಯಾರಿಸ್ ಒಲಿಂಪಿಕ್ಸ್ ಫೈನಲ್‌ನಲ್ಲಿ ಅನರ್ಹಗೊಂಡ ನಂತರ ಅವರು ಯಾವುದೇ ಟೂರ್ನಿಯಲ್ಲಿ ಭಾಗವಹಿಸಿಲ್ಲ.

ಭಾರತ ಕುಸ್ತಿ ಫೆಡರೇಷನ್, ವಿನೇಶ್ ಅವರಿಗೆ 15 ಪುಟಗಳ ನೋಟಿಸ್ ನೀಡಿದ್ದು, ಪ್ಯಾರಿಸ್‌ನಲ್ಲಿ ಅವರ ವರ್ತನೆ ಭಾರತದ ಕುಸ್ತಿ ಪ್ರತಿಷ್ಠೆಗೆ ಸರಿಪಡಿಸಲಾಗದಷ್ಟು ಕುಂದು ಉಂಟುಮಾಡಿದೆ. ಫೆಡರೇಷನ್, ವಿಶ್ವ ಕುಸ್ತಿ ಸಂಸ್ಥೆ ಮತ್ತು ಡೋಪಿಂಗ್ ನಿಗ್ರಹ ನಿಯಮಗಳನ್ನು ಅವರು ಉಲ್ಲಂಘಿಸಿದ್ದಾರೆ ಎಂದೂ ಹೇಳಿದೆ. ನೋಟಿಸ್‌ಗೆ ಉತ್ತರಿಸಲು ಅವರಿಗೆ 14 ದಿನಗಳ ಗಡುವು ನೀಡಲಾಗಿದೆ.

ನೋಟಿಸ್: ಇತರ ಕೆಲವು ಆರೋಪಗಳ ಬಗ್ಗೆಯೂ ಫೆಡರೇಷನ್ ಅವರಿಂದ ವಿವರಣೆ ಬಯಸಿದೆ. 2024ರ ಒಲಿಂಪಿಕ್ಸ್‌ನಲ್ಲಿ (50 ಕೆ.ಜಿ. ವಿಭಾಗ) ಅನರ್ಹತೆ, ಡೋಪಿಂಗ್ ನಿಗ್ರಹ ನಿಯಮಗಳಡಿ ತಮ್ಮ ವಾಸ್ತವ್ಯಸ್ಥಳದ ಮಾಹಿತಿ ನೀಡುವಲ್ಲಿ ತಪ್ಪು ಎಸಗಿದ್ದು, ಐಒಎ ನೇಮಕ ಮಾಡಿದ ಅಡ್‌ಹಾಕ್ ಸಮಿತಿ 2024ರ ಮಾರ್ಚ್ 11ರಂದು ನಡೆಸಿದ ಆಯ್ಕೆ ಟ್ರಯಲ್ಸ್‌ನಲ್ಲಿ ಎರಡು ತೂಕ ವಿಭಾಗಗಳಲ್ಲಿ ಭಾಗವಹಿಸಿದ್ದು ಇವುಗಳಲ್ಲಿ ಸೇರಿವೆ.

ಗೊಂಡಾದಲ್ಲಿ ನಡೆಯಲಿರುವ ರಾಷ್ಟ್ರೀಯ ಓಪನ್ ರ್‍ಯಾಂಕಿಂಗ್ ಟೂರ್ನಿ ಸೇರಿದಂತೆ ಈ ವರ್ಷದ ಜೂನ್ 26ರವರೆಗೆ ದೇಶದಲ್ಲಿ ನಡೆಯುವ ಯಾವುದೇ ಟೂರ್ನಿಯಲ್ಲಿ ಅವರು ಭಾಗವಹಿಸಲು ಅನರ್ಹರು ಎಂದು ಫೆಡರೇಷನ್ ನಿರ್ದಿಷ್ಟವಾಗಿ ಹೇಳಿದೆ.

ಡಿಸೆಂಬರ್ 18ರಂದು ವಿನೇಶ್ ಅವರು ವಾಸ್ತವ್ಯಸ್ಥಳದ ಮಾಹಿತಿ ನೀಡದೇ ಮದ್ದುಸೇವನೆ ಪರೀಕ್ಷೆ ತಪ್ಪಿಸಿಕೊಂಡಿದ್ದಾರೆ ಎಂದು ಐಟಿಎ ಮೇ 4ರಂದು ನೋಟಿಸ್ ನೀಡಿದ್ದನ್ನೂ ಫೆಡರೇಷನ್ ನೋಟಿಸ್‌ನಲ್ಲಿ ಉಲ್ಲಂಘಿಸಿದೆ.

ನಿವೃತ್ತಿಯಿಂದ ಹೊರಬರಲು ಬಯಸುವ ಕುಸ್ತಿಪಟು ಆರು ತಿಂಗಳ ಮೊದಲೇ ಮಾಹಿತಿ ನೀಡಬೇಕು ಎಂದು ಯುಡಬ್ಲ್ಯುಡಬ್ಲ್ಯು ನಿಯಮಾವಳಿ ತಿಳಿಸುತ್ತದೆ. ಈ ಅವಧಿಯಲ್ಲಿ ಅವರು ಉದ್ದೀಪನ ಮದ್ದುಸೇವನೆ ಪರೀಕ್ಷೆಗೆ ಒಮ್ಮೆಯಾದರೂ ಒಳಗಾಗಲು ಸಿದ್ಧರಿರಬೇಕಾಗುತ್ತದೆ. ಈ ನಿಬಂಧನೆಯನ್ನು ವಿನೇಶ್ ಪೂರೈಸಿಲ್ಲ ಎಂದು ಡಬ್ಲ್ಯುಎಫ್‌ಐ ಹೇಳಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಅವರು ಮೊದಲ ಸಲ (ಆಗಸ್ಟ್ 6, 2024) ತೂಕ ಪಡೆದಾಗ 49.9 ಕೆ.ಜಿ. ತೂಗಿದ್ದರು. ಆದರೆ ಫೈನಲ್ ದಿನ ಬೆಳಿಗ್ಗೆ ತೂಕ ಪರೀಕ್ಷಿಸಿದಾಗ ನಿಯಮಕ್ಕಿಂತ 100 ಗ್ರಾಂ ಹೆಚ್ಚು ತೂಕ ಹೊಂದಿದ್ದು ಗೊತ್ತಾಗಿತ್ತು. ಅವರ ತಪ್ಪಿನಿಂದಾಗಿ ಭಾರತಕ್ಕೆ ಖಚಿತ ಪದಕ ತಪ್ಪಿತು ಎಂದು ಫೆಡರೇಷನ್ ಹೇಳಿದೆ.

'ಹೋರಾಟ ನಡೆಸುವೆ'

ನೋಟಿಸ್‌ಗೆ ಪ್ರತಿಕ್ರಿಯಿಸಿರುವ ವಿನೇಶ್, ಅದರ ವಿರುದ್ಧ ಹೋರಾಟ ನಡೆಸುವುದಾಗಿ ತಿಳಿಸಿದ್ದಾರೆ.

'ಬದುಕು ಆಳವಾದ ಸುಳಿಗೆ ಸಿಲುಕಿಕೊಂಡಿದೆ. ಜಗತ್ತು ನನ್ನ ವ್ಯಕ್ತಿತ್ವದಲ್ಲಿ ನ್ಯೂನತೆಗಳನ್ನು ಹುಡುಕುತ್ತಿದೆ. ಆದರೆ, ಬದುಕು ಎಂದಿಗೂ ತಲೆ ಎತ್ತಿ ನಿಲ್ಲುವಂತೆ ಮಾಡಿದೆ. ಯಾವುದೇ ಶಸ್ತ್ರಕ್ಕೆ ಅದನ್ನು ಬಾಗಿಸುವ ಶಕ್ತಿಯಿಲ್ಲ' ಎಂದು ಮಾರ್ಮಿಕವಾಗಿ ಅವರು ಟ್ವೀಟ್ ಮಾಡಿದ್ದಾರೆ.

ಯಶಸ್ವಿ, ಶಫಾಲಿಗೆ 'ನಾಡಾ' ನೋಟಿಸ್

ನವದೆಹಲಿ (ಪಿಟಿಐ): ಕಳೆದ ವರ್ಷ ನಿಗದಿಯಾಗಿದ್ದ ಉದ್ದೀಪನ ಮದ್ದು ಸೇವನೆ ಪರೀಕ್ಷೆಗೆ ಲಭ್ಯರಾಗದೇ ಇರುವುದಕ್ಕೆ ಭಾರತ ತಂಡದ ಕ್ರಿಕೆಟ್ ತಾರೆಗಳಾದ ಯಶಸ್ವಿ ಜೈಸ್ವಾಲ್ ಮತ್ತು ಶಫಾಲಿ ವರ್ಮಾ ಅವರಿಗೆ ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ನಿಗ್ರಹ ಘಟಕ (ನಾಡಾ) ನೋಟಿಸ್ ನೀಡಿದೆ.

ವಾಸ್ತವ್ಯಮಾಹಿತಿ (ವೇರ್‌ಅಬೌಟ್ಸ್) ನೀಡುವಲ್ಲಿ ಇದನ್ನು ಮೊದಲ ವೈಫಲ್ಯ ಎಂದು ನಿಯಮಗಳನ್ವಯ ಪರಿಗಣಿಸಲಾಗುತ್ತದೆ. 'ನಾಡಾ'ದ ನೋಂದಾಯಿತ ಪರೀಕ್ಷಾ ಗುಂಪಿನ (ರಿಜಿಸ್ಟರ್ಡ್ ಟೆಸ್ಟಿಂಗ್ ಪೂಲ್) ಕ್ರೀಡಾಪಟುಗಳಲ್ಲಿ ಇವರಿಬ್ಬರೂ ಸೇರಿದ್ದಾರೆ. ಇವರು ಪರೀಕ್ಷೆ ತಪ್ಪಿಸಿಕೊಂಡಿದ್ದಕ್ಕೆ ಕಾರಣ ನೀಡದ ಕಾರಣ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ.


'ಸಂಬಂಧಿತ ಕ್ರೀಡಾಪಟುಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಇದನ್ನು ಅವರ ರಾಷ್ಟ್ರೀಯ ಫೆಡರೇಷನ್‌ಗೂ (ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ) ಮತ್ತು ಐಸಿಸಿಗೆ ತಿಳಿಸಲಾಗಿದೆ' ಎಂದು ಉನ್ನತಮೂಲಗಳು ಪಿಟಿಐಗೆ ತಿಳಿಸಿವೆ. ಈ ಪ್ರಕ್ರಿಯೆಯಲ್ಲಿ ಗೋಪ್ಯತೆ ಕಾಪಾಡುವ ಉದ್ದೇಶದಿಂದ 'ನಾಡಾ' ಈ ವಿಷಯಕ್ಕೆ ಸಂಬಂಧಿಸಿ ವಿವರಗಳನ್ನು ಬಹಿರಂಗಪಡಿಸಿಲ್ಲ. ಆದರೆ ಕ್ರಿಕೆಟ್ ನಿಯಂತ್ರಣ ಮಂಡಳಿ ಮೂಲವೊಂದು ಈ ಬೆಳವಣಿಗೆಯನ್ನು ಖಚಿತಪಡಿಸಿದೆ.

'ಮದ್ದುಪರೀಕ್ಷೆ ತಪ್ಪಿಸಿಕೊಂಡಿರುವುದಕ್ಕೆ ಸಂಬಂಧಿಸಿ ನಾಡಾದಿಂದ ನಮಗೆ ಮಾಹಿತಿ ಬಂದಿದೆ. ಇದು ಹೇಗಾಯಿತೆಂದು ಸಂಬಂಧಪಟ್ಟ ಆಟಗಾರ ಮತ್ತು ಆಟಗಾರ್ತಿಯ ಜೊತೆ ಮಾತನಾಡುತ್ತೇವೆ. ಭವಿಷ್ಯದಲ್ಲಿ ಹೀಗಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುತ್ತೇವೆ' ಎಂದು ಹೇಳಿದರು.

ಆರ್ಚರಿ ವಿಶ್ವಕಪ್: ಸಾಹಿಲ್‌ಗೆ ಕಂಚು

ಶಾಂಘೈ (ಪಿಟಿಐ): ಭಾರತದ ಸಾಹಿಲ್ ಜಾಧವ್ ಅವರು ಆರ್ಚರಿ ವಿಶ್ವಕಪ್‌ನಲ್ಲಿ ತಮ್ಮ ಮೊದಲ ಪದಕ ಗೆದ್ದುಕೊಂಡಿದ್ದಾರೆ. ಎರಡನೇ ಬಾರಿ ಈ ವಿಶ್ವಸರ್ಕಿಟ್‌ನಲ್ಲಿ ಭಾಗವಹಿಸಿದ್ದ ಜಾಧವ್ ಅವರು ಶನಿವಾರ ಸ್ಟೇಜ್ 2 ಟೂರ್ನಿಯ ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡರು.

ಮಹಾರಾಷ್ಟ್ರದ 25 ವರ್ಷ ವಯಸ್ಸಿನ ಈ ಬಿಲ್ಗಾರ ಕಂಚಿನ ಪದಕಕ್ಕೆ ನಡೆದ ಪ್ಲೇ ಆಫ್‌ನಲ್ಲಿ ಡೆನ್ಮಾರ್ಕ್‌ನ ಆಟಗಾರ ಹಾಗೂ ತರಬೇತುದಾರರೂ ಆಗಿರುವ ಮಾರ್ಟಿನ್ ಡಮ್ಸ್‌ಬೊ ಅವರನ್ನು 147–144 ಅಂತರದಿಂದ ಸೋಲಿಸಿದರು. ಇದು ಭಾರತಕ್ಕೆ ಕಾಂಪೌಂಡ್ ವಿಭಾಗದಲ್ಲಿ ಮೊದಲ ಪದಕ. ಭಾರತದ ಉಳಿದವ ಸ್ಪರ್ಧಿಗಳು ಪದಕದ ಸುತ್ತಿಗೆ ಅರ್ಹತೆ ಪಡೆಯಲು ವಿಫಲರಾಗಿದ್ದರು. ಕಾಂಪೌಂಡ್ ವಿಭಾಗದಲ್ಲಿ ಸಾಂಪ್ರದಾಯಿಕವಾಗಿ ಪ್ರಬಲ ಶಕ್ತಿ ಎನಿಸಿರುವ ಭಾರತ ಈ ಬಾರಿ ನಿರಾಶೆ ಅನುಭವಿಸಿತ್ತು. ತಂಡ ವಿಭಾಗಗಳಲ್ಲಿ, ಮಿಶ್ರ ತಂಡ ವಿಭಾಗದಲ್ಲಿ ಭಾರತ ಬೇಗನೇ ಹೊರಬಿದ್ದಿತ್ತು.



ಭಾನುವಾರ, ಮೇ 10, 2026 | ₹ 7.00
www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿಶ್ವ ತಾಯಂದಿರ ದಿನದ ಶುಭಾಶಯಗಳು

ಕಾರ್ಮಿಕ ಸಂಹಿತೆ: ನಿಯಮ ಪ್ರಕಟ 2B

ಓದುಗರ ಗಮನಕ್ಕೆ
ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

₹25,160 ಕೋಟಿ ವಿಮಾ ಮೊತ್ತ ಇತ್ಯರ್ಥ

ವಿವರ ಪುಟ 2B

ಭೂದಾಹಕ್ಕೆ ಕೆರೆಗಳ ಆಪೋಶನ

ಜಿಲ್ಲಾ ಕೆರೆ ಸಂರಕ್ಷಣಾ ಸಮಿತಿ ನಿಷ್ಕ್ರಿಯ ಕೆರೆಯಂಗಳಕ್ಕೆ ಭೂಗಳ್ಳರ ಕಣ್ಣು

• ಮಲ್ಲಿಕಾರ್ಜುನ ನಾಲವಾರ

ಒಳನೋಟ

ಯಾದಗಿರಿ: ಕೆರೆಯ ಅಂಗಳದಲ್ಲಿ ಬೆಳೆದು ನಿಂತ ಜಾಲಿ ಮುಳ್ಳಿನ ಗಿಡಗಳ ನಡುವೆ ಪತ್ರಾಸಿನ ಮನೆಗಳು. ನಾಲ್ಕು ಹೆಜ್ಜೆ ಇರಿಸಿದರೆ ಪಾಚಿಗಟ್ಟಿದ ಕೆರೆಯ ನೀರಿನ ಬದಿಯ ದನದ ಶೆಡ್‌ನಲ್ಲಿನ ಕರುವಿನೊಂದಿಗೆ ಆಟವಾಡುತ್ತಿದ್ದ ಏಳೆಂಟು ವರ್ಷದ ಮಕ್ಕಳು. ಮಾರುದ್ದದ ಹಾವು ನೀರಿನಿಂದ ಹೊರ ಬಂದು ಶೆಡ್ ಹಿಂಬದಿಯ ಗೋಡೆ ಹೊಕ್ಕು ಮರೆಯಾಯಿತು. ವಿಷಕಾರಿ ಹಾವು, ನೀರಲ್ಲಿ ಮುಳುಗುವ ಭೀತಿಯ ಅರಿವಿಲ್ಲದ ಮಕ್ಕಳು ಆಟದಲ್ಲಿ ನಿರತವಾಗಿದ್ದರೆ, ಪೋಷಕರು ದೂರದಲ್ಲಿ ಎಲ್ಲೋ ಕೂಲಿ ಕೆಲಸದಲ್ಲಿ ತೊಡಗಿದ್ದರು...

ಈ ದೃಶ್ಯ ಕಂಡು ಬಂದಿದ್ದು ಹುಣಸಗಿ ತಾಲ್ಲೂಕಿನ ಸಣ್ಣ ಗ್ರಾಮವಾದ ಬಲಶೆಟ್ಟಿಹಾಳದಲ್ಲಿನ ಅತಿಕ್ರಮಣವಾಗಿ ರುವ ಕೆರೆಯ ಅಂಗಳದಲ್ಲಿ. ದಶಕಗಳ ಹಿಂದೆ ಅಕ್ಷಯ ಪಾತ್ರೆಯಂತಿದ್ದ ಬಲಶೆಟ್ಟಿಹಾಳದ ಕೆರೆಯ ನೀರು ಇದೀಗ ಕಪ್ಪು ಬಣ್ಣಕ್ಕೆ ತಿರುಗುತ್ತಿದೆ. ರಕ್ಷಿಸಬೇಕಾದ ಜನಪ್ರತಿನಿಧಿ, ಅಧಿಕಾರಿಗಳು ಕೆರೆಯ ಅಂಗಳದಲ್ಲಿಯೇ ಶೌಚಾಲಯ, ಸೆಪ್ಟಿಕ್ ಟ್ಯಾಂಕ್ ಕಟ್ಟಿಸಿ ಮತ್ತೊಂದು ಶೌಚಾಲಯ ನಿರ್ಮಾಣಕ್ಕೂ ಅಣಿಯಾಗಿದ್ದಾರೆ!

ಬತ್ತಿ ಹೋದ ಕೆರೆ ಅಂಗಳದಲ್ಲಿ ಆಶ್ರಯ ಯೋಜನೆಯ ಮನೆಗಳು ಎದ್ದುನಿಂತಿವೆ. ಸರ್ಕಾರವೇ ವಿದ್ಯುತ್, ನಲ್ಲಿ ಸಂಪರ್ಕ ಕಲ್ಪಿಸಿ, ಚರಂಡಿ ಇಲ್ಲದ ಅರೆಬರೆ ರಸ್ತೆಯನ್ನೂ ನಿರ್ಮಿಸಿದೆ. ಇತ್ತ ಅಧಿಕಾರಿಗಳು, 'ಜನರು ಮೂರು ದಶಕಗಳಿಂದ ವಾಸವಾಗಿದ್ದರಿಂದ ಕೆರೆ ಒತ್ತುವರಿ ತೆರವು ಸಾಧ್ಯವಿಲ್ಲ' ಎಂದು ಸರ್ಕಾರಕ್ಕೆ ವರದಿ ಒಪ್ಪಿಸಿ ಕೈಕಟ್ಟಿ ಕುಳಿತಿದ್ದಾರೆ. ಇದರ ನಡುವೆಯೇ ಇಲ್ಲಿನ ನಿವಾಸಿಗಳು ಕಲ್ಲು, ತ್ಯಾಜ್ಯವನ್ನು ಕೆರೆಗೆ ಸುರಿದು ತಮ್ಮ ಜಾಗವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತಿದ್ದಾರೆ. ಈ ಬಗ್ಗೆ ಹಿರಿಯ ಅಧಿಕಾರಿಯನ್ನು ಪ್ರಶ್ನಿಸಿದರೆ, 'ಬೆಂಗಳೂರಿನ ಧರ್ಮಾಂಬುಧಿ ಕೆರೆ ಅಂಗಳದಲ್ಲಿ ಬಸ್ ನಿಲ್ದಾಣವನ್ನೇ ಕಟ್ಟಿಲ್ಲವಾ' ಎಂದು ಅತಿಕ್ರಮಣವನ್ನು ಸಮರ್ಥಿಸಿಕೊಳ್ಳುತ್ತಾರೆ.

ಬಲಶೆಟ್ಟಿಹಾಳ ಗ್ರಾಮದಲ್ಲಿ ನೆಲೆ ಇಲ್ಲದವರು ಕೆರೆಯಂಗಳ ಒತ್ತುವರಿ ಮಾಡಿಕೊಂಡಿದ್ದರೆ, ಸಾಂಸ್ಕೃತಿಕ ನಗರಿ ಮೈಸೂರಿನ ಕೆರೆಗಳ ಕಥೆ ಇದಕ್ಕೆ ತದ್ವಿರುದ್ಧವಾಗಿದೆ. ಆ ನಗರದಲ್ಲಿರುವ ದೊಡ್ಡಕೆರೆ, ಜೀವರಾಯನಕಟ್ಟೆ ಹಾಗೂ ಮಳಲವಾಡಿ ಕೆರೆಗಳ ಒಡಲನ್ನು 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ'ವೇ ಸಿ.ಎ ನಿವೇಶನಗಳನ್ನಾಗಿ ಬದಲಿಸಿ ಸಂಘ–ಸಂಸ್ಥೆಗಳಿಗೆ ಹಂಚಿದೆ. ಕಟ್ಟಡ ತ್ಯಾಜ್ಯ ವಿಲೇವಾರಿ ಘಟಕ ಇನ್ನೂ ತೆರೆಯದ್ದರಿಂದ ಕಟ್ಟೆ–ಕುಂಟೆಗಳು ರಿಯಲ್ ಎಸ್ಟೇಟ್ ಒತ್ತುವರಿದಾರರ ಪಾಲಾಗುತ್ತಿವೆ. ಕೆರೆಗಳ ಮೇಲೆ ಇದ್ದ ಗೋಮಾಳಗಳು ಬಡಾವಣೆಗಳಾದ್ದರಿಂದ ನೀರ ಹರಿವು ಕಡಿಮೆಯಾಗಿ ಹೂಳು ತುಂಬುತ್ತಿದೆ. ಕಟ್ಟಡ ತ್ಯಾಜ್ಯ ತುಂಬಿಸುವ ಸಂಘ–ಸಂಸ್ಥೆಯವರು ಕೆರೆ ಭೂಮಿಯನ್ನು ಆಕ್ರಮಿಸಿಕೊಳ್ಳುತ್ತಿದ್ದಾರೆ.

ಇನ್ನು ಹೈದರಾಬಾದ್ ನಿಜಾಮನ ಕಾಲದಲ್ಲಿ ರಾಯಚೂರಿನ ದಾಹ ತಣಿಸಲು ಕಟ್ಟಿದ್ದ ಮಾವಿನ ಕೆರೆಯನ್ನು ಒತ್ತುವರಿದಾರರು ತಿಂದು ಮುಕ್ಕಿದ್ದಾರೆ. ಕೆರೆಯ ಸುತ್ತಲೂ ಬಡಾವಣೆ ನಿರ್ಮಿಸಿ ನೂರಾರು ಮನೆಗಳನ್ನು ಕಟ್ಟಲಾಗಿದೆ. ಚರಂಡಿಯ ಕೊಳಚೆ ಕೆರೆಯಂಗಳವನ್ನು ಸೇರಿ ಗಬ್ಬು ವಾಸನೆ ಹಬ್ಬುತ್ತಿದ್ದರೂ ಅಧಿಕಾರಿಗಳು 'ಜಾಣ ಕುರುಡು' ಪ್ರದರ್ಶಿಸುತ್ತಿದ್ದಾರೆ. 'ಕಲ್ಯಾಣ'ದ ಹೆಬ್ಬಾಗಿಲಾದ ಕಲಬುರಗಿಯಲ್ಲಿ ಪ್ರತಿ ಚದರ ಅಡಿ ಜಾಗವೂ ಸಾವಿರಾರು ರೂಪಾಯಿ ಬೆಲೆ ಬಾಳುತ್ತದೆ. ಕೇವಲ ಆರೇಳು ತಿಂಗಳ ಹಿಂದೆಯೇ ಲೋಕಾಯುಕ್ತರು ಸರ್ವೆ ನಂಬರ್ ಕೊಟ್ಟು ಅತಿಕ್ರಮಿಸಿ ಕೊಂಡಿರುವ ಕೆರೆಗಳ ತೆರವಿಗೆ ಸೂಚಿಸಿದ್ದರು. 'ಕೆರೆಗಳು ಒತ್ತುವರಿ ಯಾಗಿದ್ದು ದಾಖಲೆಗಳಲ್ಲಿದೆ (6 ಕೆರೆಗಳ 50 ಎಕರೆ 20 ಗುಂಟೆ). ಆದರೆ, ಸರ್ವೆ ನಂಬರ್‌ಗಳಲ್ಲಿ ಕೆರೆಗಳು ಇರುವ ಬಗ್ಗೆ ಪೂರಕವಾದ ದಾಖಲೆಗಳಿಲ್ಲ' ಎಂದು ಅಧಿಕಾರಿಗಳು ಅಸಹಾಯಕತೆ ಪ್ರದರ್ಶಿಸುತ್ತಿದ್ದಾರೆ.

ಇದು ಕುಗ್ರಾಮ ಬಲಶೆಟ್ಟಿಹಾಳ, ಸಾಂಸ್ಕೃತಿಕ ನಗರಿ ಮೈಸೂರು, ವಿಭಾಗೀಯ ಕೇಂದ್ರ ಕಲಬುರಗಿ, ಕಲ್ಲು ಬೆಟ್ಟಗಳಿಂದ ಆವೃತ್ತವಾದ ರಾಯಚೂರಿನ ಕೆರೆಗಳು ಮಾತ್ರವಲ್ಲ; ರಾಜ್ಯದ ಸಾವಿರಾರು ಕೆರೆಗಳು ಭೂಗಳ್ಳರ ಹಾವಳಿಗೆ ತತ್ತರಿಸಿವೆ. ನಗರ, ಪಟ್ಟಣಗಳಲ್ಲಿ ಬಲಾಢ್ಯರು ಕಾಯ್ದೆಗಳ ಬೇಲಿ ಹಾರಿ ಕೆರೆಯಂಗಳವನ್ನು ಆಪೋಶನ ತೆಗೆದುಕೊಂಡಿದ್ದರೆ, ಗ್ರಾಮೀಣ ಭಾಗದಲ್ಲಿ ನೆಲೆ ಇಲ್ಲದವರು ಗುಡಿಸಲು ಹಾಕಿಕೊಂಡು, ಕ್ರಮೇಣ ಮನೆಗಳನ್ನು ಕಟ್ಟಿಕೊಂಡು ಆಕ್ರಮಿಸಿಕೊಂಡಿದ್ದಾರೆ.


ಶತಮಾನಗಳ ಕಾಲ ಜನರ ಜೀವನಾಡಿಯಾಗಿದ್ದ ಕೆರೆಗಳು ಕೆಲವೇ ವರ್ಷಗಳಲ್ಲಿ ಮಾಯವಾಗಿ ಅಲ್ಲಿ ಭವ್ಯವಾದ ಕಟ್ಟಡಗಳು ಎದ್ದುನಿಂತಿವೆ. ಸಾಮೂಹಿಕ ಶ್ರಮದಿಂದ ನಿರ್ಮಿಸಲಾಗಿದ್ದ ಕೆರೆಗಳಲ್ಲಿ ಅಭಿವೃದ್ಧಿ, ಸೌಕರ್ಯಗಳ ನೆಪದಲ್ಲಿ ಬಸ್ ನಿಲ್ದಾಣ, ಕ್ರೀಡಾಂಗಣ, ಶಾಲಾ, ವಾಣಿಜ್ಯ ಸಂಕೀರ್ಣಗಳು, ಶೌಚಾಲಯಗಳ ನಿರ್ಮಾಣ ಆಗುತ್ತಿದೆ.

ಕೆರೆಗಳ ಸಂರಕ್ಷಣೆ, ಸರ್ವಾಂಗೀಣ ಅಭಿವೃದ್ಧಿಗಾಗಿ ಜಿಲ್ಲಾ ಕೆರೆ ಸಂರಕ್ಷಣಾ ಸಮಿತಿಯನ್ನು ರಚಿಸಲಾಗಿದೆ.

2

ರಾಜ್ಯದ ಕೆರೆಗಳ ಸ್ಥಿತಿಗತಿ

- **41,849** ಒಟ್ಟು ಕೆರೆಗಳು
- **7,78,383** ಎಕರೆ ಕೆರೆಗಳ ಒಟ್ಟು ವಿಸ್ತೀರ್ಣ
- **40,926** ಅಳತೆಯಾದ ಕೆರೆಗಳು
- **923** ಅಳೆಯಬೇಕಿರುವ ಕೆರೆಗಳು
- **15,048** ಒತ್ತುವರಿ ಆಗಿರುವ ಕೆರೆಗಳು
- **45,051** ಎಕರೆ ಕೆರೆ ಅಂಗಳ ಒತ್ತುವರಿ
- **8,536** ಒತ್ತುವರಿ ತೆರವುಗೊಳಿಸಿರುವ ಕೆರೆಗಳು
- **31,684** ಎಕರೆ ಕೆರೆಯಂಗಳದ ಒತ್ತುವರಿ ತೆರವು
- **6,512** ಒತ್ತುವರಿ ತೆರವು ಬಾಕಿ ಇರುವ ಕೆರೆಗಳು
- **13,367** ಎಕರೆ ಒತ್ತುವರಿ ತೆರವಿಗೆ ಬಾಕಿ


ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಬಲಶೆಟ್ಟಿಹಾಳ ಗ್ರಾಮದ ಕೆರೆ ಅಂಗಳದಲ್ಲಿನ ಮನೆಗಳು

ಲೋಕಾಯುಕ್ತದಲ್ಲಿ 100ಕ್ಕೂ ಹೆಚ್ಚು ಸ್ವಯಂಪ್ರೇರಿತ ದೂರು

'ಲೋಕಾಯುಕ್ತ ಪ್ರತಿಯೊಂದು ಜಿಲ್ಲೆಗಳ ಕೆರೆಗಳ ಮೇಲೆ ನಿಗಾವಹಿಸಿದ್ದು, ಕೆರೆಯಂಗಳ ಒತ್ತುವರಿ ಸಂಬಂಧ 100ಕ್ಕೂ ಹೆಚ್ಚು ಸ್ವಯಂಪ್ರೇರಿತ ದೂರು (ಸುಮೊಟೊ ಕೇಸ್) ದಾಖಲಿಸಿಕೊಂಡಿದೆ. ಕೆರೆ ಸರ್ವೆ ಮಾಡಿ ಒತ್ತುವರಿಯನ್ನು ಸಂಪೂರ್ಣವಾಗಿ ತೆರವುಗೊಳಿಸಿ, ಪುನಶ್ಚೇತನಗೊಳಿಸಿ ಅಭಿವೃದ್ಧಿಪಡಿಸುವವರೆಗೆ ಸುಮೊಟೊ ಕೇಸ್ ರದ್ದಾಗುವುದಿಲ್ಲ' ಎನ್ನುತ್ತಾರೆ ಲೋಕಾಯುಕ್ತ ಹಿರಿಯ ನ್ಯಾಯಮೂರ್ತಿಗಳ ಕಾರ್ಯದರ್ಶಿ ಕೆ. ಶ್ರೀನಾಥ.

'ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿಯವರು ಕೆರೆಯಂಗಳವನ್ನು ಒತ್ತುವರಿದಾರರಿಗೆ ಹಕ್ಕುಪತ್ರಗಳನ್ನು ಕೊಟ್ಟಿದ್ದಾರೆ. ಕೆಲವೆಡೆ ಸರ್ಕಾರವೇ ಕೆರೆಯ ಜಾಗವನ್ನು ಮಂಜೂರು ಮಾಡಿ, ರಸ್ತೆಗಳನ್ನು ನಿರ್ಮಿಸಿ, ಸರ್ಕಾರಿ ಕಟ್ಟಡ, ಅಂಗನವಾಡಿ ಕೇಂದ್ರಗಳನ್ನು ಕಟ್ಟಿಸಿದೆ. ಸ್ಥಳೀಯ ಸಂಸ್ಥೆಗಳು ಆ ಕಟ್ಟಡಗಳಿಗೆ ತೆರಿಗೆ ವಿಧಿಸುತ್ತಿವೆ. ಹೀಗಾಗಿ, ನಗರ ಮತ್ತು ಪಟ್ಟಣ ವ್ಯಾಪ್ತಿಯಲ್ಲಿ ತೆರವು ಕಷ್ಟವಾಗಿದೆ. ಗ್ರಾಮೀಣ ಭಾಗದಲ್ಲಿ ರೈತರು ಕೆರೆ ಅಂಗಳದಲ್ಲಿ ಬಿತ್ತನೆ ಪ್ರದೇಶವನ್ನು ತೆರವು ಮಾಡಿದ್ದನ್ನು ಅಧಿಕಾರಿಗಳು ವರದಿ ಸಲ್ಲಿಸುತ್ತಿದ್ದಾರೆ. ಶಾಶ್ವತವಾಗಿ ಮನೆಗಳನ್ನು ಕಟ್ಟಿಸಿಕೊಂಡವರು ನ್ಯಾಯಾಲಯದ ಮೊರೆ ಹೋಗಿದ್ದು, ಆ ಪ್ರಕರಣಗಳು ಖುಲಾಸೆ ಆಗುವವರೆಗೆ ಏನೂ ಮಾಡುವಂತಿಲ್ಲ' ಎನ್ನುತ್ತಾರೆ.


ಭೂದಾಹಕ್ಕೆ ಕೆರೆಗಳ ಆಪೋಶನ



ಸಂಪಂಗಿ ಕೆರೆಯನ್ನು ಆಪೋಶನ ತೆಗೆದುಕೊಂಡು ನಿರ್ಮಿಸಿರುವ ಬೆಂಗಳೂರಿನ ಕಂಠೀರವ ಕ್ರೀಡಾಂಗಣ ಪ್ರಜಾವಾಣಿ ಚಿತ್ರ: ಕೃಷ್ಣಕುಮಾರ್ ಪಿ.ಎಸ್

ಜಿಲ್ಲಾವಾರು ಕೆರೆಗಳ ಒತ್ತುವರಿ ತೆರವು ಬಾಕಿ

ಕೆರೆಗಳು | ವಿಸ್ತೀರ್ಣ(ಎಕರೆಗಳಲ್ಲಿ)



6,512 ಒಟ್ಟು ಕೆರೆಗಳು **13,367** ವಿಸ್ತೀರ್ಣ

ಆಧಾರ: ವಿಧಾನ ಪರಿಷತ್ತಿನಲ್ಲಿ ಸಣ್ಣ ನೀರಾವರಿ ಸಚಿವರು ನೀಡಿದ ಲಿಖಿತ ಉತ್ತರ

ಮಂಗಳೂರಿನ ಗುಜ್ಜರ ಕೆರೆಯ ಪವಿತ್ರ ತೀರ್ಥಕ್ಕೆ ಕೊಳಚೆ ನೀರು ನಿರಂತರವಾಗಿ ಬಂದು ಸೇರುತ್ತಿದೆ. ಇದನ್ನು ತಪ್ಪಿಸಿ, ಜಲ ಶುದ್ಧೀಕರಣಗೊಳಿಸಿದರೆ, ಬೇಸಿಗೆಯಲ್ಲಿ ನಗರದ ಜಲಬವಣೆ ತೀರಿಸಬಹುದು
ಪಿ.ನೇಮು ಕೊಟ್ಟಾರಿ, ಗುಜ್ಜರಕೆರೆ ತೀರ್ಥ ಸಂರಕ್ಷಣಾ ವೇದಿಕೆಯ ಪ್ರಧಾನ ಕಾರ್ಯದರ್ಶಿ, ಮಂಗಳೂರು

ಒಳಚರಂಡಿಯ ಕೊಳಚೆ ನೀರು ಕೆರೆ ಹಾಗೂ ನಾಲೆಗಳ ಒಡಲು ಸೇರುತ್ತಿದೆ. ಮಲ, ಮೂತ್ರ ವಿಸರ್ಜನೆಯ ನೀರನ್ನು ಕೆರೆ, ಕಾಲುವೆಗಳಿಗೆ ಹರಿಸಲಾಗುತ್ತಿದೆ. ಮೀನುಗಾರಿಕೆ ಇಲಾಖೆಯವರೇ ಕೆರೆಯನ್ನು ಬಳಸಿಕೊಳ್ಳುತ್ತಿದ್ದರೂ ಅದರ ಸಂರಕ್ಷಣೆ ನಡೆದಿಲ್ಲ
ಮಂಗಲ ಎಂ. ಯೋಗೇಶ್, ಪರಿಸರ ಸಂಸ್ಥೆ ಅಧ್ಯಕ್ಷ, ಮಂಡ್ಯ

ಮೈಸೂರಿನ ಕುಕ್ಕರಹಳ್ಳಿ ಕೆರೆಗೆ ಮಹಾ ರಾಜಕಾಲುವೆಯಾಗಿದ್ದ ಪಾರಂಪರಿಕ ಪೂರ್ಣಯ್ಯ ನಾಲೆಯನ್ನೇ ಇಲ್ಲವಾಗಿಸಲಾಗುತ್ತಿದೆ. ಜಯನಗರದಲ್ಲಿದ್ದ 25 ಎಕರೆಯ ಮಳಲವಾಡಿ ಕೆರೆ ಮಾಯವಾಗಿದೆ.
ಯು.ಎನ್.ರವಿಕುಮಾರ್, ಪರಿಸರ ತಜ್ಞ, ಮೈಸೂರು

ಬೇರೆ ಕಾಮಗಾರಿಗೆಂದು ಕೆರೆ ಮಣ್ಣು ತುಂಬಿಕೊಂಡಿದ್ದಾರೆ. ನೀರು ಬಳಕೆದಾರರ ಸಂಘಗಳು ಕ್ರಿಯಾಶೀಲವಾಗಿಲ್ಲ. ನೀರು ಬೇಕು ಎನ್ನುವುದಾಗಲೀ, ಕೆರೆ ಕಟ್ಟೆ ಸಂರಕ್ಷಣೆಗೆ ಇಲ್ಲಿವರೆಗೂ ದನಿ ಎತ್ತಿಲ್ಲ
ಎನ್.ಎಲ್.ಭರತ್‌ರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ, ಮಂಡ್ಯ

ಬಿಬಿಎಂಪಿ ಕೆರೆಗಳ ವಿವರ

202	ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಒಟ್ಟು ಕೆರೆಗಳು
159	ಕೆರೆಗಳ ಒತ್ತುವರಿ
8,51 ಎಕರೆ	ಒಟ್ಟು ಒತ್ತುವರಿ ತೆರವು ಬಾಕಿ
1,594	ಪ್ರಕರಣಗಳಲ್ಲಿ ರಾಜಕಾಲುವೆ ಒತ್ತುವರಿ
859.79 ಕಿ.ಮೀ	ಉದ್ದದ ರಾಜಕಾಲುವೆ
768	ಪ್ರಕರಣಗಳಲ್ಲಿ ಒತ್ತುವರಿ ತೆರವು ಬಾಕಿ

ಒಂದನೇ ಪುಟದಿಂದ...

ಜಲಮೂಲಗಳಿಗೆ ಸಂಬಂಧಿಸಿದ ಎಲ್ಲಾ ಇಲಾಖೆಗಳ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಲು ಜಿಲ್ಲಾಧಿಕಾರಿಯನ್ನೇ ಅದರ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಆಗಾಗ ಸಭೆಗಳನ್ನು ನಡೆಸಿ, ಕೆರೆಗಳ ಮೇಲೆ ಕಣ್ಗಾವಲು ಇರಿಸುವುದು ಸಮಿತಿಯ ಕೆಲಸ.

ಆದರೆ, ನೂರಾರು ಕೆರೆಗಳು, ಸಾವಿರಾರು ಎಕರೆಯ ಕೆರೆಯಂಗಳ ಒತ್ತುವರಿಯಾಗಿರುವ ಜಿಲ್ಲೆಗಳಲ್ಲಿ ನಿಯಮಿತವಾಗಿ ಈ ಸಮಿತಿಯ ಸಭೆಗಳೇ ನಡೆಯುತ್ತಿಲ್ಲ. ಶಾಸಕಿ ಕನೀಜ್ ಫಾತಿಮಾ ಅವರಿಗೆ ಸರ್ಕಾರವೇ ಸದನದಲ್ಲಿ ಲಿಖಿತ ಉತ್ತರದಲ್ಲಿ ತಿಳಿಸಿರುವ ಮಾಹಿತಿ ಪ್ರಕಾರ, ನೂರಾರು ಕೆರೆಗಳು ಒತ್ತುವರಿಯಾಗಿರುವ ಜಿಲ್ಲೆಗಳಲ್ಲಿ 2013ರಿಂದ 2025ರ ವರೆಗೆ ಬೆರಳೆಣಿಕೆಯಷ್ಟು ಸಮಿತಿ ಸಭೆಗಳು ನಡೆದಿವೆ. ಹಾಸನ (4), ಕೋಲಾರ (4), ಶಿವಮೊಗ್ಗ (3), ಚಿಕ್ಕಬಳ್ಳಾಪುರ(1), ರಾಮನಗರ (1), ಬೆಂಗಳೂರು (1), ಧಾರವಾಡ (4), ಮಂಡ್ಯ (7), ಚಿಕ್ಕಮಗಳೂರು (2), ತುಮಕೂರು (1) ಸಭೆ ನಡೆದಿದೆ. ಇದು ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಕೆರೆಗಳ ನಿರ್ವಹಣೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಒಳಗೊಳ್ಳುವ ದೃಷ್ಟಿಯಿಂದ ಪ್ರತಿ ಜಿಲ್ಲೆಗಳಲ್ಲಿ ಕೆರೆಗಳ ಸಂಖ್ಯೆಗಳಿಗೆ ಅನುಗುಣವಾಗಿ ಕೆರೆ ಬಳಕೆದಾರರ ಸಂಘಗಳನ್ನು ರಚಿಸಲಾಗುತ್ತಿದೆ. ಆದರೆ, ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರವು ತಾನು ಹಾಕಿಕೊಂಡ ಗುರಿಗಳ ಪೈಕಿ ಅರ್ಧದಷ್ಟು ರಚಿಸಲು ಶಕ್ತವಾಗುತ್ತಿದೆ. ಅಂದರೆ 2024–25ರ ದಾಖಲೆ ಪ್ರಕಾರ 2,076 ಕೆರೆಗಳ ಪೈಕಿ 1,131 ಕೆರೆಗಳಿಗೆ ಸಂಘ ರಚನೆಯಾಗಿದೆ. 'ಒಂದು ಕಾಲದಲ್ಲಿ ಸಾಮೂಹಿಕ ಶ್ರಮದಿಂದ ನಿರ್ಮಾಣವಾದ ಕೆರೆಗಳು ಈಗ ತಮ್ಮ ಜೀವಂತಿಕೆ ಕಳೆದುಕೊಳ್ಳುತ್ತಿದ್ದರೂ, ಹೊಣೆಗಾರಿಕೆ ವಹಿಸಬೇಕಾದ ಜನ ಸಮುದಾಯವು ಕೆರೆ ಸಂರಕ್ಷಣೆಯ ಸಂಘಕ್ಕೆ ಕೈಜೋಡಿಸದೆ ಇರುವುದು ಶೋಚನೀಯ' ಎನ್ನುತ್ತಾರೆ ಪರಿಸರ ತಜ್ಞರು.

ಬೆಂಗಳೂರು ಕೆರೆ ಒತ್ತುವರಿ ತೆರವು ಬಹುತೇಕ ಸ್ಥಗಿತ

ಬೆಂಗಳೂರಿನಲ್ಲಿ ಒಂದೂವರೆ ವರ್ಷದಿಂದ ಕೆರೆಗಳ ಅಭಿವೃದ್ಧಿ ಹಾಗೂ ಒತ್ತುವರಿ ತೆರವು ಕಾರ್ಯಾಚರಣೆ ಬಹುತೇಕ ಸ್ಥಗಿತಗೊಂಡಿದೆ. ಬಿಬಿಎಂಪಿಯಾಗಿದ್ದಾಗ 2023ರಲ್ಲಿ ಹೈಕೋರ್ಟ್‌ಗೆ ಕ್ರಿಯಾಯೋಜನೆ ನೀಡಿದ್ದ ಅಧಿಕಾರಿಗಳು, 175 ದಿನಗಳಲ್ಲಿ ಎಲ್ಲ ಕೆರೆಗಳು ಹಾಗೂ ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸುವುದಾಗಿ ತಿಳಿಸಿದ್ದರು. ಅದರಂತೆ ತೆರವು ಕಾರ್ಯಾಚರಣೆ ನಡೆದಿದ್ದರೆ, 2024ರ ಮಾರ್ಚ್ ವೇಳೆಗೆ ಬೆಂಗಳೂರು ಒತ್ತುವರಿ ಮುಕ್ತ ನಗರವಾಗುತ್ತಿತ್ತು. ಆದರೆ, ನಂತರದ ದಿನಗಳಲ್ಲಿ ಹೆಸರಿಗಷ್ಟೇ ಒಂದೆರಡು ಕಡೆ ತೆರವು ಕಾರ್ಯಾಚರಣೆಗಳಾದವು. ಅದಾದ ನಂತರ ಜಿಲ್ಲಾಡಳಿತಕ್ಕೆ ಪತ್ರ ಬರೆದ ಬಿಬಿಎಂಪಿ ಅಧಿಕಾರಿಗಳು, ಒತ್ತುವರಿಯನ್ನು ಗುರುತಿಸಿ ತೆರವಿಗೆ ತಹಶೀಲ್ದಾರ್ ಆದೇಶ ನೀಡಬೇಕು ಎಂದು ಕೋರಿದರು.

ರಾಜಕಾಲುವೆ ಬಫರ್ ವಲಯವನ್ನು ಕಡಿತಗೊಳಿಸಲಾಗಿದ್ದು, ಬೆಂಗಳೂರಿನಲ್ಲಿ 300 ಕಿಲೋಮೀಟರ್ ಉದ್ದದ ರಾಜಕಾಲುವೆಗಳ ಬಫರ್ ವಲಯದಲ್ಲಿ ಸರ್ವಿಸ್ ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಇದರಿಂದ ರಾಜಕಾಲುವೆಗಳ ಅಕ್ಕಪಕ್ಕದ ಒತ್ತುವರಿಯನ್ನು ತೆರವುಗೊಳಿಸುವ ಉದ್ದೇಶವಿದ್ದರೂ ಸರ್ವಿಸ್ ರಸ್ತೆ ನಿರ್ಮಾಣವಾಗುತ್ತಿರುವುದು ಒತ್ತುವರಿ ಇಲ್ಲದ ಪ್ರದೇಶಗಳಲ್ಲಿ ರಾಜಕಾಲುವೆಗಳ ಒತ್ತುವರಿ ತೆರವಾಗದ್ದರಿಂದ, ಮಳೆಯ ಸಂದರ್ಭದಲ್ಲಿ ಕೆರೆಗಳಿಗೆ ನೀರು ಹರಿಯದೆ ಬಡಾವಣೆಗಳು ಜಲಾವೃತವಾಗುತ್ತಿವೆ.

'ಬೇಲಿ, ಟ್ರೆಂಚ್ ಬದಲು ಗಿಡಗಳ ಮೊರೆ'

'ಸಮೀಕ್ಷೆಯಾದ, ಒತ್ತುವರಿ ತೆರವಾದ ಕೆರೆಗಳ ಗಡಿಗಳ ಸುತ್ತ ಟ್ರೆಂಚ್ ನಿರ್ಮಾಣ, ಬೇಲಿ ಹಾಕುವುದು ಆರ್ಥಿಕವಾಗಿ ಹೊರೆಯಾಗುತ್ತದೆ. ಈಗ, ಕೆರೆಗಳ ಅಭಿವೃದ್ಧಿಗೆ ಅನುದಾನ ಬರುತ್ತಿಲ್ಲ. ಇನ್ನು ಬೇಲಿ ಹಾಕುವುದು ಕಷ್ಟ. ಕೆರೆಯ ಗಡಿ ಗುರುತಿಸಿ ಒತ್ತುವರಿ ತಡೆಗೆ ಸಸಿಗಳನ್ನು ನೆಟ್ಟು ಬೆಳೆಸುವ ಕಾರ್ಯಕ್ಕೆ ಮುಂದಾಗಿದ್ದು, ಈ ಬಗ್ಗೆ ಜಿಲ್ಲಾ ಪಂಚಾಯಿತಿ ಸಿಇಒಗೆ ಪ್ರಸ್ತಾವನೆ ಸಲ್ಲಿಕೆ ಮಾಡಲಾಗುವುದು' ಎನ್ನುತ್ತಾರೆ ಸಣ್ಣ ನೀರಾವರಿ ಇಲಾಖೆಯ ಕಲಬುರಗಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ನಾಗನಗೌಡ.

'ಕೆರೆ ಅಂಗಳದಲ್ಲಿ ಸಸಿಗಳನ್ನು ನೆಡುವಂತೆ ಜಿಲ್ಲಾ ಪಂಚಾಯಿತಿ ಆದೇಶ ಹೊರಡಿಸಿ, ನರೇಗಾದಡಿ ಸಸಿಗಳನ್ನು ನೆಡಬೇಕು. ನಾವು ಸಹ ಬೇರೆ–ಬೇರೆ ಜಾತಿಯ ಸಸಿಗಳನ್ನು ಕೊಡುವಂತೆ ದರಪಟ್ಟಿ ಪಡೆದು ತೋಟಗಾರಿಕೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುತ್ತೇವೆ' ಎಂದರು.

ಕೆರೆ ಒತ್ತುವರಿ ತೆರವು, ಅಭಿವೃದ್ಧಿಯ ಕಗ್ಗಂಟು

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಒತ್ತುವರಿಯಾದ ಕೆರೆಗಳನ್ನು ಗುರುತಿಸಿ, ವ್ಯಾಪ್ತಿ ನಿಗದಿ ಮಾಡಿ, ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ. ಆದರೆ, ಈ ಪ್ರಕ್ರಿಯೆಗೆ ವೇಗ ಸಿಗುತ್ತಿಲ್ಲ. ಕೆರೆಗಳಲ್ಲಿನ ನೀರು ಖಾಲಿಯಾದಾಗ ರೈತರು, ಆ ಜಾಗದಲ್ಲಿ ಬೆಳೆ ಬೆಳೆಯುತ್ತಾರೆ. ಕೆರೆಯಲ್ಲಿ ನೀರು ಸಂಗ್ರಹಗೊಂಡಾಗ ಒತ್ತುವರಿ ಮಾಡುವುದಿಲ್ಲ. ಹಲವು ವರ್ಷಗಳಿಂದ ಕೆರೆಯ ಜಾಗ ಒತ್ತುವರಿ ಮಾಡಿಕೊಂಡ ರೈತರಿಗೆ ಅರಿವು ಮೂಡಿಸಿ, ಕೆರೆ ಸಂರಕ್ಷಣೆ ಮಾಡಲಾಗುತ್ತಿದೆ ಎಂಬುದು ಅಧಿಕಾರಿಗಳ ಹೇಳಿಕೆ. ಆದರೆ, ಭೂಗಳ್ಳರು ಕಬಳಿಸಿದ ಕೆರೆಯ ಜಾಗದ ಬಗ್ಗೆ ಇವರು ಮಾತನಾಡುವುದೇ ಇಲ್ಲ ಎಂಬುದು ರೈತ ಮುಖಂಡರು, ಪರಿಸರ ಪ್ರೇಮಿಗಳ ಆರೋಪ.

'ಧಾರವಾಡ ಜಿಲ್ಲೆಯ ನಗರ ಹಾಗೂ ಗ್ರಾಮೀಣ ಪ್ರದೇಶದ ವಿವಿಧೆಡೆ ಕೆರೆಯ ಜಾಗದಲ್ಲಿ ಈ ಹಿಂದೆಯೇ ಕಟ್ಟಡ, ರಸ್ತೆ ನಿರ್ಮಿಸಲಾಗಿದೆ. ಕೆರೆಗಳ ಅಳತೆ ಮಾಡಿದಾಗ, ಒತ್ತುವರಿ ಆಗಿರುವುದು ಪತ್ತೆಯಾಗಿದೆ. ಕಾನೂನುಬದ್ಧವಾಗಿ ತೆರವಿಗೆ ಯತ್ನಿಸಲಾಗುತ್ತಿದೆ' ಎನ್ನುತ್ತಾರೆ ಹಿಂದಿನ ಜಿಲ್ಲಾಧಿಕಾರಿ ದಿವ್ಯಪ್ರಭು.

'ಸರ್ಕಾರಿ ಕೆರೆಗಳ ಒತ್ತುವರಿ ತೆರವು ಕುರಿತು ಜಿಲ್ಲಾಧಿಕಾರಿ ಅಧ್ಯಕ್ಷತೆಯ ಕೆರೆ ಅಭಿವೃದ್ಧಿ ಮತ್ತು ನಿರ್ವಹಣೆ ಸಮಿತಿ ಸಭೆಯಲ್ಲಿ ಗಂಭೀರ ಚರ್ಚೆ ನಡೆದಿತ್ತು. ಜಿಲ್ಲಾಧಿಕಾರಿ ಒತ್ತಡ ಹೇರಿದ ಪರಿಣಾಮ ತೆರವು ಕೆಲಸ ಚುರುಕುಗೊಂಡಿದೆ' ಎನ್ನುತ್ತಾರೆ ಉತ್ತರ ಕನ್ನಡದ ಭೂಮಾಪನ ಮತ್ತು ಭೂದಾಖಲೆಗಳ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ರಾಜು ಪೂಜಾರ.

ಸಪ್ತ ನದಿಗಳ ನಾಡಾದ ಬೆಳಗಾವಿ ಜಿಲ್ಲೆಯಲ್ಲಿ ಖಾಸಗಿಯವರಷ್ಟೇ ಅಲ್ಲದೆ, ಸರ್ಕಾರಿ ಯೋಜನೆಗಾಗಿಯೂ ಕೆರೆ ಜಾಗವನ್ನು ನಿಯಮಬಾಹಿರವಾಗಿ ಬಳಸಿರುವುದು ಕಂಡುಬಂದಿದೆ. 'ವಿವಿಧೆಡೆ ಕೆರೆ ಒತ್ತುವರಿ ಮಾಡಿ, ಮನೆಗಳು, ಅಂಗಡಿಗಳನ್ನು ಕಟ್ಟಿಕೊಂಡಿದ್ದಾರೆ. ಕೆಲವರು ಸರ್ಕಾರದ ಅನುಮತಿ ಪಡೆಯದೆ ದೇವಸ್ಥಾನ, ಸಮುದಾಯ ಭವನ ಮತ್ತು ಶಾಲೆಗಳನ್ನೂ ಕಟ್ಟಿದ್ದಾರೆ. ಒತ್ತುವರಿಯಲ್ಲಿ ಪ್ರಭಾವಿಗಳ ಪಾತ್ರವೂ ಇರುವುದನ್ನು ಅಲ್ಲಗಳೆಯಲಾಗದು' ಎಂದು ಅಧಿಕಾರಿಗಳು ಹೇಳುತ್ತಾರೆ.

ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಒತ್ತುವರಿಯಾಗಿದ್ದ ಕೆರೆಗಳನ್ನು ಖಾಸಗಿಯವರ ಹಿಡಿತದಿಂದ ತೆರವುಗೊಳಿಸುವ ಯತ್ನ ನಡೆದಿದೆ. ಕೆರೆಗಳ ಒತ್ತುವರಿ ತೆರವು ಗೊಳಿಸಲು ಇಲಾಖೆಯಲ್ಲಿ ಸಿಬ್ಬಂದಿ ಕೊರತೆ ಹಾಗೂ ರಾಜಕೀಯ ಒತ್ತಡ ಅಡ್ಡಿಯಾಗಿದೆ ಎಂದು ಹೆಸರು ಬಹಿರಂಗಗೊಳಿಸಲು ಇಚ್ಛಿಸದ ಭೂಮಾಪನ ಇಲಾಖೆಯ ಕಚೇರಿ ಸಿಬ್ಬಂದಿಯೊಬ್ಬರು ಹೇಳುತ್ತಾರೆ.

ಚಿತ್ರದುರ್ಗ ನಗರದ ಹೊರವಲಯದ ಮಲ್ಲಾಪುರ ಹಾಗೂ ಅರಸನ ಕೆರೆಗಳು ಸ್ವಚ್ಛತೆಯಿಂದ ದೂರವಾಗಿದ್ದು, ಅನೇಕ ವರ್ಷಗಳಿಂದಲೂ ತ್ಯಾಜ್ಯ ತುಂಬಿಕೊಂಡು ಗಬ್ಬು ನಾರುತ್ತಿವೆ. ಜಿಲ್ಲೆಯಲ್ಲೇ ಅತಿ ಹೆಚ್ಚು ಕಲುಷಿತಗೊಂಡಿರುವ ಕೆರೆ ಎಂಬ ಕುಖ್ಯಾತಿ ಪಡೆದಿವೆ.

ಹಾಸನದಲ್ಲಿ ಒತ್ತುವರಿಯ ಜೊತೆಗೆ ಜಲಮಾಲಿನ್ಯವೂ ನಡೆದಿದೆ. ನಗರದ ಸುತ್ತಲಿನ 26 ಕೆರೆಗಳ ನೀರನ್ನು ಪರೀಕ್ಷೆಗೆ ಒಳಪಡಿಸಿರುವ ಮಾಲಿನ್ಯ ನಿಯಂತ್ರಣ ಮಂಡಳಿ, 5 ಕೆರೆಗಳ ನೀರು ಬಳಕೆಗೆ ಯೋಗ್ಯವಾಗಿಲ್ಲ ಎನ್ನುವ ವರದಿ ನೀಡಿದೆ. ಬೇಸಿಗೆ ಹತ್ತಿರವಾಗುತ್ತಿದ್ದಂತೆ ಕುಡಿಯುವ ನೀರಿನ ಕೊರತೆ ಸಾಮಾನ್ಯ. ಈ ನಡುವೆ ಜನ–ಜಾನುವಾರುಗಳಿಗೆ ದಾಹ ತಣಿಸುವ ಕೆರೆಗಳೇ ಕಲುಷಿತವಾಗಿದ್ದು, ನಗರ ವ್ಯಾಪ್ತಿಯ ಕೆಲ ಕೆರೆಗಳ ನೀರು ಬಳಸದಂತೆ ಮಾಲಿನ್ಯ ನಿಯಂತ್ರಣ ಮಂಡಳಿ ಸೂಚನೆ ನೀಡಿದೆ.



ಕಳೆ ಗಿಡಗಳು ಬೆಳೆದು ಬಯಲಿನಂತೆ ಕಾಣುವ ಮಂಗಳೂರು ಸಮೀಪದ ಕಾವೂರು ಕೆರೆ

'ಒತ್ತುವರಿ ತೆರವು: ಮುಲಾಜಿಗೆ ಒಳಗಾಗಬಾರದು'

'ಕೆರೆಗಳನ್ನು ಉಳಿಸದಿದ್ದರೆ ಊರುಗಳು ಉಳಿಯುವುದಿಲ್ಲ. ಕೆರೆಗಳ ಒತ್ತುವರಿ ತೆರವು ಮಾಡುವಲ್ಲಿ ಸರ್ಕಾರ ಮುಲಾಜಿಗೆ ಒಳಗಾಗಬಾರದು. ರಾಜಕಾರಣಿಗಳೇ ಮುಂದೆ ನಿಂತು ತೆರವು ಮಾಡಿಸಬೇಕು. ಒಂದೆರಡು ಸಾವಿರ ಮತಗಳ ಆಸೆಗಾಗಿ ಒತ್ತುವರಿಯನ್ನು ಉಳಿಸಿಕೊಂಡರೆ ಮುಂದಿನ ಜನಾಂಗಕ್ಕೆ ಉತ್ತಮ ಪರಿಸರ ನೀಡಲು ಸಾಧ್ಯವಿಲ್ಲ. ಕೆರೆಗಳು ಉಳಿದು, ನೀರಿನ ಸಂಗ್ರಹ ಹೆಚ್ಚಾದರೆ, ಅಂತರ್ಜಲವೂ ವೃದ್ಧಿಯಾಗಿ ಕುಡಿಯಲು ಸೇರಿದಂತೆ ಪ್ರಾಣಿಪಕ್ಷಿಗಳಿಗೂ ನೀರು ಇರುತ್ತದೆ. ಇಲ್ಲದಿದ್ದರೆ ಮಹಾಕಂಟಕವನ್ನು ನಮ್ಮ ಮುಂದಿನ ಜನಾಂಗವನ್ನು ಆವರಿಸಿಕೊಳ್ಳಲಿದೆ' ಎಂದು ಎಚ್ಚರಿಸುತ್ತಾರೆ ಪರಿಸರ ತಜ್ಞ ಸುರೇಶ್ ಹೆಬ್ಳೀಕರ್.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ.
ಪೂರಕ ಮಾಹಿತಿ: ಸಂಧ್ಯಾ ಹೆಗಡೆ, ಆರ್. ಮಂಜುನಾಥ್, ಅಮೃತ್ ಕಿರಣ್ ಬಿ.ಎಂ., ಬಷೀರಅಹ್ಮದ್ ನಗಾರಿ, ಡಿ.ಎಂ. ಕುರ್ಕೆ ಪ್ರಶಾಂತ, ಕೆ.ಓಂಕಾರ ಮೂರ್ತಿ, ಮೋಹನ್ ಕುಮಾರ್ ಸಿ., ಗೋವರ್ಧನ ಎಸ್.ಎಸ್., ವೆಂಕಟೇಶ ಜಿ.ಎಚ್., ಯೋಗೇಶ್ ಎಂ.ಎನ್.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 10-5-2001

- **ರಕ್ಷಣಾ ಉತ್ಪಾದನೆ ಖಾಸಗಿ ವಲಯಕ್ಕೆ**

ನವದೆಹಲಿ, ಮೇ9 (ಪಿಟಿಐ): ರಕ್ಷಣಾ ತಯಾರಿಕಾ ಉದ್ಯಮವನ್ನು ಖಾಸಗಿ ವಲಯಕ್ಕೆ ತೆರೆಯುವಂತಹ ಪ್ರಮುಖ ನಿರ್ಧಾರವನ್ನು ಕೇಂದ್ರ ಸಂಪುಟ ಇಂದು ರಾತ್ರಿ ಕೈಗೊಂಡಿದೆ.

ರಕ್ಷಣಾ ಉಪಕರಣಗಳ ತಯಾರಿಕೆಯಲ್ಲಿ ಶೇ100ರಷ್ಟು ಖಾಸಗಿ ವಲಯದ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡುತ್ತಿರುವುದು ಸ್ವಾತಂತ್ರ್ಯೋತ್ತರ ಭಾರತದ ಇತಿಹಾಸದಲ್ಲಿ ಇದೇ ಮೊದಲು ಎಂದು ಸಂಸದೀಯ ವ್ಯವಹಾರ ಸಚಿವ ಪ್ರಮೋದ್ ಮಹಾಜನ್ ಇಲ್ಲಿ ವರದಿಗಾರರಿಗೆ ತಿಳಿಸಿದರು. ರಕ್ಷಣಾ ವಲಯದಲ್ಲಿ ಶೇ26ರಷ್ಟು ವಿದೇಶಿ ನೇರ ಹೂಡಿಕೆಗೂ ಅವಕಾಶ ಕಲ್ಪಿಸಲಾಗುವುದು ಎಂದರು.

75 ವರ್ಷಗಳ ಹಿಂದೆ

ಗುರುವಾರ, 10-5-1951

- **ಭಾರತಕ್ಕೆ ಐದು ವರ್ಷ ಅಕ್ಕಿ ನೀಡಲು ಬರ್ಮದ ಸಮ್ಮತಿ**

ನವದೆಹಲಿ, ಮೇ 9– ಬರ್ಮಕ್ಕೆ ಭಾರತದ ಆಹಾರ ಸಚಿವ ಶ್ರೀ ಕೆ.ಎಂ. ಮುನ್ಷಿಯವರ ನಿಯೋಗವು ಭಾರತ–ಬರ್ಮಗಳ ನಡುವೆ ಐದು ವರುಷದ ಒಪ್ಪಂದದಲ್ಲಿ ಫಲಪ್ರದಗೊಂಡಿದೆ.

ಈ ಕರಡು ಒಪ್ಪಂದಕ್ಕೆ ಸದ್ಯದಲ್ಲಿಯೇ ಸಹಿ ಬೀಳುವ ನಿರೀಕ್ಷೆಯಿದೆ. ಆಹಾರ ಸಚಿವರು ಇಂದು ಪಾರ್ಲಿಮೆಂಟ್ ಮಂದಿರದೊಳಗೆ ಪ್ರವೇಶಿಸಿದ ಸಭೆಯಲ್ಲಿ ಜಯ ಘೋಷವಾಯಿತು. ಮೇಲ್ಕಂಡ ಒಪ್ಪಂದದ ಪ್ರಕಾರ ಮುಂದಿನ ಆರು ತಿಂಗಳುಗಳಲ್ಲಿ ಬರ್ಮಾ ಸರ್ಕಾರವು ಭಾರತಕ್ಕೆ ಅಕ್ಕಿಯನ್ನು 240,000 ಟನ್‌ಗಳಷ್ಟು, ಅನಂತರ ವರ್ಷಕ್ಕೆ 350,000 ಟನ್‌ಗಳಂತೆ ಸರಬರಾಜು ಮಾಡಲಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

10 ಮೇ 2026 ಭಾನುವಾರ ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಅಷ್ಟಮಿ ಗಂ. 15-07 **ನಕ್ಷತ್ರ:** ಧನಿಷ್ಠ ಗಂ. 24-50 **ಯೋಗ:** ಬ್ರಹ್ಮ ಗಂ. 26-09 ಕರಣ: ಕೌಲವ ಗಂ. 15-07, ಮೇಷ ಮಾಸದ 27 ನೇ ದಿನ. **ಮಳೆ ನಕ್ಷತ್ರ:** ಭರಣಿ 4 ನೇ ಪಾದ. **ರಾಹುಕಾಲ:** ಸಾಯಂಕಾಲ 04-30 - 06-00 **ಸೂರ್ಯೋದಯ:** 06-09 **ಸೂರ್ಯಾಸ್ತ:** 06-44 **ಮುಸ್ಲಿಂ ದಿನಾಂಕ:** 22 ಜುಲ್ಕಾದಾ **ಅದೃಷ್ಟ ಸಂಖ್ಯೆ:** 4, 2

ಮೇಷ: ಸಹೋದರರಲ್ಲಿನ ಕೋರ್ಟು ವ್ಯವಹಾರಗಳನ್ನು ರಾಜಿ ಮೂಲಕ ಬಗೆ ಹರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು ಒಳ್ಳೆಯದು. ಹೊಸ ಉದ್ಯೋಗಕ್ಕಾಗಿ ಪ್ರಯತ್ನ ನಡೆಸಲು ಈ ದಿನ ಶುರು ಮಾಡಿದಲ್ಲಿ ಫಲ ನೀಡಲಿದೆ.

ವೃಷಭ: ವ್ಯವಹಾರದಲ್ಲಿನ ಹೆಚ್ಚಿನ ಸಮಸ್ಯೆಗಳಿಗೆ ಈ ದಿನ ಉತ್ತಮ ರೀತಿಯಲ್ಲಿ ಪರಿಹಾರ ದೊರೆಯಲಿದೆ. ಎತ್ತರದಲ್ಲಿ ಹತ್ತಿ ಕೆಲಸ ಮಾಡುವವರು ಹಾಗು ಸಾಹಸಿ ಪ್ರವೃತ್ತಿಯವರು ಜಾಗ್ರತರಾಗಿರಿ. ಸ್ವ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಿರಿ.

ಮಿಥುನ: ಜೀವನದಲ್ಲಿ ಬೇರೆಯವರ ಹಿಡಿತದಿಂದ ಬಳಲಿರುವ ನಿಮಗೆ ಆ ಸಮಸ್ಯೆಯಿಂದ ಹೊರಬರುವ ಅವಕಾಶಗಳು ಸಿಗಲಿವೆ. ಸ್ವತಂತ್ರ ತೀರ್ಮಾನ ತೆಗೆದುಕೊಳ್ಳುವುದು ಕಷ್ಟವಾಗಬಹುದು. ಕುಟುಂಬದಲ್ಲಿ ಸಂತಸ ಇರಲಿದೆ.

ಕರ್ಕಾಟಕ: ನಿಮ್ಮ ದೈನಂದಿನ ಬದುಕನ್ನು ಶಿಸ್ತು ಬದ್ಧವಾದ ರೀತಿಯಲ್ಲಿ ನಡೆಸಲು ತೀರ್ಮಾನಿಸುವುದರಿಂದ ಅಭಿವೃದ್ಧಿ ಹೊಂದುವಿರಿ. ಆರ್ಥಿಕವಾಗಿ ಲಾಭ ಪಡೆಯುವುದಕ್ಕೆ ಹೋರಾಟ ನಡೆಸಬೇಕಾಗುವ ಪರಿಸ್ಥಿತಿ ಇರಲಿದೆ.

ಸಿಂಹ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಹಿರಿಯರ ಹೇಳಿಕೆಯಂತೆ ಅಗತ್ಯ ಪೂರೈಸುವ ಕಡೆಗೆ ಹೆಚ್ಚಿನ ಗಮನ ಹರಿಸಿ. ನಿಮ್ಮ ಒತ್ತಡದ ನಡುವೆಯೂ ಇತರರಿಗೆ ಸಹಾಯ ಮಾಡುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಿ.

ಕನ್ಯಾ: ಲೇವಾದೇವಿ ವ್ಯವಹಾರ ನಡೆಸುವವರಿಗೆ ವ್ಯವಹಾರದಲ್ಲಿ ಸ್ವಲ್ಪ ಪ್ರಮಾಣದ ನಷ್ಟ ಸಂಭವಿಸಿ ಹಿನ್ನಡೆಯನ್ನು ಕಾಣಲಿದೆ. ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ನಿಮ್ಮ ಸಂಗಾತಿಯ ಸಂಪೂರ್ಣ ಬೆಂಬಲ ಸಿಗಲಿದೆ.

ತುಲಾ: ವಿವಾಹ ಸಂಬಂಧ ವರಾನ್ವೇಷಣೆಗೆ ತೊಡಗುವುದಕ್ಕೆ ಸೂಕ್ತವಾದ ದಿನ, ಸುಲಭವಾಗಿ ಪ್ರಾಪ್ತಿಯಾಗುವುದು. ವ್ಯಾಪಾರ-ವ್ಯವಹಾರದಲ್ಲಿ ಲಾಭಾಂಶ ಕಡಿಮೆಯಾದರೂ ಮೂಲಧನಕ್ಕೆ ಮೋಸವಾಗುವುದಿಲ್ಲ.

ವೃಶ್ಚಿಕ: ನಿಮ್ಮ ಪ್ರತಿಯೊಂದು ಕೆಲಸಕ್ಕೂ ಬೆನ್ನೆಲುಬಾಗುವ ಧರ್ಮಪತ್ನಿಯ ಸಹಕಾರ ಮುನ್ನಡೆಗೆ ಪೂರಕವಾಗಲಿದೆ. ಸಹೋದರರಲ್ಲಿ ಅಥವಾ ಮನೆಯ ಸದಸ್ಯರಲ್ಲಿ ಭಿನ್ನಾಭಿಪ್ರಾಯ, ವಾದ ವಿವಾದ, ಕಲಹಗಳು ಇಲ್ಲವಾಗುವುದು.

ಧನು: ನೀವಿಂದು ಇನ್ನೊಬ್ಬರ ಅಧೀನದಿಂದ ಹೊರಬಂದು ಸ್ವತಂತ್ರ ಮನೋಭಾವದಿಂದ ಉಲ್ಲಾಸ ಭರಿತವಾಗಿ ಜೀವನ ನಡೆಸುವಂತಾಗಲಿದೆ. ನಿಮ್ಮ ವಾಕ್ಚಾತುರ್ಯಕ್ಕೆ ಸಾಮಾಜಿಕವಾಗಿ ಗೌರವ ಪ್ರಶಂಸೆ ಸಿಗಲಿದೆ.

ಮಕರ: ನಿಮಗೆ ಒಳಿತಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಯಾವುದೇ ರೀತಿಯ ಯೋಚನೆಗಳು ಬೇಡ. ವ್ಯವಹಾರದಲ್ಲಿನ ಲಾಭ ಅಭಿವೃದ್ಧಿಗೆ ಸಹಕಾರಿ ಆಗಲಿದೆ. ಮನೆಯಲ್ಲಿ ಸಮಾರಂಭ ನಡೆಸಲು ತಯಾರಿ ನಡೆಸಬಹುದು.

ಕುಂಭ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ರಜೆಯ ದಿನವಾದರೂ ಅನಿವಾರ್ಯ ಕಾರಣದಿಂದಾಗಿ ಕಾರ್ಯಪ್ರವೃತ್ತರಾಗಬೇಕಾಗುವುದು.

ಮೀನ: ಸಾಂಸಾರಿಕ ಒತ್ತಡದಿಂದ ವೃತ್ತಿಪರವಾದ ಜವಾಬ್ದಾರಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ನಿಮ್ಮ ಕ್ರಾಂತಿಕಾರಿ ಸ್ವಭಾವವು ಈ ದಿನ ಹೆಚ್ಚಿನ ಲಾಭವನ್ನು ತರಲಿದೆ. ಹೊಸ ವಾಹನ ಖರೀದಿಸುವ ಯೋಗ ಬರುವುದು.

ಪದಬಂಧ 6398


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರಕ್ಷಿಸಲು ಆಧಾರ ಒದಗಿಸುತ್ತಿರುವಾತ! (4)
3.ದೃಷ್ಟಿಗೆ ದೂರವಾದುದು ಪಕ್ಷದೊಳಗಿದೆಯಲ್ಲಾ? (3)
4.ವಿಶದ ಪಡಿಸುತ್ತಿರುವವನು ಪಂಡಿತ (4)
6.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
7.ಅಡಿಯಲ್ಲಿ ಈ ಆತುರವೇ? (4)
8.ಇದು ಸ್ವಭಾವಸಿದ್ಧವಾದುದು (3)
9.ಬುದ್ಧಿ ಇಟ್ಟುಕೊಂಡು ನೀಡಿದ ಒಪ್ಪಿಗೆ (4)
12.ಅಧಿಕಾರ ಪತ್ರ (3)
13.ಕನ್ನಡಿಗನು ಧರಿಸಿರುವ ಚಾಳೀಸು (4)
15.ಇದೊಂದು ಬಗೆಯ ಅಲೋಹ ಮೂಲಧಾತು (3)
16.ಶಿವನ ಬಳಿಯಿರುವ ಚರ್ಮವಾದ್ಯ (4)

ಮೇಲಿಂದ ಕೆಳಕ್ಕೆ

1.ಓದು ಬರಹಗಳನ್ನು ತಿಳಿದಿರುವಿಕೆ (4)
2.ವಿಹಾರದಲ್ಲಿದ್ದಾಗ ಸೂರ್ಯ ಕಾಣಿಸಿದನೇ? (2)
3.ಹೂವಿನ ದಳ (3)
5.ದಡಿಯನು ಹಿಡಿದಿರುವ ಬಿಡಿಗಾಸು (3)
7.ಅನುಜನ ಹತ್ತಿರವಿರುವ ಆಡು (2)
8.ವಸತಿ ಹತ್ತಿರವಿರುವ ಪತ್ನಿ ಕಾಣುತ್ತಿದ್ದಾಳೇ? (2)
9.ಸಡಿಲವಾದುದು ಇದು (3)
10.ಚತುರರು ಆಡುವ ಒಳಾಂಗಣದ ಆಟ (4)
11.ಪಂಚಭೂತಗಳಿಗೆ ಸಂಬಂಧಿಸಿರುವುದು (3)
14.ಕಡಲ ಹತ್ತಿರ ಪಡೆದುಕೊಂಡಿರುವ ಸಾಲ (2)



6397ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಣಾಳಿಕೆ 3.ಪ್ರದೇಶ 5.ಪಲ್ಲವಿ 7.ಉತ್ತರ 8.ಧೀರ 9.ಸಮೂಹಗಾನ 12.ಪವಿ 13.ಬವಣೆ 14.ಬಣ್ಣನೆ 17.ಪಗಾರ 18.ರತ್ನಪಡಿ

ಮೇಲಿಂದ ಕೆಳಕ್ಕೆ: 1.ಪ್ರತಾಪ 2.ಕೆನೆ 3.ಪ್ರಖರ 4.ಶಸ್ತ್ರಾಗಾರ 6.ವಿಲಾಸ 7.ಉದಾಹರಣೆ 11.ನವಾಬ 12.ಪಶ್ಚಾತ್ತಾಪ 13.ಬರ್ಬರ 15.ನೆಗಡಿ 16.ಕ್ಷೌರ

ಸುಡೊಕು 6781

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

			4		3	9	6	
		8						5
4		3	5		8	7	2	1
		9						7
	3	7	1		6	4	5	
8						2	1	
6		5		2				4
3						5		2
	8	2		5			7	

6780 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಭಾನುವಾರ, ಮೇ 10, 2026 | ₹ 7.00 |
www.prajavani.net prajavani.net prajavani
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ
ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಸಾಹಿಲ್ ಜಾಧವ್‌ಗೆ ಕಂಚು



ಭಾರತದ ಸಾಹಿಲ್ ಜಾಧವ್ ಅವರು ಶಾಂಘೈನಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನ ಸ್ಟೇಜ್ 2 ಟೂರ್ನಿಯ ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಶನಿವಾರ ಕಂಚಿನ ಪದಕ ಗೆದ್ದುಕೊಂಡರು

ಸುವರ್ಣ ಬಂಗಾಳ: ಸುವೇಂದು ಪ್ರಮಾಣ

ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಬಿಜೆಪಿ ನೇತೃತ್ವದ ಸರ್ಕಾರ ಸಮಾರಂಭದಲ್ಲಿ ಪ್ರಧಾನಿ ಸೇರಿ ಎನ್‌ಡಿಎ ನಾಯಕರು ಭಾಗಿ

ಕೋಲ್ಕತ್ತ (ಪಿಟಿಐ): ಕಿಕ್ಕಿರಿದು ಸೇರಿದ ಜನಸ್ತೋಮ, ಹಾರಾಡುತ್ತಿರುವ ಕೇಸರಿ ಧ್ವಜ ಮತ್ತು ಜೈ ಶ್ರೀರಾಮ್ ಘೋಷಣೆಗಳ ನಡುವೆ ಸುವೇಂದು ಅಧಿಕಾರಿ ಪಶ್ಚಿಮ ಬಂಗಾಳದ ಒಂಬತ್ತನೆಯ, ಬಿಜೆಪಿಯ ಮೊದಲ ಮುಖ್ಯಮಂತ್ರಿಯಾಗಿ ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು.

ದೀರ್ಘಕಾಲ ಕೆಂಬಾವುಟದ ಹಾರಾಟ ಕಂಡಿದ್ದ, ರಾಜಕೀಯ ಸೋಲು–ಗೆಲುವುಗಳಿಗೆ ಸಾಕ್ಷಿಯಾಗಿದ್ದ ಕೋಲ್ಕತ್ತದ ಹೃದಯ ಭಾಗದಲ್ಲಿರುವ ಬ್ರಿಗೇಡ್ ಮೈದಾನವು ಬಿಜೆಪಿಯ ಚೊಚ್ಚಲ ಸರ್ಕಾರದ ಪ್ರಮಾಣವಚನ ಕಾರ್ಯಕ್ರಮಕ್ಕೆ ವೇದಿಕೆಯಾಯಿತು.

ರಾಜ್ಯಪಾಲ ಆರ್.ಎನ್. ರವಿ, ನೂತನ ಮುಖ್ಯಮಂತ್ರಿಗೆ ಪ್ರಮಾಣವಚನ ಬೋಧಿಸಿದರು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಲ್ಲದೆ ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಭಾಗವಹಿಸಿದ್ದರು.

ಭವಾನಿಪುರ ಮತ್ತು ನಂದಿಗ್ರಾಮ ವಿಧಾನಸಭಾ ಕ್ಷೇತ್ರಗಳಲ್ಲಿ ಗೆದ್ದು, ಪಶ್ಚಿಮ ಬಂಗಾಳದಲ್ಲಿ ಕಮಲ ಅರಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಸುವೇಂದು ಅಧಿಕಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಅವರ ಬಳಿಕ ಬಿಜೆಪಿಯ ಬಂಗಾಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ ದಿಲೀಪ್ ಘೋಷ್ ಪ್ರಮಾಣ ವಚನ ಸ್ವೀಕರಿಸಿದರು.

ಸುವರ್ಣ ಬಂಗಾಳ ಉದಯ: ದಶಕಗಳ ದುರಾಡಳಿತ ಇಂದು ಕೊನೆಗೊಂಡಿದೆ. ಬಿಜೆಪಿಯ 'ಡಬಲ್‌-ಎಂಜಿನ್ ಸರ್ಕಾರ'ದ ಅಡಿಯಲ್ಲಿ ಶಾಂತಿ ಮತ್ತು ಸಮೃದ್ಧಿಯ 'ಸೋನಾರ್ ಬಾಂಗ್ಲಾ'ದ (ಸುವರ್ಣ ಬಂಗಾಳ) ಉದಯವಾಗಿದೆ. ಇದು ಪಶ್ಚಿಮ ಬಂಗಾಳಕ್ಕೆ ನಿಜಕ್ಕೂ ಐತಿಹಾಸಿಕ ಉದಯ' ಎಂದು ಸುವೇಂದು ಅಧಿಕಾರಿ ಹೇಳಿದರು.

2B



ಪಶ್ಚಿಮ ಬಂಗಾಳ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸುವೇಂದು ಅಧಿಕಾರಿ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಲೆಬಾಗಿ ನಮಸ್ಕರಿಸಿದರು

ಮಂಡಿಯೂರಿ ನಮಿಸಿದ ಪ್ರಧಾನಿ

ಪ್ರಮಾಣ ವಚನ ಕಾರ್ಯಕ್ರಮಕ್ಕೆ ಬಂದ ಪ್ರಧಾನಿ, ವೇದಿಕೆಯತ್ತ ಸಾಗಿ, ಜನ ಸಮೂಹದತ್ತ ತಿರುಗಿ, ಮಂಡಿಯೂರಿ ವೇದಿಕೆಗೆ ಹಣೆಯನ್ನು ಮುಟ್ಟಿಸಿದರು. ಬಂಗಾಳದ ಜನಾದೇಶಕ್ಕೆ ಗೌರವಾರ್ಥವಾಗಿ ಕೈ ಜೋಡಿಸಿ ನಮಿಸಿದರು. ಕೇಸರಿ ಶಿರೋವಸ್ತ್ರ ಧರಿಸಿ, ಧ್ವಜಗಳನ್ನು ಹಿಡಿದು ಅಪಾರ ಸಂಖ್ಯೆಯಲ್ಲಿ ಸೇರಿದ್ದ ಬಿಜೆಪಿ ಕಾರ್ಯಕರ್ತರ ಹರ್ಷೋದ್ಗಾರ ಮುಗಿಲು ಮುಟ್ಟಿತು. ಭಾರತ್ ಮಾತಾ ಕೀ ಜೈ ಘೋಷಣೆಗಳು ಬ್ರಿಗೇಡ್ ಮೈದಾನದಲ್ಲಿ ಅನುರಣಿಸಿತು.

ಎಸ್‌ಐಆರ್ ವಿಶೇಷ ವೀಕ್ಷಕರಾಗಿದ್ದ ಸುಬ್ರತಾ ಗುಪ್ತಾ ಸಿ.ಎಂ ಸಲಹೆಗಾರ

ಬಂಗಾಳದ ನೂತನ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಸಲಹೆಗಾರರಾಗಿ ನಿವೃತ್ತ ಐಎಎಸ್ ಅಧಿಕಾರಿ ಸುಬ್ರತಾ ಗುಪ್ತಾ ಅವರನ್ನು ನೇಮಕ ಮಾಡಲಾಗಿದೆ.

ಸುಬ್ರತಾ ಗುಪ್ತಾ ಅವರು, ಚುನಾವಣಾ ಆಯೋಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ನೇಮಿಸಿದ್ದ ವಿಶೇಷ ವೀಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಐಎಎಸ್ ಅಧಿಕಾರಿ ಶಂತನು ಬಾಲಾ ಅವರು ಮುಖ್ಯಮಂತ್ರಿಯವರ ಖಾಸಗಿ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

ಸುವೇಂದು ಅಧಿಕಾರಿ ಜನರೊಂದಿಗೆ ಆಳವಾದ ಸಂಪರ್ಕ ಹೊಂದಿರುವ ಜನನಾಯಕ. ಬಂಗಾಳದ ಜನರ ಅಪೇಕ್ಷೆಗಳನ್ನು ಅವರು ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ

–**ನರೇಂದ್ರ ಮೋದಿ,** ಪ್ರಧಾನಿ



ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿಯನ್ನು ಎದುರಿಸಲು ಜಂಟಿ ವೇದಿಕೆಯನ್ನು ರೂಪಿಸಲು ಪಶ್ಚಿಮ ಬಂಗಾಳದ ಎಲ್ಲಾ ವಿರೋಧ ಪಕ್ಷಗಳು ಒಟ್ಟಾಗಬೇಕು

–**ಮಮತಾ ಬ್ಯಾನರ್ಜಿ,** ಟಿಎಂಸಿ ನಾಯಕಿ

ಮದ್ದಿನ ಹುಲಿ...

ಪ್ರಜಾವಾಣಿ ಚಿತ್ರ
ತಾಜುದ್ದೀನ್ ಆಜಾದ್



ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ದೇಗಾಂವ ಗ್ರಾಮದಲ್ಲಿ ಶೇಖ ಜಿಂದಾವಲಿ ದರ್ಗಾ ಮತ್ತು ಜೈ ಭಜರಂಗಬಲಿ ದೇವರ ಜಾತ್ರೆಯಲ್ಲಿ ಶನಿವಾರ ಭಕ್ತರು ಮದ್ದಿನ ಹುಲಿ ಓಡಿಸುವ ಹರಕೆ ತೀರಿಸಿ, ಸಂಭ್ರಮಿಸಿದರು

ಬೆಂಗಳೂರಿನ ಕೃಷ್ಣ ಸ್ವಾಮಿನಾಥನ್ ನೌಕಾಪಡೆಯ ಮುಖ್ಯಸ್ಥ

ರಾಜಾ ಸುಬ್ರಮಣಿ ನೂತನ ಸಿಡಿಎಸ್

ನವದೆಹಲಿ (ಪಿಟಿಐ): ಲೆಫ್ಟಿನೆಂಟ್ ಜನರಲ್ (ನಿವೃತ್ತ) ಎನ್.ಎಸ್. ರಾಜಾ ಸುಬ್ರಮಣಿ ಅವರನ್ನು ಸೇನಾ ಪಡೆಗಳ ನೂತನ ಮುಖ್ಯಸ್ಥರನ್ನಾಗಿ (ಸಿಡಿಎಸ್) ಶನಿವಾರ ನೇಮಕ ಮಾಡಲಾಗಿದೆ. ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರನ್ನು ನೌಕಾಪಡೆಯ ಮುಂದಿನ ಮುಖ್ಯಸ್ಥರನ್ನಾಗಿ ಸರ್ಕಾರ ನೇಮಕ ಮಾಡಿದೆ. ಕೃಷ್ಣ ಸ್ವಾಮಿನಾಥನ್ ಅವರು ಬೆಂಗಳೂರಿನವರು.

ಹಾಲಿ ಸಿಡಿಎಸ್ ಆಗಿರುವ ಜನರಲ್ ಅನಿಲ್ ಚೌಹಾಣ್ ಅವರ ಅಧಿಕಾರಾವಧಿ ಮೇ 30ರಂದು ಕೊನೆಗೊಳ್ಳಲಿದ್ದು, ಆ ಬಳಿಕ ರಾಜಾ ಸುಬ್ರಮಣಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ವೈಸ್ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಅವರು ನೌಕಾಪಡೆಯ ಹಾಲಿ ಮುಖ್ಯಸ್ಥರಾಗಿರುವ ಅಡ್ಮಿರಲ್ ದಿನೇಶ್ ಕೆ. ತ್ರಿಪಾಠಿ ಅವರ ನಿವೃತ್ತಿಯಿಂದ ತೆರವಾಗುವ ಸ್ಥಾನವನ್ನು ತುಂಬಲಿದ್ದು, ಮೇ 31ರಂದು ಅಧಿಕಾರ ವಹಿಸಿಕೊಳ್ಳುವರು.

ಕೃಷ್ಣ ಸ್ವಾಮಿನಾಥನ್ ಅವರು ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯ ಹಳೆಯ ವಿದ್ಯಾರ್ಥಿ. ವಿಜಯಪುರದ ಸೈನಿಕ ಶಾಲೆಯಲ್ಲೂ ವ್ಯಾಸಂಗ ಮಾಡಿದ್ದಾರೆ. ಅವರು ಪ್ರಸ್ತುತ ನೌಕಾ ಪಡೆಯ ಪಶ್ಚಿಮ ಕಮಾಂಡ್ ಅನ್ನು ಮುನ್ನಡೆಸುತ್ತಿದ್ದಾರೆ.



ಕೃಷ್ಣ ಸ್ವಾಮಿನಾಥನ್

ನಿವೃತ್ತರಾಗಿದ್ದ ಸುಬ್ರಮಣಿ: ಲೆಫ್ಟಿನೆಂಟ್ ಜನರಲ್ ಸುಬ್ರಮಣಿ ಅವರು ಭಾರತೀಯ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಕಳೆದ ವರ್ಷ ಜುಲೈ 31ರಂದು ನಿವೃತ್ತರಾಗಿದ್ದರು. ಪ್ರಸ್ತುತ ರಾಷ್ಟ್ರೀಯ ಭದ್ರತಾ ಮಂಡಳಿ ಸಚಿವಾಲಯದ ಮಿಲಿಟರಿ ಸಲಹೆಗಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ರಕ್ಷಣಾ ಸಚಿವಾಲಯದ ಕಾರ್ಯದರ್ಶಿ ಆಗಿಯೂ ಕಾರ್ಯ ನಿರ್ವಹಿಸಲಿದ್ದಾರೆ.

ಪ್ರಸ್ತುತ ಸಿಡಿಎಸ್ ಆಗಿರುವ ಜನರಲ್ ಅನಿಲ್ ಚೌಹಾಣ್ ಅವರು 2022ರ ಸೆಪ್ಟೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡಿದ್ದರು. ಭಾರತದ ಮೊದಲ ಸಿಡಿಎಸ್ ಆಗಿರುವ ಜನರಲ್ ಬಿಪಿನ್ ರಾವತ್ ಅವರು ತಮಿಳುನಾಡಿನಲ್ಲಿ ಹೆಲಿಕಾಪ್ಟರ್ ಅಪಘಾತದಲ್ಲಿ ಮೃತಪಟ್ಟ ಒಂಬತ್ತು ತಿಂಗಳ ನಂತರ ಚೌಹಾಣ್ ಅವರನ್ನು ಆ ಹುದ್ದೆಗೆ ನೇಮಕ ಮಾಡಲಾಗಿತ್ತು.

40 ವರ್ಷಗಳ ಅನುಭವ



ರಾಜಾ ಸುಬ್ರಮಣಿ

ರಾಜಾ ಸುಬ್ರಮಣಿ ಅವರು ತಮ್ಮ ನಾಲ್ಕು ದಶಕಗಳ ವೃತ್ತಿ ಜೀವನದಲ್ಲಿ ಸೇನೆಯ ಹಲವು ಹುದ್ದೆಗಳನ್ನು ನಿಭಾಯಿಸಿದ್ದಾರೆ.

2024ರ ಜುಲೈ 1ರಿಂದ 2025ರ ಜುಲೈ 31ರ ವರೆಗೆ ಭಾರತೀಯ ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರಾಗಿ ಹಾಗೂ 2023ರ ಮಾರ್ಚ್‌ನಿಂದ 2024ರ ಜೂನ್ ವರೆಗೆ ಸೆಂಟ್ರಲ್ ಕಮಾಂಡ್‌ನ ಜನರಲ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ರಾಷ್ಟ್ರೀಯ ರಕ್ಷಣಾ ಅಕಾಡೆಮಿ ಮತ್ತು ಇಂಡಿಯನ್ ಮಿಲಿಟರಿ ಅಕಾಡೆಮಿಯಲ್ಲಿ ಅಧ್ಯಯನ ಮಾಡಿರುವ ಅವರು 1985ರ ಡಿಸೆಂಬರ್ 14ರಂದು ಗಢವಾಲ್ ರೈಫಲ್ಸ್‌ನ ಎಂಟನೇ ಬೆಟಾಲಿಯನ್ ನಲ್ಲಿ ನಿಯೋಜಿತರಾಗುವ ಮೂಲಕ ಸೇನೆಯಲ್ಲಿ ವೃತ್ತಿ ಆರಂಭಿಸಿದ್ದರು.

ಬೆಂಗಳೂರಿಗೆ ಪ್ರಧಾನಿ ಮೋದಿ ಇಂದು

ಬೆಂಗಳೂರು: ಎರಡು ಪ್ರತ್ಯೇಕ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ (ಮೇ 10) ಬೆಂಗಳೂರಿಗೆ ಬರಲಿದ್ದಾರೆ.

ಕನಕಪುರ ರಸ್ತೆಯಲ್ಲಿ ಇರುವ ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಭಾಗಿಯಾಗಲು ಮೋದಿ ಅವರು ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ 9ರ ಹೊತ್ತಿಗೆ ಬಂದಿಳಿಯಲಿದ್ದಾರೆ. ಈ ವೇಳೆ, ರಾಜ್ಯ ಬಿಜೆಪಿ ಘಟಕವು ವಿಮಾನ ನಿಲ್ದಾಣದ ಆವರಣದಲ್ಲಿಯೇ ಮೋದಿ ಅವರಿಗೆ ಅಭಿನಂದಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೋದಿ ಅವರು ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

'ಈಚೆಗೆ ನಡೆದ ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದ ಚುನಾವಣೆಯಲ್ಲಿ ಬಿಜೆಪಿ ಅಭೂತಪೂರ್ವ ಸಾಧನೆ ಮಾಡಿದೆ. ಪಶ್ಚಿಮ ಬಂಗಾಳ ಮತ್ತು ಅಸ್ಸಾಂನಲ್ಲಿ ಗೆಲುವು ಸಾಧಿಸಿದೆ. ಈ ಗೆಲುವಿನಲ್ಲಿ ಪ್ರಧಾನಿ ಮೋದಿ ಅವರ ಪಾತ್ರ ದೊಡ್ಡದಿದೆ. ಹೀಗಾಗಿ ಅವರನ್ನು ಸನ್ಮಾನಿಸಲಾಗುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದ್ದಾರೆ.

ನಂತರ ಮೋದಿ ಅವರು ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮಕ್ಕೆ ತೆರಳಲಿದ್ದಾರೆ. ಅಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಧ್ಯಾನ ಮಂದಿರವನ್ನು ಉದ್ಘಾಟಿಸಿ, ಪ್ರೇಕ್ಷಕರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಂತರ ದೆಹಲಿಗೆ ಹೊರಡಲಿದ್ದಾರೆ.

ಅಪಘಾತ: ನಾಲ್ವರು ಸಾವು

ಕುಣಿಗಲ್ (ತುಮಕೂರು): ತಾಲ್ಲೂಕಿನ ಚಿಗನಿಪಾಳ್ಯ ಬಳಿ ರಾಜ್ಯ ಹೆದ್ದಾರಿಯಲ್ಲಿ ಲಾರಿ ಮತ್ತು ಕಾರಿನ ನಡುವೆ ಶನಿವಾರ ಸಂಭವಿಸಿದ ಭೀಕರ ಅಪಘಾತದಲ್ಲಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದಾರೆ.

ಮಂಡ್ಯದ ಶುಗರ್ ಕಾಲೊನಿ ನಿವಾಸಿಗಳಾದ ಕುಮಾರ ನರಸಿಂಹಸ್ವಾಮಿ (65), ಪತ್ನಿ ಗಾಯತ್ರಿ (62), ಕುಮಾರ ಅವರ ಸಹೋದರಿ ಗಾಯತ್ರಿ (63) ಮತ್ತು ಸಂಬಂಧಿ, ಚಾಲಕ ಮೈಸೂರಿನ ಗುರುರಾಜ ಲೇಔಟ್‌ನ ರಘು ಕುಮಾರ (56) ಮೃತರು.

ಕುಮಾರ ನರಸಿಂಹಸ್ವಾಮಿ, ಗಾಯತ್ರಿ ದಂಪತಿ 24ನೇ ವಿವಾಹ ವಾರ್ಷಿಕೋತ್ಸವ ಅಂಗವಾಗಿ ಮನೆದೇವರಾದ ದೇವರಾಯನದುರ್ಗದ ಲಕ್ಷ್ಮಿನರಸಿಂಹಸ್ವಾಮಿ ದೇಗುಲದಲ್ಲಿ ಪೂಜೆ ಸಲ್ಲಿಸಿ ಮರಳುವಾಗ ಅಪಘಾತ ನಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ. ಶವಗಳನ್ನು ಹೊರತೆಗೆಯಲು ಪೊಲೀಸರು ಪರದಾಡಿದರು.

ಮುಂಬೈ ಧಾರಣೆ (ಶೇಂಗಾ)

09-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಪಾಮ್ ವಾರದ ಡೆಲಿವರಿ	1483 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1535 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,000 (1,50,800)
ಬೆಳ್ಳಿ ಕೆ.ಜಿಗೆ	2,55,000 (2,55,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕಾರ್ಮಿಕ ಸಂಹಿತೆ: ನಿಯಮ ಪ್ರಕಟ

ಸಂಹಿತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ರಾಜ್ಯಗಳೂ ಅಧಿಸೂಚನೆಯಲ್ಲಿ ಪ್ರಕಟಿಸಬೇಕು



ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ನಾಲ್ಕು ಕಾರ್ಮಿಕ ಸಂಹಿತೆಗಳಿಗೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಿದೆ. ಈ ಸಂಹಿತೆಗಳು ಕಾರ್ಮಿಕರಿಗೆ ಕನಿಷ್ಠ ವೇತನ ಹಾಗೂ ಸಾರ್ವತ್ರಿಕ ಸಾಮಾಜಿಕ ಭದ್ರತೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಖಾತರಿಪಡಿಸುತ್ತವೆ.

ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸುವ ಮೂಲಕ ನಾಲ್ಕೂ ಸಂಹಿತೆಗಳನ್ನು ಅನುಷ್ಠಾನಕ್ಕೆ ತಂದಂತೆ ಆಗಿದೆ.

ವೇತನ ಸಂಹಿತೆ 2019, ಕೈಗಾರಿಕಾ ಸಂಬಂಧಗಳ ಸಂಹಿತೆ 2020, ಸಾಮಾಜಿಕ ಭದ್ರತಾ ಸಂಹಿತೆ 2020, ವೃತ್ತಿ ಸ್ಥಳದಲ್ಲಿನ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಸ್ಥಿತಿಗಳ ಕುರಿತ ಸಂಹಿತೆ 2020, ಕಳೆದ ವರ್ಷದ ನವೆಂಬರ್ 21ರಂದು ಜಾರಿಗೆ ಬಂದಿವೆ.

29 ಕಾರ್ಮಿಕ ಕಾನೂನುಗಳನ್ನು ಆಧುನಿಕ ಆಗಿಸಿ, ಅವುಗಳನ್ನು ಸರಳವಾಗಿ ಹಾಗೂ ಸಮಕಾಲೀನ ಅಗತ್ಯಗಳಿಗೆ ಸರಿಹೊಂದಿಸಿ ಒಂದೇ ಕಡೆ ತರುವ ಉದ್ದೇಶದಿಂದ ನಾಲ್ಕು ಸಂಹಿತೆಗಳನ್ನು ರೂಪಿಸಲಾಯಿತು.

ನಾಲ್ಕು ಸಂಹಿತೆಗಳ ಅಡಿಯಲ್ಲಿ ನಿಯಮಗಳನ್ನು ಸರ್ಕಾರದ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇದರೊಂದಿಗೆ ಕಾರ್ಮಿಕ ಸಂಹಿತೆಗಳ ಪೂರ್ಣ ಅನುಷ್ಠಾನದ ಪ್ರಕ್ರಿಯೆ ಕೊನೆಗೊಂಡಿದೆ ಎಂದು ಅವರು ಹೇಳಿದ್ದಾರೆ.

2025ರ ನವೆಂಬರ್ 21ರಂದೇ ಈ ನಾಲ್ಕೂ ಸಂಹಿತೆಗಳು ಕಾನೂನಾಗಿ ಜಾರಿಗೆ ಬಂದಿದ್ದರೂ, ನಿಯಮಗಳನ್ನು ಜಾರಿಗೆ ತಂದಿಲ್ಲದಿದ್ದ ಕಾರಣದಿಂದಾಗಿ ಕೆಲವು ವಿವರಣೆಗಳು ಲಭ್ಯವಿರಲಿಲ್ಲ ಎಂದು ಅಧಿಕಾರಿ ವಿವರಿಸಿದ್ದಾರೆ.

ಕರಡು ನಿಯಮಗಳನ್ನು 2025ರ ಡಿಸೆಂಬರ್ 30ರಂದು ಪ್ರಕಟಿಸಲಾಗಿತ್ತು. ಇದಕ್ಕೆ ಸಂಬಂಧಪಟ್ಟವರಿಂದ ಪ್ರತಿಕ್ರಿಯೆ ಕೋರಲಾಗಿತ್ತು. ಕಾನೂನು ಪರಿಶೀಲನೆಯ ನಂತರ ಅಂತಿಮ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಹೊಸ ಸಂಹಿತೆಗಳು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುವುದಕ್ಕೆ ನಿಯಮಗಳನ್ನು ಪ್ರಕಟಿಸುವುದು ಅಗತ್ಯವಾಗಿತ್ತು.

ಔದ್ಯಮಿಕ ವಹಿವಾಟುಗಳನ್ನು ಸುಲಭವಾಗಿಸುವ, ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡುವ, ಪ್ರತಿ ಕಾರ್ಮಿಕನ ಸುರಕ್ಷತೆ, ಆರೋಗ್ಯ, ಸಾಮಾಜಿಕ ಮತ್ತು ವೇತನ ಭದ್ರತೆಯನ್ನು ಖಾತರಿಪಡಿಸುವ ಗುರಿಯನ್ನು ಸಂಹಿತೆಗಳು ಹೊಂದಿವೆ.

ಕಾರ್ಮಿಕರಿಗೆ ಸಂಬಂಧಿಸಿದ ವಿಚಾರಗಳು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಮವರ್ತಿ ಪಟ್ಟಿಯಲ್ಲಿ ಇರುವ ಕಾರಣದಿಂದಾಗಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಾಲ್ಕು ಸಂಹಿತೆಗಳ ಕುರಿತ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಬೇಕು. ಆಗ ಮಾತ್ರ ಇವು ದೇಶದಾದ್ಯಂತ ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುತ್ತವೆ.

ಸುದ್ದಿ 2 ನಿಮಿಷ

ಬಿಒಐಗೆ ₹3,016 ಕೋಟಿ ಲಾಭ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾ (ಬಿಒಐ) ₹3,016 ಕೋಟಿ ನಿವ್ವಳ ಲಾಭ ಗಳಿಸಿದೆ.

2024–25ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹2,626 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಶೇ 15ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ಒಟ್ಟು ವರಮಾನವು ₹21,751 ಕೋಟಿಯಿಂದ ₹22,685 ಕೋಟಿಗೆ ಏರಿಕೆಯಾಗಿದೆ. ಬಡ್ಡಿ ವರಮಾನವು ₹19,476 ಕೋಟಿಗೆ ತಲುಪಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಎನ್‌ಪಿಎ) ಶೇ 3.27ರಿಂದ ಶೇ 1.98ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.82ರಿಂದ ಶೇ 0.56ಕ್ಕೆ ಇಳಿದಿದೆ ಎಂದು ತಿಳಿಸಿದೆ.

2025–26ರ ಪೂರ್ಣ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ನ ಲಾಭದಲ್ಲಿ ಶೇ 14ರಷ್ಟು ಏರಿಕೆಯಾಗಿದ್ದು, ₹10,527 ಕೋಟಿಯಾಗಿದೆ. 2024–25ರಲ್ಲಿ ₹9,219 ಕೋಟಿಯಷ್ಟಾಗಿತ್ತು. ವರಮಾನವು ₹85,036 ಕೋಟಿ ಇದೆ.

₹10 ಮುಖಬೆಲೆಯ ಪ್ರತಿ ಷೇರಿಗೆ ₹4.65 ಲಾಭಾಂಶ ನೀಡಲು ಬ್ಯಾಂಕ್‌ನ ಆಡಳಿತ ಮಂಡಳಿ ಶಿಫಾರಸು ಮಾಡಿದೆ.

ಕೆಎಸ್‌ಸಿಡಿಸಿಎಲ್ ಜೈಪುರ ಮಳಿಗೆ ಆರಂಭ



ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮದ (ಕೆಎಸ್‌ಸಿಡಿಸಿಎಲ್) 'ಕಲ್ಪ ಕೃತಿ' ಜೈಪುರದ ಮಳಿಗೆಯನ್ನು ನಟರಾಜ್ ಜಾನಕಿರಾಮ್, ಬಿ.ಸಿ. ಮುದ್ದುಗಂಗಾಧರ, ಸಿ.ಎನ್. ಶಿವಪ್ರಕಾಶ್ ಉದ್ಘಾಟಿಸಿದರು

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮವು (ಕೆಎಸ್‌ಸಿಡಿಸಿಎಲ್) ರಾಜಸ್ಥಾನದ ಜೈಪುರದಲ್ಲಿ ಹೊಸ ಮಳಿಗೆಯನ್ನು ತೆರೆದಿದ್ದು, ಶನಿವಾರ ಉದ್ಘಾಟನೆಗೊಂಡಿತು.

ಜೈಪುರದ ರಾಜಪಥ್ ರಸ್ತೆ, ಮಾನಸ ಸರೋವರದಲ್ಲಿ 'ಕಲ್ಪಕೃತಿ' ನಾರು ಉತ್ಪನ್ನಗಳನ್ನು ಮಾರಾಟ ಮಾಡಲು ಬಗಾಯತ್ ವೆಂಚರ್ಸ್ ಎಲ್‌ಎಲ್‌ಪಿ ಸಹಯೋಗದೊಂದಿಗೆ ಮಳಿಗೆ ಪ್ರಾರಂಭಿಸಲಾಯಿತು. ಬಗಾಯತ್ ವೆಂಚರ್ಸ್ ಎಲ್‌ಎಲ್‌ಪಿ ಸಂಸ್ಥೆಯು ರಾಜಸ್ಥಾನ, ನವದೆಹಲಿ ಮತ್ತು ಗುಜರಾತ್ ರಾಜ್ಯಗಳಿಗೆ ವಿತರಕರೂ ಆಗಿದ್ದಾರೆ ಎಂದು ಕೆಎಸ್‌ಸಿಡಿಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಪ್ರಮುಖ ಉದ್ದಿಮೆಯಾಗಿರುವ ಕೆಎಸ್‌ಸಿಡಿಸಿಎಲ್ ರಾಜ್ಯದಲ್ಲಿ 35 ಉತ್ಪಾದನಾ ಕೇಂದ್ರಗಳನ್ನು ಹೊಂದಿದೆ. ಡಚ್ ಮ್ಯಾಟ್, ಕಾರಿಡಾರ್ ಮ್ಯಾಟ್, ರೋಲಿಂಗ್ ಮ್ಯಾಟ್, ಹಗ್ಗ, ತೆಂಗಿನ ನಾರಿನ ಪುಡಿ, ಜಿಯೋ-ಟೆಕ್ಸ್‌ಟೈಲ್ಸ್, ಹಾಸಿಗೆಗಳು ಮತ್ತು ಡೆಸ್ಕ್‌ಗಳಂತಹ ನಾರಿನ ಉತ್ಪನ್ನಗಳನ್ನು ಉತ್ಪಾದಿಸುತ್ತಿದೆ. ಇವುಗಳನ್ನು 'ಕಲ್ಪಕೃತಿ' ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡುತ್ತಿದೆ.

ಕಾರ್ಯಕ್ರಮದಲ್ಲಿ ಕೆಎಸ್‌ಸಿಡಿಸಿಎಲ್ ಅಧ್ಯಕ್ಷ ನಟರಾಜ್ ಜಾನಕಿರಾಮ್, ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಬಿ.ಸಿ. ಮುದ್ದು ಗಂಗಾಧರ, ರಾಜಸ್ಥಾನದ ತರಬೇತಿ ವಿಭಾಗದ ಎಡಿಜಿಪಿ ಎಚ್.ಜಿ.ಆರ್. ಸುಹಾಸ್, ರಾಜಸ್ಥಾನದ ಭಯೋತ್ಪಾದನಾ ನಿರೋಧಕ ಪಡೆಯ ಎಡಿಜಿಪಿ ಎಂ.ಎನ್. ದಿನೇಶ್, ಕೆಎಸ್‌ಸಿಡಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಭಾಗವಹಿಸಿದ್ದರು.

ಜನಸುರಕ್ಷಾ ಯೋಜನೆಗಳ ಅಡಿ ಮೊತ್ತ ಪಾವತಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್

₹25,160 ಕೋಟಿ ವಿಮಾ ಮೊತ್ತ ಇತ್ಯರ್ಥ

ನವದೆಹಲಿ (ಪಿಟಿಐ): 'ಪ್ರಧಾನ ಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ' (ಪಿಎಂಜೆಜೆಬಿವೈ) ಮತ್ತು 'ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ'ಯಂತಹ (ಪಿಎಂಎಸ್‌ಬಿವೈ) ಜನಸುರಕ್ಷಾ ಯೋಜನೆಗಳು ಆರಂಭವಾದಾಗಿನಿಂದ ಇದುವರೆಗೆ ₹25,160 ಕೋಟಿ ಮೌಲ್ಯದ ಕ್ಲೇಮ್‌ಗಳನ್ನು ಇತ್ಯರ್ಥ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ದುರ್ಬಲ ವರ್ಗದ ಜನರು ಸೇರಿದಂತೆ ಎಲ್ಲರಿಗೂ ಕೈಗೆಟುಕುವ ದರದಲ್ಲಿ ಆರ್ಥಿಕ ಭದ್ರತೆ ಕಲ್ಪಿಸಲು ಪಿಎಂಜೆಜೆಬಿವೈ, ಪಿಎಂಎಸ್‌ಬಿವೈ ಮತ್ತು ಅಟಲ್ ಪಿಂಚಣಿ ಯೋಜನೆಗೆ (ಎಪಿವೈ) 2015ರ ಮೇ 9ರಂದು ಚಾಲನೆ ನೀಡಿದ್ದರು.

ಪ್ರಸ್ತುತ ಪಿಎಂಜೆಜೆಬಿವೈನಲ್ಲಿ 27 ಕೋಟಿಗೂ ಅಧಿಕ ಜನರು ನೋಂದಣಿ ಆಗಿದ್ದಾರೆ. ಪಿಎಂಎಸ್‌ಬಿವೈ ಅಡಿ 58 ಕೋಟಿ ಮತ್ತು ಅಟಲ್ ಪಿಂಚಣಿ ಯೋಜನೆಯಲ್ಲಿ 9 ಕೋಟಿ ಜನ ನೋಂದಣಿ ಮಾಡಿಕೊಂಡಿದ್ದಾರೆ.



ಜನಸುರಕ್ಷಾ ಯೋಜನೆಗಳಿಗೆ 11 ವರ್ಷ ಪೂರ್ಣಗೊಂಡಿದೆ. ಬ್ಯಾಂಕ್‌ಗಳು, ವಿಮಾ ಕಂಪನಿಗಳು ಸೇರಿದಂತೆ ಎಲ್ಲರಿಂದ ಉತ್ತಮ ಬೆಂಬಲ ವ್ಯಕ್ತವಾಗಿದೆ. ಇದರಿಂದ ಯೋಜನೆಯು ಅಪೂರ್ವ ಯಶಸ್ಸು ಕಂಡಿದೆ
ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ಪಿಎಂಜೆಜೆಬಿವೈ ಅಡಿ 10.7 ಲಕ್ಷಕ್ಕೂ ಅಧಿಕ ಕುಟುಂಬಗಳ ₹21,500 ಕೋಟಿ ಮೊತ್ತದ ಕ್ಲೇಮ್ ಇತ್ಯರ್ಥಪಡಿಸಲಾಗಿದೆ. ಪಿಎಂಎಸ್‌ಬಿವೈ ಯೋಜನೆಯಲ್ಲಿ 1.84 ಲಕ್ಷ ಕುಟುಂಬಗಳಿಗೆ ₹3,660 ಕೋಟಿ ಮೌಲ್ಯದ ಕ್ಲೇಮ್ ಮಂಜೂರು ಮಾಡಲಾಗಿದೆ ಎಂದು ಸಚಿವರು ಶನಿವಾರ ತಿಳಿಸಿದ್ದಾರೆ.

'ಆನ್‌ಲೈನ್ ಜನ್ ಸುರಕ್ಷಾ ಪೋರ್ಟಲ್ ಮೂಲಕ ಜನರು ಬ್ಯಾಂಕ್‌ನ ಶಾಖೆ ಅಥವಾ ಅಂಚೆ ಕಚೇರಿಗೆ ಭೇಟಿ ನೀಡದೇ ನೋಂದಣಿ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ, ಕ್ಲೇಮ್ ಪ್ರಕ್ರಿಯೆಯನ್ನು ಡಿಜಿಟಲೀಕರಣ ಮಾಡಿರುವುದರಿಂದ ತ್ವರಿತವಾಗಿ ಕ್ಲೇಮ್ ಇತ್ಯರ್ಥ ಮಾಡಿಕೊಳ್ಳಬಹುದಾಗಿದೆ' ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಹೇಳಿದ್ದಾರೆ.

ಪಿಎಂಜೆಜೆಬಿವೈ ಜೀವ ವಿಮಾ ಯೋಜನೆಯಾಗಿದ್ದು, ಇದಕ್ಕೆ ವಾರ್ಷಿಕವಾಗಿ ₹436 ಕಂತು ಪಾವತಿಸಬೇಕು. 18ರಿಂದ 50 ವರ್ಷದವರೆಗಿನವರು ಈ ಯೋಜನೆಗೆ ಅರ್ಹರು. ಚಂದಾದಾರರು ಮೃತಪಟ್ಟಾಗ ನಾಮನಿರ್ದೇಶಿತ ವ್ಯಕ್ತಿಗೆ ₹2 ಲಕ್ಷ ನೀಡಲಾಗುತ್ತದೆ. ಏಪ್ರಿಲ್ 29ರ ವೇಳೆಗೆ 12.72 ಕೋಟಿ ಮಹಿಳೆಯರು ಇದರಲ್ಲಿ ನೋಂದಣಿ ಆಗಿದ್ದಾರೆ.

ಪಿಎಂಎಸ್‌ಬಿವೈ ಯೋಜನೆಯ ವಾರ್ಷಿಕ ಪ್ರೀಮಿಯಂ ₹20. 18ರಿಂದ 70 ವರ್ಷದೊಳಗಿನವರು ಇದಕ್ಕೆ ಅರ್ಹರಾಗಿದ್ದು, ಅಪಘಾತದಿಂದ ಪಾಲಿಸಿದಾರರು ಮೃತಪಟ್ಟರೆ ಅಥವಾ ಸಂಪೂರ್ಣ ಅಂಗವೈಕಲ್ಯಕ್ಕೆ ಒಳಗಾದರೆ ₹2 ಲಕ್ಷ ಮತ್ತು ಭಾಗಶಃ ಅಂಗವೈಕಲ್ಯಕ್ಕೆ ಒಳಗಾದರೆ ₹1 ಲಕ್ಷ ಪರಿಹಾರ ನೀಡಲಾಗುತ್ತದೆ.

ಅಸಂಘಟಿತ ವಲಯದ ಕಾರ್ಮಿಕರಿಗೆ ಅವರ ನಿವೃತ್ತಿ ಜೀವನದ ಸಮಯದಲ್ಲಿ ಆರ್ಥಿಕ ಭದ್ರತೆ ಕಲ್ಪಿಸುವ ಉದ್ದೇಶವನ್ನು ಅಟಲ್ ಪಿಂಚಣಿ ಯೋಜನೆ (ಎಪಿವೈ) ಹೊಂದಿದೆ. ಈ ಯೋಜನೆ ಅಡಿ ನೋಂದಾಯಿಸಿಕೊಂಡವರು ಪಾವತಿಸುವ ಮೊತ್ತಕ್ಕೆ ಅನುಗುಣವಾಗಿ, ವ್ಯಕ್ತಿಯ ವಯಸ್ಸು 60 ವರ್ಷವಾದಾಗ ಮಾಸಿಕ ₹1 ಸಾವಿರದಿಂದ ₹5 ಸಾವಿರದವರೆಗೆ ಪಿಂಚಣಿ ದೊರೆಯುತ್ತದೆ. ಈ ಯೋಜನೆಯನ್ನು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ಮತ್ತು ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ನಿರ್ವಹಣೆ ಮಾಡುತ್ತದೆ.

18ರಿಂದ 40 ವರ್ಷದೊಳಗಿನವರು ಈ ಯೋಜನೆಗೆ ಅರ್ಹರು. ಚಂದಾದಾರರು ಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ ರೂಪದಲ್ಲಿ ಪಾವತಿ ಮಾಡಬೇಕಿರುತ್ತದೆ. ಆದಾಯ ತೆರಿಗೆ ಪಾವತಿಸುವವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.

ಒಂದು ವೇಳೆ ಚಂದಾದಾರರು ವಯಸ್ಸು 60 ವರ್ಷ ಆಗುವುದರೊಳಗೆ ಮೃತಪಟ್ಟರೆ, ಸಂಗಾತಿಯು ಯೋಜನೆಗೆ ನೀಡುವ ಕೊಡುಗೆಯನ್ನು ಮುಂದುವರಿಸಬಹುದಾಗಿದೆ ಅಥವಾ ಮೊತ್ತವನ್ನು ಹಿಂಪಡೆಯಬಹುದಾಗಿದೆ. ಪ್ರಸಕ್ತ ವರ್ಷದ ಏಪ್ರಿಲ್ 30ರ ವೇಳೆಗೆ ಈ ಯೋಜನೆಯಡಿ 9.04 ಕೋಟಿ ಜನರು ನೋಂದಣಿ ಆಗಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

₹1 ಲಕ್ಷ ಲಂಚ: ಪಿಐ ಅಮಾನತು

ಯಾದಗಿರಿ: ₹1 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರಿಗೆ ಸಿಕ್ಕಿಬಿದ್ದಿದ್ದ ಗುರುಮಠಕಲ್ ಠಾಣೆಯ ಇನ್‌ಸ್ಪೆಕ್ಟರ್ ವೀರಣ್ಣ ದೊಡ್ಡಮನಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.



ವೀರಣ್ಣ ದೊಡ್ಡಮನಿ

ದೌರ್ಜನ್ಯ ಮತ್ತು ಹಲ್ಲೆ ಪ್ರಕರಣಗಳ ಆರೋಪಿ, ಗೋಪಾಲಪುರದ ಆನಂದ್ ಭಜಂತ್ರಿ ಅವರನ್ನು ಬಂಧಿಸದಿರುವುದಕ್ಕೆ ಹಾಗೂ 'ಬಿ' ರಿಪೋರ್ಟ್ ಹಾಕಲು ಆತನಿಂದ ₹1 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರು ವೀರಣ್ಣ ಅವರನ್ನು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

ವೀರಣ್ಣ ಅವರು ಅಶಿಸ್ತು, ದುರ್ನಡತೆ ತೋರಿದ್ದು, ಇಲಾಖೆ ಗೌರವಕ್ಕೆ ಚ್ಯುತಿ ತಂದಿದ್ದಾರೆ. ಹೀಗಾಗಿ ವಿಚಾರಣೆ ಬಾಕಿ ಇರಿಸಿ ಕರ್ತವ್ಯದಿಂದ ಅಮಾನತುಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1620 (1610)
ಸೋಯಾ (ರಿಫೈನ್ಡ್)	₹1505 (1500)
ಸೂರ್ಯಕಾಂತಿ (ರಿಫೈನ್ಡ್)	₹1645 (1640)
ಪಾಮೋಲಿನ್	₹1485 (1480)

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹590
	12 ಕ್ಕೆ	₹84
ಮೈಸೂರು:	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹222-618
ದ್ವಿತಳಿ (ಬಿ.ವಿ)	₹285-777

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹253
ಆರ್‌ಎಸ್‌ಎಸ್-5	₹246.50
ಗುಡ್ ಲಾಟ್	₹215

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1400
ಮಧ್ಯಮ	₹600-1000
ಸಣ್ಣ	₹200-600

'ಲೋಕಭವನಗಳು ಈಗ ಬಿಜೆಪಿ, ಆರ್‌ಎಸ್‌ಎಸ್ ಕಚೇರಿಗಳಾಗಿವೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಲೋಕಭವನಗಳು ಬಿಜೆಪಿ, ಆರ್‌ಎಸ್‌ಎಸ್ ಕಚೇರಿಗಳಾಗಿವೆ. ಬಿಜೆಪಿಯೇತರ ಪಕ್ಷಗಳು ಸರ್ಕಾರ ರಚಿಸದಂತೆ ಕೇಂದ್ರ ಸರ್ಕಾರವು ರಾಜ್ಯಪಾಲರನ್ನು ಬಳಸಿಕೊಂಡು ಶತಾಯಗತಾಯ ಪ್ರಯತ್ನ ನಡೆಸುತ್ತಿದೆ' ಎಂದು ಸಚಿವ ಪ್ರಿಯಾಂಕ್ ಖರ್ಗೆ ಶನಿವಾರ ಇಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನ ಗೆದ್ದ ಪಕ್ಷವನ್ನು ಸರ್ಕಾರ ರಚನೆಗೆ ಆಹ್ವಾನಿಸುವುದು ರಾಜ್ಯಪಾಲರ ಕರ್ತವ್ಯ' ಎಂದು ಪ್ರತಿಪಾದಿಸಿದರು.

ತಮಿಳುನಾಡಿನಲ್ಲಿ ಉದ್ದೇಶಪೂರ್ವಕವಾಗಿ ಟಿವಿಕೆ ಪಕ್ಷದ ಅಧ್ಯಕ್ಷ ಸಿ. ವಿಜಯ್ ಜೋಸೆಫ್ ಅವರಿಗೆ ಅವಕಾಶ ನಿರಾಕರಿಸಲಾಗುತ್ತಿದೆ. ಬಹುಮತ ಸಾಬೀತುಪಡಿಸಬೇಕಿರುವುದು ವಿಧಾನಸಭೆಯಲ್ಲಿಯೇ ಹೊರತು ರಾಜ್ಯಪಾಲರ ಮನೆಯಲ್ಲಿ ಅಲ್ಲ. ಇಷ್ಟೊಂದು ಸರಳ ಸತ್ಯ ರಾಜ್ಯಪಾಲರಿಗೆ ಗೊತ್ತಿಲ್ಲವೇ' ಎಂದು ಪ್ರಶ್ನಿಸಿದರು.



ಗ್ರಾ.ಪಂ ಗಡಿ ಗುರುತಿಸುವ ಕಾರ್ಯಕ್ಕೆ ಆಕ್ಷೇಪಣೆ ಸಲ್ಲಿಸಲು ಕೊನೆ ದಿನ ಮುಗಿದಿದ್ದು, ವರ್ಷಾಂತ್ಯದೊಳಗೆ ರಾಜ್ಯದ ಗ್ರಾ.ಪಂ.ಗಳಿಗೆ ಚುನಾವಣೆ ನಡೆಸಲಾಗುವುದು. ತಾ.ಪಂ, ಜಿ.ಪಂ. ಚುನಾವಣೆ ಸಹ ನಡೆಸಲಾಗುವುದು
ಪ್ರಿಯಾಂಕ್ ಖರ್ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ

'ಬಹುಮತ ಇಲ್ಲದಿದ್ದರೂ ರಾಜ್ಯದಲ್ಲಿ ಯಡಿಯೂರಪ್ಪ, ಮಹಾರಾಷ್ಟ್ರದಲ್ಲಿ ದೇವೇಂದ್ರ ಫಡಣವೀಸ್ ಅವರಿಗೆ ಅವಕಾಶ ಕೊಟ್ಟಿದ್ದು ಏಕೆ? ಬಿಜೆಪಿಗೊಂದು, ಬೇರೆ ಪಕ್ಷದವರೊಂದಿಗೆ ನ್ಯಾಯವೇ?' ಎಂದರು.

'ಸಮಾವೇಶ ಹೇಗೆ ಮಾಡ್ತಾರೆ, ನೋಡ್ತೇವೆ...'

20ರಿಂದ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ: ಸಭೆಯಲ್ಲಿ ಶರ್ಮಾ ಸವಾಲು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ತುಮಕೂರಿನಲ್ಲಿ ಮೇ 20 ರಂದು ನಡೆಸಲು ಉದ್ದೇಶಿಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಮೂರು ವರ್ಷದ ಸಾಧನಾ ಸಮಾವೇಶದ ದಿನದಂದೇ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರ ಆರಂಭವಾಗಲಿದೆ.

'ಸಮಾವೇಶ ಹೇಗೆ ಮಾಡುತ್ತಾರೆ ನೋಡುತ್ತೇವೆ' ಎಂದು ಕಾರ್ಮಿಕ ಮುಖಂಡ ಪ್ರೊ.ಕೆ.ಎಸ್.ಶರ್ಮಾ ಹೇಳಿದರು.

ಅನಿರ್ದಿಷ್ಟಾವಧಿ ಮುಷ್ಕರ ಹಿನ್ನೆಲೆಯಲ್ಲಿ ಶನಿವಾರ ಇಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಶನಿವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

'ಸಾರಿಗೆ ನೌಕರರು ವೇತನ ಹಿಂಬಾಕಿ ಪಾವತಿಗೆ ಹಾಗೂ ವೇತನ ಪರಿಷ್ಕರಣೆಗೆ ಆಗ್ರಹಿಸಿ ಎರಡು ವರ್ಷಗಳಿಂದ ಹೋರಾಟ ನಡೆಸುತ್ತ ಬಂದಿದ್ದಾರೆ. ಸರ್ಕಾರ ಭರವಸೆ ನೀಡುತ್ತದೆಯೇ ಹೊರತು ಬೇಡಿಕೆ ಈಡೇರಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮೇ 20ರಿಂದ ಸಾರಿಗೆ ವ್ಯವಸ್ಥೆಯನ್ನು ಬಂದ್ ಮಾಡುತ್ತೇವೆ. ಸಾರಿಗೆ ನೌಕರರಿಂದ ಶಕ್ತಿ ಯೋಜನೆ ಯಶಸ್ವಿಯಾಗಿದೆಯೇ ಹೊರತು ಸಿದ್ದರಾಮಯ್ಯ ಅವರಿಂದ ಅಲ್ಲ' ಎಂದು ಕಿಡಿಕಾರಿದರು.



ಹುಬ್ಬಳ್ಳಿ ಕೆ.ಎಸ್.ಶರ್ಮಾ ಸಭಾಭವನದಲ್ಲಿ ಶನಿವಾರ ನಡೆದ ಸಭೆಯಲ್ಲಿ ಕಾರ್ಮಿಕರು ಮೇ 20ರಿಂದ ನಡೆಸಲಿರುವ ಸಾರಿಗೆ ನೌಕರರ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದರು –ಪ್ರಜಾವಾಣಿ ಚಿತ್ರ

ಜಂಟಿ ಕ್ರಿಯಾ ಸಮಿತಿಯ ಕಾರ್ಯದರ್ಶಿ ವಿಜಯ ಭಾಸ್ಕರ್, 'ಸರ್ಕಾರದ ಸಾಧನಾ ಸಮಾವೇಶಕ್ಕೆ ತೆರಳಲು ರಾಜ್ಯದ ವಿವಿಧೆಡೆಯಿಂದ ನಾಲ್ಕು ಸಾವಿರ ಬಸ್‌ಗಳನ್ನು ಕಾಯ್ದಿರಿಸಲಾಗಿದೆ. ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ, ಅಂದಿನಿಂದ ಬೇಡಿಕೆ ಈಡೇರುವವರೆಗೂ ಒಂದು ಬಸ್ ಸಹ ರಸ್ತೆಗೆ ಇಳಿಯುವುದಿಲ್ಲ' ಎಂದರು.

'38 ತಿಂಗಳ ವೇತನ ಹಿಂಬಾಕಿ, 2024ರ ಜನವರಿಯಿಂದ ಸಾರಿಗೆ ನೌಕರರಿಗೆ ವೇತನ ಪರಿಷ್ಕರಣೆ ಆಗಬೇಕು ಎನ್ನುವುದು ನಮ್ಮ ಪ್ರಮುಖ ಬೇಡಿಕೆ. ಬೆಂಗಳೂರು ಚಲೋ ಮುಷ್ಕರದ ಹಿಂದಿನ ದಿನ ಹಿಂಬಾಕಿ ವೇತನ ಬಿಡುಗಡೆ ಮಾಡುವ ಭರವಸೆಯನ್ನು ಸರ್ಕಾರ ನೀಡಿತ್ತು. ಶಕ್ತಿ ಯೋಜನೆಗೆ ಧನ ಸಹಾಯ ಮಾಡುವ ಭರದಲ್ಲಿ ನೌಕರರಿಗೆ ಸಿಗಬೇಕಾದ ಸೌಲಭ್ಯಗಳಿಗೆ ಕತ್ತರಿ ಹಾಕಿರುವುದು ಅನ್ಯಾಯ' ಎಂದರು.

ರಾಷ್ಟ್ರಕೂಟರ ಕಾಲದ ವೀರಗಲ್ಲು ಪತ್ತೆ

ಪ್ರಜಾವಾಣಿ ವಾರ್ತೆ

ಗದಗ: ತಾಲ್ಲೂಕಿನ ಲಕ್ಕುಂಡಿ ಗ್ರಾಮದಲ್ಲಿ ಶನಿವಾರ ಕುಂಬಾರ ಬಾವಿ ಸ್ವಚ್ಛಗೊಳಿಸುವ ವೇಳೆ ರಾಷ್ಟ್ರಕೂಟರ ಕಾಲದ್ದು ಎಂದು ಹೇಳಲಾದ ವೀರಗಲ್ಲು ಪತ್ತೆಯಾಗಿದೆ.

'ಇದು ಕ್ರಿ.ಶ. 9 ಮತ್ತು 10ನೇ ಶತಮಾನದ ವೀರಗಲ್ಲು. ನಾಲ್ಕು ಪಟ್ಟಿಕೆಗಳಿಂದ ಕೂಡಿದೆ. ಕೆಳಗಿನ ಪಟ್ಟಿಯಲ್ಲಿ ಹೋರಾಟದ ದೃಶ್ಯ, ಎರಡನೇ ಪಟ್ಟಿಕೆಯಲ್ಲಿ ಯುದ್ಧದಲ್ಲಿ ಹೋರಾಡಿ ಸತ್ತಂತಹ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದುಕೊಂಡು ಹೋಗುವಂತಹ ದೃಶ್ಯವಿದೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ರಾಜ್ಯ ಸಮಿತಿ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

'ಮೂರನೇ ಪಟ್ಟಿಕೆಯಲ್ಲಿ ವೀರನು ಸ್ವರ್ಗದಲ್ಲಿ ಕುಳಿತಿದ್ದು ನಾಲ್ವರು ಚಾಮರಧಾರಣಿಯರು ಕಂಡುಬರುತ್ತಾರೆ.



ಲಕ್ಕುಂಡಿಯಲ್ಲಿ ಪತ್ತೆಯಾದ ವೀರಗಲ್ಲು

ನಾಲ್ಕನೇ ಪಟ್ಟಿಕೆಯ ಮೇಲ್ಭಾಗದಲ್ಲಿ ಸೂರ್ಯ, ಚಂದ್ರ, ಶಿವಲಿಂಗದ ಚಿತ್ರವಿದೆ. ಶಿವಲಿಂಗಕ್ಕೆ ಯತಿಯು ಪೂಜಿಸುತ್ತಿರುವುದನ್ನು ಕಾಣಬಹುದು. ಇದು ತುಂಬಾ ವಿಶೇಷವಾದ ವೀರಗಲ್ಲಾಗಿದೆ' ಎಂದು ತಿಳಿಸಿದ್ದಾರೆ.

ಬೀದಿ ನಾಯಿ ಕಚ್ಚಿ ಮಗು ಸಾವು

ಪ್ರಜಾವಾಣಿ ವಾರ್ತೆ

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ದುಬಲಗುಂಡಿ ಗ್ರಾಮದಲ್ಲಿ ಬೀದಿ ನಾಯಿ ದಾಳಿ ಕಚ್ಚಿ ಗಂಭೀರ ಸ್ವರೂಪದ ಗಾಯಗಳಾಗಿದ್ದ ಐದು ತಿಂಗಳ ಮಗು ಶನಿವಾರ ಮೃತಪಟ್ಟಿದೆ.



ಶಿವಾನಿ

ಗ್ರಾಮದ ನಿವಾಸಿಗಳಾದ ಸಿದ್ದಪ್ಪ–ಸುಧಾ ದಂಪತಿ ಸೇರಿಗೆ ನಾಲ್ಕನೇ ಹೆಣ್ಣು ಮಗಳಾದ ಶಿವಾನಿ (5 ತಿಂಗಳು) ಮೃತ ಮಗು. ಚಿಕಿತ್ಸೆಗೆ ಸ್ಪಂದಿಸದೇ ಬೀದರ್‌ನ ಬ್ರಿಮ್ಸ್‌ನಲ್ಲಿ ಮೃತಪಟ್ಟಿದ್ದಾಳೆ.

ಸುಧಾ ಅವರು ಶನಿವಾರ ಬೆಳಗಿನ ಜಾವ ಮನೆಯ ಪಡಸಾಲೆಯಲ್ಲಿ ಮಗುವನ್ನು ಮಲಗಿಸಿ ದೈನಂದಿನ ಚಟುವಟಿಕೆಗಳಲ್ಲಿ ತೊಡಗಿದ್ದರು. ಈ ವೇಳೆ ಏಕಾಏಕಿ ಬೀದಿ ನಾಯಿ ನುಗ್ಗಿ, ಮಗುವಿನ ಮೇಲೆ ದಾಳಿ ಮಾಡಿದೆ. ಶಿವಾನಿ ಜೋರಾಗಿ ಕಿರುಚಿದ ಶಬ್ದ ಕೇಳಿ ಸುಧಾ ಅವರು ಓಡಿ ಬಂದಿದ್ದಾರೆ. ಅಷ್ಟೊತ್ತಿಗೆ ಶಿವಾನಿಯ ತಲೆ, ಮುಖ ಸೇರಿದಂತೆ ದೇಹದ ವಿವಿಧ ಭಾಗಗಳಲ್ಲಿ ಕಚ್ಚಿ ಗಂಭೀರವಾಗಿ ಗಾಯಗೊಳಿಸಿದೆ. ತಕ್ಷಣವೇ ಮಗುವನ್ನು ಬ್ರಿಮ್ಸ್‌ಗೆ ಕರೆದೊಯ್ದು ಚಿಕಿತ್ಸೆ ನೀಡಲಾಯಿತು. ಆದರೆ, ಮಗು ಬದುಕುಳಿಯಲಿಲ್ಲ. ಆಸ್ಪತ್ರೆಯಲ್ಲಿ ಸುಧಾ ಹಾಗೂ ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು.

ಗ್ರಾಮಸ್ಥರ ಆಕ್ರೋಶ: ಗ್ರಾಮದಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮಕೈಗೊಳ್ಳದೇ ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಗ್ರಾಮಸ್ಥರು, ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೃತ ಮಗುವಿನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕೊಡಗು: ಕೆಲವೆಡೆ ಬಿರುಸಿನ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ತಾಲ್ಲೂಕಿನ ನಾಪೋಕ್ಲು ಸಮೀಪದ ಮೂರ್ನಾಡು ಸುತ್ತಮುತ್ತ ಶನಿವಾರ ಮಧ್ಯಾಹ್ನ ಸುಮಾರು ಅರ್ಧಗಂಟೆಗಳ ಕಾಲ ಬಿರುಸಿನ ಮಳೆ ಸುರಿಯಿತು.

ಬಿರುಗಾಳಿಯಿಂದ ಕೂಡಿದ ಮಳೆಯಿಂದ ಪಟ್ಟಣದಲ್ಲಿ ಜನಜೀವನ ಅಸ್ತವ್ಯಸ್ತವಾಯಿತು. ವಿರಾಜಪೇಟೆ ಮತ್ತು ನಾಪೋಕ್ಲು ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ.





ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಸೇರಿದ್ದ ಜನಸ್ತೋಮ (ಎಡಚಿತ್ರ) ಕೋಲ್ಕತ್ತದ ಬ್ರಿಗೇಡ್ ಮೈದಾನದಲ್ಲಿ ಶನಿವಾರ ನಡೆದ ಬಂಗಾಳದ ಮೊದಲ ಬಿಜೆಪಿ ಸರ್ಕಾರದ ಪ್ರಮಾಣ ವಚನ ಸಮಾರಂಭಕ್ಕೆ ಬಂದ ಪ್ರಧಾನಿ ಮೋದಿ ಅವರು, ವೇದಿಕೆಯಲ್ಲಿ ಮಂಡಿಯೂರಿ ನಮಿಸಿ ಬಂಗಾಳದ ಜನರಿಗೆ ಧನ್ಯವಾದ ಸಲ್ಲಿಸಿದರು – ಪಿಟಿಐ ಚಿತ್ರ

ಸುವರ್ಣ ಬಂಗಾಳ: ಸುವೇಂದು ಪ್ರಮಾಣ

ಒಂದನೇ ಪುಟದಿಂದ...

ಸಂಪುಟಕ್ಕೆ ಐದು ಸಚಿವರು: ಬಿಜೆಪಿ ಶಾಸಕರಾದ ಅಗ್ನಿಮಿತ್ರ ಪಾಲ್, ಅಶೋಕ್ ಕೀರ್ತಾನಿಯಾ, ಖುದಿರಾಮ್ ತುಡು ಮತ್ತು ನಿಶಿತ್ ಪ್ರಾಮಾಣಿಕ್ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಸುವೇಂದು ಚೊಚ್ಚಲ ಸಂಪುಟವು ಬ್ರಾಹ್ಮಣ, ಒಬಿಸಿ, ಬುಡಕಟ್ಟು, ಮತುವಾ, ಕಾಯಸ್ಥ ಮತ್ತು ರಾಜ್‌ಬನ್ಶಿ ಸಮುದಾಯಗಳ ಪ್ರಾತಿನಿಧ್ಯ ಮತ್ತು ಬಂಗಾಳದ ಸಾಮಾಜಿಕ–ಪ್ರಾದೇಶಿಕ ಸಮತೋಲನಕ್ಕಾಗಿ ಬಿಜೆಪಿ ನಡೆಸಿರುವ ಪ್ರಯತ್ನವನ್ನು ಬಿಂಬಿಸುತ್ತದೆ.

ಸುವೇಂದು ಅಧಿಕಾರಿ – ಬ್ರಾಹ್ಮಣ, ಘೋಷ್ – ಒಬಿಸಿ, ಅಗ್ನಿಮಿತ್ರ – ಕಾಯಸ್ಥ, ಕೀರ್ತಾನಿಯಾ – ಮತುವಾ, ಖುದಿರಾಮ್ – ಬುಡಕಟ್ಟು ಸಮುದಾಯ ಮತ್ತು ಪ್ರಾಮಾಣಿಕ್ ಅವರು ರಾಜ್‌ಬನ್ಶಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ..


ಬಿಜೆಪಿಯ ಮೊದಲ ಸಚಿವ ಸಂಪುಟಕ್ಕೆ ಸೇರ್ಪಡೆಯಾಗಿರುವ ಇಬ್ಬರು ಸಚಿವರು ಉತ್ತರ ಮತ್ತು ಮೂವರು ದಕ್ಷಿಣ ಬಂಗಾಳಕ್ಕೆ ಸೇರಿದವರು. ಸಚಿವರ ಮೊದಲ ಪಟ್ಟಿಯಲ್ಲಿ ಬಂಗಾಳದ ಪ್ರಮುಖ ರಾಜಕೀಯ ಧುರೀಣರು, ಮುಖ್ಯಮಂತ್ರಿಗಳನ್ನು ಕೊಟ್ಟ 'ಕೋಲ್ಕತ್ತ' ನಗರದಿಂದ ಯಾವುದೇ ಪ್ರತಿನಿಧಿ ಇರಲಿಲ್ಲ ಎನ್ನುವುದು ಗಮನಾರ್ಹ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಆಗಿರುವುದಕ್ಕೆ ನನ್ನ ಪುತ್ರ ಸಂತೋಷಪಟ್ಟಿದ್ದಕ್ಕಿಂತ ಹೆಚ್ಚಾಗಿ ಬಂಗಾಳದ ಜನ ಸಂತೋಷಪಟ್ಟಿದ್ದಾರೆ
ಗಾಯತ್ರಿ ಅಧಿಕಾರಿ, ಸುವೇಂದು ಅಧಿಕಾರಿ ಅವರ ತಾಯಿ

ಗೌರವ ನಮನ: ತೃಣಮೂಲ ಕಾಂಗ್ರೆಸ್ (ಟಿಎಂಸಿ) ದೌರ್ಜನ್ಯಕ್ಕೆ ಒಳಗಾಗಿ ಹತ್ಯೆಗೀಡಾಗಿದ್ದಾರೆ ಎನ್ನಲಾದ ಬಿಜೆಪಿ ಕಾರ್ಯಕರ್ತರಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಗೌರವ ನಮನ ಸಲ್ಲಿಸಿದರು. ಕಾರ್ಯಕರ್ತರ ತ್ಯಾಗ, ಬಲಿದಾನ ಸದಾ ಸ್ಮರಣೀಯ ಎಂದರು.

ಮಕನ್‌ಲಾಲ್ ಸರ್ಕಾರ್‌ಗೆ ಅಭಿನಂದನೆ

ಸುವೇಂದು ಅಧಿಕಾರಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೆ ಮುನ್ನ ಪ್ರಧಾನಿ ಮೋದಿ ಅವರು 98 ವರ್ಷದ, ಬಿಜೆಪಿಯ ಹಿರಿಯ ಮುಖಂಡ ಮಕನ್‌ಲಾಲ್ ಸರ್ಕಾರ್ ಅವರನ್ನು ವೇದಿಕೆಯಲ್ಲಿ ಅಭಿನಂದಿಸಿದರು. ಅವರ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆದರು. ಇಬ್ಬರೂ ಪರಸ್ಪರ ಅಪ್ಪಿಕೊಂಡು ಶುಭಾಶಯ ವಿನಿಮಯ ಮಾಡಿಕೊಂಡರು.



ಮಕನ್‌ಲಾಲ್

ಕಾಶ್ಮೀರದಲ್ಲಿ 1952ರಲ್ಲಿ ತ್ರಿವರ್ಣ ಧ್ವಜ ಚಳವಳಿ ನಡೆದ ಸಂದರ್ಭದಲ್ಲಿ ಜನ ಸಂಘದ ಸ್ಥಾಪಕ ಶ್ಯಾಮ ಪ್ರಸಾದ್ ಮುಖರ್ಜಿ ಅವರೊಂದಿಗೆ ಮಕನ್‌ಲಾಲ್ ಸರ್ಕಾರ್ ಅವರನ್ನೂ ಬಂಧಿಸಲಾಗಿತ್ತು. 'ಸ್ವಾತಂತ್ರ್ಯಾನಂತರ ಭಾರತದಲ್ಲಿ ರಾಷ್ಟ್ರೀಯವಾದಿ ಚಳವಳಿಯಲ್ಲಿ ಮುಂಚೂಣಿಯಲ್ಲಿದ್ದವರು ಸರ್ಕಾರ್' ಎಂದು ಬಿಜೆಪಿಯ ಪ್ರಕಟಣೆ ತಿಳಿಸಿದೆ.

1980ರಲ್ಲಿ ಬಿಜೆಪಿ ರಚನೆಯಾದ ನಂತರ ಸರ್ಕಾರ್ ಅವರು, ಬಂಗಾಳದ ಪಶ್ಚಿಮ ದಿನಾಜ್‌ಪುರ, ಜಲ್ಪೈಗುರಿ ಮತ್ತು ಡಾರ್ಜಿಲಿಂಗ್ ಜಿಲ್ಲೆಗಳ ಸಂಘಟನಾ ಸಂಯೋಜಕರಾಗಿದ್ದರು. ಎಡ ಪಕ್ಷದ ಪ್ರಾಬಲ್ಯದ ನಡುವೆಯೂ 1981ರಿಂದ ಸತತ 7 ವರ್ಷ ಅವರು ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಸೋಮವಾರವೂ ಪ್ರಮಾಣ ವಚನ

ಹೊಸದಾಗಿ ಮತ್ತೆ ಸಂಪುಟಕ್ಕೆ ಸೇರ್ಪಡೆಯಾಗಲಿರುವವರಿಗೆ ಸೋಮವಾರ ರಾಜಭವನದಲ್ಲಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ನಡೆಯಲಿದೆ.

ಐಎಫ್‌ಎಸ್ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಗಳಿಸಿದ ಬಸವರಾಜ ಕೆಂಪವಾಡ ಮನದಾಳ

'ಕೋಚಿಂಗ್‌ಗೆ ಹೋಗದೆ ಸಾಧಿಸುವ ಛಲವಿತ್ತು'

• ಪರಶುರಾಮ ನಂದೇಶ್ವರ

ಅಥಣಿ (ಬೆಳಗಾವಿ ಜಿಲ್ಲೆ): ಭಾರತೀಯ ಅರಣ್ಯ ಸೇವೆಯ (ಐಎಫ್‌ಎಸ್) 2025ನೇ ಸಾಲಿನ ಪರೀಕ್ಷೆಯಲ್ಲಿ ತಾಲ್ಲೂಕಿನ ಸವದಿ ಗ್ರಾಮದ ಬಸವರಾಜ ಕೆಂಪವಾಡ (25) ಅವರು ಮೊದಲ ರ್‍ಯಾಂಕ್ ಪಡೆದಿದ್ದಾರೆ.



ಬಸವರಾಜ ಕೆಂಪವಾಡ

ಕೃಷಿ ಕುಟುಂಬದ ಯುವಕರೊಬ್ಬರು ಮಾಡಿದ ಸಾಧನೆ ಇಡೀ ಊರಲ್ಲೇ ಸಂಭ್ರಮ ಮೂಡಿಸಿದೆ. ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಶುಕ್ರವಾರ ಫಲಿತಾಂಶ ಪ್ರಕಟಿಸಿದೆ.

ಬಾಲ್ಯದಿಂದಲೂ ಕಲಿಕೆಯಲ್ಲಿ ಮುಂದಿದ್ದ ಬಸವರಾಜ ಸವದಿಯ ಖಾಸಗಿ ಶಾಲೆಯಲ್ಲಿ 1ರಿಂದ 5ನೇ ತರಗತಿಯವರೆಗೆ, ರಾಯಬಾಗ ತಾಲ್ಲೂಕಿನ ಅಳಗವಾಡಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ 6ರಿಂದ 10ನೇ ತರಗತಿಯವರೆಗೆ ಅಭ್ಯಸಿಸಿದರು.

ಬಾಗಲಕೋಟೆ ಜಿಲ್ಲೆಯ ಜಮಖಂಡಿಯ ಖಾಸಗಿ ಕಾಲೇಜಿನಲ್ಲಿ ಪಿಯುಸಿ, ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಸರ್ಕಾರಿ ಕಾಲೇಜಿನಲ್ಲಿ ಬಿ.ಎಸ್ಸಿ (ಅರಣ್ಯ) ಓದಿದರು. ನಂತರ ಅಧ್ಯಯನಕ್ಕಾಗಿ ಬೆಂಗಳೂರಿನತ್ತ ಮುಖ ಮಾಡಿದರೂ ಕೋಚಿಂಗ್ ಪಡೆಯದೇ ಸ್ವಯಂ ಅಧ್ಯಯನ ಕೈಗೊಂಡರು.

ಐಎಫ್‌ಎಸ್ ಪರೀಕ್ಷೆಯಲ್ಲಿ ಸಾಧನೆ ಮೆರೆದ ಅವರು 'ಪ್ರಜಾವಾಣಿ' ಜತೆಗೆ ಸಂತಸ ಹಂಚಿಕೊಂಡರು.

'ನಮ್ಮದು ಕೃಷಿ ಕುಟುಂಬ. ಸಹಜವಾಗಿ ಅರಣ್ಯ ಸಂರಕ್ಷಣೆಯತ್ತ ಆಸಕ್ತಿ ಇತ್ತು. ಹಾಗಾಗಿಯೇ ಬಿ.ಎಸ್ಸಿ (ಅರಣ್ಯ) ಅಭ್ಯಸಿಸಿ, ಐಎಫ್‌ಎಸ್ ಪರೀಕ್ಷೆಗಾಗಿ ತಯಾರಿ ನಡೆಸಿದೆ. ಕೋಚಿಂಗ್ ಸೆಂಟರ್‌ಗೆ ಹೋಗದೆ ಸಾಧಿಸುವ ಛಲವಿತ್ತು. ಹಾಗಾಗಿ ಬೆಂಗಳೂರಿನಲ್ಲಿ ರೂಮ್ ಮಾಡಿಕೊಂಡು, ಗ್ರಂಥಾಲಯದಲ್ಲಿ ನಿತ್ಯ ಬೆಳಿಗ್ಗೆ 10ರಿಂದ ರಾತ್ರಿ 12ರವರೆಗೆ ಅಧ್ಯಯನ ಮಾಡುತ್ತಿದ್ದೆ. ಎರಡು ವರ್ಷಗಳ ನಿರಂತರ ಪ್ರಯತ್ನಕ್ಕೀಗ ಫಲ ಸಿಕ್ಕಿದೆ' ಎಂದು ಬಸವರಾಜ ಸಂತಸ ಹಂಚಿಕೊಂಡರು.


'ಇದು ನನ್ನ ಎರಡನೇ ಪ್ರಯತ್ನ. ತಯಾರಿ ಮಾಡಿಕೊಳ್ಳದೆ ಮೊದಲ ಪೂರ್ವಭಾವಿ ಪರೀಕ್ಷೆಯಲ್ಲೂ ಉತ್ತೀರ್ಣ ಆಗಿರಲಿಲ್ಲ. ಆಗಿನ ತಪ್ಪು ಸರಿಪಡಿಸಿಕೊಂಡು, ಈಗ ಯೋಜನಾಬದ್ಧವಾಗಿ ಅಭ್ಯಸಿಸಿದೆ' ಎಂದರು.

'ಎರಡು ವರ್ಷ ಯಾವುದೇ ಸಮಾರಂಭಕ್ಕೆ ಹೋಗಿರಲಿಲ್ಲ. ಇಡೀ ದಿನ ಅಧ್ಯಯನಕ್ಕಾಗಿ ಮೀಸಲಿಟ್ಟಿದ್ದೆ. ಸಾಮಾಜಿಕ ಮಾಧ್ಯಮಗಳ ಬಳಕೆಯಿಂದ ದೂರವಿದ್ದೆ. ಆದರೆ, ಯೂಟ್ಯೂಬ್‌ನಲ್ಲಿ ಅಧ್ಯಯನಕ್ಕೆ ಪೂರಕ ಮಾಹಿತಿ ಬಳಸಿಕೊಳ್ಳುತ್ತಿದ್ದೆ' ಎಂದು ಹೇಳಿದರು.

'ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆಯಿಂದ ಈಚೆಗೆ ಎದುರಿಸಿದ್ದ ಪರೀಕ್ಷೆಯಲ್ಲಿ ನಿರಾಸೆಯಾಗಿತ್ತು. ಆದರೆ, ಈ ಪರೀಕ್ಷೆ ಫಲಿತಾಂಶದ ಸಂತಸ ಅದನ್ನೆಲ್ಲ ಮರೆಯಿಸಿದೆ. ನನ್ನ ಸಾಧನೆಯನ್ನು ಹೆತ್ತವರು, ಸ್ನೇಹಿತರು ಮತ್ತು ನನಗೆ ಪ್ರಾಥಮಿಕ ವಿಭಾಗದಿಂದ ಪದವಿ ಹಂತದವರೆಗೆ ಮಾರ್ಗದರ್ಶನ ನೀಡಿದ ಎಲ್ಲ ಗುರುವೃಂದಕ್ಕೆ ಸಮರ್ಪಿಸುತ್ತೇನೆ' ಎಂದರು.

ಭವಿಷ್ಯದಲ್ಲಿ ಐಎಎಸ್ ಅಧಿಕಾರಿ ಆಗಬೇಕು ಎಂಬುದೂ ಬಸವರಾಜ ಅವರ ಕನಸು.

ಟೈಗರ್‌ನೆಸ್ಟ್‌ನಲ್ಲಿ...
ಭೂತಾನ್ ಪ್ರವಾಸೋದ್ಯಮದ ಆಕರ್ಷಣೆಯ ಬಿಂದು ಟೈಗರ್‌ನೆಸ್ಟ್. ಇದರ ಶಿಖರದಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಆನಂದ ಏರುವ ಹಾದಿಯಲ್ಲಿ ಸಿಗುತ್ತದೆ...



6

ಸಾನ್ವಿ ಸಾಕಿದ ಅಳಿಲು ಮರಿ!



ಸಾನ್ವಿ ಅಕ್ಕನೇ ನನ್ನಮ್ಮ....

ಅನಾಥ ಅಳಿಲು ಮರಿಯನ್ನು ಕಂಡ ಸಾನ್ವಿಯ ಮನಸ್ಸು ಕರಗಿತ್ತು. 'ಬದುಕಿಸಬೇಕು' ಎನ್ನುವ ಹಟದಿಂದ ಅದನ್ನು ಮನೆಗೆ ತಂದ ಬಾಲಕಿಗೆ, ಮೊದಲಿಗೆ ಪೋಷಕರ ಆತಂಕ ಎದುರಾಯಿತು. ಆದರೆ ಅವಳ ಮಮತೆ, ಆರೈಕೆಯ ಮುಂದೆ ಎಲ್ಲರೂ ಸೋತರು.

• ಸ್ವರೂಪ್ ಕೊಟ್ಟೂರು

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕು ನರಸಾಪುರದ ಸರ್ಕಾರಿ ಶಾಲೆಯ ಆರನೇ ತರಗತಿ ವಿದ್ಯಾರ್ಥಿನಿ ಸಾನ್ವಿ ಕೊನೆಯ ಪ್ರಶ್ನೆಪತ್ರಿಕೆ ಬರೆದು, ಬೇಸಿಗೆ ರಜೆಯ ಖುಷಿಯನ್ನು ಹೊತ್ತು ಮನೆ ಕಡೆ ಓಡುತ್ತಿದ್ದಳು. ಆ ಓಟದ ಮಧ್ಯೆ, ಮರದ ನೆರಳಲ್ಲಿ ಬಿದ್ದಿದ್ದ ಅಳಿಲು ಮರಿ ಆಕೆಯನ್ನು ನಿಲ್ಲುವಂತೆ ಮಾಡಿತು. ಅದು ನೆಲದ ಮೇಲೆ ನಿಸ್ಸಹಾಯವಾಗಿ ಬಿದ್ದಿದ್ದರೂ, ಅದರ ಸಣ್ಣ ಎದೆ ನಿಧಾನವಾಗಿ ಏರಿಳಿಯುತ್ತಿತ್ತು. ಕಣ್ಣುಗಳು ಇನ್ನೂ ತೆರೆದು ನೋಡಲಾರದಷ್ಟು ಚಿಕ್ಕದು. ಸಾನ್ವಿ ಹತ್ತಿರ ಹೋಗಿ ಕುಳಿತುಕೊಂಡಳು. ಮರದ ಮೇಲೆ ಕಣ್ಣು ಹರಿಸಿ 'ತಾಯಿ ಬರುತ್ತಾಳೆಯೇ' ಎಂದು ಕಾಯತೊಡಗಿದಳು. ಗಾಳಿ ಎಲೆಗಳನ್ನು ಸದ್ದು ಮಾಡಿತು, ಆದರೆ ಅಳಿಲಿನ ತಾಯಿಯ ಸುಳಿವೇ ಇರಲಿಲ್ಲ.

ಸಮಯ ಕಳೆಯುತ್ತಿದ್ದಂತೆ ಆ ಪುಟ್ಟ ಜೀವದ ನಿಶ್ಶಬ್ದತೆ ಸಾನ್ವಿಯೊಳಗೆ ಆತಂಕ ಮೂಡಿಸಿತು. 'ಇದನ್ನು ಬಿಟ್ಟು ಹೋದರೆ...?' ಆ ಕಲ್ಪನೆಯೇ ಅವಳಿಗೆ ತಾಳಲಾರದಂತಾಯಿತು. ನಾಯಿ, ಬೆಕ್ಕುಗಳು, ಬಿಸಿಲಿನ ತಾಪ ಇವೆಲ್ಲವೂ ಒಂದೇ ಕ್ಷಣದಲ್ಲಿ ಅವಳ ಮನಸ್ಸಿನಲ್ಲಿ ಹರಿದವು. ಒಂದು ನಿರ್ಧಾರ. ಒಂದು ಮೃದುವಾದ ಸ್ಪರ್ಶ. ಅವಳು ಅದನ್ನು ಜಾಗ್ರತೆಯಿಂದ ಕೈಗೆತ್ತಿಕೊಂಡಳು. ಆ ಕ್ಷಣದಿಂದಲೇ ಅವಳ ಬದುಕಿನಲ್ಲಿ ಮತ್ತೊಂದು ಪರೀಕ್ಷೆ ಆರಂಭವಾಯಿತು–ಈ ಬಾರಿ ಪ್ರಶ್ನೆಪತ್ರಿಕೆ ಇಲ್ಲ, ಆದರೆ ಜೀವ ಉಳಿಸುವ ಹೊಣೆ.

ಮನೆಗೆ ಬಂದ ತಕ್ಷಣ, ಅವಳ ಕೈಯಲ್ಲಿದ್ದ ಅಳಿಲು ಮರಿಯನ್ನು ನೋಡಿ ಪೋಷಕರು ಗಾಬರಿಯಾದರು. 'ಇದು ತುಂಬ ಚಿಕ್ಕದು... ಬದುಕುವುದೇ ಕಷ್ಟ. ಇದು ಕಾಡು ಪ್ರಾಣಿ... ನಮಗೆ ಹೊಂದಿಕೊಳ್ಳಲ್ಲ...' ಎಂಬ ಆತಂಕದ ಮಾತುಗಳು ಮನೆಯೊಳಗೆ ಕೇಳಿಬಂದವು. ಆದರೆ ಸಾನ್ವಿಯ ಕಣ್ಣುಗಳಲ್ಲಿ ಬೇರೆದ್ದೇ ದೃಢತೆ. ಅವಳು ಮಾತು ಕಡಿಮೆ, ಕಾಳಜಿ ಹೆಚ್ಚು.

ಅವಳ ಮೌನ ಹಟಕ್ಕೆ ಕೊನೆಗೆ ಪೋಷಕರ ಮನಸು ಕರಗಿತು. ಅಣ್ಣ ಗುರು ಕೂಡ ಅವಳ ಜೊತೆ ನಿಂತ. ಬೇಸಿಗೆ ರಜೆಯ ದೀರ್ಘ ದಿನಗಳು ಈಗ ಆಟಕ್ಕೆ ಅಲ್ಲ; ಈ ಪುಟ್ಟ ಜೀವದ ಆರೈಕೆಗೆ ಮೀಸಲಾದವು.

ಎಲ್ಲರ ಪ್ರೀತಿಯ 'ರಾಮು'

ಕೆಲವು ದಿನಗಳಲ್ಲೇ ಅಳಿಲಿಗೆ ನಾಮಕರಣವಾಯಿತು–'ರಾಮು'. ಇಂದು 'ರಾಮು...' ಎಂದು ಕರೆದರೆ ಸಾಕು, ಅದರ ಕಿವಿಗಳು ನಿಮಿರುತ್ತವೆ. ಚುರುಕಾಗಿ ಓಡುತ್ತಾ ಕರೆಯುವವರ ಬೆರಳಿಗೆ ತಲುಪುತ್ತದೆ. ಅದರ ಮೃದುವಾದ ಮೈಮೇಲೆ ಕೈ ಓಡಿಸಿದರೆ, ಅದು ಕಣ್ಣುಮುಚ್ಚಿ ನಿಶ್ಚಲವಾಗಿ ಕುಳಿತುಕೊಳ್ಳುತ್ತದೆ. ಅಂಗೈಯಲ್ಲಿ ಮಲಗುವಾಗ ಅದರ ಉಸಿರಿನ ತಣ್ಣನೆಯ ಸ್ಪರ್ಶವೇ ಒಂದು ವಿಭಿನ್ನ ಅನುಭವ.

ಒಮ್ಮೆ ಮೈಮೇಲೆ ಹತ್ತಿದರೆ, ಸರಸರನೆ ಭುಜದವರೆಗೂ ಓಡಿಬಂದು, ನಾಲಿಗೆಯಿಂದ ನೆಕ್ಕಿ ಕಚಗುಳಿ ಇಡುತ್ತದೆ.



ಸದ್ಯಕ್ಕೇ ಇದೇ ನನ್ನ ಗೂಡು...

ಆ ಮುದ್ದಾದ ಚಲನೆಗಳು ಮನೆಯೊಳಗೆ ನಗುವಿನ ಅಲೆಗಳನ್ನು ಹರಡಿಸುತ್ತವೆ. ಈಗ ರಾಮು ಕೇವಲ ಸಾನ್ವಿಯದ್ದಷ್ಟೇ ಅಲ್ಲ, ಓಣಿಯವರದ್ದೂ ಆಗಿದೆ. ಪ್ರತಿ ಮನೆಗೆ ಹೋಗುವ ಈ ಪುಟ್ಟ ಅತಿಥಿ, ಎಲ್ಲರ ಮನಸ್ಸಿನಲ್ಲಿ ತನ್ನ ಜಾಗ ಮಾಡಿಕೊಂಡಿದೆ.

ಆರಂಭದ ದಿನಗಳಲ್ಲಿ, 'ಇದಕ್ಕೆ ಏನು ತಿನ್ನಿಸಬೇಕು?' ಎಂಬ ಪ್ರಶ್ನೆ ಎಲ್ಲರನ್ನೂ ಕಾಡಿತು. ಹೀಗಾಗಿ ಹಸುವಿನ ಹಾಲನ್ನು ಸಣ್ಣ ಮುಚ್ಚಳದಲ್ಲಿ ಹಾಕಿ, ಹನಿ ಹನಿಯಾಗಿ ಕುಡಿಸಲಾಯಿತು. ಆ ಪುಟ್ಟ ಬಾಯಿ ಹಾಲಿನ ಹನಿಗಳನ್ನು ತಾಕುವ ಕ್ಷಣ– ಅದೇ ಒಂದು ಗೆಲುವು.

ಈಗ ಅದು ದೊಡ್ಡದಾಗಿದೆ. ಬಿಸ್ಕತ್ತು ತುಂಡುಗಳನ್ನು ತಿನ್ನುವುದು, ಕೊಬ್ಬರಿ ತುಂಡನ್ನು ಹಿಡಿದು ಕುಳಿತೇ ಚಪ್ಪರಿಸುವುದು, ಕಲ್ಲಂಗಡಿಯ ಕೆಂಪು ತೊಳೆಯ ಮೇಲೆ ನಾಲಿಗೆ ಓಡಿಸುವುದು ಇವೆಲ್ಲ ದಿನನಿತ್ಯದ ದೃಶ್ಯಗಳು. 'ಕಲ್ಲಂಗಡಿ ಇದಕ್ಕೆ ತುಂಬ ಇಷ್ಟ. ಎರಡು ದಿನಕ್ಕೊಮ್ಮೆ ಸ್ನಾನ ಮಾಡಿಸುತ್ತೇವೆ. ಎಳೆ ಬಿಸಿಲಿನಲ್ಲಿ ಕುಳಿತುಕೊಳ್ಳೋದನ್ನೂ ಇಷ್ಟಪಡುತ್ತದೆ' ಎಂದು ಸಾನ್ವಿ ತಂದೆ ಬಸವರಾಜ್ ಹೇಳುತ್ತಾರೆ.

ರಾಮು ಈಗ ಮನೆಯ ಒಂದು ಭಾಗ. ಬಾಗಿಲು ತೆರೆದರೆ ಒಳಗೆ, ಹೊರಗೆ ನಿರ್ಬಂಧವಿಲ್ಲದೆ ಓಡಾಡುತ್ತದೆ. ಅಕ್ಕಪಕ್ಕದ ಮನೆಗಳೂ ಅದಕ್ಕೆ ಪರಿಚಿತ. ಮಕ್ಕಳು ಅದರ ಜೊತೆ ಆಟ ಆಡುತ್ತಾ ಕಾಲ ಕಳೆಯುತ್ತಾರೆ. 'ಇದು ಪ್ರಾಣಿ ಅನ್ನುವ ಭಯ ಈಗ ಯಾರಿಗೂ ಇಲ್ಲ. ಸ್ವಲ್ಪ ಹೊತ್ತು ಕಾಣಿಸದಿದ್ದರೆ ಮನೆಯೇ ಖಾಲಿ ಅನ್ನಿಸುತ್ತದೆ' ಎಂದು ಸಾನ್ವಿ ಅಮ್ಮ ವಿನೋದ ಹೇಳುತ್ತಾರೆ.

ಒಂದು ದಿನ... ಕಾಡಿನತ್ತ

ಇತ್ತೀಚೆಗೆ ರಾಮು ನೆಗೆಯುವುದನ್ನು ಆರಂಭಿಸಿದೆ. ಅದರ ಚಲನೆಗಳಲ್ಲಿ ಹೊಸ ಆತ್ಮವಿಶ್ವಾಸ ಗೋಚರಿಸುತ್ತಿದೆ. ಒಂದು ದಿನ ಅದು ಕಾಡಿನತ್ತ ಹಾರಬಹುದು. ತನ್ನ ಸ್ವಾಭಾವಿಕ ಬದುಕಿನತ್ತ ಮರಳಬಹುದು. ಆ ದಿನ ಮನೆ ಸ್ವಲ್ಪ ಖಾಲಿಯಾಗಬಹುದು. ಆದರೆ ಒಂದು ತೃಪ್ತಿ ಉಳಿಯುತ್ತದೆ. 'ಅದರ ಪ್ರಾಣ ಉಳಿದಿದೆ–ಅದೇ ಮುಖ್ಯ. ಅದು ಎಲ್ಲೇ ಇದ್ದರೂ ಸುರಕ್ಷಿತವಾಗಿರಲಿ' ಎಂಬ ಭಾವನೆ ಮಾತ್ರ ಉಳಿಯುತ್ತದೆ.

ಒಂದು ಪುಟ್ಟ ಅಳಿಲಿಗೆ ನೀಡಿದ ಕಾಳಜಿ, ಒಂದು ಕುಟುಂಬದ ಮಿತಿಯನ್ನು ಮೀರಿ, ಒಂದು ಓಣಿಯ ಪ್ರೀತಿಯ ಕಥೆಯಾಗಿದೆ –ಈ 'ರಾಮು'.



ಹಸಿರ ಹಾದಿಯಲ್ಲಿ ಸದಾಶಿವ
ಚಿತ್ರಗಳು: ತಾಜುದ್ದೀನ್ ಆಜಾದ್

ಬಂಜರು ನೆಲಕ್ಕೆ ಹಸಿರು ಹೊದಿಕೆ

ಒಂದು ಕಾಲದಲ್ಲಿ ಬದುಕಿನ ಗುರುತುಗಳೇ ಕಾಣದಿದ್ದ ನೆಲ, ಇಂದು ಮರಗಳು, ಹಕ್ಕಿಗಳು ಮತ್ತು ಕಾಡುಪ್ರಾಣಿಗಳ ಆಶ್ರಯ ತಾಣವಾಗಿದೆ. ಈ ಬದಲಾವಣೆಯ ಹಿಂದೆ ನಿಂತಿರುವುದು ಸದಾಶಿವ ಹೈದ್ರಾ ಅವರ ಹಲವು ವರ್ಷಗಳ ಪರಿಶ್ರಮ

• ವಿಠ್ಠಲ ಶಾಸ್ತ್ರಿ

ಕಲಬುರಗಿ ಸಮೀಪದ ಹೊನ್ನಕಿರಣಗಿ ಗ್ರಾಮದ ಸುತ್ತಮುತ್ತ 1,600 ಎಕರೆಗಳಷ್ಟು ಬಂಜರು ಭೂಮಿ ಇತ್ತು. ಇಲ್ಲಿ ಬಿಸಿಲಿನ ತಾಪಕ್ಕೆ ನೆಲ ಬಿರುಕು ಬಿಟ್ಟಿತ್ತು; ಗಾಳಿ ಬೀಸಿದಾಗ ದೂಳು ಹಾರಾಡುತ್ತಿತ್ತು. ಮಳೆಗಾಲದಲ್ಲಿ ಸ್ವಲ್ಪ ತೇವ ಕಂಡರೂ, ಉಳಿದ ಅವಧಿಯಲ್ಲಿ ಇದು ಬರದ ಹೊಡೆತಕ್ಕೆ ಒಳಗಾಗುತ್ತಿತ್ತು. ಹಕ್ಕಿಗಳ ಕೂಗು ಇಲ್ಲ, ಮರಗಳ ನೆರಳು ಇಲ್ಲ. ಬದುಕಿನ ಯಾವುದೇ ಲಕ್ಷಣಗಳಿಲ್ಲದ ಬಂಜರು ನೆಲ.

ಇಂದು ಅದೇ ಪ್ರದೇಶ ಸಂಪೂರ್ಣ ಬದಲಾಗಿದೆ. 68 ಸಾವಿರಕ್ಕೂ ಹೆಚ್ಚು ಮರಗಳು ಬೆಳೆದಿದ್ದು, ಹಸಿರು ಹೊದಿಕೆಯಲ್ಲಿ ಈ ನೆಲ ಹೊಸ ಜೀವ ಪಡೆದಿದೆ. ಮರಗಳ ನೆರಳು, ಗಾಳಿಯ ತಂಪು, ಹಕ್ಕಿಗಳ ಕಲರವ–ಒಮ್ಮೆ ನಿರ್ಜೀವವಾಗಿದ್ದ ಈ ಪ್ರದೇಶ ಈಗ ಸಣ್ಣ ಅರಣ್ಯದ ರೂಪ ಪಡೆದಿದೆ. ಸ್ಥಳೀಯರ ಮಾತಿನಲ್ಲಿ, ಬೇಸಿಗೆಯ ಉಷ್ಣತೆಯ ತೀವ್ರತೆ ಕೂಡ ಹಿಂದಿಗಿಂತ ಕಡಿಮೆಯಾಗಿದೆ.

ಈ ಬದಲಾವಣೆಯ ಹಿಂದೆ ನಿಂತಿರುವವರು ಹೊನ್ನಕಿರಣಗಿ ಗ್ರಾಮದ 44 ವರ್ಷದ ಸದಾಶಿವ ಹೈದ್ರಾ. ಹಲವು ವರ್ಷಗಳ ಹಟ, ನಿರಂತರ ಪರಿಶ್ರಮ ಮತ್ತು ಸಮುದಾಯದ ಜೊತೆಗಿನ ಸಕ್ರಿಯ ಕಾರ್ಯ–ಈ ಮೂರೂ ಸೇರಿ ಈ ಪರಿವರ್ತನೆಯನ್ನು ಸಾಧ್ಯ ಮಾಡಿವೆ.

ಯೋಜನೆಗೆ ಜೀವ ತುಂಬಿದ ಹಸ್ತಕ್ಷೇಪ

2015ರಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಮನರೇಗಾ) ಈ ಪ್ರದೇಶದಲ್ಲಿ ಜಾರಿಯಾಯಿತು. ಆರಂಭದಲ್ಲಿ ಈ ಯೋಜನೆ ಕಾಗದದ ಮೇಲಿನ ವ್ಯವಸ್ಥೆಯಷ್ಟೇ ಆಗಿತ್ತು; ಕಾಗದದಲ್ಲಿ ಯೋಜನೆ ಇದ್ದರೂ, ಅದರ ಲಾಭ ಜನರಿಗೆ ತಲುಪುತ್ತಿರಲಿಲ್ಲ. ಜಮೀನು ರಹಿತ ಕಾರ್ಮಿಕರು ಕೂಲಿಗಾಗಿ ಅಲೆದಾಡುತ್ತಿದ್ದರು; ಹಲವರು ಹಂಗಾಮಿ ವಲಸೆ ಹೋಗುತ್ತಿದ್ದರು. ಉದ್ಯೋಗ ಕಾರ್ಡ್‌ಗಳ ಬಗ್ಗೆ ಅರಿವು ಕಡಿಮೆ, ನೋಂದಣಿ ಪ್ರಕ್ರಿಯೆಯಲ್ಲಿ ಗೊಂದಲ, ಮತ್ತು ಕೆಲವೆಡೆ ದುರ್ಬಳಕೆಯ ಆರೋಪಗಳು. ಇವುಗಳಿಂದ ಯೋಜನೆ ನಿರೀಕ್ಷಿತ ಫಲಿತಾಂಶ ಕಾಣುತ್ತಿರಲಿಲ್ಲ.

ಈ ಸ್ಥಿತಿಯನ್ನು ಗಮನಿಸಿದ ಸದಾಶಿವ ಹೈದ್ರಾ, ಕಾರ್ಮಿಕರನ್ನು ಒಗ್ಗೂಡಿಸುವ ಕಾರ್ಯ ಆರಂಭಿಸಿದರು. ಮನೆಮನೆಗೆ ತೆರಳಿ ಯೋಜನೆಯ ಹಕ್ಕುಗಳು ಮತ್ತು ಅವಕಾಶಗಳ ಬಗ್ಗೆ ವಿವರಿಸಿದರು. ಉದ್ಯೋಗ ಕಾರ್ಡ್‌ಗಳಿಗಾಗಿ ಅರ್ಜಿ ಸಲ್ಲಿಸುವುದರಿಂದ ಹಿಡಿದು, ಕೆಲಸಕ್ಕೆ ಹಾಜರಾಗುವ ಪ್ರಕ್ರಿಯೆಯವರೆಗೆ ಕಾರ್ಮಿಕರಿಗೆ ಮಾರ್ಗದರ್ಶನ ನೀಡಿದರು. ಜೊತೆಗೆ, ಅಕ್ರಮಗಳ ಬಗ್ಗೆ ಜಿಲ್ಲಾಧಿಕಾರಿ ಗಮನ ಸೆಳೆಯಲು ಅವರು ಮುಂದಾದರು.

ಅವರ ಸಮರ್ಪಣಾ ಮನೋಭಾವನೆಯನ್ನು ಗುರುತಿಸಿದ ಅಧಿಕಾರಿಗಳು ಅವರನ್ನು 'ಕಾಯಕ ಬಂಧು'ವನ್ನಾಗಿ ನೇಮಕ ಮಾಡಿದರು. ಕೆಲವೇ ವರ್ಷಗಳಲ್ಲಿ ಅವರು ಕ್ಷೇತ್ರ ನಿರೀಕ್ಷಕರಾಗಿ (ಫೀಲ್ಡ್ ಇನ್‌ಸ್ಪೆಕ್ಟರ್) ನೇಮಕಗೊಂಡರು. ಅವರ ಮೇಲ್ವಿಚಾರಣೆಯಲ್ಲಿ, ಕೆಲಸಗಳ ಹಂಚಿಕೆ, ಹಾಜರಾತಿ, ಮಾಪನ ಮತ್ತು ವೇತನ ಪಾವತಿ ಪ್ರಕ್ರಿಯೆಗಳಲ್ಲಿ ಶಿಸ್ತನ್ನು ತರಲಾಯಿತು.

ಪರಿಸರ ಪುನರ್‌ನಿರ್ಮಾಣದತ್ತ...

ಸದಾಶಿವ ಅವರ ದೃಷ್ಟಿ ಕೇವಲ ಉದ್ಯೋಗ ಒದಗಿಸುವುದಲ್ಲ. ಗ್ರಾಮೀಣ ಉದ್ಯೋಗವನ್ನು ಪರಿಸರ ಪುನರ್‌ನಿರ್ಮಾಣದೊಂದಿಗೆ ಜೋಡಿಸುವ ಪ್ರಯತ್ನಕ್ಕೆ ಅವರು ಮುಂದಾದರು.

ಅರಣ್ಯೀಕರಣದ ಭಾಗವಾಗಿ, ಸಂಬಂಧಿತ ಇಲಾಖೆಗಳ ಅನುಮತಿಯೊಂದಿಗೆ ಬಂಜರು ಭೂಮಿಯಲ್ಲಿ ಸ್ಥಳೀಯ ಜಾತಿಯ ಗಿಡಗಳನ್ನು ನೆಡುವ ಕಾರ್ಯ ಕೈಗೊಳ್ಳಲಾಯಿತು. ಕರ್ನಾಟಕ ವಿದ್ಯುತ್ ನಿಗಮಕ್ಕೆ ಸೇರಿದ 1,600 ಎಕರೆ ಪ್ರದೇಶದಲ್ಲಿ 18 ಕಿಲೋಮೀಟರ್ ಉದ್ದದ ಗಡಿಯುದ್ದಕ್ಕೂ ಆರು ಸ್ತರಗಳಲ್ಲಿ ಗಿಡಗಳನ್ನು ನೆಟ್ಟು ಪೋಷಿಸಲಾಯಿತು. ಈ ಬಹುಸ್ತರ ವಿನ್ಯಾಸವು ಗಾಳಿಯ ವೇಗವನ್ನು ಕಡಿಮೆ ಮಾಡುವುದು, ಮಣ್ಣಿನ ದೂಳು ಹರಿದುಹೋಗುವುದನ್ನು ತಡೆಯುವುದು ಮತ್ತು ಕ್ರಮೇಣ ನೆರಳನ್ನು ಹೆಚ್ಚಿಸುವುದು ಎಂಬ ಉದ್ದೇಶ ಹೊಂದಿತ್ತು.

ನೆಟ್ಟ ಗಿಡಗಳಲ್ಲಿ ಬಹುತೇಕವು ಬರನಿರೋಧಕ ಸ್ಥಳೀಯ ಪ್ರಭೇದಗಳು–ಅವುಗಳಿಗೆ ಕಡಿಮೆ ನೀರಿನಲ್ಲಿಯೇ ಉಳಿಯುವ ಸಾಮರ್ಥ್ಯವಿದೆ. ಆದರೂ ಆರಂಭಿಕ ವರ್ಷಗಳಲ್ಲಿ ಅವುಗಳ ಉಳಿವು ದೊಡ್ಡ ಸವಾಲಾಗಿತ್ತು.

ಮಳೆ ಅನಿಶ್ಚಿತವಾಗಿದ್ದ ಕಾರಣ, ನೀರಿನ ಲಭ್ಯತೆ ದೊಡ್ಡ ಸಮಸ್ಯೆಯಾಗಿತ್ತು. ಗಿಡಗಳಿಗೆ ನಿಯಮಿತವಾಗಿ ನೀರುಣಿಸುವುದು ಅಗತ್ಯವಾಗಿತ್ತು. ಈ ಹಿನ್ನೆಲೆ, ತಾತ್ಕಾಲಿಕ ನೀರಿನ ಸಂಗ್ರಹಣೆ, ಟ್ಯಾಂಕರ್‌ಗಳ ಬಳಕೆ ಮತ್ತು ಹತ್ತಿರದ ಮೂಲಗಳಿಂದ ನೀರು ತರಿಸುವ ವ್ಯವಸ್ಥೆ ಮಾಡಲಾಯಿತು.

4ನೇ ಪುಟಕ್ಕೆ...



ಗಿಡಗಳ ನೀರಿಗಾಗಿ ಸಾಲ ಮಾಡಿದರು

ಗಿಡಗಳ ನಿರ್ವಹಣೆ ನಿರಂತರವಾಗಿ ನಡೆಯಬೇಕಾದ ಸಂದರ್ಭದಲ್ಲಿ, 2018ರಲ್ಲಿ ಸದಾಶಿವ ಹೈದ್ರಾ ಮಹತ್ವದ ನಿರ್ಧಾರ ಕೈಗೊಂಡರು. ತಮ್ಮ ಐದು ಎಕರೆ ಜಮೀನಿನಲ್ಲಿ ಒಂದು ಎಕರೆ ಜಾಗವನ್ನು ಬ್ಯಾಂಕಿಗೆ ಅಡವಿಟ್ಟು ₹9.5 ಲಕ್ಷ ಸಾಲ ಪಡೆದರು. ಆ ಹಣವನ್ನು ಗಿಡಗಳಿಗೆ ನೀರು ಒದಗಿಸಲು ಮತ್ತು ನಿರ್ವಹಣಾ ಕಾರ್ಯಗಳಿಗೆ ಬಳಸಿದರು.

ಈ ನಿರ್ಧಾರದಲ್ಲಿ ಆರ್ಥಿಕ ಅಪಾಯ ಇದ್ದರೂ, ಗಿಡಗಳ ಉಳಿವೇ ಮುಖ್ಯ ಎಂಬ ದೃಷ್ಟಿಯಿಂದ ಅವರು ಈ ಹೆಜ್ಜೆ ಇಟ್ಟಿದ್ದರು. ಮುಂದಿನ ವರ್ಷಗಳಲ್ಲಿ ಗಿಡಗಳು ಬೇರು ಹಿಡಿದು ಚೆನ್ನಾಗಿ ಬೆಳೆಯತೊಡಗಿದವು, ಯೋಜನೆಯ ಫಲಿತಾಂಶ ಸ್ಪಷ್ಟವಾಗತೊಡಗಿತು. ಬಳಿಕ ಅವರು ಆ ಸಾಲವನ್ನು ಸಂಪೂರ್ಣವಾಗಿ ತೀರಿಸಿದರು.



ಅಂತೂ ಉದ್ಯೋಗ ಖಾತ್ರಿ ಆಯ್ತು...



ಇದೇ ನೋಡಿ 'ತೋಟ'ದ ಮನೆ!

ಮನೆಯೊಳಗೆ ತೋಟ ಕಂಡೆ... ತೋಟದೊಳಗೆ...

• ಅಬ್ದುಲ್ ರಹಿಮಾನ್

ಗಿಳಿಯೊಂದು ಮಾಗಿದ ಸಪೋಟ ಹಣ್ಣನ್ನು ಕಚ್ಚಿ, ಅದರ ಅರ್ಧ ಭಾಗವನ್ನು ಕೆಳಕ್ಕೆ ಬೀಳಿಸಿತು. ಕೊಂಬೆಯಿಂದ ಕೊಂಬೆಗೆ ಹಾರುವ ಗುಬ್ಬಚ್ಚಿಗಳದ್ದು ಬೇರೆಯದೇ ಲೋಕ. ತಣ್ಣನೆ ಗಾಳಿಗೆ ಅಲುಗಾಡುವ ಎಲೆಗಳ ಶಬ್ದವು ಹಿತವಾದ ಸಂಗೀತದಂತೆ ಭಾಸವಾಗುತ್ತಿತ್ತು. ದಟ್ಟವಾಗಿ ಆವರಿಸಿರುವ ಗಿಡ-ಮರ-ಬಳ್ಳಿಗಳ ನಡುವೆ ಹಾದು ಬರುವ ಬಿಸಿಲ ಕೋಲುಗಳು ನೆಲದ ಮೇಲೆ ಚಿತ್ತಾರ ಬಿಡಿಸಿದಂತಿತ್ತು...

ಕ್ಷಣಕಾಲ ನಾವು ಬೆಂಗಳೂರಿನಲ್ಲಿ ಇಲ್ಲ ಎನ್ನುವಂಥ ಅನುಭವ. ಅಷ್ಟರಲ್ಲಿ, ಕಾಂಪೌಂಡ್ ಹೊರಗಿನಿಂದ ಕೇಳಿಬಂದ ಬೈಕೊಂದರ ಹಾರ್ನ್ ಸದ್ದು ಈ ಮೌನವನ್ನು ಭೇದಿಸಿತು.

'ಕೀ..ss!'

'ನಾವು ನಗರದಲ್ಲಿ ಇದ್ದೇವೆ ಎನ್ನುವುದು ಅರಿವಾಗುವುದು ಆಗಲೇ' ಎಂದು ನಕ್ಕರು ಸುಮೇಶ್ ನಾಯಕ್.

ಬೆಂಗಳೂರಿನ ಸರ್ಜಾಪುರದಲ್ಲಿರುವ ಸುಮೇಶ್ ಅವರ ಮನೆಯ ಗೇಟಿನ ಒಳಹೊಕ್ಕರೆ ನಗರದಲ್ಲಿ ಇದ್ದೇವೆ ಎಂದೇ ಗೊತ್ತಾಗುವುದಿಲ್ಲ. 1,500 ಚದರ ಅಡಿಯ ಜಾಗದಲ್ಲಿ ಸುಮೇಶ್ ಹಾಗೂ ಅವರ ಪತ್ನಿ ಮೀತು 12 ವರ್ಷಗಳಿಂದ ವಾಸಿಸುತ್ತಿದ್ದಾರೆ. ಮನೆಯ ಸುತ್ತ, ತಾರಸಿ ಮೇಲೆ 200ಕ್ಕೂ ಹೆಚ್ಚು ಗಿಡ-ಮರಗಳಿಂದ ಕೂಡಿದ ದಟ್ಟ ನಗರ ಉದ್ಯಾನ ನಿರ್ಮಿಸಿದ್ದಾರೆ. ಹಣ್ಣು ಬಿಟ್ಟ ಕೊಂಬೆಗಳು ಬಾಲ್ಕನಿಗೆ ಚಾಚಿವೆ. ಬಳ್ಳಿಗಳು ಟೆರೇಸ್‌ನ ರೇಲಿಂಗ್‌ಗಳನ್ನು ಸುತ್ತಿಕೊಂಡಿವೆ. ಪಿಕಳಾರ, ಮೈನಾ ಮತ್ತು ಸನ್‌ಬರ್ಡ್‌ಗಳಂತಹ ಪಕ್ಷಿಗಳು ಮರಗಳ ನಡುವೆ ಮುಕ್ತವಾಗಿ ಓಡಾಡುತ್ತವೆ.

ರಸ್ತೆಯಿಂದ ನೋಡಿದರೆ ಅಲ್ಲೊಂದು ಮನೆ ಇದೆ ಎಂದೆನಿಸುವುದಿಲ್ಲ. ಸಣ್ಣ ಕಾಡಿನಂತೆ ಆ ಜಾಗ ಕಾಣುತ್ತದೆ.

'ಸಣ್ಣ ಕೈತೋಟ ಬೇಕೆಂದು ಆರಂಭಿಸಿದೆವು. ಇದೀಗ ನಮ್ಮ ಮನೆಯನ್ನು ಗಿಡಗಳೇ ಆವರಿಸಿಕೊಂಡಿವೆ' ಎಂದರು ಮೀತು.

ಮನೆಯೇ ಪ್ರೇರಣೆ

ಕೇರಳದ ಎರ್ನಾಕುಲಂನ ಸುಮೇಶ್ ಹಸಿರಿನ ನಡುವೆ ಬೆಳೆದವರು. ಮಾವು, ಹಲಸು, ಬಾಳೆ ಮತ್ತು ಹಿತ್ತಲ ತೋಟಗಳು ಅವರ ಬಾಲ್ಯದ ಭಾಗವಾಗಿದ್ದವು. ಕೆಲಸಕ್ಕಾಗಿ 2007ರಲ್ಲಿ ಬೆಂಗಳೂರಿಗೆ ಬಂದ ಬಳಿಕ ಅವರ ಬದುಕೂ ಕಚೇರಿ ಮತ್ತು ಟ್ರಾಫಿಕ್ ನಡುವೆ ಸಿಕ್ಕಿಹಾಕಿಕೊಂಡಿತು. ನಗರದಲ್ಲಿ ಉದ್ಯಾನಗಳಿದ್ದರೂ, ಹೂ-ಹಣ್ಣುಗಳಿಂದ ತುಂಬಿದ ಹಿತ್ತಲಿಗೆ ಕಾಲಿಡುವ ಅನುಭವ ಸಿಗುತ್ತಿರಲಿಲ್ಲ.

2012ರಲ್ಲಿ ಮನೆ ಖರೀದಿಸಲು ನಿರ್ಧರಿಸಿದಾಗ, ಇದೇ ಕಾರಣಕ್ಕೆ ಅಪಾರ್ಟ್‌ಮೆಂಟ್ ಬದಲು ವಿಲ್ಲಾವನ್ನು ಆರಿಸಿಕೊಂಡರು.

'ಜಾಗ ಚಿಕ್ಕದಾಗಿದ್ದರೂ ನಮಗೆ ಒಂದು ತೋಟ ಬೇಕಿತ್ತು. ಸಣ್ಣದಾಗಿ ಆರಂಭವಾದದ್ದು, ಇದೀಗ ಈ ಮಟ್ಟಿಗೆ ಬೆಳೆದು ನಿಂತಿದೆ' ಎಂದರು ದಂಪತಿ.

ಮೊದಲ ಬಾರಿ ನರ್ಸರಿಗೆ ಹೋದ ದಿನವನ್ನು ಅವರು ಈಗಲೂ ನೆನೆದು ನಗುತ್ತಾರೆ.

'ಮಕ್ಕಳು ಸಿಹಿ ಅಂಗಡಿಗೆ ಹೋದಂತೆ ಹೋಗಿದ್ದೆವು. ಇಷ್ಟವಾದ ಗಿಡಗಳನ್ನೆಲ್ಲಾ ಖರೀದಿಸಿದೆವು' ಎಂದರು ಸುಮೇಶ್.

ಗುಲಾಬಿ, ದಾಸವಾಳ, ಹಣ್ಣಿನ ಸಸಿಗಳು ಮತ್ತು ಅಲಂಕಾರಿಕ ಗಿಡಗಳನ್ನು ಕಾರಿನಲ್ಲಿ ತುಂಬಿಕೊಂಡು ಬಂದು ಮನೆಯ ಸುತ್ತ ಜೋಡಿಸಿಟ್ಟರು. ದಿನಕ್ಕೆರಡು ಬಾರಿ ನೀರು ಹಾಕಿ ಆರೈಕೆ ಮಾಡಿದರೂ, ಕೆಲವೇ ದಿನಗಳಲ್ಲಿ ಹಲವು ಗಿಡಗಳು ಒಣಗಲು ಆರಂಭಿಸಿದವು. ಗೊಬ್ಬರ ಹಾಕಿದರೂ ಪ್ರಯೋಜನವಾಗಲಿಲ್ಲ. ಬಹುತೇಕ ಗಿಡಗಳು ಸತ್ತು ಹೋದವು.

'ಉತ್ಸಾಹದಿಂದ ಆರಂಭಿಸಿದ ನಮಗೆ ಬಹಳ ನಿರಾಸೆಯಾಯಿತು. ನಿಮ್ಮಿಂದಾಗದು ಎಂದು ಹಲವರು ತಮಾಷೆ ಮಾಡಿದರು. ಲ್ಯಾಪ್‌ಟಾಪ್ ಕೆಲಸ ಮಾಡದಿದ್ದರೆ ಅದನ್ನು ರಿಸ್ಟಾರ್ಟ್ ಮಾಡುವ ತಲೆಮಾರಿನವರು ನಾವು; ತೋಟಗಾರಿಕೆಯನ್ನೂ ರಿಸ್ಟಾರ್ಟ್ ಮಾಡಿದೆವು' ಎಂದು ನಕ್ಕರು ಸುಮೇಶ್.

ಆಮೇಲೆ ಅವರು ತೋಟವನ್ನು ಗಮನಿಸಲು ಆರಂಭಿಸಿದರು. ಮನೆಯ ಸುತ್ತ ಸೂರ್ಯನ ಬೆಳಕು ಎಲ್ಲಿ ಬೀಳುತ್ತದೆ, ಯಾವ ಮೂಲೆ ಆರ್ದ್ರವಾಗಿರುತ್ತದೆ, ಮಳೆನೀರು ಎಲ್ಲಿ ಸಂಗ್ರಹವಾಗುತ್ತದೆ, ಗಾಳಿಯ ಹರಿವು ಹೇಗೆ ಬದಲಾಗುತ್ತದೆ ಎಂಬುದನ್ನು ನಿಧಾನವಾಗಿ ಅರ್ಥಮಾಡಿಕೊಂಡರು.

'ತೋಟಗಾರಿಕೆ ಎಂದರೆ ಗಮನಿಸುವುದು ಎಂಬುದು ನಮಗೆ ಆಗ ತಿಳಿಯಿತು. ಗಿಡಗಳೇ ನಮಗೆ ಪಾಠ ಕಲಿಸಿವೆ' ಎಂದರು.

ಹಸಿರು ಹೊದ್ದ ಮನೆ

ಈಗ ಅವರ ಮನೆಯ ಪ್ರತಿಯೊಂದು ಮೂಲೆಯಲ್ಲೂ ಹಸಿರು ಹರಡಿಕೊಂಡಿದೆ. ಅವಕಾಡೊ, ಹಿಪ್ಪುನೇರಳೆ, ಸಪೋಟ, ಬಾಳೆ, ಡ್ರ್ಯಾಗನ್ ಹಣ್ಣು, ಪೇರಳೆ ಮತ್ತು ಸೀತಾಫಲ ಮರಗಳು ಮನೆ ಸುತ್ತ ಬೆಳೆದಿವೆ. ಕಿಟಕಿ ಮತ್ತು ಬಾಲ್ಕನಿಗಳಲ್ಲಿ ಬಳ್ಳಿಗಳು ಸುರುಳಿ ಸುತ್ತಿವೆ. ನೆರಳಿರುವ ಜಾಗಗಳಲ್ಲಿ ಮಾನ್‌ಸ್ಟೆರಾ ಎಲೆಗಳು ಹರಡಿಕೊಂಡಿವೆ.

'ಕಳೆದ ವರ್ಷ ಸುಮಾರು 250 ಅವಕಾಡೊಗಳನ್ನು ಕೊಯ್ಲು ಮಾಡಿದ್ದೆವು. ಸ್ನೇಹಿತರು, ನೆರೆಹೊರೆಯವರು ಮತ್ತು ಸಂಬಂಧಿಕರೊಂದಿಗೆ ಹಂಚಿಕೊಂಡೆವು. ಮಣ್ಣು ಆರೋಗ್ಯಕರವಾದಾಗ ಗಿಡಗಳು ತಾನಾಗಿಯೇ ಬಲಗೊಳ್ಳುತ್ತವೆ' ಎಂದರು ಸುಮೇಶ್.

6ನೇ ಪುಟಕ್ಕೆ...





ವಲಸೆಗೆ ಧರ್ಮಣ್ಣನ ಕನಕಾಂಬರ ಬೇಲಿ

• ಶಿವಯೋಗಿ ಎಂ ವಿ ರಾಂಪುರ



ಹೂವು ಕೊಯ್ಯುತ್ತಿರುವ ಕಾರ್ಮಿಕರು

ಮಳೆ ಕೈಕೊಟ್ಟಾಗ, ಬೆಳೆ ನಷ್ಟವಾದಾಗ, ಗ್ರಾಮೀಣ ಬದುಕು ಅಲುಗಾಡುತ್ತದೆ. ಹೊಟ್ಟೆಪಾಡಿಗಾಗಿ ಊರು ಬಿಟ್ಟು ಮಹಾನಗರಗಳತ್ತ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ. ಕೆಲಸದ ಕೊರತೆ, ಅನಿಶ್ಚಿತತೆ ಮತ್ತು ಸಾಲದ ಒತ್ತಡಗಳು ಗ್ರಾಮೀಣ ಕುಟುಂಬಗಳನ್ನು ಇನ್ನಷ್ಟು ಸಂಕಷ್ಟಕ್ಕೆ ತಳ್ಳುತ್ತವೆ. ಇಂತಹ ಸಂದರ್ಭಗಳಲ್ಲಿ ಕುಟುಂಬಗಳ ಏಕತೆಗೂ ಭಂಗ ಬರುತ್ತದೆ. ಆದರೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಪಕ್ಕುರ್ತಿ ಗ್ರಾಮದಲ್ಲಿ ಈ ಸಾಮಾನ್ಯ ಕಥೆ ಸ್ವಲ್ಪ ವಿಭಿನ್ನವಾಗಿ ಬದಲಾಗಿದೆ. ಇಲ್ಲಿ ಸುಮಾರು 30ಕ್ಕೂ ಹೆಚ್ಚು ಮಹಿಳೆಯರು ವಲಸೆ ಬದುಕಿನ ದಾರಿಯನ್ನು ಬಂದ್ ಮಾಡಿ, ತಮ್ಮ ಊರಲ್ಲೇ ಬದುಕನ್ನು ಕಟ್ಟಿಕೊಂಡಿದ್ದಾರೆ. ಈ ಬದಲಾವಣೆಯ ಹಿಂದೆ ನಿಂತಿರುವುದು ರೈತ ಧರ್ಮಣ್ಣ.

ಒಮ್ಮೆ ಗುಡ್ಡಗಾಡು, ಕಲ್ಲು-ಗುಂಡುಗಳಿಂದ ತುಂಬಿದ್ದ ಭೂಮಿಯನ್ನು ಉಳುಮೆಗೆ ತಕ್ಕಂತೆ ಮಾಡುವುದು ಧರ್ಮಣ್ಣನಿಗೆ ಸುಲಭವಾಗಿರಲಿಲ್ಲ. ನೂರಾರು ಗಂಟೆಗಳ ಪರಿಶ್ರಮ, ಟ್ರಾಕ್ಟರ್‌ಗಳ ಮೂಲಕ ಮಣ್ಣು ತುಂಬಿಸುವುದು, ಜೆಸಿಬಿ ಕೆಲಸ, ಕೊಳವೆಬಾವಿ ಕೊರೆಸುವುದು, ವಿದ್ಯುತ್ ಸಂಪರ್ಕ–ಇವೆಲ್ಲ ಸೇರಿ ಅವರು ತಮ್ಮ ನೆಲವನ್ನು ಕೃಷಿಗೆ ಸಜ್ಜುಗೊಳಿಸಿದರು. ಆರಂಭದಲ್ಲಿ ಈರುಳ್ಳಿ, ಶೇಂಗಾ, ಹತ್ತಿ ಬೆಳೆದರೂ ಲಾಭಕ್ಕಿಂತ ನಷ್ಟವೇ ಹೆಚ್ಚು ಕಂಡರು. ಒಂದು ವರ್ಷ ಉತ್ತಮ ಬೆಳೆ ಸಿಕ್ಕರೂ ಅದು ಸಾಕಾಗಲಿಲ್ಲ. ಸಾಲದ ಒತ್ತಡ, ನಿರಂತರ ನಷ್ಟ–ಇವೆಲ್ಲವು ಅವರನ್ನು ಕುಗ್ಗಿಸಿತು. ಬದುಕಿನ ಬಗ್ಗೆ ನಿರಾಶೆಯ ಕ್ಷಣಗಳನ್ನೂ ಅವರು ಎದುರಿಸಿದರು. ಆದರೆ ಅವರು ಸಂಪೂರ್ಣವಾಗಿ ಹಿಂಜರಿಯಲಿಲ್ಲ.

ಅಂತಹ ಸಮಯದಲ್ಲಿ ಪಕ್ಕದ ಹಳ್ಳಿಯ ಕನಕಾಂಬರ ತೋಟ ಒಂದು ಹೊಸ ಆಲೋಚನೆಗೆ ಕಾರಣವಾಯಿತು. 'ನಾನೇಕೆ ಈ ಬೆಳೆ ಬೆಳೆಬಾರದು?' ಎಂಬ ಪ್ರಶ್ನೆಯೇ ಅವರ ಬದುಕಿಗೆ ತಿರುವು ನೀಡಿತು. ಎರಡು ಎಕರೆಯಲ್ಲಿ ಕನಕಾಂಬರ ಬೆಳೆ ಆರಂಭಿಸಿ, ಹನಿ ನೀರಾವರಿ ಮತ್ತು ಸಾವಯವ ವಿಧಾನಗಳ ಮೂಲಕ ಬೆಳೆ ಬೆಳೆಸಲು ಮುಂದಾದರು. ಮೊದಲ ನಾಲ್ಕೈದು ತಿಂಗಳು ಫಲ ಕಾಣದಿದ್ದರೂ ಹಿಂಜರಿಯದೆ ಮುಂದುವರಿದ ಧರ್ಮಣ್ಣ, ಆರು ತಿಂಗಳ ಬಳಿಕ ಯಶಸ್ಸಿನ ಫಲ ಕಂಡರು. ದಿನಕ್ಕೆ ಕೆಲ ಕೆ.ಜಿಗಳಿಂದ ಆರಂಭವಾದ ಹೂ ಉತ್ಪಾದನೆ ನಿಧಾನವಾಗಿ 40 ಕೆ.ಜಿ ಮೀರಿತು. ಉತ್ತಮ ದರ ಸಿಕ್ಕು ಲಕ್ಷಾಂತರ ಆದಾಯವೂ ಲಭಿಸಿತು. ಕೃಷಿಯ ಮೇಲಿನ ನಂಬಿಕೆ ಮತ್ತೆ ಬಲವಾಗತೊಡಗಿತು. ಆತ್ಮವಿಶ್ವಾಸವೂ ಹಿಂತಿರುಗಿತು.
ಆದರೆ ಈ ಯಶಸ್ಸಿನ ನಿಜವಾದ ಅರ್ಥ ಅಲ್ಲಿ ಮುಗಿಯುವುದಿಲ್ಲ.

ಧರ್ಮಣ್ಣನ ತೋಟ ಇಂದು ಸುಮಾರು 30ಕ್ಕೂ ಹೆಚ್ಚು ಮಹಿಳೆಯರ ಬದುಕಿಗೆ ಆಧಾರವಾಗಿದೆ. ಗೌರಮ್ಮ, ಮಂಜಮ್ಮ, ನೀಲಮ್ಮ, ಅನಂತಮ್ಮ, ಸಾಕಮ್ಮ, ತಿಮ್ಮಕ್ಕ, ಶಂಕ್ರಮ್ಮ, ಹೇಮಾಕ್ಷಿ, ಶ್ರೀದೇವಿ, ಅಂಜಿನಮ್ಮ... ಇಂತಹ ಅನೇಕ ಮಹಿಳೆಯರು ಪ್ರತಿದಿನ ಇಲ್ಲಿ ಕೆಲಸ ಮಾಡುತ್ತಾರೆ. ಮಳೆ ಇಲ್ಲದ ಕಾಲದಲ್ಲಿ ನಗರಗಳಿಗೆ ತೆರಳಿ ಕಟ್ಟಡ ಕಾಮಗಾರಿಗಳಲ್ಲಿ ಕೂಲಿ ಮಾಡಲು ಹೋಗಬೇಕಾಗಿದ್ದ ಅವರು, ಈಗ ತಮ್ಮ ಊರಲ್ಲೇ ಕೆಲಸ ಮಾಡಿಕೊಂಡು ಕುಟುಂಬದೊಂದಿಗೆ ಉಳಿದಿದ್ದಾರೆ. ವಲಸೆ ಜೀವನದ ಅನಿವಾರ್ಯತೆಯಿಂದ ಅವರು ಇಲ್ಲಿ ಮುಕ್ತರಾಗಿದ್ದಾರೆ. ಇದು ಅವರ ಬದುಕಿನಲ್ಲಿ ದೊಡ್ಡ ಬದಲಾವಣೆ ತಂದಿದೆ.

'ಮಳೆ ಇಲ್ಲದೆ ಬೆಳೆ ಇಲ್ಲದಾಗ ನಮಗೆ ಕೆಲಸ ಕೊಟ್ಟು ನಮ್ಮ ಕುಟುಂಬ ಉಳಿಸಿದ್ದಾರೆ' ಎನ್ನುವ ಅಂಜಿನಮ್ಮ ಅವರ ಮಾತು ಈ ಬದಲಾವಣೆಯ ಸಾರ್ಥಕತೆಯನ್ನು ಸಾರುತ್ತದೆ. ಅವರ ಧ್ವನಿಯಲ್ಲಿ ಕೇವಲ ಕೃತಜ್ಞತೆ ಮಾತ್ರವಲ್ಲ, ಬದುಕಿನ ಭದ್ರತೆಯ ವಿಶ್ವಾಸವೂ ಸ್ಪಷ್ಟವಾಗುತ್ತದೆ. ಈ ಭರವಸೆ ಅವರಿಗೆ ಮುಂದಿನ ದಿನಗಳ ಬಗ್ಗೆ ಧೈರ್ಯ ನೀಡುತ್ತದೆ.

ಧರ್ಮಣ್ಣ ಕೇವಲ ಕೆಲಸ ಕೊಟ್ಟವರಲ್ಲ; ಅವರು ವಲಸೆ ತಡೆಯುವ ಶಕ್ತಿಯೂ ಆಗಿದ್ದಾರೆ. ಕೂಲಿಕಾರರು ತೋಟಕ್ಕೆ ಸುಲಭವಾಗಿ ಹೋಗಿಬರಲು ಸ್ವತಃ ಆಟೊ ಖರೀದಿಸಿ ಸಾರಿಗೆ ವ್ಯವಸ್ಥೆ ಮಾಡಿದ್ದಾರೆ. ಸುಮಾರು ಮೂರು ಕಿಲೋಮೀಟರ್ ದೂರವನ್ನು ಪ್ರತಿದಿನ ಸುಗಮಗೊಳಿಸಿದ್ದಾರೆ. ₹100–150 ಇದ್ದ ಕೂಲಿಯನ್ನು ₹300ಕ್ಕೆ ಹೆಚ್ಚಿಸಿ, ಇಂದಿನ ಬೆಲೆ ಏರಿಕೆಯ ನಡುವೆಯೂ ಅವರಿಗೆ ಆರ್ಥಿಕ ಭದ್ರತೆ ಒದಗಿಸಿದ್ದಾರೆ. ಇದು ಕೇವಲ ಕೂಲಿ ಹೆಚ್ಚಳವಲ್ಲ, ಅವರ ಬದುಕಿನ ಮಟ್ಟವನ್ನು ಹೆಚ್ಚಿಸಿದೆ.



ಧರ್ಮಣ್ಣ

ಈ ತೋಟದಲ್ಲಿ ಕೆಲಸ ಮಾಡುವ ಮಹಿಳೆಯರು ಕೇವಲ ಕೂಲಿಕಾರರಲ್ಲ; ಅವರು ಒಂದೇ ಕುಟುಂಬದವರಂತೆ ಬೆರೆತು ಕೆಲಸ ಮಾಡುತ್ತಾರೆ. ತಮಷೆ, ಮಾತುಕತೆ, ಪರಸ್ಪರ ಸಹಾಯ ಇವೆಲ್ಲವು ಕೆಲಸದ ನಡುವೆ ಸಹಜವಾಗಿ ಮೂಡುತ್ತವೆ. ಅವರ ಕೈಗಳಲ್ಲಿ ಅರಳುವ ಕನಕಾಂಬರ ಹೂವುಗಳು ಕೇವಲ ಸೌಂದರ್ಯವಲ್ಲ; ಅವು ವಲಸೆ ತಪ್ಪಿಸಿದ ಬದುಕಿನ ಸಂಕೇತ. ಪ್ರತಿಯೊಂದು ಹೂವೂ ಒಂದು ಮನೆಯ ಭರವಸೆಯನ್ನು ಹೊತ್ತಿದೆ. ಈ ದೃಶ್ಯ ಗ್ರಾಮೀಣ ಸಹಕಾರದ ಜೀವಂತ ಉದಾಹರಣೆ.

ಧರ್ಮಣ್ಣನ ಪತ್ನಿ ಶಕುಂತಲ ಅವರ ಪಾತ್ರವೂ ಇಲ್ಲಿ ಮಹತ್ವದ್ದಾಗಿದೆ. ಕೂಲಿಕಾರರ ನಿರ್ವಹಣೆ, ತೋಟದ ಕಾರ್ಯಗಳ ಮೇಲ್ವಿಚಾರಣೆ ಇವೆಲ್ಲವನ್ನೂ ಅವರು ಸಮರ್ಥವಾಗಿ ನೋಡಿಕೊಳ್ಳುತ್ತಾರೆ. ಸಂಕಷ್ಟದ ಸಮಯದಲ್ಲಿ ಧೈರ್ಯ ತುಂಬಿ, ಯಶಸ್ಸಿನ ಸಂದರ್ಭದಲ್ಲಿ ಸಂತೋಷ ಹಂಚಿಕೊಂಡು, ಈ ಸಾಧನೆಯ ಭಾಗವಾಗಿದ್ದಾರೆ. ಕುಟುಂಬದ ಬೆಂಬಲವೇ ಈ ಯಶಸ್ಸಿನ, ಸಾರ್ಥಕ ಪ್ರಯಾಣಕ್ಕೆ ಇಂಧನ.

ಇಂದಿನ ಸಂದರ್ಭದಲ್ಲಿ, ರೈತರು ತಮ್ಮದೇ ಬದುಕಿನ ಹೋರಾಟದಲ್ಲಿ ತೊಡಗಿಸಿಕೊಂಡಿರುವಾಗ, ಇನ್ನೊಬ್ಬರ ಬದುಕಿಗೂ ಆಧಾರವಾಗುವುದು ಅಪರೂಪ. ಆದರೆ ಧರ್ಮಣ್ಣ ತಮ್ಮ ಪರಿಶ್ರಮದ ಮೂಲಕ 30ಕ್ಕೂ ಹೆಚ್ಚು ಕುಟುಂಬಗಳನ್ನು ವಲಸೆ ಬದುಕಿನಿಂದ ಉಳಿಸಿದ್ದಾರೆ. ಅವರ ತೋಟ ಒಂದು ಉದ್ಯೋಗ ಕೇಂದ್ರವಾಗಿದ್ದು, ಗ್ರಾಮೀಣ ಬದುಕಿನ ಸ್ಥಿರತೆಯ ಸಂಕೇತವಾಗಿದೆ. ಇಂತಹ ಉದಾಹರಣೆಗಳು ಇನ್ನಷ್ಟು ರೈತರಿಗೆ ಪ್ರೇರಣೆಯಾಗಬಹುದು.

ಕೃಷಿ ಕೇವಲ ಬೆಳೆ ಬೆಳೆಯುವುದಲ್ಲ; ಅದು ಜನರನ್ನು ಊರಲ್ಲೇ ಉಳಿಸುವ ಶಕ್ತಿ.

❖

ಬಂಜರು ನೆಲಕ್ಕೆ...

3ನೇ ಪುಟದಿಂದ...

ಈ ಕಾರ್ಯದಲ್ಲಿ ಭಾಗವಹಿಸಿದ ಕಾರ್ಮಿಕರಲ್ಲಿ ಬಹುತೇಕ ಮಹಿಳೆಯರು. ಅವರು ದೂರದಿಂದ ನೀರು ಹೊತ್ತು ತಂದು ಗಿಡಗಳಿಗೆ ಹಾಕುತ್ತಿದ್ದರು. ದಿನನಿತ್ಯದ ಈ ಪರಿಶ್ರಮ ಗಿಡಗಳ ಉಳಿವಿಗೆ ಪ್ರಮುಖ ಕಾರಣವಾಯಿತು. 'ಗಿಡ ಉಳಿದರೆ ಮುಂದಿನ ವರ್ಷ ನೆರಳು ಸಿಗುತ್ತದೆ' ಎಂಬ ನಂಬಿಕೆ ಅವರಿಗೆ ಪ್ರೇರಣೆ ನೀಡುತ್ತಿತ್ತು.

ಈ ಯೋಜನೆಯಡಿ ಸಾವಿರಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಪಡೆದರು. ಅವರಲ್ಲಿ ಶೇಕಡ 80ರಷ್ಟು ಮಹಿಳೆಯರು; ಈ ಕೆಲಸದಲ್ಲಿ 30ರಿಂದ 75 ವರ್ಷದವರವರೆಗೆ ಜನ ಭಾಗಿಯಾಗಿದ್ದಾರೆ. ನಿಯಮಿತ ಕೂಲಿ ದೊರಕುವುದರಿಂದ ಕುಟುಂಬಗಳ ಆರ್ಥಿಕ ಸ್ಥಿತಿ ಸುಧಾರಿಸಿತು.

ಭೂ ರಹಿತ ಕಾರ್ಮಿಕ ಮಹಿಳೆ ಬಾಗಮ್ಮ ಕಳೆದ ದಶಕದಿಂದ ಮನರೇಗಾ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಅವರು ತಮ್ಮ ಆದಾಯವನ್ನು ಕುರಿ ಸಾಕಣೆಗೆ ಹೂಡಿಕೆ ಮಾಡಿ, ಹೆಚ್ಚುವರಿ ಆದಾಯದ ಮೂಲವನ್ನು ಕಂಡುಕೊಂಡಿದ್ದಾರೆ. ಹೀಗೆ ಹಲವು ಮಹಿಳೆಯರು ಸ್ವಾವಲಂಬಿ ಬದುಕಿನತ್ತ ಹೆಜ್ಜೆ ಇಟ್ಟಿದ್ದಾರೆ.

ಯುವ ಕಾರ್ಮಿಕ ಭಗವಂತ ಮತ್ತು ಅವರ ಪತ್ನಿ ಬಸಮ್ಮಗೂ ಈ ಯೋಜನೆ ನೆರವಾಯಿತು. ಕೆಲಸದಿಂದ ಉಳಿಸಿದ ಹಣದಿಂದ ಭಗವಂತರೇ ತಮ್ಮ ತಾಯಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಮಾಡಿಸುವ ಸಾಧ್ಯತೆ ದೊರಕಿತು. 'ಮನರೇಗಾದಲ್ಲಿ ದಿನಕ್ಕೆ ₹370 ಸಿಗುತ್ತಿತ್ತು. ಅದೇ ಕೆಲಸಕ್ಕೆ ಹೊರಗೆ ₹300 ಮಾತ್ರ ಕೊಡುತ್ತಿದ್ದರು' ಎಂದು ಅವರು ಹೇಳುತ್ತಾರೆ. ಈ ಆದಾಯ ವ್ಯತ್ಯಾಸವೇ ಕುಟುಂಬಗಳ ಉಳಿವು ಮತ್ತು ಖರ್ಚಿನ ನಿರ್ವಹಣೆಗೆ ನೆರವಾಗಿದೆ.

ಪರಿಸರದಲ್ಲಿ ಬದಲಾವಣೆಗಳು

ಮರಗಳು ಬೆಳೆದಂತೆ ಪರಿಸರದಲ್ಲೂ ಗಮನಾರ್ಹ ಬದಲಾವಣೆಗಳು ಕಂಡುಬಂದಿವೆ. ಕೃಷ್ಣಮೃಗ, ನರಿಗಳು, ಮೊಲಗಳು ಸೇರಿದಂತೆ ಹಲವು ಪ್ರಾಣಿಗಳು ಈ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಿವೆ. ಹಕ್ಕಿಗಳ ವಾಸಸ್ಥಾನ ಹೆಚ್ಚಿದ ಕಾರಣ, ಜೀವ ವೈವಿಧ್ಯವೂ ವೃದ್ಧಿಯಾಗಿದೆ.

ಅರಣ್ಯ ಇಲಾಖೆ ಅಧಿಕಾರಿಗಳ ಪ್ರಕಾರ, ಮರಗಳ ಸಾಂದ್ರತೆ ಹೆಚ್ಚುವುದರಿಂದ ಸ್ಥಳೀಯ ತಾಪಮಾನದಲ್ಲಿ ಇಳಿಕೆ ಕಂಡುಬಂದಿದೆ. ಗಾಳಿಯ ತೇವಾಂಶವೂ ಸುಧಾರಿಸಿದೆ. ಇದರಿಂದ ಸುತ್ತಮುತ್ತಲಿನ ಕೃಷಿಭೂಮಿಗಳ ಮೇಲೂ ಸಕಾರಾತ್ಮಕ ಪರಿಣಾಮ ಕಂಡುಬರುತ್ತಿದೆ.



ಉದ್ಯೋಗ ಪಡೆದ ಖುಷಿಯಲ್ಲಿ...

ಇದರ ಜೊತೆಗೆ, 42 ಸಾವಿರ ಇಂಗು (ಸೋಕ್) ಗುಂಡಿಗಳ ನಿರ್ಮಾಣ ಮಾಡಲಾಗಿದೆ. ಈ ಗುಂಡಿಗಳು ಮಳೆನೀರನ್ನು ನೆಲದೊಳಗೆ ಹೀರಿಸಿಕೊಂಡು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ನೆರವಾಗುತ್ತವೆ. ಕೆರೆಗಳ ನೀರಿನ ಮಟ್ಟದಲ್ಲಿ ಏರಿಕೆ ಕಂಡುಬಂದಿರುವುದನ್ನು ಸ್ಥಳೀಯರು ಹೇಳುತ್ತಾರೆ.

ವೈಯಕ್ತಿಕ ಸಂಕಷ್ಟದಿಂದ

ಸದಾಶಿವ ಹೈದ್ರಾ ಅವರ ಜೀವನದಲ್ಲೂ ಸಂಕಷ್ಟಗಳ ಕೊರತೆ ಇರಲಿಲ್ಲ. ಮನರೇಗಾ ಯೋಜನೆಗೆ ಸೇರುವ ಮೊದಲು ಅವರು ಖಿನ್ನತೆಯಿಂದ ಬಳಲುತ್ತಿದ್ದರು ಮತ್ತು ಆತ್ಮಹತ್ಯೆಯ ಯೋಚನೆಗೂ ಒಳಗಾಗಿದ್ದರು.

ಆ ಸಂದರ್ಭದಲ್ಲಿ ಸ್ಥಳೀಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯೊಬ್ಬರು ಅವರನ್ನು ಈ ಯೋಜನೆಗೆ ಪರಿಚಯಿಸಿದರು. ಅದು ಅವರ ಜೀವನದಲ್ಲಿ ಮಹತ್ವದ ತಿರುವಾಗಿ ಪರಿಣಮಿಸಿತು. ನಂತರ ಅವರು ತಮ್ಮ ವೈಯಕ್ತಿಕ ಸಂಕಷ್ಟಗಳನ್ನು ಮೀರಿ, ಸಮುದಾಯ ಸೇವೆಯಲ್ಲಿ ತೊಡಗಿಸಿಕೊಂಡರು.

ಇಂದು ಅವರು ಕಾರ್ಮಿಕರಿಗೆ ಹಣಕಾಸು ಜಾಗೃತಿ, ಉಳಿತಾಯ ಮತ್ತು ಜೀವನ ನಿರ್ವಹಣೆ ಕುರಿತು ಸಲಹೆಗಳನ್ನು ನೀಡುತ್ತಿದ್ದಾರೆ. ಅವರ ಅನುಭವವೇ ಇತರರಿಗೆ ಮಾರ್ಗದರ್ಶನವಾಗಿದೆ.

ಸುಮಾರು 12 ಸಾವಿರ ಜನರಿರುವ ಈ ಪ್ರದೇಶದಲ್ಲಿ ಸದಾಶಿವ ಹೈದ್ರಾ ಮನೆಮನೆಗೆ ತೆರಳಿ ಉದ್ಯೋಗ ಕಾರ್ಡ್‌ಗಳನ್ನು ವಿತರಿಸುತ್ತಿದ್ದಾರೆ. ಕೆಲಸದ ಹಾಜರಾತಿ ಸರಿಯಾಗಿ ದಾಖಲಾಗುವಂತೆ ನೋಡಿಕೊಳ್ಳುತ್ತಾರೆ. ಕಾರ್ಮಿಕರ ವೇತನ ಸಮಯಕ್ಕೆ ಸಿಗುವಂತೆ ಸಂಬಂಧಿತ ಅಧಿಕಾರಿಗಳೊಂದಿಗೆ ಸಂಯೋಜನೆ ಮಾಡುತ್ತಾರೆ.

ವಲಸೆ ಹೋಗುತ್ತಿದ್ದ ಕುಟುಂಬಗಳು ಈಗ ಊರಲ್ಲೇ ಉಳಿಯಲು ಪ್ರೇರೇಪಿತವಾಗಿವೆ. ಸ್ಥಳೀಯವಾಗಿ ಕೆಲಸ ಲಭ್ಯವಾಗುವುದರಿಂದ ಮಕ್ಕಳ ಶಿಕ್ಷಣವೂ ವ್ಯತ್ಯಯವಾಗದೆ ಮುಂದುವರಿಯುತ್ತಿದೆ.

ಇದರ ಜೊತೆಗೆ, ಕಾರ್ಮಿಕರಿಗೆ ಕುಡಿಯುವ ನೀರು ಒದಗಿಸಲು ಪ್ರತೀ ಋತುವಿನಲ್ಲಿ ತಮ್ಮ ಖರ್ಚಿನಿಂದ ₹1.5 ಲಕ್ಷವರೆಗೆ ವೆಚ್ಚ ಮಾಡುತ್ತಿದ್ದಾರೆ. ಇದು ಅವರ ವೈಯಕ್ತಿಕ ಬದ್ಧತೆಯ ಮತ್ತೊಂದು ಉದಾಹರಣೆ.

ಹಸಿರು ಬದಲಾವಣೆಯ ಅರ್ಥ

ಒಮ್ಮೆ ಬತ್ತಿದ ನೆಲವಾಗಿದ್ದ ಹೊನ್ನಕಿರಣಗಿ ಇಂದು ಹಸಿರು ಪ್ರದೇಶವಾಗಿ ರೂಪುಗೊಂಡಿದೆ. ಆದರೆ ಈ ಬದಲಾವಣೆ ಕೇವಲ ಪರಿಸರದ ಮಟ್ಟಕ್ಕೆ ಸೀಮಿತವಾಗಿಲ್ಲ. ಇದು ಉದ್ಯೋಗ, ಜೀವನೋಪಾಯ, ಪರಿಸರ ಮತ್ತು ಸಮುದಾಯ–ಈ ನಾಲ್ಕು ಅಂಶಗಳನ್ನು ಒಟ್ಟಿಗೆ ಜೋಡಿಸಿದ ಮಾದರಿಯಾಗಿದೆ.

ಸದಾಶಿವ ಹೈದ್ರಾ ಅವರ ಪ್ರಯತ್ನವು ಬಂಜರು ನೆಲವನ್ನು ಹಸಿರಾಗಿಸಿದಷ್ಟೇ ಅಲ್ಲ, ಅನೇಕ ಕುಟುಂಬಗಳ ಬದುಕಿಗೂ ಸ್ಥಿರತೆ ಮತ್ತು ಭರವಸೆ ತಂದಿದೆ. ಗ್ರಾಮೀಣ ಅಭಿವೃದ್ಧಿಯಲ್ಲಿ ಸ್ಥಳೀಯ ನಾಯಕತ್ವ ಮತ್ತು ಸಮುದಾಯದ ಭಾಗವಹಿಸುವಿಕೆ ಹೇಗೆ ಪರಿಣಾಮಕಾರಿ ಆಗಬಹುದು ಎಂಬುದಕ್ಕೆ ಇದು ಸ್ಪಷ್ಟ ಉದಾಹರಣೆ.

ಮುಂದಿನ ಹಂತದಲ್ಲಿ, ಈ ಪ್ರದೇಶವನ್ನು ಸಮಗ್ರ ಹಸಿರು ವಲಯವಾಗಿ ಅಭಿವೃದ್ಧಿಪಡಿಸುವ ಹಾಗೂ ನೀರಿನ ನಿರ್ವಹಣೆಯನ್ನು ಇನ್ನಷ್ಟು ಬಲಪಡಿಸುವ ಯೋಜನೆಗಳೂ ಚರ್ಚೆಯಲ್ಲಿವೆ. ಈ ಪ್ರಯತ್ನಗಳು ಮುಂದುವರಿದರೆ, ಹೊನ್ನಕಿರಣಗಿ ಮಾದರಿ ಇತರ ಬರಪೀಡಿತ ಪ್ರದೇಶಗಳಿಗೂ ದಾರಿದೀಪವಾಗುವ ಸಾಧ್ಯತೆ ಇದೆ.

(ಅನುವಾದ: ಸೂರ್ಯನಾರಾಯಣ ವಿ.)



ಅಡಿಕೆ ಪುಡಿಯಲ್ಲಿ ಅರಳಿದ ಕಲಾಕೃತಿ

• ರಾಜೇಂದ್ರ ಹೆಗಡೆ

ಮಲೆನಾಡಿನ ಬಹುತೇಕ ಮನೆಗಳಿಗೆ ಅಡಿಕೆಯೇ ಆಧಾರ. ಹಸಿರು ತೋಟಗಳ ನಡುವೆ ದಿನವೂ ನಡೆಯುವ ಅಡಿಕೆ ಸಂಸ್ಕರಣೆಯ ನಂತರ, ಕೆಂಪು ಬಣ್ಣದ ಪುಡಿ ಮಣ್ಣಿನೊಂದಿಗೆ ಬೆರೆತು ಹೋಗುವುದು ಸಾಮಾನ್ಯ ದೃಶ್ಯ. ಮರ ಕಡಿಯುವಾಗ ಉದುರುವ ಪುಡಿ, ಅಡಿಕೆ ಸಂಸ್ಕರಣೆಯಿಂದ ಉಳಿಯುವ ಅವಶೇಷ ಇವೆಲ್ಲವೂ ನಿರುಪಯುಕ್ತವೆಂದು ಬಿಸಾಡುವ ವಸ್ತುಗಳಷ್ಟೇ. ಆದರೆ ಇದೇ ಪುಡಿಯೊಳಗೆ ಯಾರೂ ಕಾಣದ ಕಲೆಯನ್ನು ಕಂಡವರು ಹೆಗಡೆಕಟ್ಟೆಯ ಜಯಶ್ರೀ ವಿನಾಯಕ ಹೆಗಡೆ.

ಮನೆ ಕೆಲಸಗಳ ನಡುವೆ, ದಿನನಿತ್ಯದ ಜವಾಬ್ದಾರಿಗಳ ನಡುವೆ, 'ಇದರಲ್ಲಿ ಏನಾದರೂ ಮಾಡಬಹುದೇ?' ಎಂಬ ಒಂದು ಸಣ್ಣ ಪ್ರಶ್ನೆಯೇ ಅವರ ಬದುಕಿನ ದಿಕ್ಕನ್ನು ಬದಲಿಸಿತು. ಅಡಿಕೆ ಪುಡಿಯ ಕಣ ಕಣದಲ್ಲೂ ಅಡಗಿರುವ ಕಲಾತ್ಮಕತೆಯನ್ನು ಅವರು ಕಂಡರು. ಆ ಕಣಗಳನ್ನು ರೂಪಕ್ಕೆ ತರಬೇಕೆಂಬ ಆಸೆ, ಆ ಆಸೆಯನ್ನು ಸಾಧನೆಗೆ ತರುವ ಹಟ–ಇವುಗಳೇ 'ಅರಿಕಾ' ಎಂಬ ಕನಸಿನ ಕೂಸಾಗಿ ಜನ್ಮತಾಳಿತು.

ಅಡಿಕೆ ತ್ಯಾಜ್ಯ ಇಂದು ಜಯಶ್ರೀ ಅವರ ಕೈಚಳಕದಿಂದ ಸುಂದರ ಕಲಾಕೃತಿಗಳಾಗಿ ಪರಿವರ್ತನೆಯಾಗಿದೆ. ಸಾಮಾನ್ಯವಾಗಿ ಯಾರೂ ಗಮನಿಸದ ವಸ್ತುಗಳು, ಇಂದು ಕಲಾಪ್ರೇಮಿಗಳ ಮನೆಗಳಲ್ಲಿ ಅಲಂಕಾರಿಕ ಸ್ಥಾನ ಪಡೆದಿರುವುದು ಅವರ ಸೃಜನಶೀಲತೆಗೆ ಸಾಕ್ಷಿ.

ಈ ಪಯಣ ಸುಲಭವಾಗಿರಲಿಲ್ಲ. ಆರಂಭದಲ್ಲಿ ಪ್ರಯೋಗಗಳು ವಿಘಲವಾದವು. ಕೆಲವೊಮ್ಮೆ ಆಕೃತಿಗಳು ಸರಿಯಾಗಿ ಬಾರದವು, ಕೆಲವೊಮ್ಮೆ ವಸ್ತುಗಳು ಒಡೆಯುತ್ತಿದ್ದವು, ಬಣ್ಣಗಳು ಹಿಡಿಯದ ಸಂದರ್ಭಗಳೂ ಬಂದವು. ಆದರೆ ಜಯಶ್ರೀ ಹಿಂತಿರುಗಲಿಲ್ಲ. ಪ್ರತಿಯೊಂದು ವಿಫಲತೆಯನ್ನೂ ಪಾಠವನ್ನಾಗಿ ಮಾಡಿಕೊಂಡು, ಹೊಸ ವಿಧಾನಗಳನ್ನು ಹುಡುಕುತ್ತಾ, ತಮ್ಮ ಕೈಚಳಕವನ್ನು ಮತ್ತಷ್ಟು ತೀಕ್ಷ್ಣಗೊಳಿಸುತ್ತಾ ಮುಂದುವರಿದರು.

ಕೇವಲ ಕಲಾತ್ಮಕ ಆಸಕ್ತಿಯಿಂದ ಆರಂಭವಾದ ಈ ಪ್ರಯತ್ನ, ನಿಧಾನವಾಗಿ ಸ್ವಯಂ ಉದ್ಯೋಗದ ದಾರಿಯತ್ತ ತಿರುಗಿತು. 'ನಾನು ಮಾತ್ರವಲ್ಲ, ಇನ್ನೂ ಕೆಲವರಿಗೆ ಕೆಲಸ ಸಿಗಬೇಕು' ಎಂಬ ಆಲೋಚನೆ ಅವರ ಮುಂದಿನ ಹೆಜ್ಜೆಗೆ ದಿಕ್ಕು ನೀಡಿತು. ಹಳ್ಳಿಯಲ್ಲೇ ಉದ್ಯೋಗ ಸೃಷ್ಟಿಸಬೇಕು, ನಗರಗಳತ್ತ ನಡೆಯುವ ವಲಸೆಯನ್ನು ಕಡಿಮೆ ಮಾಡಬೇಕು ಎಂಬ ದೃಢಸಂಕಲ್ಪವೇ ಈ ಪ್ರಯತ್ನದ ಹೃದಯವಾಗಿದೆ.

ಇಂದು 'ಅರಿಕಾ' ಸಂಸ್ಥೆಯ ಮೂಲಕ ನಾಲ್ವರು ಸ್ಥಳೀಯರಿಗೆ ಉದ್ಯೋಗ ಸಿಕ್ಕಿದೆ. ಅವರ ಕೈಚಳಕಕ್ಕೂ ಮೌಲ್ಯ ಸಿಕ್ಕಿದೆ. ಒಂದು ವರ್ಷದಲ್ಲೇ ಸಾವಿರಾರು ಆರ್ಡರ್‌ಗಳು ಬರುತ್ತಿರುವುದು, ಈ ಪ್ರಯೋಗ ಜನಮನ ಗೆದ್ದಿರುವುದಕ್ಕೆ ಸಾಕ್ಷಿ. ಸಣ್ಣ ಹಳ್ಳಿಯಿಂದ ಆರಂಭವಾದ ಪ್ರಯತ್ನ, ಇಂದು ದೊಡ್ಡ ಮಾರುಕಟ್ಟೆಯತ್ತ ಹೆಜ್ಜೆ ಹಾಕುತ್ತಿದೆ.



ಅಡಿಕೆ ಪುಡಿಯಿಂದ ತಯಾರಾಗುವ ಕಲಾಕೃತಿಗಳ ವೈವಿಧ್ಯವೂ ಗಮನಾರ್ಹ. ಗೋಡೆಗೆ ನೇತುಹಾಕುವ ವಾಲ್ ಹ್ಯಾಂಗಿಂಗ್‌ಗಳು, ದೇವರ ಸ್ಮರಣಿಕೆಗಳು, ಟೇಬಲ್ ಟಾಪ್ ಅಲಂಕಾರ ವಸ್ತುಗಳು, ವಿನೂತನ ಡೆಕೋರ್ ಐಟಂ ಇವೆಲ್ಲವೂ ಸೌಂದರ್ಯ ಮತ್ತು ಸೃಜನಶೀಲತೆಯ ಸಂಯೋಜನೆ. ₹400ರಿಂದ ₹900ರವರೆಗಿನ ದರದಲ್ಲಿ ಲಭ್ಯವಾಗುವ ಈ ವಸ್ತುಗಳು ಮಧ್ಯಮ ವರ್ಗದವರಿಗೂ ಸುಲಭವಾಗಿ ಕೈಗೆಟುಕುತ್ತವೆ.

ಈ ಕಲೆಯ ಹಿಂದೆ ಇರುವ ತಾಂತ್ರಿಕ ಪ್ರಕ್ರಿಯೆಯೂ ಅಷ್ಟೇ ವಿಶಿಷ್ಟ. ಸುಮಾರು ₹12 ಲಕ್ಷ ಮೌಲ್ಯದ ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡಿರುವ ಜಯಶ್ರೀ ಅವರು, ಕಚ್ಚಾ ಅಡಿಕೆ ಪುಡಿಯನ್ನು ಅತ್ಯಂತ ನಯವಾದ ಫೈನ್ ಪೌಡರ್ ಆಗಿ ಪರಿವರ್ತಿಸುತ್ತಾರೆ. ನಂತರ ಅದನ್ನು ರಬ್ಬರ್ ಮೋಲ್ಡ್‌ಗಳಲ್ಲಿ ತುಂಬಿಸಿ ವಿವಿಧ ಆಕೃತಿಗಳನ್ನು ರೂಪಿಸಲಾಗುತ್ತದೆ. ಈ ಹಂತದಲ್ಲೇ ಉತ್ಪನ್ನದ ಮೂಲ ಸ್ವರೂಪ ನಿರ್ಮಾಣವಾಗುತ್ತದೆ.

ಆಮೇಲೆ ಆರಂಭವಾಗುವುದು ನಿಜವಾದ ಕಲಾತ್ಮಕ ಸ್ಪರ್ಶ. ಹ್ಯಾಂಡ್ ಮೆಷಿನ್ ಬಳಸಿ ಪ್ರತಿಯೊಂದು ವಸ್ತುವಿಗೂ ಅಂತಿಮರೂಪ ನೀಡಲಾಗುತ್ತದೆ. ಈ ಹಂತದಲ್ಲಿ ಮೂಡುವ ಕೆತ್ತನೆಗಳು ಮರದ ಕೆತ್ತನೆಯನ್ನೇ ಮೀರಿಸುವಷ್ಟು ನಿಖರವಾಗಿರುತ್ತವೆ. ಬಳಿಕ ವುಡ್ ಸ್ಪ್ರೇ, ಆಕರ್ಷಕ ಬಣ್ಣಗಳು, ಗೋಲ್ಡ್ ಮತ್ತು ಸಿಲ್ವರ್ ಕೋಟಿಂಗ್‌ಗಳ ಮೂಲಕ ಅಂತಿಮ ರೂಪ ನೀಡಲಾಗುತ್ತದೆ. ಬಣ್ಣಗಳ ಸಂಯೋಜನೆಗೂ ವಿಶೇಷ ಮಹತ್ವವಿದ್ದು, ಅದನ್ನೂ ಜಯಶ್ರೀ ಅವರೇ ರೂಪಿಸುತ್ತಾರೆ. ಪೂರ್ಣ ಪೇಂಟ್ ಮತ್ತು ಹಾಫ್ ಪೇಂಟ್ ವಿನ್ಯಾಸಗಳು ನೋಡುಗರನ್ನು ಮಂತ್ರಮುಗ್ಧಗೊಳಿಸುತ್ತವೆ.

ಉತ್ಪನ್ನಗಳ ಗುಣಮಟ್ಟದಷ್ಟೇ ಮುಖ್ಯವಾದುದು ಮಾರುಕಟ್ಟೆ ತಂತ್ರ. ಇಲ್ಲಿ ಜಯಶ್ರೀ ಅವರಿಗೆ ಬೆನ್ನೆಲುಬಾಗಿ ನಿಂತಿರುವವರು ಪತಿ ವಿನಾಯಕ ಹೆಗಡೆ. ಸಹಕಾರ ಕ್ಷೇತ್ರದಲ್ಲಿ ದೀರ್ಘ ಅನುಭವ ಹೊಂದಿರುವ ಅವರಿಗೆ ಮಾರುಕಟ್ಟೆಯ ನಾಡಿಮಿಡಿತ ಚೆನ್ನಾಗಿ ತಿಳಿದಿದೆ. ಈ ಅನುಭವವೇ 'ಅರಿಕಾ' ಉತ್ಪನ್ನಗಳನ್ನು ವಾಣಿಜ್ಯ ಯಶಸ್ಸಿನತ್ತ ಕೊಂಡೊಯ್ದಿದೆ.

ಇಂದು ಕರ್ನಾಟಕ ಕರಕುಶಲ ನಿಗಮದ ಮಳಿಗೆಗಳು, ಪ್ರಸಿದ್ಧ ವಿಶ್ವವಿದ್ಯಾಲಯಗಳು ಹಾಗೂ ದೇಶದ ಪ್ರಮುಖ ದೇವಾಲಯಗಳು 'ಅರಿಕಾ' ಉತ್ಪನ್ನಗಳನ್ನು ತಮ್ಮ ಅಧಿಕೃತ ಸ್ಮರಣಿಕೆಗಳಾಗಿ ಬಳಸುತ್ತಿವೆ. ಅಷ್ಟೇ ಅಲ್ಲ, ಅಮೆಜಾನ್‌ನಂತಹ ಜಾಗತಿಕ ವೇದಿಕೆಯ ಮೂಲಕ ಈ ಮಲೆನಾಡಿನ ಕಲೆ ವಿದೇಶಗಳಿಗೂ ಪಸರಿಸುತ್ತಿದೆ. ಹಳ್ಳಿಯ ಸಣ್ಣ ಪ್ರಯತ್ನ, ಜಾಗತಿಕ ಮಟ್ಟದ ಗುರುತಿನತ್ತ ಸಾಗುತ್ತಿರುವುದು ವಿಶೇಷ.

ತ್ಯಾಜ್ಯ ನಿರ್ವಹಣೆ ಮತ್ತು ಕಲೆಯ ಸಮ್ಮಿಲನಕ್ಕೆ 'ಅರಿಕಾ' ಒಂದು ಜೀವಂತ ಉದಾಹರಣೆ. ಸಾಮಾನ್ಯವಾಗಿ ಬಿಸಾಡಲ್ಪಡುವ ವಸ್ತುವಿನಲ್ಲಿ ಅಸಾಮಾನ್ಯ ಸಾಧ್ಯತೆಯನ್ನು ಕಂಡು, ಅದಕ್ಕೆ ಸೃಜನಾತ್ಮಕ ರೂಪ ನೀಡಿದರೆ ಅದು ಬದುಕನ್ನೇ ಬದಲಿಸಬಹುದು ಎಂಬುದನ್ನು ಜಯಶ್ರೀ ಹೆಗಡೆ ಅವರು ಸಾಬೀತುಪಡಿಸಿದ್ದಾರೆ.

ಮನೆ ಕೆಲಸಗಳ ನಡುವೆಯೇ ತನ್ನೊಳಗಿನ ಕಲೆಯನ್ನು ಹೊಸ ರೀತಿಯಲ್ಲಿ ಅನ್ವೇಷಿಸಿ, ಅದನ್ನೇ ಸ್ವಯಂ ಉದ್ಯೋಗದ ದಾರಿಯಾಗಿ ರೂಪಿಸಿಕೊಂಡರು ಜಯಶ್ರೀ ಹೆಗಡೆ. ಅವರ ಕಥೆ ಕೇವಲ ಯಶೋಗಾಥೆಯಲ್ಲ, ಅನೇಕ ಮಹಿಳೆಯರಿಗೆ ಆತ್ಮವಿಶ್ವಾಸದ ಸ್ಫೂರ್ತಿಯಾಗಿದೆ.



ಕಲಾಕೃತಿಯೊಂದಿಗೆ ಜಯಶ್ರೀ ಹೆಗಡೆ

❖

ಮುನ್ನೋಟ 10-05-2026 ರಿಂದ 16-05-2026

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಗುರುಹಿರಿಯರ ಸಹಾಯವನ್ನು ಪಡೆಯಲು ಸಾಕಷ್ಟು ಪ್ರಯತ್ನಪಡುವಿರಿ. ಆಸ್ತಿ ವ್ಯವಹಾರದಲ್ಲಿ ಸ್ವಲ್ಪ ಲಾಭವಿರುತ್ತದೆ. ವಿದ್ಯಾರ್ಥಿಗಳು ಉತ್ತಮ ಫಲಿತಾಂಶಕ್ಕಾಗಿ ಶ್ರಮಪಡಬೇಕು. ನರ ದೌರ್ಬಲ್ಯ ಇರುವವರು ಹೆಚ್ಚು ಎಚ್ಚರವಹಿಸಿರಿ. ಸಂಗಾತಿ ಇಷ್ಟದಂತೆ ಹೆಚ್ಚು ಹಣ ಖರ್ಚು ಮಾಡುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಶ್ರೀಮಂತರಂತೆ ಕಾಣಿಸಿಕೊಳ್ಳಲು ಪ್ರಯತ್ನಪಡುವಿರಿ. ಆದಾಯವು ನಿಮ್ಮ ನಿರೀಕ್ಷೆ ತಲುಪುತ್ತದೆ. ನಿಮ್ಮ ಕೆಲಸಗಳಿಗೆ ಹಿರಿಯರ ಸಹಕಾರ ದೊರೆಯುತ್ತದೆ. ಕೃಷಿ ಭೂಮಿಯನ್ನು ಅಭಿವೃದ್ಧಿ ಮಾಡುವವರಿಗೆ ಲಾಭವಿದೆ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ಸಂಗಾತಿಯೊಂದಿಗೆ ಮಾಡಿದ ಕೃಷಿ ವ್ಯವಹಾರಗಳು ಲಾಭ ತರುತ್ತವೆ. ಕೆಲವರಿಗೆ ಆದಾಯ ಹೆಚ್ಚುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಎಲ್ಲರೆದುರಿಗೆ ಗಂಭೀರವಾದ ನಡವಳಿಕೆ ತೋರುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟು ಇರುವುದಿಲ್ಲ. ಗಣಿಗಾರಿಕೆ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಲಾಭವಿದೆ. ಗಣಿತದ ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಲಭಿಸುತ್ತದೆ. ಮಕ್ಕಳ ಪ್ರಗತಿ ನಿರೀಕ್ಷೆಗಿಂತ ಕಡಿಮೆ ಇರುತ್ತದೆ. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರವಿರಲಿ. ಸಂಗಾತಿಯಿಂದ ಆರ್ಥಿಕ ಸಹಕಾರ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಾರದ ಆರಂಭದಲ್ಲಿ ಸಂತೋಷವಾದ ವಾರ್ತೆಗಳನ್ನು ಕೇಳುವಿರಿ. ಆದಾಯವು ಕಡಿಮೆ ಇರುತ್ತದೆ. ಅಧ್ಯಾಪಕರಿಗೆ ಬೇಡಿಕೆ ಹೆಚ್ಚುತ್ತದೆ. ಹಿರಿಯರ ವ್ಯವಹಾರಗಳಲ್ಲಿ ನಿಮಗೆ ಪಾಲು ದೊರೆಯುತ್ತದೆ. ಆಭರಣ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಸಾಮಾನ್ಯ ಪ್ರಗತಿ ಇರುತ್ತದೆ. ನೀರಿನಿಂದ ಆರೋಗ್ಯದಲ್ಲಿ ವ್ಯತ್ಯಾಸವಾಗಬಹುದು. ಪ್ರೇಮಿಗಳಿಗೆ ಈಗ ವಿವಾಹವಾಗುವ ಯೋಗವಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಾರದ ಆರಂಭದಲ್ಲಿ ಧರ್ಮದ ಬಗ್ಗೆ ಮನಸ್ಸು ಕೇಂದ್ರೀಕೃತವಾಗಿರುತ್ತದೆ. ಆದಾಯವು ಸಾಮಾನ್ಯವಾಗಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಂದ ವೃತ್ತಿಯಲ್ಲಿ ಅಭಿವೃದ್ಧಿ ಹೊಂದುವಿರಿ. ಆಸ್ತಿ ವಿಚಾರದಲ್ಲಿ ಸಾಕಷ್ಟು ಎಚ್ಚರವಹಿಸಿ. ವಿದ್ಯಾರ್ಥಿಗಳಿಗೆ ಅವರ ಅಪೇಕ್ಷಿತ ವಿಷಯಗಳಲ್ಲಿ ಉತ್ತಮ ಫಲಿತಾಂಶ ದೊರೆಯುತ್ತದೆ. ಕೆಲವರಿಗೆ ನೇತ್ರ ಸಂಬಂಧಿ ದೋಷಗಳು ಕಾಣಿಸಬಹುದು. ಸಂಗಾತಿಯೊಂದಿಗೆ ಕಾವೇರಿದ ವಾತಾವರಣ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ವಿಪರೀತ ಬುದ್ಧಿವಂತಿಕೆ ನಿಮಗೆ ಕೈಕೊಡುತ್ತದೆ. ಆದಾಯವು ಈಗ ಸಾಮಾನ್ಯಗತಿಯಲ್ಲಿ ಇರುತ್ತದೆ. ನಿಮ್ಮ ಕೆಲಸಗಳಿಗೆ ಸಂಗಾತಿ ಕಡೆಯವರು ಅಡ್ಡಿ ಮಾಡಬಹುದು. ಆಸ್ತಿ ಖರೀದಿಗೆ ಹಣ ಒಟ್ಟು ಮಾಡುವ ಕೆಲಸ ಪ್ರಾರಂಭಿಸುವಿರಿ. ನೇತ್ರವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ವಿದೇಶದಲ್ಲಿ ಶಸ್ತ್ರ ಚಿಕಿತ್ಸೆಯನ್ನು ಮಾಡುವವರಿಗೆ ಹೆಚ್ಚು ಆದಾಯವಿರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ವಾರದ ಆರಂಭದಲ್ಲಿ ಸೋಮಾರಿತನ ಇರುತ್ತದೆ. ಆದಾಯವು ಸಾಮಾನ್ಯವಾಗಿರುತ್ತದೆ. ಬಂಧುಗಳ ಸಹಕಾರ ದೊರೆಯುತ್ತದೆ. ಕೃಷಿ ಅಧ್ಯಯನ ಮಾಡುತ್ತಿರುವವರಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಕೀಲು ನೋವು ಕೆಲವರಿಗೆ ಕಾಡಬಹುದು. ಸಂಗಾತಿ ಸಹಕಾರದಿಂದ ಸರ್ಕಾರಿ ವ್ಯವಹಾರಗಳಲ್ಲಿ ಅವಕಾಶ ದೊರೆಯುತ್ತದೆ. ಆಭರಣ ತಯಾರಕರಿಗೆ ನಿರೀಕ್ಷಿತ ವ್ಯಾಪಾರವಿರುವುದಿಲ್ಲ. ವೃತ್ತಿಯಲ್ಲಿ ಹೊಸ ಅವಕಾಶಗಳು ಈಗ ತೆರೆದುಕೊಳ್ಳುತ್ತವೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಮುನ್ನುಗ್ಗುವ ಉತ್ಸಾಹ ಕಡಿಮೆಯಾದಂತೆ ಅನಿಸುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಸಹೋದರಿಯರ ಸಹಕಾರ ದೊರೆಯುತ್ತದೆ. ಆಸ್ತಿ ಖರೀದಿ ವಿಚಾರದಲ್ಲಿ ಅತಿಯಾದ ಆತುರ ಬೇಡ. ನರದೌರ್ಬಲ್ಯ ಇರುವವರು ಎತ್ತರದ ಸ್ಥಳಗಳನ್ನು ಏರಲು ಹೋಗಬೇಡಿ. ಸಂಗಾತಿಯಿಂದ ಆರ್ಥಿಕ ಸಹಕಾರ ನಿರೀಕ್ಷೆ ಮಾಡಬಹುದು. ಹಿರಿಯರ ಕೋಪಕ್ಕೆ ಗುರಿಯಾಗುವ ಸಂದರ್ಭವಿದೆ. ಅಧ್ಯಾಪಕರಿಗೆ ಕೆಲಸದ ಒತ್ತಡ ಹೆಚ್ಚಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸ್ವಲ್ಪ ಸೋತಿದ್ದ ಮನಸ್ಸು ಈಗ ಗೆಲುವಿನತ್ತ ಹೊರಳುತ್ತದೆ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ಭಾಷಣಕಾರರು ಮತ್ತು ಸಂಗೀತಗಾರರ ಆದಾಯ ಹೆಚ್ಚುತ್ತದೆ. ಬಂಧುಗಳಿಂದ ನಿಮ್ಮ ಕೆಲಸ ಕಾರ್ಯಗಳಿಗೆ ವಿರೋಧ ಬರಬಹುದು. ಕೃಷಿ ಭೂಮಿಯನ್ನು ಅಭಿವೃದ್ಧಿಪಡಿಸುವವರಿಗೆ ಉತ್ತಮ ಲಾಭವಿದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಮನಸಿನಲ್ಲಿ ಬಹಳ ಶಾಂತತೆ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ವಿದೇಶಿ ಭಾಷಾ ಬೋಧಕರಿಗೆ ಆದಾಯ ಹೆಚ್ಚುತ್ತದೆ. ಬಂಧುಗಳ ನಡುವೆ ವಿರೋಧ ಹೆಚ್ಚುತ್ತದೆ. ಫ್ಯಾಷನ್ ಡಿಸೈನಿಂಗ್ ಓದುತ್ತಿರುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯವಾಗಬಹುದು. ತಾಯಿಯಿಂದ ನಿಮಗೆ ಆರ್ಥಿಕ ಸಹಕಾರ ಸಿಗುತ್ತದೆ. ಹಿರಿಯರ ಆಸ್ತಿ ದೊರೆಯುವ ಸಂದರ್ಭವಿದೆ. ವೃತ್ತಿಯಲ್ಲಿ ನಿರೀಕ್ಷಿಸಿದ್ದ ಪ್ರಗತಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯ ಕಡಿಮೆ ಇರುತ್ತದೆ. ನಿಮ್ಮದೇ ಆದ ರೀತಿಯಿಂದ ಆದಾಯ ಹೆಚ್ಚಿಸಿಕೊಳ್ಳುವ ಮಾರ್ಗ ಸಿಗುತ್ತದೆ. ಹಿರಿಯರಿಗೆ ಈಗ ಸಮಾಜದ ಸಹಕಾರ ದೊರೆಯುತ್ತದೆ. ರೇಷ್ಮೆ ಬಟ್ಟೆ ತಯಾರಕರಿಗೆ ಹೆಚ್ಚಿನ ಲಾಭವಿದೆ. ವಿದ್ಯಾರ್ಥಿಗಳಿಗೆ ಅಪೇಕ್ಷಿಸಿದ ಫಲಿತಾಂಶ ಪಡೆಯುವ ಯೋಗವಿದೆ. ತಾಯಿ ಆರೋಗ್ಯದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಸಂಗಾತಿಯ ಸಲಹೆಯು ನಿಮಗೆ ಬಹಳ ಅಮೂಲ್ಯವಾಗಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಬಹಳ ಉಗ್ರತೆ ನಿಮ್ಮಲ್ಲಿ ಇರುತ್ತದೆ. ತೋರಿಕೆಯ ಮಾತಿನಿಂದ ಜನರನ್ನು ಗೆಲ್ಲುವುದು ಕಷ್ಟ. ಆದಾಯವು ಅಗತ್ಯಕ್ಕೆ ತಕ್ಕಂತೆ ಇರುತ್ತದೆ. ಸ್ತ್ರೀಯರ ಸಹಕಾರದಿಂದ ನಿಮ್ಮ ಕೆಲಸಗಳು ಕೈಗೂಡುತ್ತವೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಗಳಿವೆ. ಚರ್ಮರೋಗ ಕಾಡಬಹುದು. ಸಂಗಾತಿಯಿಂದ ಅಪೇಕ್ಷಿಸಿದ್ದ ಆರ್ಥಿಕ ಸಹಕಾರ ದೊರೆಯುತ್ತದೆ.


ಪದಬಂಧ 2943

ಮೇಲಿಂದ ಕೆಳಕ್ಕೆ

1.ಅನೇಕ ವದನದ ತಂತ್ರರೂಪಿ	4
2.ಪಟದಲ್ಲಿ ರೋಚಕವಾಗಿ ಬರುವ ಉತ್ತರಭಾರತದ ತಿಂಡಿ	3
3.ಕನ್ನಡ ದೇಶದ ಸುಂದರ ಕಾಡು	2
4.ಅಳಿದುಹೋದ ಪ್ರಾಣ	4
7. ಮಾಹಾಶಿವನ ಕಣ್ಣಾದ ಮಾಲೆಯ ಬೀಜ	3
9. ಓಂಕಾರ ನಾದ ಸ್ವರೂಪ	3
10. ಭಗವದ್ಭಕ್ತರ ಅಂತರಂಗದ ಹಾಡಹೊನಲು	5
11. ಎಲ್ಲರಿಗೂ ಬೇಕಾದ ಓದು ಬರಹ	4
12. ಆಸ್ತಿಯಲ್ಲಿ ದ್ರವ ಸ್ಥಿರಗಳ ರೂಪ	4
13. ಮಹಾಶಿವಭಕ್ತ ಲಂಕಾಧೀಶ	3
15. ಮಾಧವನ ಸ್ತ್ರೀರೂಪ	3
16. ಅಮೃತ ದ್ರವವಾಗಿ ಹರಿದಿದೆ	4
17. ಅಂತರಂಗದ ತೊಳಲಾಟ	4
18. ಚಿಕ್ಕ ಕಥಾರೂಪ	3
20. ರಸ ತಲೆಕೆಳಕಾದರೆ ಕೊರಳಾಭರಣ	2

ಎಡದಿಂದ ಬಲಕ್ಕೆ

1.ಅಕ್ಷರ ಕಲಿಕೆಯಲ್ಲಿ ಹಲಗೆಯ ಜತೆ ಹಿಡಿಯುವ ಸಾಧನ	3
3. ಬಂಧುಗಳ ಜೊತೆಗೂಡುವ ಸಮೂಹ	3
5. ಮೈನವಿರೇಳಿಸುವ ಪುಳಕ	4
6. ಶಿರದ ಬಿಕರಿಯಿಂದ ಬರುವ ಪೀಳಿಗೆ	4
8. ಮೊದಲೇ ಕಾಣುವ ದೃಶ್ಯ	3
10. ದಾವಕ್ಕೆ ಬರುವ ರಾಕ್ಷಸ	3
11. ಮೊಕದ್ದಮೆಯಲ್ಲಿ ಪುರಾವೆಗೆ ಬರುವವ	2
12. ಅಡಿಯಾಳುವಿನ ದಾರ್ಶನಿಕ ರೂಪ	5
14. ಲೀನವಾಗಿ ಹೋಗುವ ಅವಸ್ಥೆ	5
15. ಕುಮಾರನಲ್ಲಿ ಕಾಣಬಹುದಾದ ಮದನ	2
16. ಸನಕನ ಜೊತೆಗೂಡುವ ಒಳ್ಳೆಯ ಮಗ	3
18. ಥಕಥಕ ಕುಣಿತದಲ್ಲಿ ಬರುವ ನೃತ್ಯ ಪ್ರಕಾರ	3
19. ಜ್ಞಾನವನ್ನು ತಲೆಯ ಮೇಲೆ ಹೊತ್ತವ	4
20. ನಿಜದ ಜಾಡನ್ನು ಹಿಡಿವ ದಾರಿ	4
21. ಸರಣಿಯಾಗಿ ನಡೆಯುವ ಯುದ್ಧ	3
22. ಸ್ವಯಂ ಪಾಕ ನಮ್ಮದೇ	3



ಪದಬಂಧ ಉತ್ತರ -2942

ಮೇಲಿಂದ ಕೆಳಕ್ಕೆ

1.ಸರಸ 2.ಕ್ಷಮತೆ 3.ಉಸುಕು 4.ನರ್ತನ 7.ಹರಣ 9.ವಿಶಾಕ 10.ಅಂಜನ 11.ರಮಣ 12.ಜಾನಕಿ 13.ಲವಣಿ 16.ನಿರೀಕ್ಷೆ 18.ರುಚಿರ 19.ಪಟೇಲ 20.ಯಮಕೆ 21.ಸನಕ 22.ಹರಕೆ

ಎಡದಿಂದ ಬಲಕ್ಕೆ

1.ಸರಸಿಜಾಕ್ಷ 3.ಉದ್ಯಾನವನ 5.ಮನಸು 6.ಸಮೂಹಗೀತೆ 8.ಕುಲವಿಹೀನ 10.ಅಂಕಣಕಾರ 12.ಜಾತಕಫಲ 15.ನವನಿರ್ಮಾಣ 17.ಕಿತ್ತೂರುರಾಣಿ 19.ಪರೀಕ್ಷೆಭಯ 21.ಸಮರಸಿಂಹ 23.ಮಲಿನ 24.ಲವಲವಿಕೆ 25.ಕನ್ನಡಾಂಬಿಕೆ

ಶಿಲ್ಪಗಳಲ್ಲಿ ಜೀವಂತವಾದ ಕನಕದಾಸ

• ರೂಪಾ ಕೆ.ಎಂ.

**‘ಜಾತಿ, ಮತ, ಪಂಥಗಳ ಗಡಿಯೇಕೆ?
ಗರ್ಭಗುಡಿಯ ಹಂಗೇಕೆ?
ಬಾ ಬಾ ಗೆಳೆಯ...
ಹರಿಸು ಕೀರ್ತನೆಗಳ
ಜೀವತೊರೆಯ...’**

ಹೀಗೆ ಬಾಲಕೃಷ್ಣ ತನ್ನ ಪುಟ್ಟ ಬಾಹುಗಳನ್ನು ತೆರೆದು ಎದುರಿಗಿದ್ದ ಕನಕರನ್ನು ಬರಮಾಡಿಕೊಳ್ಳುತ್ತಿದ್ದಾನೆ.

‘ಬಾಗಿಲನು ತೆರೆದು ಸೇವೆಯನು ಕೊಡು ಹರಿಯೆ’ ಎಂದು ಕನಕರು ಆರ್ತನಾದ ಹೊರಡಿಸುವ ಮೊದಲೇ, ‘ನನ್ನ–ನಿನ್ನ ನಡುವೆ ಅದೆಂಥ ಬಾಗಿಲಯ್ಯ! ನೀನಲ್ಲದೇ ಮತ್ತಾರು ನನ್ನವರು?’ ಎಂದು ಕೃಷ್ಣನೇ ಅವರನ್ನು ಹತ್ತಿರಕ್ಕೆ ಕರೆಯುವಂತೆ ಭಾಸವಾಗುತ್ತದೆ.

**‘ಮೇಲು–ಕೀಳಿನ
ಹಂಗಿಲ್ಲದವಂಗೆ
ಜೀವರಸವೇ ತಾನಾಗಿರುವವಂಗೆ
ಭಕ್ತಿಯೆಂಬ ಅಕ್ಷರವ ಪೋಣಿಸಲೇ
ನಿತ್ಯ ನೆನೆಯುವ ಹರಿಸಾರವನ್ನು
ಹೊತ್ತು ಮರೆಯಲೇ...’**

ಎನ್ನುತ್ತಾ ವಯೋವೃದ್ಧ ಕನಕರು ಹರಿಚಿತ್ತವೇ ಸತ್ಯವೆಂದು ಕೈಮುಗಿದು ನಿಂತಿದ್ದಾರೆ.

ಇದು ಕಾವ್ಯದ ಸಾಲಲ್ಲ. ಬೆಂಗಳೂರಿನ ಮಲ್ಲತ್ತಹಳ್ಳಿಯ ‘ಕಲಾಗ್ರಾಮ’ದಲ್ಲಿರುವ ‘ಕನಕ ಶಿಲ್ಪವನ’ದ ಒಂದು ಶಿಲ್ಪಕಲಾಕೃತಿ ಹುಟ್ಟಿಸುವ ಭಾವಚಿತ್ರ.



ಕನಕ ಶಿಲ್ಪ

ಚಿತ್ರಗಳು: ರಂಜು ಪಿ.

ಹೀಗೆಲ್ಲ ಕೃಷ್ಣ–ಕನಕರು ಮಾತಾಡಿಕೊಂಡರೆ ಎಷ್ಟು ಚಂದ! ಮನುಕುಲ ತನಗೆ ತಾನೇ ಕಟ್ಟಿಕೊಂಡ ಜಾತಿ–ಧರ್ಮದ ಗೋಡೆಗಳು ಇಂಥ ಕಾಲ್ಪನಿಕ ಸಂಭಾಷಣೆಯ ಮುಂದೆ ಎಷ್ಟು ಪೇಲವವಾಗಿ ಕಾಣುತ್ತವೆ!

ಇಂಥವೇ ಅಪರೂಪದ ಕಲ್ಪನೆಗಳನ್ನು ಹುಟ್ಟಿಸುವ ಶಿಲ್ಪಗಳು ಈ ಶಿಲ್ಪವನದ ತುಂಬ ಹರಡಿಕೊಂಡಿವೆ. ಇವು ಕೇವಲ ‘ವೀಕ್ಷಕಶಿಲ್ಪ’ಗಳಲ್ಲ; ನೋಡುಗರ ಎದೆಯೊಳಗೆ ಚಿಂತನೆಯೊಂದನ್ನು ಬಿತ್ತುವ ಬದುಕಿನ ಬಿಂಬಗಳು. ಹಸಿರಿನ ನಡುವೆ ಮುತ್ತುಗದ ಮರಗಳ ನೆರಳಲ್ಲಿ ನಳನಳಿಸುವ ಈ ಶಿಲ್ಪಗಳನ್ನು ಹಿರಿಯ ಶಿಲ್ಪಕಲಾವಿದ ವೆಂಕಟಾಚಲಪತಿ ಮತ್ತು ಅವರ ತಂಡ ರೂಪಿಸಿದ್ದಾರೆ.



ಸಮರಾಭ್ಯಾಸದ ಕಲಾಕೃತಿ

ಈ ಶಿಲ್ಪವನದ ರೂವಾರಿ, ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ.ಚಿಕ್ಕಣ್ಣ ಹೇಳುವಂತೆ, ‘ಕಲಾಗ್ರಾಮ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ. ಕನ್ನಡ ಭವನದಲ್ಲಿದ್ದ ಅಧ್ಯಯನ ಕೇಂದ್ರವನ್ನು ಇಲ್ಲಿ ಸ್ಥಳಾಂತರಿಸಿದ ಬಳಿಕ ಸುತ್ತಲಿನ ಜಾಗ ಖಾಲಿಯಂತೆ ಕಾಣುತ್ತಿತ್ತು. ಅದೇ ವೇಳೆ ಕನಕದಾಸರ ಬದುಕಿನ ಕೆಲವು ಕಥೆಗಳನ್ನಾದರೂ ಶ್ರೀಸಾಮಾನ್ಯರಿಗೆ ತಲುಪಿಸಬೇಕು ಎಂಬ ಉದ್ದೇಶದಿಂದ ಈ ಶಿಲ್ಪವನ ನಿರ್ಮಿಸಲಾಯಿತು’.

ಒಟ್ಟು ಆರು ಸನ್ನಿವೇಶಗಳಿಂದ ಪ್ರೇರಣೆ ಪಡೆದು ಎಂಟು ಶಿಲ್ಪಗಳನ್ನು ರೂಪಿಸಲಾಗಿದೆ. ಆದರೆ ಇವು ಇತಿಹಾಸದ ದೃಶ್ಯ ಪುನರಾವರ್ತನೆಗಳಲ್ಲ; ಕನಕದಾಸರ ಬದುಕಿನೊಳಗಿನ ಸಂಘರ್ಷ, ವೈರಾಗ್ಯ, ಭಕ್ತಿ ಮತ್ತು ಸಮಾನತೆಯ ಕನಸುಗಳನ್ನು ಶಿಲ್ಪರೂಪದಲ್ಲಿ ಕಟ್ಟಿಕೊಡುವ ಪ್ರಯತ್ನ.

ಕನಕದಾಸರು ಹುಟ್ಟುತ್ತಲೇ ಸಂತರಾಗಿರಲಿಲ್ಲ. ವಿಜಯನಗರ ಸಾಮ್ರಾಜ್ಯದ ಪಾಳೇಗಾರರಾಗಿದ್ದ ತಿಮ್ಮಪ್ಪನಾಯಕನ ಬದುಕು ಯುದ್ಧ, ವೈಭವ ಮತ್ತು ಲೌಕಿಕ ಸುಖಗಳಿಂದ ಕೂಡಿತ್ತು. ತಂದೆಯೊಂದಿಗೆ ಸಮರಾಭ್ಯಾಸ ಮಾಡುವ ಶಿಲ್ಪವೂ ಇಲ್ಲಿದೆ. ತಿಮ್ಮಪ್ಪ, ತಿಮ್ಮಪ್ಪನಾಯಕ, ಕನಕಪ್ಪನಾಯಕ ಮತ್ತು ಕನಕದಾಸ–ಹೀಗೆ ಅವರ ಬದುಕಿನ ನಾಲ್ಕು ಆಯಾಮಗಳನ್ನು ಇಲ್ಲಿ ಕಟ್ಟಿಕೊಡಲಾಗಿದೆ.

ಕನಕದಾಸರಿಗೆ ಉತ್ತಮ ವಿದ್ಯಾಭ್ಯಾಸವೂ ಇತ್ತು. ಶಾಸ್ತ್ರ, ಕಾವ್ಯ ಮತ್ತು ಸಂಗೀತದ ಮೇಲೆ ಆಳವಾದ ಪಾಂಡಿತ್ಯ ಹೊಂದಿದ್ದರು. ಅವರ ಭಾಷಾ ಬಳಕೆಯನ್ನು ನೋಡಿದರೆ ಆಶುಕವಿಯಾಗಿದ್ದರೆಂಬ ಅನುಮಾನವೂ ಮೂಡುತ್ತದೆ. ಕಾವ್ಯ ರಚನೆಯಲ್ಲಿ ತಲ್ಲೀನರಾಗಿರುವ ಶಿಲ್ಪದಲ್ಲಿ ಈ ವಿದ್ವತ್ತಿನ ಚಿತ್ರಣ ಕಾಣಿಸುತ್ತದೆ.

15 ಮತ್ತು 16ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಮೇಲೆ ನಿರಂತರ ಯುದ್ಧಗಳು ನಡೆದವು. ಅಂತಹ ಒಂದು ಯುದ್ಧದಲ್ಲಿ ತಿಮ್ಮಪ್ಪನಾಯಕ ಸೋಲು ಅನುಭವಿಸುತ್ತಾರೆ. ನಂತರ ತಂದೆ, ತಾಯಿ, ಹೆಂಡತಿ ಮತ್ತು ಮಗುವಿನ ಸಾವು ಅವರನ್ನು ಆಳವಾಗಿ ಕಾಡುತ್ತದೆ. ಸಾವು ಮತ್ತು ಸೋಲು ಅವರೊಳಗೆ ವೈರಾಗ್ಯ ಹುಟ್ಟಿಸುತ್ತವೆ. ಬದುಕಿನ ಅರ್ಥ ಮತ್ತು ಮೋಕ್ಷದ ಹುಡುಕಾಟದಲ್ಲಿ ಖಡ್ಗವನ್ನು ಕೆಳಗಿಟ್ಟು ತಂಬೂರಿ ಹಿಡಿದ ತಿಮ್ಮಪ್ಪನಾಯಕ, ಕನಕದಾಸರಾಗುತ್ತಾರೆ. ಸುಮಾರು 95 ವರ್ಷಗಳ ತುಂಬು ಬದುಕಿನ ಆ ಪಯಣವನ್ನು ಹತ್ತಡಿ ಎತ್ತರದ ಶಿಲ್ಪವೊಂದು ಸಾರುತ್ತದೆ.

16ನೇ ಶತಮಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ವೈಷ್ಣವ ಪಂಥವನ್ನು ಆರಿಸಿಕೊಂಡ ಕನಕರು, ಅದರ ಮೂಲಕವೇ ಮೋಕ್ಷ ಸಾಧನೆ ಸಾಧ್ಯವೇ ಎಂದು ಹುಡುಕಾಟಕ್ಕೆ ಹೊರಟರು. ಆದರೆ ಪಾಳೇಗಾರನಾಗಿದ್ದಾಗ ‘ಜೀ ಹೂಜೂರ್’ ಎಂದು ಕರೆಯುತ್ತಿದ್ದ ಸಮಾಜವೇ, ಭಾಗವತನಾದ ಮೇಲೆ ಅವರನ್ನು ಜಾತಿಯ ಕಾರಣಕ್ಕೆ ತಿರಸ್ಕರಿಸಿತು. ಆ ನೋವಿನಿಂದಲೇ ಹೊರಬಂದದ್ದು–
‘ಕುಲ–ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ?’ ಎಂಬ ಪ್ರಶ್ನೆ.

ಕನಕ ವನಕ್ಕೆ ತೆರೆದ ಬಾಗಿಲು

ಮಲ್ಲತ್ತಹಳ್ಳಿಯ ‘ಕಲಾಗ್ರಾಮ’ದಲ್ಲಿರುವ ಈ ‘ಕನಕ ಶಿಲ್ಪವನ’ ಮೇ 15ರಂದು ಉದ್ಘಾಟನೆಗೊಳ್ಳಲಿದ್ದು, ಸಾರ್ವಜನಿಕ ಪ್ರವೇಶಕ್ಕೆ ಮುಕ್ತವಾಗಲಿದೆ.

ಇದೇ ಸಂದರ್ಭದಲ್ಲಿ ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಮಾಲೆಯೂ ಬಿಡುಗಡೆಯಾಗುತ್ತಿದೆ. ‘ಮೋಹನ ತರಂಗಿಣಿ’, ‘ಹರಿಭಕ್ತಿಸಾರ’, ‘ರಾಮಧಾನ್ಯ ಚರಿತ್ರೆ’, ‘ನಳ ಚರಿತ್ರೆ’, ‘ಕೀರ್ತನೆಗಳು’ ಮತ್ತು ‘ಮುಂಡಿಗೆಗಳು’ ಸೇರಿದಂತೆ ಕನಕದಾಸರ ಕೃತಿಗಳು ತುಳು, ಕೊಡವ, ಕೊಂಕಣಿ, ಬ್ಯಾರಿ, ತಮಿಳು, ತೆಲುಗು, ಮಲಯಾಳಂ, ಸಂಸ್ಕೃತ, ಇಂಗ್ಲಿಷ್, ಹಿಂದಿ, ಉರ್ದು, ಮರಾಠಿ, ಗುಜರಾತಿ ಹಾಗೂ ಬಂಗಾಳಿ ಸೇರಿ ಹದಿನಾಲ್ಕು ಭಾಷೆಗಳಿಗೆ ಅನುವಾದಗೊಂಡಿವೆ.

ಓದಿನಿಂದ ವಿಮುಖರಾಗುತ್ತಿರುವ ಜೆನ್–ಜಿ ಪೀಳಿಗೆಗೆ ವಿದ್ವಾಂಸ ಕನಕರನ್ನು ಪರಿಚಯಿಸಲು ಫೆಲೋಶಿಪ್, ವಿಚಾರಸಂಕಿರಣ, ಕಮ್ಮಟಗಳ ಜೊತೆಗೆ ಮಕ್ಕಳಿಗಾಗಿ ಕನಕದಾಸರ ಜೀವನಚರಿತ್ರೆಯನ್ನು ಆಧರಿಸಿದ ಸಚಿತ್ರಕೋಶವನ್ನೂ ರೂಪಿಸಲಾಗಿದೆ.

ಶ್ರೀಸಾಮಾನ್ಯರಿಗೆ ಕನಕದಾಸರನ್ನು ಇನ್ನಷ್ಟು ಹತ್ತಿರ ಮಾಡಲು ನಾಟಕ, ನೃತ್ಯರೂಪಕ, ಗೊಂಬೆಯಾಟ ಮತ್ತು ತಾಳಮದ್ದಲೆಯಂತಹ ಕಲಾಪ್ರಕಾರಗಳ ಮೂಲಕವೂ ಕನಕರ ಚಿಂತನೆಗಳನ್ನು ತಲುಪಿಸುವ ಪ್ರಯತ್ನ ನಡೆಯುತ್ತಿದೆ.



ಆಳೆತ್ತರದ ಕನಕದಾಸರ ಶಿಲ್ಪ ವೀಕ್ಷಿಸುತ್ತಿರುವ ಯುವತಿಯರು

ಕನಕದಾಸರು ಮಠ ಕಟ್ಟಲಿಲ್ಲ. ಒಂದೇ ಸ್ಥಳದಲ್ಲಿ ನೆಲೆಸಲಿಲ್ಲ. ಉಡುಪಿಯಿಂದ ರಾಜಸ್ಥಾನದವರೆಗೆ ಸಂಚರಿಸಿದ ಬಗ್ಗೆ ಉಲ್ಲೇಖಗಳಿವೆ. ಕೊನೆಗೆ ಕಾಗಿನೆಲೆಯನ್ನು ಕಾರ್ಯಕ್ಷೇತ್ರ ಮಾಡಿಕೊಂಡರು. ಸಂತರ ನಡೆ ಸದಾ ಸಮುದಾಯದ ಕಡೆಗೇ ಇರುತ್ತದೆ. ಈ ಶಿಲ್ಪವನವೂ ಅದನ್ನೇ ನೆನಪಿಸುತ್ತದೆ.

ಆ ಕಾಲದಲ್ಲಿದ್ದ ನೂರೈವತ್ತು ಹರಿದಾಸರಲ್ಲಿ, ಮೂನ್ನೂರ ಐವತ್ತು ಕೀರ್ತನೆಗಳ ಜೊತೆಗೆ ಕಾವ್ಯಕೃತಿಗಳನ್ನೂ ರಚಿಸಿದ ಅಪರೂಪದ ಕವಿ ಕನಕದಾಸರು. ‘ಮುಂಡಿಗೆ’ಗಳ ಮೂಲಕ ತಮ್ಮ ವಿದ್ವತ್ತನ್ನು ತೋರಿಸಿದರು. ಒಗಟಿನ ರೂಪದಲ್ಲಿರುವ ಈ ಸಾಹಿತ್ಯಪ್ರಕಾರ ಆ ಕಾಲದ ಪಾಂಡಿತ್ಯದ ಸಂಕೇತವಾಗಿತ್ತು.

ಮೇಲು–ಕೀಳಿನ ಸಂಘರ್ಷ ಇಂದಿನದ್ದಲ್ಲ. ಆದರೆ ಆ ಕಾಲದಲ್ಲಿಯೇ ಸಮಾನತೆಯ ಕನಸು ಕಂಡ ಕನಕದಾಸರ ಧ್ವನಿ ಇಂದಿಗೂ ಪ್ರಸ್ತುತವಾಗಿಯೇ ಕೇಳಿಸುತ್ತದೆ.

ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು ಕೇವಲ ಸಾಹಿತ್ಯವಲ್ಲ; ಮನುಷ್ಯನು ಮನುಷ್ಯನಾಗಿರಲು ಬೇಕಾದ ಅಂತಃಕರಣದ ಪಾಠಗಳು.

ಮಲ್ಲತ್ತಹಳ್ಳಿಯ ಈ ಶಿಲ್ಪವನ, ಆ ಪಾಠಗಳನ್ನು ಕಲ್ಲಿನೊಳಗೆ ಮಾತಾಡಿಸುವ ಅಪರೂಪದ ಪ್ರಯತ್ನ.

❖

ಅರ್ಧದಲ್ಲೇ ಕನಸು ಉಳಿಸಿ ಹೋದ ಅಪ್ಪ...

• ಹೇಮಂತ ನಿಂಬಾಳ್ಕರ್

ನಾನು ಒಂದೂವರೆ ವರ್ಷದವನಿದ್ದಾಗ ಅಪ್ಪ ನನ್ನನ್ನು ಸೋದರತ್ತೆಯ ಬಳಿ ಕೊಲ್ಲಾಪುರಕ್ಕೆ ಬಿಟ್ಟು ಹೋದರು. ಹಳ್ಳಿಯಲ್ಲಿದ್ದರೆ ಓದು ಸರಿಯಾಗುವುದಿಲ್ಲ ಎಂದು ಜೀಜಿ-ಬಾಪೂ ತೀರ್ಮಾನಿಸಿದ್ದರು. ನಡೆಯಲು, ತೊದಲು ಮಾತು ಕಲಿತಿದ್ದ ತಮ್ಮ ಮೊದಲ ಮಗನನ್ನು ಅಕ್ಕನ ಬಳಿ ಓದಲು ಬಿಟ್ಟರು. ಯಾಕೆಂದರೆ ಅದೇ ಅಕ್ಕ ನನ್ನ ಅಪ್ಪನನ್ನು ಓದಿಸಿ ಬುದ್ಧಿವಂತನನ್ನಾಗಿ ಮಾಡಿದ್ದಳು.

ಅಪ್ಪ ನನಗೆ ಮೈಸಾಹೇಬರ ಬಾಲಮಂದಿರದಲ್ಲಿ ಪ್ರವೇಶ ಕೊಡಿಸಿದರು. ಅತ್ತೆಯ ಕಟ್ಟುನಿಟ್ಟಿನ ನಿಗಾದಲ್ಲಿ ನನ್ನ ಶ್ಯಾಣ್ಯನಾಗುವ ಪಯಣ ಆರಂಭವಾಯಿತು.


ಪ್ರತಿ ಭಾನುವಾರ ಬಾಪೂ ತಪ್ಪದೇ ಕೊಲ್ಲಾಪುರಕ್ಕೆ ಬರುತ್ತಿದ್ದರು. ಶಿವಾಜಿ ಚೌಕದ ಇಂಪೀರಿಯಲ್‌ನಲ್ಲಿ ರೋಸ್-ವೆನಿಲ್ಲಾ ಐಸ್‌ಕ್ರೀಂ ತಿನ್ನಿಸಿ ಮತ್ತೆ ಅತ್ತೆಯ ಬಳಿ ಬಿಡುವುದು ಅವರ ವ್ರತದಂತೆಯೇ ಆಗಿತ್ತು. ಆಗ ನನ್ನ ಪಾಲಿಗೆ ಅಪ್ಪ ಅಂದರೆ ಭಾನುವಾರ ಬರುವ, ಐಸ್‌ಕ್ರೀಂ ಕೊಡಿಸುವ, ನನಗಾಗಿ ಮಟನ್ ತರುವ ಮನುಷ್ಯ.

ನಾನು ಮೂರನೇ ತರಗತಿಯಲ್ಲಿದ್ದಾಗ ಅತ್ತೆ ಪನ್ಹಾಳಕ್ಕೆ ಹೋದರು. ಆಗ ಬಾಪೂ ಹಳ್ಳಿ ಬಿಟ್ಟು, ಜೀಜಿಯನ್ನು ಕರೆದುಕೊಂಡು ನನ್ನ ಶಿಕ್ಷಣಕ್ಕಾಗಿ ಕೊಲ್ಲಾಪುರಕ್ಕೆ ಬಂದರು. ಕೂಡು ಕುಟುಂಬ ಬಿಟ್ಟು, ಶುಕ್ರವಾರ ಪೇಟೆಯಲ್ಲಿ ಹೊಸ ಬದುಕು ಆರಂಭಿಸಿದರು.

ಅಪ್ಪ ಮುಂಗೋಪಿ, ಶಿಸ್ತಿನ, ದೃಢ ನಿರ್ಧಾರದ ಮನುಷ್ಯ. ಹಳ್ಳಿಯಲ್ಲಿ ಎಲ್ಲರೂ ಅವರಿಗೆ ಹೆದರುತ್ತಿದ್ದರು. ನಾನೂ ಹಾಗೆಯೇ. ಪರಿಣಾಮವಾಗಿ ನಮ್ಮ ಮಾತುಕತೆ ಪ್ರಗತಿ ಪುಸ್ತಕದ ಸಹಿಗಷ್ಟೇ ಸೀಮಿತವಾಯಿತು.

ಅಪ್ಪ ಕೆಲಸದಲ್ಲಿ ಬ್ಯುಸಿ. ನನ್ನ ಓದಿನ ಜವಾಬ್ದಾರಿ ಜೀಜಿಯ ಮೇಲಿತ್ತು. ನಾನು ದಿನಾ ಐದು ಪಾಠಗಳ ಪ್ರಶ್ನೋತ್ತರ ಬರೆದು ಮುಗಿಸುವವರೆಗೂ ಊಟ ಕೊಡಬಾರದು ಎಂಬ ಅಪ್ಪನ ಆದೇಶವನ್ನು ಅವಳು ವರ್ಷಾನುವರ್ಷ ತಪ್ಪದೇ ಪಾಲಿಸಿದಳು.

ಶಾಲೆಯಲ್ಲಿ ಮೊದಲ ಸ್ಥಾನ ನನಗೆ ಕಾಯಂ ಆಗಿತ್ತು. ಒಮ್ಮೆ ಹಿಂದಿ ಮಾಸ್ತ್ರು ಮನೆಗೆ ಬಂದು, ‘ಹೇಮಂತ ಟಿಳಕ ವಿದ್ಯಾಪೀಠದ ಪರೀಕ್ಷೆಗೆ ಕೂರುವುದಿಲ್ಲ ಎನ್ನುತ್ತಾನೆ. ಬಾಪೂ ಬೇಡ ಎಂದಿದ್ದಾರಂತೆ’ ಎಂದರು. ಸುಳ್ಳು ಹೇಳಿದ್ದಕ್ಕೆ ಅಪ್ಪ ಮೈತುಂಬ ಬಾಸುಂಡೆ ಬರುವಂತೆ ಹೊಡೆದರು. ಕೋಪದಲ್ಲೇ ಪರೀಕ್ಷೆಗೆ ಕೂತು ಮೊದಲಿಗನಾಗಿದ್ದೆ. ಪ್ರಮಾಣಪತ್ರ ತೋರಿಸಲು ಹೋದಾಗ ಹತ್ತಿರ ಕರೆದು ಇಷ್ಟೇ ಹೇಳಿದರು: ‘ಭಯ್ಯಾ, ಮಾರ್ಕ್ಸ್ ಮುಖ್ಯವಲ್ಲ ಕಣೋ... ಸುಳ್ಳು ಹೇಳಬೇಡ’.
ಆ ದಿನ ಅವರು ನನಗೆ ಎರಡು ಪಾಠ ಹೇಳಿ ಕೊಟ್ಟರು–ಸುಳ್ಳು ಹೇಳಬಾರದು. ಮೊದಲ ನಿಯಮವನ್ನು ಎಂದಿಗೂ ಮುರಿಯಬಾರದು.



ಮಧುಕರ ನಿಂಬಾಳ್ಕರ್

ಆ ಘಟನೆಯ ನಂತರ ಅಪ್ಪ ನನ್ನ ಪ್ರಗತಿ ಪುಸ್ತಕ ಕೇಳಲಿಲ್ಲ. ‘ಹೇಮಂತ ಊಟ ಮಾಡಿದನಾ?’ ಇದೇ ಒಂದೇ ಪ್ರಶ್ನೆಯನ್ನು ಜೀವನಪೂರ್ತಿ ಕೇಳುತ್ತಿದ್ದರು. ಡಿಗ್ರಿ ಆದ ಮೇಲೆ ದಿಕ್ಕೇ ಕಾಣಲಿಲ್ಲ. ನಾನು ಕೊಲ್ಲಾಪುರದಲ್ಲಿ ಕೇಬಲ್ ನಡೆಸಲು ಶುರುಮಾಡಿದ್ದೆ. ಒಂದು ದಿನ ಅಪ್ಪ ಹೇಳಿದರು: ‘ಭಯ್ಯಾ, ನೀನು ಕಲೆಕ್ಟರ್ ಆಗುವ ಹುಡುಗ. ಏನಾದರೂ ಮಾಡು... ಜಗತ್ತು ನನ್ನನ್ನು ಹೇಮಂತನ ಅಪ್ಪ ಎಂದು ಗುರುತಿಸಲಿ’. ಆ ಮಾತು ನನ್ನ ಬದುಕನ್ನೇ ಬದಲಿಸಿತು. ಬ್ಯಾಗ್ ಎತ್ತಿಕೊಂಡು ಮುಂಬೈಗೆ ಹೋದೆ.

ಯುಪಿಎಸ್‌ಸಿಯಲ್ಲಿ ಭಾರತಕ್ಕೆ 52ನೇ ರ‍್ಯಾಂಕ್ ಬಂದಿದೆ ಎಂಬ ಸುದ್ದಿ ಕೇಳಿ ಅಪ್ಪ ಥಟ್ಟನೆ ಕೆಳಗೆ ಕುಳಿತೇ ಬಿಟ್ಟರು. ‘ಸಾಕಾ?’ ಎಂದು ಕೇಳಿದೆ. ನನ್ನ ಕೈ ಹಿಡಿದು ಅವರು ಬಿಕ್ಕಿ ಬಿಕ್ಕಿ ಅತ್ತರು. ‘ಸಾಕು ಮಗನೇ... ನನ್ನ ಬದುಕು ಸಾರ್ಥಕ ಆಯಿತು’. ಅಷ್ಟೆ ಹೇಳಿ, ಎಂದಿನಂತೆ ಡಬ್ಬ ತೆಗೆದುಕೊಂಡು ಮಟನ್ ತರಲು ಹೊರಟರು.

ನನ್ನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುವ ತಮ್ಮದೇ ಭಾಷೆ ಅಪ್ಪನಿಗಿತ್ತು. ನಾನು ಮನೆಗೆ ಹೋದರೆ ‘ಹೇಗಿದ್ದೀಯಾ?’ ಎಂದು ಕೇಳುವುದಕ್ಕೂ ಮುನ್ನ ಮಟನ್ ತರಲು ಹೊರಡುತ್ತಿದ್ದರು.

ನಿಮ್ಮ ಜೊತೆ ಹರಟೆ ಹೊಡೆಯುವುದು, ಹೆದರುತ್ತಾ ಹೆದರುತ್ತಾ ಆದರೂ ಒಂದು ‘ಚಿಯರ್ಸ್’ ಮಾಡುವುದು ಉಳಿದೇ ಹೋಯಿತು ಬಾಪೂ...

ಅಂಜಲಿ ಡಾಕ್ಟರ್ ಆಗಿರುವುದು, ಅವಳು ಶಾಸಕಿಯಾಗಿರುವುದು ಅವರಿಗೆ ಅಪಾರ ಹೆಮ್ಮೆಯ ವಿಷಯವಾಗಿತ್ತು. ನನ್ನ ಮಗ ಮಲ್ಹಾರ್ ಅಮೆರಿಕದಲ್ಲಿ ಅರ್ಥಶಾಸ್ತ್ರ ಓದಲು ಹೋಗಿದ್ದಾನೆ ಎಂದು ಊರುತುಂಬ ಎದೆಉಬ್ಬಿಸಿ ಹೇಳುತ್ತಿದ್ದರು. ರಖುಮಾ ಎರಡು ತಿಂಗಳ ಮಗುವಾಗಿದ್ದಾಗ ಅವಳ ಶಸ್ತ್ರಚಿಕಿತ್ಸೆ ನಡೆಯುತ್ತಿತ್ತು. ಆಪರೇಷನ್ ಥಿಯೇಟರ್ ಬಾಗಿಲ ಬಳಿ, ಅವಳು ಹೊರಬರುವವರೆಗೂ ದೇವರಲ್ಲಿ ಬೇಡಿಕೊಳ್ಳುತ್ತಾ ಒಬ್ಬರೇ ಕುಳಿತಿದ್ದ ಅಪ್ಪನ ಮುಖ ಇಂದಿಗೂ ನನ್ನ ಕಣ್ಣಮುಂದೆ ಹಾಗೆಯೇ ನಿಂತಿದೆ.

ಅಪ್ಪನ ಪ್ರೀತಿ, ಕಳಕಳಿ, ಅವರು ಪಟ್ಟ ಕಷ್ಟಗಳು ಒಂದು ಅದೃಶ್ಯ ಕಲ್ಪವೃಕ್ಷದ ನೆರಳಿನಂತಿತ್ತು. ಆ ನೆರಳಲ್ಲಿ ನೆಮ್ಮದಿಯಾಗಿ ಬದುಕುತ್ತಿದ್ದ ನಮಗೆ, ನಮಗೋಸ್ಕರ ಅದು ಸಹಿಸಿಕೊಂಡ ಬಿಸಿಲು-ಮಳೆಯ ಅರಿವೇ ಇರಲಿಲ್ಲ. ಸಮಯ ಬಂದಾಗ ಅದೇ ಮರದ ಒಣ ಎಲೆಗಳು ಅಗ್ನಿಷ್ಟಿಕೆಯಲ್ಲಿ ಕಾವು ಕೊಟ್ಟವು. ಆದರೆ ಹಣ್ಣೆಲೆಯಾಗಿ ಉದುರಿದ ಆ ಎಲೆಗಳ ಕಾಳಜಿ ಮಾಡಲಿಲ್ಲವಲ್ಲ ಎಂಬ ಕೊರಗು ಇನ್ನೂ ಉಳಿದಿದೆ.

ಮಳೆಗಾಲದಲ್ಲಿ ಹಾತಕಣಂಗಲೆಯ ಸ್ಟೇಷನ್‌ನಿಂದ ಮನೆಗೆ ಬರುತ್ತಿದ್ದಾಗ, ನನ್ನ ಕಾಲಿಗೆ ಕೆಸರು ಮುಳ್ಳು ತಗುಲಬಾರದು ಎಂದು ನನ್ನನ್ನು ಹೆಗಲ ಮೇಲೆ ಹೊತ್ತು ತಾವೇ ಕೆಸರು ಮುಳ್ಳು ತುಳಿದ ಅಪ್ಪನಿಗೆ ಒಂದು ದಿನ ನಾನು ಹೆಗಲು ಕೊಡಬೇಕಾಗುತ್ತದೆ ಎಂಬ ಯೋಚನೆ ನನಗೆ ಬಂದಿರಲಿಲ್ಲ.

ಅಪ್ಪ ನಿವೃತ್ತರಾದರು. ನಾನು ಐಪಿಎಸ್ ಆದೆ. ನನ್ನ ರಿಟೈರ್‌ಮೆಂಟ್‌ಗೆ ಅವರನ್ನು ಕರೆದುಕೊಂಡು ಹೋಗುವ ಕನಸು ಅರ್ಧದಲ್ಲೇ ಉಳಿಯಿತು.

ಅಸ್ಥಿ ವಿಸರ್ಜನೆಯ ವೇಳೆ ಬೂದಿಯಲ್ಲಿ ಅವರ ಅಸ್ಥಿಗಳನ್ನು ಹುಡುಕುತ್ತಿದ್ದಾಗ ಒಂದು ಭಯಾನಕ ಶೂನ್ಯತೆ ನನ್ನನ್ನು ಆವರಿಸಿತು. ಜೀವನಪೂರ್ತಿ ನನಗಾಗಿ ಕಣಕಣವಾಗಿ ಕರಗಿದ ಆ ಜೀವದ ಅವಶೇಷಗಳಲ್ಲಿ ನಾನು ಬಾಪೂವನ್ನು ಹುಡುಕುತ್ತಲೇ ಇದ್ದೆ.


ಬಾಪೂ, ಐವತ್ತಾರು ವರ್ಷದ ನಾನು ನಿನ್ನೆವರೆಗೂ ನನ್ನನ್ನು ಯುವಕನೆಂದುಕೊಂಡಿದ್ದೆ. ಅದು ನಿಮ್ಮ ಇರುವಿಕೆಯಿಂದ ಎಂದು ಈಗ ಅರ್ಥವಾಗುತ್ತಿದೆ.

ಚಿಯರ್ಸ್ ಅಪ್ಪ!

❖

ಮೊದಲ ಓದು

ಓದಿನ ಹಸಿವು ಹೆಚ್ಚಿಸುವ ಕೃತಿ




ಓದುವುದೆಂದರೆ: ಬಹುಮುಖಿ ಪಠ್ಯಗಳ ಓದು
ಲೇ: ರಾಜೇಂದ್ರ ಚೆನ್ನಿ
ಪ್ರ: ಅಭಿರುಚಿ
ಸಂ: 99805 60013

ಪುಸ್ತಕವೊಂದು ಹಲವಾರು ಪುಸ್ತಕಗಳ ಓದುವ ಕುತೂಹಲ ಮೂಡಿಸುವಂತಿದ್ದರೆ..? ಇದ್ದಕ್ಕಿದ್ದಂತೆ ಆದಿಪುರಾಣ ಅರ್ಥೈಸಿಕೊಳ್ಳುವುದು ಹೇಗೆ? ಪಂಪನ ರಚನೆಯನ್ನು ಗಮಕದಲ್ಲಿ ಓದಿ, ವ್ಯಾಖ್ಯಾನಿಸುವವರು ಇದ್ದಾರೆಯೇ ಎಂದು ಹುಡುಕಲಾರಂಭಿಸಿದರೆ, ಹುಡುಕಾಡಿ, ತಡಕಾಡಿ ದೇಹವೇ ದೇಶ ಎಂಬ ಪುಸ್ತಕದ ಮೂಲ ಕೃತಿಯನ್ನೂ ವಿಕ್ರಮವ್ ವಿಸಾಜಿ ಅವರ ಅನುವಾದಿತ ಕೃತಿಯನ್ನೂ ತರಿಸಿಕೊಳ್ಳುವಂತೆ ಮಾಡಿದರೆ; ಸಖೀಗೀತ ಹುಡುಕಿದರೆ; ಮುಕ್ತಾಯಕ್ಕನ ರಚನೆಗಳ ಓದಿಗೆ ತೆರೆದುಕೊಂಡರೆ.. ಇಂಥ ಹತ್ತು ಹಲವಾರು ರೆಗಳನ್ನು ಸೃಷ್ಟಿಸಿ, ಸಾಮಾನ್ಯರ ಓದಿನ ಹರವನ್ನು ವಿಸ್ತರಿಸುವಂತಿದೆ ಬಹುಮುಖಿ ಪಠ್ಯಗಳ ಓದು. ಇಲ್ಲಿ ಲೇಖಕರು ಇವೆಲ್ಲವೂ ಈ ಮೊದಲೇ ಪ್ರಕಟಣೆಯಾದ ಬರೆಹಗಳೆಂದೂ ಕೆಲವೊಂದು ಸಾಂದರ್ಭಿಕ ಲೇಖನಗಳೆಂದೂ ಹೇಳಿದ್ದಾರೆ. ಆದರೆ ಈ ಪುಸ್ತಕದಲ್ಲಿ ಆ ಎಲ್ಲ ಮಿತಿಯನ್ನೂ ಮೀರಿ ಓದುಗರಿಗೆ ಹೊಸ ಓದಿನ ರುಚಿಯನ್ನು ಹತ್ತಿಸುವ ಕೆಲಸವನ್ನು ಈ ಪುಸ್ತಕ ಸಶಕ್ತವಾಗಿ ಮಾಡುತ್ತದೆ. ಅಂಕಣ ಬರೆಹ ಆಗಿರುವುದರಿಂದ ಪದಮಿತಿಯ ಚೌಕಟ್ಟಿಗೆ ಇವನ್ನು ಒಳಪಡಿಸಿರುವುದರಿಂದ ಓದಿದ್ದೆಲ್ಲವೂ ಇನ್ನಷ್ಟು ಬೇಕು ಎನಿಸುವಂತಿವೆ. ಪುಸ್ತಕ ರೂಪದಲ್ಲಿ ತರುವಾಗ ವಿಸ್ತರಿಸುವ ಸಾಧ್ಯತೆ ಇದ್ದರೂ, ಹಾಗೆಯೇ ಉಳಿಸಿಕೊಂಡಿರುವುದು ಓದುಗರನ್ನು ಹಿಡಿದಿಡುತ್ತವೆ. ಕೆಲವೊಂದು ಬರೆಹಗಳು ಈ ಮೊದಲೂ ಇದನ್ನು ಓದಿದ್ದೆವು ಎಂದೆನಿಸಿದರೆ ಅಚ್ಚರಿ ಪಡಬೇಕಾಗಿಲ್ಲ. ಆದರೆ ಇನ್ನು ಮುಂದೆ ಏನು ಓದುವುದು; ಹೊಸದೇನು ಓದುವುದು ಎಂದು ವಿಚಾರಿಸುವಂಥ ಹೊಸ ಓದುಗರಿಗೆ ಇದು ಓದಿನ ವಿಸ್ತಾರವಾದ ಸಾಗರವನ್ನು ಪುಟ್ಟದೊಂದು ಮಡಕೆಯಲ್ಲಿ ತುಂಬಿ ತಂದು, ನಿನ್ನ ಬೊಗಸೆಗೆ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿಕೊ ಎಂದು ಹೇಳುವಂತಿದೆ. ವಿರಾಮದ ವಿಸ್ತೃತ ಓದಿಗೆ ಪ್ರೇರಕವಾಗುವಂತಿದೆ ಈ ಪುಸ್ತಕ.

ಪುಟ: 232 ₹250

ಮೌನ, ಸಂಗೀತ ಮತ್ತು ಅನ್ನಪೂರ್ಣಾ ದೇವಿ



ಅನ್ನಪೂರ್ಣಾ ದೇವಿ: ಅಪೂರ್ವ ಕಲಾವಿದೆಯ ಅಶ್ರುತ ಕಥನ
ಇಂಗ್ಲಿಷ್ ಮೂಲ: ಮರ್ಜೆಂಟ್ ಜಟಾಯು
ಕನ್ನಡಕ್ಕೆ: ಎನ್ ಸಂಧ್ಯಾರಾಣಿ
ಪ್ರಕಾಶನ: ನುಡಿ ಪುಸ್ತಕ
ಸಂ: 8073321430

ಅನ್ನಪೂರ್ಣಾ ದೇವಿ ಸಂಗೀತ ಪರಂಪರೆಯಲ್ಲಿ ಶಾಪಗ್ರಸ್ತ ಗಂಧರ್ವ ದೇವತೆಯಂತೆ ಬದುಕಿದವರು. ಅವರನ್ನು ಕಂಡವರು, ಕಂಡಷ್ಟು; ಅವರ ಸಾನ್ನಿಧ್ಯ ದಕ್ಕಿದವರಿಗೆ ದಕ್ಕಿದಷ್ಟು–ಹೀಗೆ ಈ ಪುಸ್ತಕದಲ್ಲಿ ಅನೇಕ ನೆನಪುಗಳು ಹರಿದು ಬರುತ್ತವೆ. ಅವರ ಒಡನಾಟದಲ್ಲಿ ಸಿಕ್ಕಿದ್ದು ಕೇವಲ ಅನ್ನ ಆತಿಥ್ಯವಲ್ಲ; ಪ್ರೀತಿ, ಮಮತೆ, ನಿರ್ಲಕ್ಷ್ಯ, ಅನಾಸಕ್ತಿ–ಇವೆಲ್ಲವನ್ನೂ ಅವರ ಶಿಷ್ಯರು, ಅಭಿಮಾನಿಗಳು ದಾಖಲಿಸುತ್ತ ಹೋಗಿದ್ದಾರೆ. ಆ ನೆನಪುಗಳನ್ನೆಲ್ಲ ಒಂದು ಕಡೆ ಜೋಡಿಸಿದಂತಿದೆ ಈ ಕೃತಿ.


ಅನ್ನಪೂರ್ಣಾ ದೇವಿಯ ಬದುಕಿನಲ್ಲಿ ಇಂಗಿಹೋದ ಕಂಬನಿಯ ಕೆಲವು ಹನಿಗಳನ್ನು, ಸಾಗರದಂಥ ಅವರ ವ್ಯಕ್ತಿತ್ವದಿಂದ ಬಾಚಿ ತಂದ ಕಥೆಗಳಿವು ಎನ್ನಿಸತೊಡಗುತ್ತದೆ. ‘ಅವರ ಸಂಕಟವನ್ನು ಪದಗಳಲ್ಲಿ ಹಿಡಿಯಲು ಸಾಧ್ಯವಿಲ್ಲ’ ಎನ್ನುತ್ತಲೇ, ಅವರ ಏಕಾಂತದ ನಿಟ್ಟುಸಿರುಗಳ ಲೆಕ್ಕವನ್ನೂ ಈ ಪುಸ್ತಕ ತೆರೆದಿಡುತ್ತದೆ. ಸಂಗೀತ ಕುಟುಂಬದಲ್ಲಿ ಹುಟ್ಟಿ, ಸಂಗೀತ ಕಲಾವಿದನ ಸಂಗಾತಿಯಾದರೂ, ಅವರು ಬದುಕಿನ ಬಹುತೇಕ ಭಾಗವನ್ನು ಏಕಾಂತದಲ್ಲೇ ಕಳೆಯುತ್ತಾರೆ.

ಅಂತಃಕರಣ ಮತ್ತು ಪ್ರೀತಿಗಲ್ಲದೆ ಮತ್ತಾವುದಕ್ಕೂ ಕರಗದ ಹೆಣ್ಣುಜೀವವಾಗಿ, ತಮ್ಮೊಳಗಿನ ಸಂಗೀತವನ್ನು ಧಾರೆಯೆರೆಯುತ್ತ ಬದುಕುತ್ತಾರೆ. ‘ಕಲಾವಿದರಿಗೆ ತಾರಾಪಟ್ಟ ದೊರೆತರೆ ಅನ್ವೇಷಣೆ ನಿಲ್ಲುತ್ತದೆ’ ಎಂಬ ನಂಬಿಕೆಯಂತೆ, ಅವರು ಖ್ಯಾತಿಯ ಹತ್ತಿರವೂ ಸರಿಯುವುದಿಲ್ಲ. ಹುಡುಕಾಟವನ್ನು ಮುಗಿಸದೇ, ಸದಾ ಅನ್ವೇಷಣೆಯಲ್ಲೇ ಇರುವ ಸಾಧಕಿಯ ರೂಪ ಇಲ್ಲಿ ಕಾಣಿಸುತ್ತದೆ. ವರ್ಷಾನುಗಟ್ಟಲೆ ಮಾತಿಲ್ಲದೆ ಕಳೆಯುವ ಅವರ ಮೌನರಾಗವನ್ನೂ ಈ ಪುಸ್ತಕ ಅಕ್ಷರಗಳಲ್ಲಿ ಹಿಡಿದಿಡುತ್ತದೆ.

ಪುಸ್ತಕ ಮುಗಿದಾಗ ದೊಡ್ಡವರ ಸಣ್ಣತನಗಳ ಬಗ್ಗೆ ದೂರುಗಳಲ್ಲ, ಒಂದು ಮೃದುವಾದ ಅನುಕಂಪ ಮಾತ್ರ ಉಳಿಯುತ್ತದೆ. ದುಮ್ಮಾನ ತೋಡಿಕೊಳ್ಳದೆ, ಕೇವಲ ಕಥೆಯನ್ನು ಹೇಳುವ ನಿರೂಪಣೆಯೇ ಈ ಕೃತಿಯ ದೊಡ್ಡ ಶಕ್ತಿ. ಪುಸ್ತಕದಲ್ಲಿರುವ ಚಿತ್ರಗಳು ಇತಿಹಾಸದೊಂದಿಗೆ ಓದುಗರನ್ನು ಬೆಸೆಯುವ ಕೊಂಡಿಗಳಂತೆ ಕಾಣುತ್ತವೆ.

ಪುಟ: 400 ₹549

ಜಾನಪದ ಚಿಂತನೆಯ ದೀಪಸ್ತಂಭ



ಜಾನಪದ ಬೆಳಕಿಂಡಿ
ಲೇ: ಎಸ್.ಪಿ. ಪದ್ಮಪ್ರಸಾದ್
ಪ್ರ: ಶ್ರುತಿ ಪ್ರಕಾಶನ
ಸಂ: 9886026085

ಕನ್ನಡದ ಪ್ರಮುಖ ಜಾನಪದ ವಿದ್ವಾಂಸರಲ್ಲಿ ಒಬ್ಬರಾದ ಟಿ. ಗೋವಿಂದರಾಜು ಅವರ ಅಧ್ಯಯನ ಕ್ಷೇತ್ರ ವಿಶಾಲವೂ ವೈವಿಧ್ಯಮಯವೂ ಆಗಿದೆ. ಒಂದು ಅಗ್ರಹಾರದ ಅಧ್ಯಯನದಿಂದ ಹಿಡಿದು ಗೊಂಬೆ ಆಟಗಳು, ಜಾನಪದ ಚಿತ್ರಕಲೆ, ಪ್ರಾಚೀನ ಶಿಲ್ಪಗಳಲ್ಲಿ ಕಾಣಿಸಿಕೊಳ್ಳುವ ಜಾನಪದ ಅಂಶಗಳು, ನಗರ ಜಾನಪದ–ಹೀಗೆ ಅನೇಕ ಆಯಾಮಗಳ ಕಡೆಗೆ ಗಮನ ಹರಿಸಿ ಅವರು ಗಂಭೀರವಾದ ಸಂಶೋಧನಾ ಕೃತಿಗಳನ್ನು ರಚಿಸಿದ್ದಾರೆ.

ಜಾನಪದ ತಜ್ಞರಾಗಿ ಮಾತ್ರವಲ್ಲದೆ ಸೃಜನಶೀಲ ಲೇಖಕರಾಗಿಯೂ ತಮ್ಮದೇ ಛಾಪು ಮೂಡಿಸಿರುವ ಗೋವಿಂದರಾಜು ಅವರು ಕರ್ನಾಟಕದ ಜಾನಪದ ಅಧ್ಯಯನದಲ್ಲಿ ಮಾರ್ಗಾನುಸಾರಿಯೂ ಮಾರ್ಗಪ್ರವರ್ತಕರೂ ಆಗಿದ್ದಾರೆ. ಇಂತಹ ಮಹತ್ವದ ಲೇಖಕರ ಕೃತಿಗಳ ಪರಿಶೀಲನಾ ಕಾರ್ಯವನ್ನು ಎಸ್.ಪಿ. ಪದ್ಮಪ್ರಸಾದ್ ಅವರು ‘ಜಾನಪದ ಬೆಳಕಿಂಡಿ’ ಗ್ರಂಥದ ಮೂಲಕ ಜಾನಪದಾಸಕ್ತರ ಮುಂದಿಟ್ಟಿದ್ದಾರೆ.


ಈ ಕೃತಿಯನ್ನು ಮೂರು ಭಾಗಗಳಾಗಿ ವಿನ್ಯಾಸಗೊಳಿಸಲಾಗಿದೆ. ಮೊದಲ ಭಾಗದಲ್ಲಿ ಗೋವಿಂದರಾಜು ಅವರ ಕೃತಿಗಳ ಕುರಿತು ವಿವಿಧ ತಜ್ಞರು ಬರೆದ ವಿಮರ್ಶಾ ಲೇಖನಗಳಿವೆ. ಎರಡನೇ ಭಾಗದಲ್ಲಿ ಅವರ ಕೃತಿಗಳ ಬಗ್ಗೆ ಪ್ರಾಜ್ಞರು ವ್ಯಕ್ತಪಡಿಸಿದ್ದ ಅಭಿಪ್ರಾಯಗಳು, ಪ್ರತಿಕ್ರಿಯೆಗಳು, ಮುನ್ನುಡಿಗಳು, ಬೆನ್ನುಡಿಗಳು ಹಾಗೂ ಲೇಖಕರೇ ತಮ್ಮ ಕೃತಿಗಳಿಗೆ ಬರೆದ ಮಾತುಗಳನ್ನು ಸಂಕಲಿಸಲಾಗಿದೆ. ಮೂರನೇ ಭಾಗದಲ್ಲಿ ಗೋವಿಂದರಾಜು ಅವರ ಸೃಜನಶೀಲ ಸಾಹಿತ್ಯದ ಕುರಿತ ಲೇಖನಗಳಿಗೆ ಸ್ಥಾನ ಕಲ್ಪಿಸಲಾಗಿದೆ.

ತಮ್ಮ ಸುತ್ತಮುತ್ತಲಿನ ಜಾನಪದ ಮತ್ತು ಸಾಂಸ್ಕೃತಿಕ ಪರಿಸರದ ಅಂತರಂಗವನ್ನು ಅರಿಯುವ ನಿರಂತರ ಕುತೂಹಲದಿಂದ ಕಳೆದ ನಾಲ್ಕೈದು ದಶಕಗಳಿಂದ ಅಪಾರ ಶ್ರಮ ಮತ್ತು ಆಸಕ್ತಿಯಿಂದ ಅಧ್ಯಯನ ನಡೆಸಿರುವ ಗೋವಿಂದರಾಜು ಅವರ ಕಾರ್ಯಕ್ಷೇತ್ರವನ್ನು ಹಲವಾರು ತಜ್ಞರು ಇಲ್ಲಿ ವಿಶ್ಲೇಷಿಸಿದ್ದಾರೆ. ಜಾನಪದ ಕ್ಷೇತ್ರದಲ್ಲಿ ಅಧ್ಯಯನ ಮತ್ತು ಸಂಶೋಧನೆಯಲ್ಲಿ ತೊಡಗಿರುವವರಿಗೆ ಈ ಕೃತಿ ಉಪಯುಕ್ತವಾದ ಮಾರ್ಗದರ್ಶಕ ಗ್ರಂಥವಾಗುತ್ತದೆ.

ಪುಟ: 460 ₹500

ಟೈಗರ್‌ನೆಸ್ಟ್ ಏರುವ ಹಾದಿಯೇ ಆನಂದಮಯ

ರಾಜ್ಯದಲ್ಲಿರುವ ಬಾಬಾಬುಡನ್‌ಗಿರಿ, ಮುಳ್ಳಯ್ಯನಗಿರಿಯಂತೆ ಈ ಯಾತ್ರಾಸ್ಥಳವೂ ಬಹು ಎತ್ತರದಲ್ಲಿದೆ. ಇವುಗಳನ್ನು ಏರಿದಾಗ ದೇಹ ದಣಿದರೂ, ಶಿಖರಾಗ್ರ ತಲುಪಿದಾಗ ಮನಸ್ಸು ಅರಳುತ್ತದೆ. ಆದರೆ ಈ ಟೈಗರ್‌ನೆಸ್ಟ್ ಹತ್ತುವ ಹಾದಿಯೇ ಮನಸ್ಸಿಗೆ ಖುಷಿ ನೀಡುತ್ತದೆ...



ಟೈಗರ್‌ನೆಸ್ಟ್ ವಿಹಾರ

• ಚಿತ್ರ–ಬರಹ: ರಹಮತ್ ತರೀಕೆರೆ

ನಾವು ಗೆಳೆಯರು, ಭೂತಾನದ ಪಾರು ನಗರದ ಹೊರವಲಯದಲ್ಲಿರುವ ಅತಿಥಿಗೃಹದಲ್ಲಿ ಬಿಡಾರ ಬಿಟ್ಟಿದ್ದೆವು. ಕೋಣೆಯ ಕಿಟಕಿ ತೆಗೆದರೆ ಎದುರಾ ಎದುರು, ಆಗಸಕ್ಕೆ ಗೋಡೆ ಕಟ್ಟಿದಂತೆ ಪರ್ವತವೊಂದು ಆಕ್ರಮಣ ಮಾಡುವ ಯೋಧನಂತೆ ನಿಂತಿರುವುದು ಕಾಣುತ್ತಿತ್ತು. ಅದುವೇ ಭೂತಾನ್ ಪ್ರವಾಸೋದ್ಯಮದ ಆಕರ್ಷಣೆಯ ಬಿಂದುವಾಗಿರುವ ಟೈಗರ್‌ನೆಸ್ಟ್. ಅದರಲ್ಲಿ ಮೇಲ್ಮುಖವಾಗಿ ನಿಲ್ಲಿಸಿದ ಮೆಕ್ಕೆಜೋಳದ ತೆನೆಗಳಂತೆ ಮೂರು ಶಿಖರಗಳಿದ್ದವು. ನಡುವಣ ಶಿಖರದ ತುದಿ ಒಡೆದು ಬಾಯಿಬಿಟ್ಟಂತಿತ್ತು. ಅಲ್ಲಿನ ವಿಹಾರದ ಕಡುಬಣ್ಣದ ಪಗೋಡ ಮತ್ತು ಗೋಡೆಗಳಿಂದ ಅದು ಶಿಖರಕ್ಕಾದ ಗಾಯದಂತೆಯೂ ತೋರುತ್ತಿತ್ತು. ಗುಹೆಯ ಕೆಳಗಿನ ಕಡಿದಾದ ಬಂಡೆಗಳು ಸೀಳಿ ಹೋಳಕೆಗಳಾಗಿ ಉದುರಿದ್ದು, ಹುಲಿಯ ಬಾಯಿಯಂತೆಯೂ ಕಾಣುತ್ತವೆ. ಆದರೆ ನನಗದು ಹಲ್ಲುದುರಿದ ವೃದ್ಧಭಿಕ್ಕುವಿನ ಬೊಚ್ಚುಬಾಯಾಗಿ ಕಂಡಿತು.

ಟೈಗರ್‌ನೆಸ್ಟಿನ ಈ ಗುಹೆಯೇ 8ನೇ ಶತಮಾನದಲ್ಲಿ, ಭಾರತದಿಂದ ಧಮ್ಮವನ್ನು ಟಿಬೆಟ್-ಭೂತಾನಗಳಿಗೆ ಕೊಂಡೊಯ್ದ ಗುರು ಪದ್ಮಸಂಭವ ಯೋಗಸಾಧನೆಯ ತಾಣ. ಗುರು ರಿಂಪೋಚೆ ಎಂದು ಕರೆಯಲಾಗುವ ಪದ್ಮಸಂಭವನು ಟಿಬೆಟ್ಟಿನ ಸ್ಥಳೀಯ ಮಾಂತ್ರಿಕಶಕ್ತಿಗಳನ್ನು ಪಳಗಿಸಿದವನೆಂಬ ಖ್ಯಾತಿಯುಳ್ಳವನು. ಎರಡನೇ ಬುದ್ಧನೆನಿಸಿಕೊಂಡವನು. ಇವನು ನೆಲೆಸಿದ್ದ ಈ ಗುಹೆಯನ್ನು ಭೂತಾನಿಗರು ತಕ್ತ್ಸಾಂಗ್ (ಹುಲಿಗುಹೆ) ಎನ್ನುವರು. ಈ ಹುಲಿಯ ಬಗ್ಗೆ ಒಂದು ಮಿತ್ ಇದೆ. ವಜ್ರಯಾನಿ ಪಂಥದ ಪದ್ಮಸಂಭವನು ಯೋಗಿನಿಯರನ್ನು ಹುಲಿಯಾಗಿ ರೂಪಾಂತರಿಸಿ ಈ ಗುಹೆಗೆ ಹಾರಿಬಂದು ತಾಂತ್ರಿಕ ಸಾಧನೆ ಮಾಡಿದವನಂತೆ. ಈ ರೂಪಕಕತೆಯಲ್ಲಿ ನಾರೀಯೋಗದ ಅಥವಾ ವಜ್ರಯಾನದ ರಹಸ್ಯ ತತ್ವಗಳು ಅಡಗಿರುವಂತಿವೆ. ಎಡಗೈಯಲ್ಲಿ ಕಪಾಲವನ್ನೂ ಬಲಗೈಯಲ್ಲಿ ಮುದ್ರೆಯನ್ನೂ ಧರಿಸಿ ಕಮಲಪೀಠದಲ್ಲಿ ಕೂತಿರುವ ಪದ್ಮಸಂಭವನ ಪಟಗಳನ್ನು ನಾನು ಮುಂಡಗೋಡಿನ ಟಿಬೆಟನ್ ವಿಹಾರದಲ್ಲಿ ಕಂಡಿರುವೆ. ಪದ್ಮಸಂಭವನಿಗೆ ಈ ಹೆಸರು ಬಂದಿದ್ದೇ ಆತ ಕಮಲದೊಳಗೆ ಜನಿಸಿದ್ದರಿಂದ. ಆತ ರಾಜಕುಮಾರಿ ಮಂದಾರವಾಗೆ ಗುಪ್ತವಾದ ತಾಂತ್ರಿಕಯೋಗವನ್ನು ಕಲಿಸಿದನೆಂದು ಕತೆಯಿದೆ. ಪದ್ಮಸಂಭವ ಯೋಗಸಾಧನೆ ಮಾಡಿದ ಮತ್ತೊಂದು ಗುಹೆ ಭೂತಾನದಲ್ಲಿದೆ. ನೇಪಾಳದಲ್ಲೂ ಇದೆ. ಒಟ್ಟಿನಲ್ಲಿ ಆತ ಗುಹೇಶ್ವರ.

ಟೈಗರ್‌ನೆಸ್ಟ್ ಭೂತಾನಿ ಬೌದ್ಧರ ಪವಿತ್ರ ಯಾತ್ರಾಸ್ಥಳ. ಈ ಗುಹಾವಿಹಾರಕ್ಕೆ ಕಡಿದಾದ ಪರ್ವತವನ್ನೇರಿ ಭೂತಾನಿನ ಭಿಕ್ಕುಗಳು- ಉಪಾಸಕರು ಇರುವೆಗಳಂತೆ ಪಾಳಿಗಟ್ಟಿ ಹೋಗುವರು. ಹಿಮಾಲಯ ಸೆರಗಿನಲ್ಲಿರುವ ಬಹುತೇಕ ವಿಹಾರಗಳು ಕಡಿದಾದ ಪರ್ವತಗಳಲ್ಲಿವೆ. ಲಡಾಖಿನಲ್ಲಂತೂ ಅವು ಹತ್ತುವುದಕ್ಕೆ ಕಷ್ಟಕರವಾದ ಎತ್ತರದಲ್ಲಿವೆ. ಹತ್ತು ಸಾವಿರ ಅಡಿ ಎತ್ತರದಲ್ಲಿರುವ ಟೈಗರ್‌ನೆಸ್ಟಿನ ಚಾರಣ, ಹೋಗಿಬರುತ್ತ ಹದಿನಾಲ್ಕು ಕಿಲೋಮೀಟರ್ ಫಾಸಲೆ. ಸಾಮಾನ್ಯವಾಗಿ ಚಾರಣಿಗರು ಬೆಳಗಿನ ಜಾವವೇ ನಡಿಗೆ ಆರಂಭಿಸುವರು. ನಾವು ಪರ್ವತದ ಬಡ್ಡೆಗೆ ಬರುವ ಹೊತ್ತಿಗೆ ಯೂರೋಪಿನ ಚಾರಣಿಗರು ಏರಲು ಶುರುಮಾಡಿದ್ದರು. ಏರುಗರು ಪರ್ವತದ ಬುಡದಲ್ಲಿ ಮಾರುವ ದೊಣ್ಣೆಗಳನ್ನು ಖರೀದಿಸುವರು. ಭೂತಾನ್ ಸರ್ಕಾರವು ಟೈಗರ್‌ನೆಸ್ಟಿಗೆ ಬೇಕೆಂದೇ ರಸ್ತೆ ನಿರ್ಮಿಸಿಲ್ಲ. ಮೆಟ್ಟಿಲು ಕೂಡ ಪೂರ್ಣ ಇಲ್ಲ. ಚಾರಣದ ರಸ್ತೆಯಿರುವ ಪರ್ವತದ ಮೈ ಮನುಷ್ಯರ ತುಳಿತಕ್ಕೆ ಒಳಗಾಗಿ ದೂಳಾಗಿತ್ತು. ಸಡಿಲಗೊಂಡ ಮಣ್ಣು ಮಳೆಗೆ ಕೆಳಕ್ಕೆ ಹರಿದುಹೋಗಿ ಕೊರಕಲು ಬಿದ್ದಿದ್ದವು.


ಟೈಗರ್‌ನೆಸ್ಟ್ ಚಾರಣವು ಖುಷಿ ಕೊಡುವುದು- ತೀಡುವ ತಂಗಾಳಿಗೆ ಮತ್ತು ಅಲ್ಲಿರುವ ವರ್ಣರಂಜಿತ ವನರಾಶಿಗೆ. ಚಳಿಗಾಲದಲ್ಲಿ ಇಲ್ಲಿನ ಕಾನನವೆಲ್ಲ ಬಿಳಿಚಿಕೊಂಡ ರೋಗಿಯಂತೆ ಹಿಮವಸ್ತ್ರ ಧರಿಸಿಬಿಡುತ್ತವೆಯಂತೆ. ನಾವು ಹೋಗಿದ್ದು ಬೇಸಿಗೆಗೆ. ಶಾವಿಗೆಯಂತೆ ಪಾಚಿ ಇಳಿಬಿದ್ದು ಮರಗಳೆಲ್ಲ ಜೂಲುಜೂಲಾಗಿದ್ದವು. ಮಹಾಜೇಡವೊಂದು ತನ್ನ ಜಾಲದಿಂದ ವನವನ್ನೇ ಬಂಧಿಸಿದಂತಿದ್ದ ಈ ಜೂಲುಗಳು, ವಾರೆಯಾಗಿ ತೂರುವ ಸೂರ್ಯರಶ್ಮಿಯಲ್ಲಿ ಹೊಳೆಯುತ್ತ, ಕಾಡನ್ನು ಲಗ್ನಮಂಟಪ ಮಾಡಿದ್ದವು. ಕೆಚ್ಚನೆಯ ಕಪ್ಪನೆಯ ಗಿಳಿಹಸಿರಿನ ಎಲೆಗಳು: ಪರ್ಣವರ್ಣರಂಜಿತ. ಕೆಂಪೆಲೆಯ ಮರಗಳಂತೂ ಸೂರ್ಯರಶ್ಮಿಯಲ್ಲಿ ನೆತ್ತರ ಜಳಕ ಮಾಡಿದಂತಿದ್ದವು. ಎತ್ತರಕ್ಕೆ ಬೆಳೆದ ಅಪರಿಚಿತವಾದ ನೂರಾರು ಹಳೆಯ ಮರಗಳು. ಅದೊಂದು ಪವಿತ್ರವನ. ಮರ ಕಡಿಯುವಂತಿಲ್ಲ.

ಟೈಗರ್‌ನೆಸ್ಟ್ ವಿಹಾರಕ್ಕೆ ಮೊದಲು ಎರಡು ಚೂಪಾದ ಕೋಡುಗಲ್ಲುಗಳ ನಡುವಿನ ಇಕ್ಕಟ್ಟಾದ ಕಲ್ಲುಸಂದಿಯಿದೆ. ಆ ಹಾದಿಯ ಮೂಲಕ ಒಂದು ಶಿಖರದಿಂದ ಇನ್ನೊಂದು ಶಿಖರಕ್ಕೆ ದಾಟಬೇಕು. ಎರಡೂ ಪರ್ವತ ಕೋಡುಗಳ ನಡುವೆ ಭೋರ್ಗರೆಯುತ್ತ ಬೀಳುವ ಜಲಪಾತ. ನನ್ನ ಚಾರಣದ ಅನುಭವದಲ್ಲಿ ಇಷ್ಟೊಂದು ರುದ್ರಸೌಂದರ್ಯದ ತಾಣ ಕಾಣಲಿಲ್ಲ. ಜಲಪಾತ ದಾಟಿದರೆ ಪದ್ಮಸಂಭವ ವಿಹಾರ. ಹಕ್ಕಿ ನೋಟದಲ್ಲಿ ಕಾಣುವ ವೃತ್ತಪತ್ರಿಕೆಯನ್ನು ಉದ್ದಕ್ಕೆ ಹಾಸಿದಂತೆ ಪಾರು ನಗರದ ದೃಶ್ಯ. ಕೆಳಗೆ 90 ಡಿಗ್ರಿ ಇಳಿಜಾರಿನಲ್ಲಿರುವ ಎದೆ ಝಲ್ಲೆನಿಸುವ ಬಂಡೆ ಪ್ರಪಾತ. ಅದರ ತುಂಬ ಕಿಕ್ಕಿರಿದ ಪೈನ್‌ಕಾಡು. ಕೆಲವು ಪ್ರವಾಸಿಗಳು ಇಲ್ಲಿ ಜಾರಿ ಬಿದ್ದು ಪ್ರಾಣ ಹೋಗಿರುವುದುಂಟಂತೆ.

ಅದೊಂದು ಕಟ್ಟಿಗೆಯಿಂದ ಗೇದ ವಿಹಾರ. ಸುತ್ತಲೂ ಧಮ್ಮಮಂತ್ರದ ಸಿಲಿಂಡರುಗಳು. ಕೆಂಬಣ್ಣ ಎಲ್ಲೆಲ್ಲೂ ಕಣ್ಣಿಗೆ ತಿವಿಯುತ್ತಿತ್ತು. ಬೌದ್ಧಮಂತ್ರ ಬರೆದ ಪತಾಕೆಯ ಹಾರಗಳು ಗಾಳಿಗೆ ಪಟಪಟಿಸುತ್ತಿದ್ದವು. ಅಲ್ಲಿರುವ ತರುಣ ತರುಣಿಯರಾದ ಗೈಡುಗಳಿಗೆ ಇರುವ ಧಮ್ಮದ ಜ್ಞಾನವು ಬೆರಗುಗೊಳಿಸಿತು. ನಾವು ಮಧ್ಯಾಹ್ನದ ಹೊತ್ತಿಗೆ ಕೆಳಗಿಳಿಯಬೇಕೆಂದೂ ನಮ್ಮ ಮಾರ್ಗದರ್ಶಿ ಸೋನು ಸೋನಂ ಹೇಳಿದ್ದನು. ಆತ ಮನೆಯಿಂದ ಕಟ್ಟಿಕೊಂಡು ಬಂದ ಬುತ್ತಿ ಇಟ್ಟುಕೊಂಡು ಪರ್ವತದ ಬುಡದಲ್ಲಿ ನಮಗಾಗಿ ಕಾಯುತ್ತಿದ್ದನು. ಸರಸರ ಇಳಿಯತೊಡಗಿದೆವು. ಏರುವಿಕೆಯೇ ಕಷ್ಟ. ಇಳಿವಲ್ಲ. ಆದರೂ ಹಾದಿಯ ದೃಶ್ಯಗಳಿಗೆ ಮರುಳಾಗಿ ತಡವಾಯಿತು. ಬಹಳ ಹೊತ್ತು ಕಾದ ಸೋನಂ, ಆತಂಕದಿಂದ ಅರ್ಧದಾರಿ ಹತ್ತಿ ಬಂದಿದ್ದನು. ಅವನ ಮಗನೂ ಅವನ ಗರ್ಭಿಣಿ ಹೆಂಡತಿಯೂ ಹಸಿದಿರಬೇಕು. ನಮಗಾಗಿ ತಡೆದುಕೊಂಡಿದ್ದರು. ಹ್ಞಾಂ! ಭೂತಾನ್‌ನಲ್ಲಿ ನಾವು ಕಂಡ ಅತ್ಯಂತ ಸುಂದರಜೋಡಿ ಸೋನಂ ದಂಪತಿಗಳದ್ದು. ಸೋನಂ, ಹುಲಿ ಸವಾರಿ ಮಾಡಿದ ಪದ್ಮಸಂಭವನಂತೆ ತಾಂತ್ರಿಕ ಯೋಗಿಯಲ್ಲ. ಚೆಲುವಾದ ಹೆಣ್ಣನ್ನು ಬಾಳಸಂಗಾತಿಯನ್ನಾಗಿ ಸ್ವೀಕರಿಸಿ, ಪ್ರೀತಿಯ ಮಕರಂದವನ್ನು ಹೃತ್ಕಮಲದೊಳಗೆ ತುಂಬಿಕೊಂಡು ಬಾಳುತ್ತಿರುವ ಸಾಮಾನ್ಯ ಗೃಹಸ್ಥ; ಬೇಂದ್ರೆ ಕವನದ ನಾಯಕನಂತೆ 'ಏಳುಮೆಟ್ಟಿನ ಹುಲಿಯ ಬೀರಬೇಂಟೆಯ ಬಿಡಿಸಿ ಮಗುವ ಮುದ್ದಾಡುವೊಲು ಮಾಡಿದಾಕೆ' ಎಂದು ಅವಳನ್ನು ಸದಾ ಕೀರ್ತಿಸುವ ಪ್ರೇಮಯೋಗಿ.

ಪ್ರವಾಸ

ಟೈಗರ್‌ನೆಸ್ಟಿನ ಶಿಖರದಲ್ಲಿ ಕಂಡ ಜಲಪಾತವು ಕೆಳಗೆ ತೊರೆಯಾಗಿ ಹರಿಯುತ್ತಿತ್ತು. ಅದರ ದಡದಲ್ಲಿ ಕೂತು ಸ್ಥಳೀಯ ಭೋಜನವನ್ನು ಸವಿದೆವು. ಹುಲಿಯ ಹಾಲೆಂದು ತೊರೆಯ ಜಲವನ್ನು ಈಂಟಿದೆವು. ಕೇದಾರ ಯಮುನೋತ್ರಿ ಟೈಗರ್‌ನೆಸ್ಟ್ ಬಾಬಾಬುಡನ್‌ಗಿರಿ ಮುಳ್ಳಯ್ಯನಗಿರಿ ಮೊದಲಾದ ಯಾತ್ರಾಸ್ಥಳಗಳು ಎತ್ತರದಲ್ಲಿವೆ. ಏರುವಾಗ ದೇಹ ದಣಿದು ಮುದುಡುತ್ತದೆ. ಶಿಖರಾಗ್ರ ಮುಟ್ಟಿದ ಬಳಿಕ ಮನಸ್ಸು ಅರಳುತ್ತದೆ. ದಣಿದ ದೇಹ-ಅರಳಿದ ಮನಸ್ಸಿನ ಈ ಸಾಮರಸ್ಯವೇ ಒಂದು ಆಧ್ಯಾತ್ಮಿಕ ಅನುಭವ. ಆದರೆ ಟೈಗರ್‌ನೆಸ್ಟಿನಲ್ಲಿ ಶಿಖರದಲ್ಲಿ ಸಿಗುವುದಕ್ಕಿಂತ ಹೆಚ್ಚಿನ ಆನಂದ ಏರುವ ಹಾದಿಯಲ್ಲೂ ಸಿಗುತ್ತದೆ. ಒಮ್ಮೆ ಚಳಿಗಾಲದಲ್ಲಿ ಟೈಗರ್‌ನೆಸ್ಟನ್ನು ಏರಬೇಕು. ಆಗ ಬಹುಶಃ ಜಲಪಾತ ಹೆಪ್ಪುಗಟ್ಟಿರುತ್ತದೆ. ಕಾಡು ಬೇರೆ ಹಿಮಚ್ಛಾದಿತ ಶ್ವೇತವರ್ಣಕ್ಕೆ ತಿರುಗಿರುತ್ತದೆ. ಸೋನಂ ದಂಪತಿಗಳಿಗೆ ಇನ್ನೊಂದು ಮಗುವಾಗಿರುತ್ತದೆ.



ಟೈಗರ್‌ನೆಸ್ಟ್ ಪರ್ವತ



ಟೈಗರ್‌ನೆಸ್ಟ್ ಜಲಪಾತ



ಟೈಗರ್‌ನೆಸ್ಟ್‌ನಿಂದ ಕಾಣುವ ಹಿಮಪರ್ವತ



ತೋಟದಲ್ಲಿ ಸಿಗುವ ಬಗೆಬಗೆ ಹಣ್ಣುಗಳು...

ಮನೆಯೊಳಗೆ ತೋಟ ಕಂಡೆ... ತೋಟದೊಳಗೆ...

3ನೇ ಪುಟದಿಂದ...

ಅಡುಗೆಮನೆಯ ತ್ಯಾಜ್ಯ ಮತ್ತು ಒಣ ಎಲೆಗಳೇ ಗೊಬ್ಬರವಾಗುತ್ತವೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಸಂಪೂರ್ಣ ದೂರವಿಟ್ಟಿದ್ದಾರೆ.

ಈ ಹಸಿರು ಮನೆ ಸುತ್ತಲಿನ ವಾತಾವರಣವನ್ನೂ ಬದಲಿಸಿದೆ. ಬೇಸಿಗೆಯಲ್ಲಿ ಹೊರಗಿನ ವಾತಾವರಣಕ್ಕಿಂತ ಮನೆ ತಂಪಾಗಿರುತ್ತದೆ. ಸುಮಾರು 49 ಜಾತಿಯ ಪಕ್ಷಿಗಳು ಹಾಗೂ 30ಕ್ಕೂ ಹೆಚ್ಚು ಪ್ರಭೇದದ ಚಿಟ್ಟೆಗಳು ಮತ್ತು ಪತಂಗಗಳು ಇಲ್ಲಿ ಕಾಣಿಸಿಕೊಂಡಿರುವುದನ್ನು ದಂಪತಿ ದಾಖಲಿಸಿದ್ದಾರೆ. ಹೂಬಿಡುವ ಗಿಡಗಳ ಬಳಿ ಸನ್‌ಬರ್ಡ್‌ಗಳು ಆಗಾಗ ಕಾಣಿಸುತ್ತವೆ. ಸಪೋಟ ಮರದ ಸುತ್ತ ಗಿಳಿಗಳ ಹಿಂಡು ನೋಡಬಹುದು.

ಮನೆಯಲ್ಲೇ ವಿದ್ಯುತ್ ಉತ್ಪಾದನೆ

ವಾರಾಂತ್ಯದಲ್ಲಿ ಗಿಡಗಳನ್ನು ಕತ್ತರಿಸುವುದು, ಗೊಬ್ಬರ ತಯಾರಿಸುವುದು, ನೀರು ಹಾಕುವುದು ಮತ್ತು ರೋಗವನ್ನು ಪತ್ತೆ ಮಾಡುವುದೇ ಇವರ ದಿನಚರಿ. ತೋಟ ಒಂದು ಹಂತಕ್ಕೆ ಬಂದ ಬಳಿಕ ಮಳೆನೀರು ಕೊಯ್ಲು ವ್ಯವಸ್ಥೆಯನ್ನೂ ಅಳವಡಿಸಿಕೊಂಡಿದ್ದಾರೆ. ತಾರಸಿ ಮೇಲಿನ ಸೋಲಾರ್ ಪ್ಯಾನಲ್‌ಗಳು ಮನೆಗೆ ಬೇಕಾದ ವಿದ್ಯುತ್ ಉತ್ಪಾದಿಸುತ್ತವೆ. ಹೆಚ್ಚುವರಿ ವಿದ್ಯುತ್ ಗ್ರಿಡ್‌ಗೆ ಸರಬರಾಜಾಗುತ್ತದೆ.

'ಒಂದು ಒಳ್ಳೆಯ ಕೆಲಸ ಮತ್ತೊಂದಕ್ಕೆ ದಾರಿ ಮಾಡಿಕೊಟ್ಟಿತು. ತೋಟಗಾರಿಕೆ ನಮಗೆ ತ್ಯಾಜ್ಯ ನಿರ್ವಹಣೆ, ನೀರು ಮತ್ತು ಶಕ್ತಿಯ ಬಗ್ಗೆ ಹೆಚ್ಚಿನ ಅರಿವು ಮೂಡಿಸಿತು. ಕಚೇರಿಯ ಒತ್ತಡದ ನಡುವೆ ನಾನು ಹೊರಗಿನ ಪಕ್ಷಿಗಳನ್ನು ನೋಡುತ್ತಾ ಮನಸ್ಸನ್ನು ಶಾಂತಗೊಳಿಸುತ್ತೇನೆ. ವರ್ಕ್ ಫ್ರಮ್ ಹೋಮ್ ಮಾಡುವಾಗ ನನ್ನ ಮೇಜಿನ ಎದುರೇ ಹಿಪ್ಪುನೇರಳೆ ಕಾಯಿಗಳು ಕಾಣಿಸುತ್ತವೆ' ಎಂದರು ಸುಮೇಶ್.

ತೋಟದ ಆಚೆಗೂ ಬೆಳೆದ ಹಸಿರು

ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ತೋಟಕ್ಕೆ ಬರುವ ಹಕ್ಕಿಗಳು, ಚಿಟ್ಟೆಗಳು ಮತ್ತು ಗಿಡಗಳ ಚಿತ್ರಗಳನ್ನು '1500Sqft Gardener' ಎನ್ನುವ ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಪೋಸ್ಟ್ ಮಾಡಲು ಆರಂಭಿಸಿದರು. ಬೆಂಗಳೂರಿನ ಸಣ್ಣ ಜಾಗವೊಂದರಲ್ಲಿ ಇಷ್ಟೊಂದು ಜೀವವೈವಿಧ್ಯ ಕಂಡು ಜನರು ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ. ಬಾಲ್ಕನಿ ಮತ್ತು ಅಪಾರ್ಟ್‌ಮೆಂಟ್‌ಗಳಲ್ಲಿ ಹೇಗೆ ತೋಟಗಾರಿಕೆ ಮಾಡಬೇಕು ಎಂದು ಕೇಳಿ ಅವರಿಗೆ ನೂರಾರು ಸಂದೇಶಗಳು ಬರುತ್ತಿವೆ.

'ತೋಟ ಮಾಡಲು ದೊಡ್ಡ ಜಾಗ ಬೇಕು ಎಂದು ಹಲವರು ಭಾವಿಸುತ್ತಾರೆ. ಆದರೆ ಆರಂಭಿಸಲು ಒಂದು ಸಣ್ಣ ಜಾಗ ಸಾಕು. ಒಂದು ಗಿಡದಿಂದ ಪ್ರಾರಂಭಿಸಿ. ನಂತರ ಗಿಡಗಳೇ ನಿಮಗೆ ತೋಟದ ಪಾಠ ಕಲಿಸುತ್ತವೆ' ಎನ್ನುವುದು ಸುಮೇಶ್ ಅವರ ಸಲಹೆ.

ಸೂರ್ಯ ಪಡುವಣದಲ್ಲಿ ಕೆಂಪಾಗುತ್ತಿದ್ದಂತೆ ಮನೆಯ ಮೇಲೆ ನೆರಳು ಆವರಿಸತೊಡಗಿತು. ಕಾಂಪೌಂಡ್ ಆಚೆ ಸರ್ಜಾಪುರ ರಸ್ತೆಯಲ್ಲಿ ಟ್ರಾಫಿಕ್ ಗದ್ದಲ ಹೆಚ್ಚುತ್ತಿತ್ತು. ಮನೆಯೊಳಗೆ ಮಾತ್ರ ಉಯ್ಯಾಲೆ ತಂಗಾಳಿಗೆ ಮೆಲ್ಲಗೆ ತೂಗುತ್ತಲೇ ಇತ್ತು.

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

majakoora@prajavani.co.in

ಗಣಿತದಲ್ಲಿ ಗರ್ದಿ ಗಮ್ಮತ್ತು

ಗೊಂದಲ ಗಣಿತ

1 ವಾಹನ ರಿಪೇರಿ ಅಂಗಡಿಯೊಂದರಲ್ಲಿ ಒಂದು ತಿಂಗಳಲ್ಲಿ 40 ವಾಹನಗಳು ರಿಪೇರಿ ಆದವು. ವಾಹನಗಳ ಒಟ್ಟು ಚಕ್ರಗಳು 100 ಆದರೆ, ರಿಪೇರಿ ಆದ ಕಾರುಗಳು ಹಾಗೂ ಬೈಕ್‌ಗಳು ಎಷ್ಟು?

ಉತ್ತರ: ____

2 ಬೆಕ್ಕುಗಳು ಹಾಗೂ ಅವುಗಳ ಮರಿಗಳ ತೂಕ 13 ಕೆ.ಜಿ. ಯಾದರೆ ಪ್ರತ್ಯೇಕವಾಗಿ ಒಂದೊಂದು ಬೆಕ್ಕಿನ ಹಾಗೂ ಮರಿಯ ತೂಕವೆಷ್ಟು?

ಉತ್ತರ: ____

ಶಬ್ದಾಟ

ಇಲ್ಲಿರುವ ಪದಕ್ಕೆ ಒಂದಕ್ಷರ ಸೇರಿಸಿ ಐದಕ್ಷರದ ಪದ ಮಾಡಿ.

ಮನೆಸಾಲ+ರಿ

ಉತ್ತರ: ____

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಡಣ್ಣ ಚಿಕ್ಕು ಕೌತುಕ ಕಥೆಯ

ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡನಿಗೆ ಆಟ ಕುರಿಗೆ ಸಂಕಟ

ಗುಂಡ ಗದ್ದೆಯಲ್ಲಿ ಮೇಯುತ್ತಿದ್ದ ಕುರಿಯೊಂದನ್ನು ನೋಡಿದ. ಅದರ ಮೈತುಂಬಾ ತುಪ್ಪಟವಿತ್ತು. ಅದನ್ನು ನೋಡಿದ ಗುಂಡ ಮನಸ್ಸಿನಲ್ಲಿ ಕೆಲ ಹೊತ್ತು ಯೋಚಿಸಿದ. ಮನೆಯಿಂದ ಎರಡು ಕತ್ತರಿಗಳನ್ನು ತಂದು ಆ ಕೂದಲನ್ನು ಕತ್ತರಿಸುತ್ತಾ ಕುರಿ ಮೇಲ್ಮೈ ಅನ್ನು ಮನುಷ್ಯನ ಮುಖದ ಆಕಾರಕ್ಕೆ ತಂದ. ಆ ಕುರಿಯ ಮಾಲೀಕ ಬರುವ ಮುನ್ನವೇ ಅಲ್ಲಿಂದ ಕಾಲ್ಕಿತ್ತ...







ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಎರಡು ಸ್ವರಗಳಿಗೆ ಅಕ್ಷರ ಪಟ್ಟಿಯಿಂದ ಎರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1		O		E
2		O		E
3		O		E
4		O		E
5		O		E

6		O		E
7		O		E
8		O		E
9		O		E
10		O		E

ಅಕ್ಷರ ಪಟ್ಟಿ

C	B	G	D	H	C	Z	J	M	N
D	K	N	N	T	R	P	R	N	N

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ

1	ಭೀತಿ	+	ಪ್ರಜ್ಞೆ	+	ಷ್ಮ	=	
2	ಸಳಿ	+	ಬಕ	+	ಭೆ	=	
3	ಬೀಗ	+	ಜಳ	+	ದಿ	=	
4	ಕಾರು	+	ಗುಣಿ	+	ಕೆ	=	
5	ಕುರ	+	ಹರಿ	+	ಕೆ	=	

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಭಿಮನ್ಯು
ಬೆಂಗಳೂರು




ಕುಶಾಲ್ ಗೋವರ್ಧನ್ ಕೆ.ಎಚ್., ಚಿತ್ರದುರ್ಗ



ಭಾರ್ಗವಿ ಬಿ.
ಮೈಸೂರು



ಪೂರ್ವಿ ಜಿ.
ಹಾವೇರಿ



ದಕ್ಷಿತ್ ಎ.
ಬೆಂಗಳೂರು



ತನುಶ್ರೀ ಅರಗಿನಶೆಟ್ಟಿ
ಬಾದಾಮಿ

ಜಾಣಪದ ಆಟ

1 ಇಲ್ಲಿ ಕೊಟ್ಟಿರುವ ಪದಗಳಂಥ ಇನ್ನೂ ಐದು ಪದ ನೀವು ಕಂಡುಹಿಡಿಯಿರಿ

1	ಕಂದ	ಕದ
2	ಮಂದ	ಮದ
3	ಗುಂಡಿ	ಗುಡಿ
4	ಬಂಡಿ	ಬಡಿ
5	ಇಂಡಿ	ಇಡಿ
6		
7		
8		
9		
10		

2 ಇಲ್ಲಿ ಕೊಟ್ಟಿರುವ 'ಮನೋ' ಎಂಬ ಎರಡಕ್ಷರಕ್ಕೆ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಪದ ಮಾಡಿ

1	ಮ	ನೋ		
2	ಮ	ನೋ		
3	ಮ	ನೋ		
4	ಮ	ನೋ		
5	ಮ	ನೋ		

ಅಕ್ಷರ ಪಟ್ಟಿ

ಧ	ಗ	ರೋ	ಹ	ಹಾ
ತ	ರ್ಮ	ರಿ	ರ	ಗ

ವರ್ಡ್ ಗೇಮ್

ಇಲ್ಲಿ ಕೊಟ್ಟಿರುವ ಎರಡು ಪದಗಳ ನಡುವೆ ಒಂದು ಅಕ್ಷರ ಸೇರಿಸಿ ಏಳು ಅಕ್ಷರಗಳ ಒಂದು ಹೊಸ ಪದ ಮಾಡಿ

W	A	S		A	G	E

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಮುನ್ನೆಚ್ಚರಿಕೆ 2.ಸವಾರಸಾವು 3.ಪ್ರವಾಸರದ್ದು 4.ಬಾಲಗೋಕುಲ 5.ಹೊಸಕಲಿಕೆ
ಶಬ್ದಾಟ: ಗರಡಿಮನೆ
ಜಾಣಪದ ಆಟ 1:ನೀರಾವರಿ 2.ಸರಾಸರಿ 3.ತರಾತುರಿ 4.ಮಾರಾಮಾರಿ 5.ಏರಾಏರಿ 6.ಹೇರಾಫೇರಿ
ಜಾಣಪದ ಆಟ 2: 1.ಮಹಾರಾಣಿ 2.ಮಹಾರಾಜ 3.ಮಹಾಶಯ 4.ಮಹಾಪ್ರಾಣ 5.ಮಹಾದ್ವಾರ
ಪಂಚಕ್ವಿಜ್ಞಾಯ: 1.ಮಲೇರಿಯಾ 2.ಜಗದೀಶಚಂದ್ರ ಬೋಸ್ 3.ಸಾಮುವೆಲ್ ಮೋರ್ಸ್ 4.ಕಶೇರುಕ 5.ಕಣ್ಣು
'ಮೇ' ಆಟ: 1.ಮೇನಕೆ 2.ಮೇಧಾವಿ 3.ಮೇದಸ್ಸು 4.ಮೇದಾರ 5.ಮೇಘನಾ
ಮೋಜಿನ ಇಂಗ್ಲಿಷ್: 1.COAT 2.BOAT 3.SOAP 4.ROAD 5.GOAT 6.LOAD